
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

24 ಡಿಸೆಂಬರ್ 2014 ಪುಟ 20 ರೂ. 15/-



ಉಪನಿಷತ್ತು V/S ವೇದಗಳು




ಸ್ವಾಗತ!

ಪ್ರಭುಲಿಂಗ ಲೀಲೆ




ಕೊಡಗು



ಲೆನಾಡು ರಾಜ್ಯಕ್ಕೆ ಹೋಗು

ಉಸ್ತುವಾರಿ






ಆರ್‌ವಿಗೆ ಮುಕ್ಕಾಲು ಮ್ಯಾಗಿಗೆ ಕಾಲುಭಾಗ

ಮಂಡ್ಯ



ಜಿಪಂ V/s ಸಿಇಒ



ಸಾರ್ಕ್: ಇಂದಿರಾ ಗಾಂಧಿ ಕನಸನ್ನು ನನಸು ಮಾಡ ಹೊರಟಿರುವ ಮೋದಿ ಯಶಸ್ವಿಯಾಗಬಾರ

ಮೋದಿಯನ್ನು ಆತನ ಕೋಮುವಾದಿ ಮತ್ತು ಕಾರ್ಪೊರೇಟ್ ಪರ ನಿಲುವುಗಳಿಗಾಗಿ ಮತ್ತೆ ಮತ್ತೆ ವಿಮರ್ಶೆ ಮಾಡಲು ಕೆಲವರು ಹೆದರುತ್ತಾರೆ. ಉದಾಹರಣೆಗೆ ರಾಜ್‌ದೀಪ್ ಸರ್ದೇಸಾಯಿ. 2002ರಲ್ಲಿ ಗುಜರಾತ್ ನರಮೇಧವನ್ನು ವಿಸ್ತೃತವಾಗಿ ವರದಿ ಮಾಡಿದಾಗಿನಿಂದ ಸರ್ದೇಸಾಯಿ ಮೋದಿ ಟೀಕಾಕಾರರಲ್ಲಿ ಒಬ್ಬರೆಂದು ಹೆಸರಾದರು. ಆದರೆ ಆ ಬ್ರಾಂಡ್‌ನ ಹಲವು ಪತ್ರಕರ್ತರಂತೆ ಅವರು ಜಾಗತೀಕರಣ ನೀತಿಗಳ ವಿರುದ್ಧವಾಗಲೀ, ಕಾರ್ಪೊರೇಟ್‌ಗಳ ಲೂಟಿಯ ವಿರುದ್ಧವಾಗಲೀ ಇಲ್ಲ, ತನ್ನನ್ನು ಸಿಎನ್‌ಎನ್-ಐಬಿಎನ್‌ನ ಮುಖ್ಯಸ್ಥನ ಸ್ಥಾನದಿಂದ ಹೊರಹಾಕಿದ, ಅದರ ಹೊಸ ಮಾಲೀಕ ಅಂಬಾನಿಯ ವಿರುದ್ಧ ರಾಜ್‌ದೀಪ್‌ರ ವಿಮರ್ಶೆ ಇಷ್ಟೇ - 'ಕಾರ್ಪೊರೇಟ್‌ಗಳು ಮೀಡಿಯಾ ಕ್ಷೇತ್ರಕ್ಕೆ ಬರಬಾರದು ಎಂದು ನಾನು ಹೇಳುವುದಿಲ್ಲ, ನಮಗೆ ಅವರ ಹೂಡಿಕೆ ಬೇಕು. ಆದರೆ, ಅವರು ನ್ಯೂಸ್‌ರೂಮನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬಾರದು ಅಷ್ಟೇ'. ಲಾಭ, ಲಾಭ ಮತ್ತು ಲಾಭವೇ ಮೂಲಗುಣವಾಗಿರುವ ಕಾರ್ಪೊರೇಟ್ ಕಂಪೆನಿಗಳು ಧರ್ಮಾರ್ಥ ಸೇವೆ ಮಾಡಲೆಂದು ಹೂಡಿಕೆ ಮಾಡುತ್ತಾರೆಂದು ಭಾವಿಸುವಷ್ಟು ಅಮಾಯಕ ರಾಜ್‌ದೀಪ್ ಸರ್ದೇಸಾಯಿ ಅಲ್ಲ, ಆದರೂ ಅವರು ಈ ರೀತಿ ಹೇಳಲು ಕಾರಣವೇನೆಂದರೆ, ಇವರು ಎಷ್ಟರಮಟ್ಟಿಗೆ ಸೆಕ್ಯುಲರ್ ಆಗಿದ್ದಾರೋ, ಅಷ್ಟರ ಮಟ್ಟಿಗೆ ಕಾರ್ಪೊರೇಟ್ ವಿರೋಧಿ ಅಲ್ಲ, ಈ ಎರಡು ನಿಲುವುಗಳ ನಡುವೆ ಒಂದು ವೈರುಧ್ಯವಿದೆ ಎಂದು ಅವರಿಗೆ ಅನ್ನಿಸುವುದೂ ಇಲ್ಲ, ಇರಲಿ, ಸದ್ಯಕ್ಕೆ ಇಂತಹ ಪತ್ರಕರ್ತರಾದರೂ ಎಲ್ಲೆಡೆ ಇದ್ದರೆ, ಅಷ್ಟು ಸಾಕು ಎಂದು ಆಶಿಸುವ ಮಟ್ಟಿಗೆ ನಮ್ಮ ಮಾಧ್ಯಮಗಳ ಸ್ಥಿತಿ ಕೆಟ್ಟಿದೆ.

ಇಂತಹ ಪತ್ರಕರ್ತರ ಪ್ರಕಾರ ಮೋದಿಯಲ್ಲಿ ಅವರು ಈ ಹೊತ್ತಿನಲ್ಲಿ ಮೆಚ್ಚದ ಏಕೈಕ ಗುಣವೆಂದರೆ, ಸರ್ವಾಧಿಕಾರಿ ಗುಣ ಮಾತ್ರ. ಅದನ್ನು ಬಿಟ್ಟರೆ, 2002ರ ನರಮೇಧದ ಕುರಿತು ನಾಲ್ಕು ಪಶ್ಚಾತ್ತಾಪದ ಮಾತುಗಳನ್ನು ಅವರು ಆಡಿದರೆ, ಅವರ ಕೋಮುವಾದಿ ಧೋರಣೆಯ ಭಾಗವಾಗಿರುವ ಎಲ್ಲವನ್ನೂ ಕ್ಷಮಿಸಿಬಿಡಲು ತಯಾರಿದ್ದಾರೆ. ಈ ಅರ್ಥದ ಮಾತುಗಳನ್ನು ಇತ್ತೀಚೆಗೆ ಸುವರ್ಣ ನ್ಯೂಸ್‌ನ ಅಜಿತ್ ಹನುಮಕ್ಕನವರ್‌ಗೆ ನೀಡಿದ ಸಂದರ್ಶನದಲ್ಲಿ ರಾಜ್‌ದೀಪ್ ಹೇಳಿದ್ದಾರೆ. ಸರ್ವಾಧಿಕಾರದ ಗುಣವೆಂಬುದು ಒಂದು ಪ್ರತ್ಯೇಕವಾದ ದುರ್ಗುಣ ಮಾತ್ರವಾಗಿರದೇ, ಒಂದು ಪ್ಯಾಕೇಜ್‌ನಲ್ಲಿ ಬರುತ್ತದೆ. ಅದು ಒಬ್ಬರಿಂದ ಇನ್ನೊಬ್ಬರಿಗೆ ಸ್ವರೂಪ ಹಾಗೂ ಒಟ್ಟಾರೆ ಸಾರದಲ್ಲಿ ಭಿನ್ನವಾಗಿರಬಹುದಾದರೂ, ಕೆಲವು ಸಾಮಾನ್ಯವಾದ ಅಂಶಗಳು ಅವರಲ್ಲಿ ಇರುತ್ತವೆನ್ನುವುದನ್ನು ಮರೆಯಲಾಗದು.

ಮೋದಿಯನ್ನು ಒಬ್ಬ ಸರ್ವಶಕ್ತ ಅಥವಾ ಬಲಿಷ್ಠ ಪ್ರಧಾನಿಯಾಗಿ ನೋಡುತ್ತಿರುವವರಲ್ಲಿ ಕೆಲವರು ಇಂದಿರಾ ಗಾಂಧಿಗೆ ಅವರನ್ನು ಹೋಲಿಸುವುದೂ ನಡೆಯುತ್ತಿದೆ. ಮೋದಿ ಮತ್ತು ಆತನ ಪರಿವಾರ ನೆಹರು-ಗಾಂಧಿ ಪರಿವಾರವನ್ನು ಬಹಳ ತೀವ್ರವಾಗಿ ದ್ವೇಷಿಸುವುದು ಎಲ್ಲರಿಗೂ ಗೊತ್ತು, ಆದರೆ ಕೆಲವು ವಿಚಾರಗಳಲ್ಲಿ ಆ ಪರಿವಾರದ ಕೆಲವು ಮುಖ್ಯ ನಕಾರಾತ್ಮಕ ಅಂಶಗಳನ್ನು ಮೋದಿಯೂ ಹೊಂದಿದ್ದಾರೆ. ಅವರಿಗಿಂತ ಹೆಚ್ಚೇ ಹೊಂದಿದ್ದಾರೆ. ಸರ್ವಾಧಿಕಾರಿತನ ಎಂದು ಕರೆಯಲಾಗುವ ಅಂಶವೂ ಅದರಲ್ಲಿ ಒಂದಾಗಿದೆ. ಅಂತಹುದೇ ಇನ್ನೊಂದು ಅಂಶ ದಕ್ಷಿಣ ಏಷ್ಯಾದಲ್ಲಿ ದೊಡ್ಡಣ್ಣನಾಗಿ ಮೆರೆಯುವ ಕನಸಿಸದ್ದು, ಇದು ಮುಖ್ಯವಾಗಿ ಭಾರತದ ಭಾರೀ ಬಂಡವಾಳಶಾಹಿ ಗುಂಪಿನ ಆರ್ಥಿಕ ಹಿತಾಸಕ್ತಿಗಳನ್ನು ಕಾಯುವ ವ್ಯಾಪಾರ ವಹಿವಾಟಿಗೆ ನೇರವಾಗಿ ಸಂಬಂಧಿಸಿದ್ದಾದರೂ, ಇದರಲ್ಲಿ ಒಂದು ಪ್ರಾದೇಶಿಕ ಶಕ್ತಿಯಾಗಿ ಮತ್ತು ಆ ಶಕ್ತಿಕೇಂದ್ರದ ಅಧಿಪತಿಯಾಗಿ ಮೆರೆಯುವ ವ್ಯಕ್ತಿಗತ ಹಿರಿಮೆಯ ಆಕಾಂಕ್ಷೆಯ ಅಂಶವನ್ನೂ ಒಳಗೊಂಡಿದೆ. 'ದೇಶವನ್ನು ಆಳಲೆಂದೇ ಹುಟ್ಟಿದ್ದೇವೆ ಎಂದು ಆ ಕುಟುಂಬ ತಿಳಿದುಕೊಂಡಿದೆ' ಎಂದು ಯಾರ ಬಗ್ಗೆ ನರೇಂದ್ರ ಮೋದಿ ಲೇವಡಿ ಮಾಡುತ್ತಾರೋ, ಅವರಿಗೆ ಕೇವಲ ಭಾರತವನ್ನಲ್ಲ-ಇಡೀ ದಕ್ಷಿಣ ಏಷ್ಯಾವನ್ನೇ ಆಳುವ ಆಕಾಂಕ್ಷೆ ಇತ್ತು,

ಅಂತಹ ಒಂದು ಆಕಾಂಕ್ಷೆಯ ಭಾಗವಾಗಿಯೂ ಸಾರ್ಕ್ ಹುಟ್ಟಿಕೊಂಡಿತು. 1985ರ ಡಿಸೆಂಬರ್ 8ರಂದು ಅದು ಸ್ಥಾಪನೆಯಾಯಿತು: ಅದಕ್ಕೆ ಸಾಕಷ್ಟು ಮುಂಚಿನಿಂದ (ನಿರ್ದಿಷ್ಟವಾಗಿ 70ರ ದಶಕದ ಮಧ್ಯಭಾಗದಿಂದ) ತಯಾರಿ ನಡೆದಿತ್ತು, ಪಾಕಿಸ್ತಾನದ ಅಧ್ಯಕ್ಷ ಜಿಯಾಉರ್ ರಹಮಾನ್ ಹಾಗೂ ನೇಪಾಳದ ದೊರೆ ಬೀರೇಂದ್ರ ನಡೆಸಿದ ಪ್ರಯತ್ನಗಳಿಂದ ಅದು ಕಾರ್ಯರೂಪಕ್ಕೆ ಬಂದಿತು. ಈ ಪ್ರದೇಶದ ಉಳಿದ ಶಕ್ತಿಗಳನ್ನು ಭಾರತದ ವಿರುದ್ಧ ಪಾಕಿಸ್ತಾನ ಎತ್ತಿಕಟ್ಟಬಹುದು ಎಂಬ ಆತಂಕ ಭಾರತಕ್ಕೂ, ಅದೇ ಕೆಲಸವನ್ನು ಭಾರತ ಮಾಡಬಹುದು ಎಂಬ ಆತಂಕ ಪಾಕಿಸ್ತಾನಕ್ಕೂ ಇತ್ತು, ಅಂತಹ ನಿರ್ದಿಷ್ಟ ಕಾರ್ಯಸೂಚಿಯಿಲ್ಲದೇ, ಸಾಮಾನ್ಯವಾಗಿ ಇಂತಹ ವೇದಿಕೆಗಳಲ್ಲಿ ನಡೆಯುವ 'ಪರಸ್ಪರ ಸಹಕಾರ, ಜೊತೆಗೂಡಿ ಅಭಿವೃದ್ಧಿ ಸಾಧಿಸುವುದು, ಆರ್ಥಿಕ-ಸಾಂಸ್ಕೃತಿಕ ನೆಲೆಗಳ ಕೊಡುಕೊಳ್ಳುವಿಕೆ, ಭದ್ರತೆಗೆ ಸಂಬಂಧಿಸಿದ ವಿಷಯಗಳು' ಇವೆಲ್ಲದರ ಕುರಿತೂ ಮಾತುಕತೆಗಳು ನಡೆಯುತ್ತವೆ. ಕಠ್ಮಂಡುವಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸಾರ್ಕ್ ಭಾರತದಲ್ಲಿ ದೊಡ್ಡ ಸುದ್ದಿ ಮಾಡಿದ್ದು, ರಾಜೀವ್ ಗಾಂಧಿ ಪ್ರಧಾನಮಂತ್ರಿಯಾಗಿದ್ದಾಗ.



ಅದರ ಎರಡನೇ ಶೃಂಗ ಸಮ್ಮೇಳನವು 1986ರ ಡಿಸೆಂಬರ್ 16 ಮತ್ತು 17ರಂದು ಬೆಂಗಳೂರಿನಲ್ಲೇ ನಡೆದಿತ್ತು, ಆತಿಥ್ಯಕ್ಕೆ ನಂದಿಬೆಟ್ಟವನ್ನೂ ಸಿದ್ಧಗೊಳಿಸಲಾಗಿತ್ತು.

ಸಾರ್ಕ್‌ನ 18ನೇ ಶೃಂಗವು ಇದೇ ನವೆಂಬರ್ 26 ಮತ್ತು 27ರಂದು ನೇಪಾಳದಲ್ಲಿ ನಡೆಯಿತು. ಮುಂದಿನ ವರ್ಷಕ್ಕೆ 30 ವರ್ಷಗಳು ತುಂಬಲಿರುವ ಸಾರ್ಕ್ ಕೂಟವು ಇದುವರೆಗೂ ಮಹತ್ತರವಾದದ್ದೇನೂ ಸಾಧಿಸಿಲ್ಲ, ಒಂದು - ಒಂದೂವರೆ ವರ್ಷಕ್ಕೊಮ್ಮೆ ರಾಷ್ಟ್ರಗಳ ಮುಖ್ಯಸ್ಥರ ಸಮ್ಮೇಳನವನ್ನೂ, ವರ್ಷಕ್ಕೆರಡು ಬಾರಿ ವಿದೇಶಾಂಗ ಮಂತ್ರಿಗಳ ಕೂಟವನ್ನೂ ನಡೆಸಲಾಗುತ್ತದೆ. ಇಂತಹುದೇ ಇನ್ನಿತರ ಅಂತರರಾಷ್ಟ್ರೀಯ ವೇದಿಕೆಗಳು ಸಾಧಿಸಿದ್ದರಲ್ಲಿ ಶೇ.10ರಷ್ಟನ್ನೂ ಸಾರ್ಕ್ ಸಾಧಿಸದೇ ಇದ್ದುದಕ್ಕೆ ಕಾರಣವೇನು? ಇಲ್ಲಿನ ಎರಡು ದೊಡ್ಡ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನಗಳ ರಾಜಕೀಯ ಭಿನ್ನಾಭಿಪ್ರಾಯಗಳು ಸೇರಿದಂತೆ ಹಲವು ಕಾರಣಗಳಿವೆ. ಅದರಲ್ಲಿ ಒಂದು ಈ ಭಾಗದಲ್ಲಿ ಎಲ್ಲರಿಗೂ ದೊಡ್ಡಣ್ಣನಾಗಬೇಕೆಂಬ ಭಾರತದ ಆಳುವ ವರ್ಗಗಳ ಆಕಾಂಕ್ಷೆ. ಇದು ಕೇವಲ ಗಾಂಧಿ-ನೆಹರೂ ಕುಟುಂಬದ ವ್ಯಕ್ತಿಗತ ಆಕಾಂಕ್ಷೆಯಲ್ಲ, ಭಾರೀ ಪ್ರಮಾಣದ ಭೂಭಾಗ, ಸಂಪನ್ಮೂಲಗಳು ಮತ್ತು ಜನಸಂಖ್ಯೆಯನ್ನು ಹೊಂದಿರುವ ಬೃಹತ್ ರಾಷ್ಟ್ರಕ್ಕೆ ಸಹಜವಾಗಿ ದಕ್ಕಬೇಕಾದ ಸ್ಥಾನವಿದು ಎಂಬ ಅಪ್ರಜಾತಾಂತ್ರಿಕ ಧೋರಣೆ ಅದರ ಹಿಂದಿದೆ. ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಕಾಲದಿಂದ ಇದನ್ನು ಪೋಷಿಸಿಕೊಂಡು ಬರಲಾಗಿದೆ.

ಸಿಕ್ಕಿಂಅನ್ನು ಭಾರತದ ಭೂಭಾಗದೊಳಗೆ ಸೇರಿಸಿಕೊಂಡಿದ್ದು, ಬಾಂಗ್ಲಾ ದೇಶವು ಪಾಕಿಸ್ತಾನದಿಂದ ಬೇರ್ಪಡುವುದಕ್ಕೆ ನೇರ ಕಾರ್ಯಾಚರಣೆಯ ಮೂಲಕ ಬೆಂಬಲಿಸಿದ್ದು, ಸುತ್ತಲಿನ ಉಳಿದ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸಿದ್ದು ಈ ರೀತಿ ಹಲವು ಸಂದರ್ಭಗಳಲ್ಲಿ ಅದು ಎದ್ದು ಕಂಡಿದೆ. ಇಂದಿರಾ ಗಾಂಧಿಯವರಿಗಿದ್ದ 'ಸರ್ವಾಧಿಕಾರಿ' ಗುಣದ ಮೇಲೆ ಇದನ್ನು ಆರೋಪಿಸಲಾಗುತ್ತಿತ್ತಾದರೂ, ಈ ದೇಶದ ಬೃಹತ್ ಬಂಡವಾಳಿಗರ ಮಾರುಕಟ್ಟೆ ಹಿತಾಸಕ್ತಿ ಇದರಲ್ಲಿ ಪ್ರಧಾನ ಪಾತ್ರ ವಹಿಸಿತ್ತು,

ಇಂದು ಅಂತಹ ಬಂಡವಾಳಿಗರ ಕೃಪೆಯಿಂದ ಮತ್ತು ಅವರ ಸಲುವಾಗಿ ದೇಶದ ಚುಕ್ಕಾಣಿ ಹಿಡಿದಿರುವ ನರೇಂದ್ರ ಮೋದಿಯಲ್ಲಿ ಅವೇ ಗುಣಗಳು ಇನ್ನೂ ಢಾಳಾಗಿವೆ. ಹಾಗಾಗಿಯೇ 'ಪ್ರಾದೇಶಿಕ ಸೂಪರ್‌ಪವರ್' ಆಗುವ ಆಲೋಚನೆಗೆ ತಕ್ಕಂತೆಯೇ ಮೋದಿಯ ಆಡಳಿತದ ಮೊದಲ ದಿನವನ್ನೂ ಆಯೋಜಿಸಲಾಗಿತ್ತು, 'ಮಿನಿ ಸಾರ್ಕ್ ಸಮ್ಮೇಳನ'ವೆಂದೂ ಕರೆಯಲಾದ ಪ್ರಮಾಣವಚನ ಸಮಾರಂಭಕ್ಕೆ (26ನೇ ಮೇ 2014) ಎಲ್ಲಾ ಸಾರ್ಕ್ ದೇಶಗಳ (ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ) ಮುಖ್ಯಸ್ಥರನ್ನೂ ಆಹ್ವಾನಿಸಲಾಗಿತ್ತು,

ಕೇವಲ ಇವೆಲ್ಲದರಿಂದ ಏನೂ ಸಾಧನೆಯಾಗುವುದಿಲ್ಲ ಎಂಬುದಕ್ಕೆ ಮೊನ್ನೆ ಕಠ್ಮಂಡು ಸಹ ಸಾಕ್ಷಿಯಾಯಿತು. 'ಇಂಧನ (ವಿದ್ಯುತ್) ಸಹಕಾರದ ಸಾರ್ಕ್ ಒಪ್ಪಂದ'ವೊಂದಕ್ಕೆ ಸಹಿ ಹಾಕಲಾಯಿತಾದರೂ, ವ್ಯಾಪಾರ-ವಹಿವಾಟು-ಸಂಸ್ಕೃತಿ ಇತ್ಯಾದಿ ಸಂಗತಿಗಳ ಕುರಿತ ಮಹತ್ವದ ಮಾತುಕತೆಗಳಾಗಲೀ, ಒಪ್ಪಂದವಾಗಲೀ ಆಗಲಿಲ್ಲ, ಜಗತ್ತಿನ ಒಟ್ಟು ಭೂಭಾಗದ ಶೇ.3ನ್ನೂ, ಶೇ.21ರಷ್ಟು ಜನಸಂಖ್ಯೆಯನ್ನೂ ಸಾರ್ಕ್ ದೇಶಗಳು ಹೊಂದಿವೆ. ಅಮೆರಿಕಾ ಮತ್ತು ಚೀನಾದ ನಂತರ ಈ ಕೂಟವೇ ಜಗತ್ತಿನ ಮೂರನೇ ದೊಡ್ಡ ಜಿಡಿಪಿ ಹೊಂದಿದೆ. ಈ ದೇಶಗಳ ಮಧ್ಯೆ ನಡೆಯುವ ವಾಣಿಜ್ಯ ವಹಿವಾಟು 2011ರಲ್ಲಿ 40.5 ಬಿಲಿಯನ್ ಡಾಲರ್‌ಗಳಾಗಿದ್ದವು. ನಾಫ್ತಾ ಎಂಬ ಅಮೆರಿಕಾ, ಕೆನಡಾ ಮತ್ತು ಮೆಕ್ಸಿಕೋಗಳ ನಡುವಿನ ಕೂಟವು ಅದೇ ವರ್ಷ ನಡೆಸಿದ ವಹಿವಾಟು 1000 ಬಿಲಿಯನ್ (1 ಟ್ರಿಲಿಯನ್) ಡಾಲರುಗಳಾಗಿದ್ದವು. ಇಂತಹ ಭಾರೀ ವಹಿವಾಟಿನ ಮೂಲಕ ದೇಶಗಳ ಸಾಮಾನ್ಯ ಜನರ ಬದುಕು ನೆಮ್ಮದಿಯುತವಾಗಿರುತ್ತದೆ ಎಂದೇನೂ ಹೇಳಲಾಗುವುದಿಲ್ಲ, ಅಂತಹ ಉದ್ದೇಶ ಆಳುವ ಜನರಿಗೂ ಇರುವುದಿಲ್ಲ,

ಆದರೆ ಇಂತಹ ವಹಿವಾಟನ್ನು ದೇಶದ ಸಾಮಾನ್ಯ ಜನರ ಅನುಕೂಲಕ್ಕೂ ಬಳಸಿ, ಅಭಿವೃದ್ಧಿ ಸಾಧಿಸುವ ಸಮಾಜವಾದಿ ಆಶಯವನ್ನು ಹೊಂದಿರುವುದೇ ಆದಲ್ಲಿ, ಪ್ರಪಂಚದ ಇನ್ನಿತರ ಬಲಾಢ್ಯ ಶಕ್ತಿಗಳನ್ನು ಎದುರು ಹಾಕಿಕೊಂಡು ಅಪಾರ ಸಾಧನೆ ಮಾಡಬಲ್ಲ ಸ ಭೂಭಾಗಕ್ಕಿದೆ. ಉದಾಹರಣೆಗೆ ಚೀನಾದ ಪ್ರ ಉತ್ತರ ಏಷ್ಯಾ ಮತ್ತು ಪೂರ್ವ ಯೂರೋಪ್‌ನ ಸೇರಿ 'ಶಾಂಘೈ ಸಹಕಾರ ಸಂಘಟನೆ'ಯನ್ನು ಮಾಡಿ ಇನ್ನಿತರ ಒಪ್ಪಂದಗಳ ಜೊತೆಗೆ ಅವು 1997 24ರಂದು ತಮ್ಮ ಗಡಿಗಳಲ್ಲಿ ಸೈನ್ಯದ ಸಂಖ್ಯೆಯು ಮಾಡುವ ಒಪ್ಪಂದಕ್ಕೆ ಸಹಿ ಹಾಕಿದವು. ದೇಶ ವೆಚ್ಚವನ್ನು ತಗ್ಗಿಸುವ ಇಂತಹ ಒಪ್ಪಂದಗಳು ಅಭಿವೃದ್ಧಿಯ ಮೇಲೆ ಸಕಾರಾತ್ಮಕ ಪರಿಣ ಬೀರುತ್ತವೆ. ಅಫ್ಘಾನಿಸ್ತಾನವೊಂದನ್ನು ಹೊರತು ಉಳಿದೆಲ್ಲಾ ಸಾರ್ಕ್ ದೇಶಗಳ ಜೊ ಹಂಚಿಕೊಂಡಿರುವ ಭಾರತವು ಇಂತಹ ಮುಂದಾಗುವ ಅವಕಾಶವನ್ನು ಯಾಕೆ ಪಡೆದು

ಸಾರ್ಕ್‌ನ ಈ ಭಾಗದ ಸದಸ್ಯ ರಾಷ್ಟ್ರ ಆಸ್ಟ್ರೇಲಿಯಾ, ಚೀನಾ, ಯೂರೋಪಿಯನ್ ಯ ಇರಾನ್, ಜಪಾನ್, ಮಾರಿಷಿಯಸ್, ಮ್ಯ ದ.ಕೊರಿಯಾ ಮತ್ತು ಅಮೆರಿಕಾಗಳು ವೀಕ್ಷಕ ರ ಭಾಗಿಯಾಗಿವೆ. ಇವುಗಳಲ್ಲಿ ಚೀನಾವ ರಾಷ್ಟ್ರವನ್ನಾಗಿ ತೆಗೆದುಕೊಳ್ಳಬೇಕೆಂಬ ನೇಪಾಳ ಮತ್ತು ಇನ್ನೂ ಕೆಲವು ರಾಷ್ಟ್ರ ರಾಜಕೀಯ ಗುಂಪುಗಳು ಮಾಡುತ್ತಿವೆ. ತಾನೂ ಇದರ ಭಾಗವಾಗಬೇಕೆ ಹೊಂದಿದೆ. ಇವಕ್ಕೆ ದೊಡ್ಡಣ್ಣ ಭಾರತ ಮಾಡಿಕೊಡುತ್ತಿಲ್ಲ, ತನ್ನದೇ ಇತರ ಗ ಜೊತೆಗೆ ಚೀನಾವು ಇತ್ತೀಚೆಗೆ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (ಮೂಲಕ ಆರ್ಥಿಕ ಹಿಡಿತ ಸ ಹವಣಿಸುತ್ತಿದೆ.

ಇವೆಲ್ಲವನ್ನೂ ಸೂಕ್ತವಾಗಿ ನಿಭಾಯಿ ಪ್ರದೇಶದ ಜನಸಾಮಾನ್ಯರ ಅ ಅಂತರರಾಷ್ಟ್ರೀಯ ಸಂಬಂಧ ಮತ್ತು ವ್ಯಾ ನಡೆಸಲು ಸಾಧ್ಯವೇ ಇಲ್ಲವೇ? ಸುಲಭವಲ್ಲವಾದರೂ, ಸಾಧ್ಯತೆಗಳನ್ನು ಪ್ರಯತ್ನವನ್ನು ಗಂಭೀರವಾಗಿ ಮಾಡಬೇಕ ಅದರಲ್ಲಿ ಮುಖ್ಯ ಪಾತ್ರ ವಹಿಸಬೇಕಾದ ಸರಿಯಾದ ನಿಲುವು ಹಾಗೂ ಧೋ ಪ್ರದರ್ಶಿಸಬೇಕಿದೆ. ಅದನ್ನು ಮಾಡುವುದ ಮೋದಿ, ಅಮೆರಿಕಾ ಹಾಗೂ ಆಸ್ಟ್ರೇಲಿ ತನ್ನದೇ ಪ್ರಾಯೋಜಿತ ಸಮಾರಂಭಗಳ ಮಾಡಿದ್ದನ್ನೇ ಸಾಧನೆಯೆಂದು ಪ್ರದರ್ಶಿಸುತ್ತಿದ್ದಾ

ಅಂಬಾನಿ ಮತ್ತು ಅದಾನಿಯಂತಹ ಕಾರ್ಪ ಕಂಪೆನಿಗಳ ಸೇವೆಗೆ ಸಿದ್ಧವಾಗಿರುವ ಮೋದಿ ಎಲ್ಲಾ ಅಧಿಕಾರವನ್ನೂ ಪ್ರಧಾನ ಮಂತ್ರಿ ಕ ಕೇಂದ್ರೀಕೃತವಾಗುವಂತೆ ನೋಡಿಕೊಳ್ಳುತ್ತಿದೆ. ತಿಂಗ ವಿದೇಶ ಪ್ರವಾಸ ನಡೆಸುತ್ತಿರುವ ಮೋದಿ ಇಂತಹ ಪರವಾಗಿ ಎಲ್ಲಾ ಸಾಧ್ಯತೆಗಳನ್ನು ಹುಡುಕುತ್ತಿದ್ದಾ ಜೊತೆಗೆ ಮೋದಿಯ 'ಸರ್ವಾಧಿಕಾರಿ' ಧೋ ಪ್ರಜಾತಾಂತ್ರಿಕ ವಿಧಾನಗಳ ಮೂಲಕ ಎಲ್ಲರನ್ನೂ ತೆಗೆದುಕೊಳ್ಳುವಲ್ಲಿ ದೊಡ್ಡ ಅಡ್ಡಿಯಾಗಿರುತ್ತದೆ. ಗಾಂಧಿ ಕಾಲದಲ್ಲಿ ಹಿಗ್ಗಿದ ದೊಡ್ಡಣ್ಣನ ನೀತಿಯ ಹಿಗ್ಗುತ್ತದೆ. ಹಾಗಾಗಿ ಸಾರ್ಕ್‌ಅನ್ನು ಒಂದು ಜನಕೇಂದ್ರಿತ ಅಂತರರಾಷ್ಟ್ರೀಯ ಕೂಟವಾಗಿಸು ಸದ್ಯಕ್ಕಂತೂ ಇಲ್ಲ,

ದೊರೆಸ್ವಾಮಿ ಎಂಬ ರಾಕ್‌ಸ್ಟಾರ್!



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಚ್.ಎಸ್. ದೊರೆಸ್ವಾಮಿಯವರಿಗೆ ಈಗ ಸ್ಸು 97. ಆದರೆ ಅವರಿಗೆ ಅದೊಂದು ಯೂ ಅಲ್ಲ, ಅಡೆತಡೆಯೂ ಅಲ್ಲ! ಈಗಲೂ ಸ ಸಾಹಸಕ್ಕೂ ಜೈ ಎನ್ನುವ ಜಾಯಮಾನ, ಅಂಶವನ್ನೂ ಮರೆಯದ ಚುರುಕು ಬುದ್ಧಿ ಮ್ಮ ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರುವ ಾಗಿ ನಾಗರಿಕರ ವೇದಿಕೆಯ ಪ್ರಯತ್ನದಲ್ಲಿ ಪಾತ್ರ ದೊಡ್ಡದು ಮಾತ್ರವಲ್ಲ ಅವರ ಕ್ತಿಯೂ ಮುಖ್ಯವಾದದ್ದು.


ಂದೂವರೆ ವರ್ಷಗಳ ಹಿಂದೆ ಈ ಪ್ರಕ್ರಿಯೆ ಭವಾದಾಗಿನಿಂದ ದೊರೆಸ್ವಾಮಿಯವರೊಂದಿಗೆ ಮು ಕಳೆಯುವ ಅವಕಾಶ ನಮ್ಮೆಲ್ಲರಿಗೆ ಸಿಕ್ಕಿದ್ದು ಅದೃಷ್ಟವೆಂದೇ ಹೇಳಬೇಕು. ಈಗಲೂ ಗಿರುವ ರಾಜಕೀಯ ಸ್ಪಷ್ಟತೆ, ಣಿಕತೆ, ಚುರುಕುತನ, ಹಾಸ್ಯ ವೃತ್ತಿ ಒಂದಿಷ್ಟೂ ಬೇಸರಪಟ್ಟುಕೊಳ್ಳದೆ ಲ್ಲ ಆತ್ಮೀಯವಾಗಿ ಮಾತನಾಡಿಸುವ ಮನೋಭಾವವನ್ನು ಮೆಚ್ಚದೆ ಇರಲು ಇಲ್ಲ, ಈಗಲೂ ಓದಲು ಕನ್ನಡಕ ವ, ಕಾಫಿ ಜೊತೆ ಸಕ್ಕರೆ ಬೇಕೇ ವ, ರುಚಿಕರವಾದ ಆಹಾರವನ್ನು ಇಷ್ಟ , ಪುಟ್ಟ ಮಕ್ಕಳಂತೆ ಸ್ವೀಟ್ಸ್ ಮತ್ತು ಮ್ ಇಷ್ಟ ಪಡುವ, ಕಾಲಿಗೆ ಚಕ್ರ ಂಡವರಂತೆ ರಾಜ್ಯಾದ್ಯಂತ ಸುತ್ತಾಡುವ ಜೀವನೋತ್ಸಾಹ ಬೆರಗು ಸುವಂತಹವು.

ಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಸ್ವಾಮಿಯವರನ್ನು ಚಿಕ್ಕಮಗಳೂರಿಗೆ ಕೊಂಡು ಹೋದರೆ ಅವರಿಗೆ ಗಬಹುದು ಎಂಬ ಕಾರಣಕ್ಕೇ ಮು ನಾವು ಆ ಕಾರ್ಯಕ್ರಮವನ್ನು ೂರಿನಲ್ಲಿ ಹಮ್ಮಿಕೊಂಡಿದ್ದೆವು. ಆದರೆ ಹಲವು ತಾಂತ್ರಿಕ ಕಾರಣಗಳು ಾದಾಗ ಚಿಕ್ಕಮಗಳೂರಿನಲ್ಲಿ ಅದನ್ನು ಸುವುದು ಅನಿವಾರ್ಯವಾಯಿತು. ದರ್ ಅವರು ಹಿಂಜರಿಕೆಯಿಂದಲೇ ಇದಕ್ಕೆ ಚಿಕ್ಕಮಗಳೂರಿಗೇ ಬೇಕಾಗುತ್ತದೆ" ಎಂದು ಸ್ವಾಮಿಯವರ ಮುಂದೆ ಪ್ರಸ್ತಾಪಿಸಿದಾಗ "ನಡೀರಿ ಹೋಗೋಣ" ಎಂದು ಂತ ಮೊದಲು ಸಜ್ಜಾದರು!

ೂರೆಸ್ವಾಮಿಯವರನ್ನು ಆರಾಮಾಗಿ ಗಳೂರಿಗೆ ಕರೆದುಕೊಂಡು ಲೆಂದು ನನ್ನ ಪುಟ್ಟ ಸ್ಯಾಂಟ್ರೋ ಕಾರ್ ಗಿ ನನ್ನ ತಂಗಿಯ ಇನ್ನೋವಾ ಕಾರ್ ಪಡೆದೆ. ಭಾನುವಾರ ಬೆಳಗ್ಗೆ ದೊರೆಸ್ವಾಮಿಯವರ ಧಿಕರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿಸಬೇಕಿತ್ತಾದ್ದರಿಂದ ಅವರು ಬೆಳಗ್ಗೆಯೇ ುಂದ ತಮ್ಮ ಬ್ಯಾಗ್ ಹಿಡಿದು ಹೊರಟಿದ್ದರು. ಷ್ಟ ಬನಶಂಕರಿಯ ಸುಚಿತ್ರಾ ಫಿಲಂ ಸೊಸೈಟಿ ದಿಂದ ನಾನು ಮತ್ತು ಶಿವಸುಂದರ್ ಸ್ವಾಮಿಯವರನ್ನು ಕರೆದುಕೊಂಡು ಗಳೂರಿಗೆ ಹೊರಟೆವು.

ಮಂಗಲ ದಾಟುವ ಹೊತ್ತಿಗೆ ಊಟದ ುವಾಗಿತ್ತು. ದುರದೃಷ್ಟವಶಾತ್ ಆ ಹೆದ್ದಾರಿಯಲ್ಲಿ ಸ್ವಾದ ಸಸ್ಯಾಹಾರಿ ಹೋಟೆಲ್‌ಗಳಿಗಿಂತ ಹೆಚ್ಚಾಗಿ ಗಳೇ ಇವೆ. ಒಂದು ಡಾಬಾದ ಮುಂದೆ ಕಾರ್ ದೊರೆಸ್ವಾಮಿಯವರಿಗೆ ಅನ್ನ-ಸಾರು, ಮೊಸರನ್ನ ೀ ಎಂದು ವಿಚಾರಿಸಿದೆವು. ಆಗ ಸ್ವಾಮಿಯವರು "ನನಗೆ ಪರೋಟ, ಮೊಸರು ುತ್ತು ಪುಟ್ಟ ಐಸ್‌ಕ್ರೀಮ್ ಬೇಕು" ಎಂದರು. ಗಳಲ್ಲಿ 'ಗುಂಡು ಮತ್ತು ತುಂಡು' ಸ್ಯವಾದ್ದರಿಂದ ಅವರು ಕಾರಿನಲ್ಲೇ ಊಟ ುವುದಾಗಿ ಹೇಳಿದರು. ಒಳಗೆ ಹೋದ ನಾನು ಒಬ್ಬನಿಗೆ "ಹೊರಗೆ ಕಾರಿನಲ್ಲಿ ಸ್ವಾತಂತ್ರ ಾಟಗಾರ ದೊರೆಸ್ವಾಮಿಯವರಿದ್ದಾರೆ. ಅವರಿಗೆ ಸ್ಸು ಕೊಡು" ಎಂದೆ. ಹೊರಕ್ಕೆ ದೌಡಾಯಿಸಿದ ದೊರೆಸ್ವಾಮಿಯವರ ಪಾದಗಳಿಗೆ ನಮಸ್ಕರಿಸಿ ಸ್ಸು ಟಿವಿಯಲ್ಲಿ ನೋಡಿದ್ದೆ, ಇವತ್ತು ನಿಮ್ಮ ದ ಜೊತೆಗೆ ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕಿದೆ. ಏನು ಬೇಕು ಹೇಳಿ ಸಾರ್" ಎಂದು ನೆಡೆಗೆ ನಿಂತ.

ಷ್ಟು ಊಟ ಮುಗಿಸಿ ಹೊರಗೆ ಬಂದಾಗ ಬಹಳಷ್ಟು ಜನ ದೊರೆಸ್ವಾಮಿಯವರನ್ನು ಮುತ್ತಿಕೊಂಡಿದ್ದರು. ಎಲ್ಲರೂ ಅಭಿಮಾನದಿಂದ, ಗೌರವದಿಂದ ದೊರೆಸ್ವಾಮಿಯವರನ್ನು ಮಾತನಾಡಿಸುತ್ತಿದ್ದರು. "ಬೀಡಾ ಬೇಕಾ ಸಾರ್?" ಎಂದು ಕೇಳಿದೆ. "ಸ್ವೀಟ್ ಬೀಡಾ ಬೇಕು ಆದರೆ ಅದರಲ್ಲಿ ತಂಬಾಕು ಇರಬಾರದು" ಎಂದರು. ಬೀಡಾ ಅಂಗಡಿ ಮುಂದೆ ಇಬ್ಬರು ಯುವಕರು ನಿಂತಿದ್ದರು. "ದೊರೆಸ್ವಾಮಿಯವರ ಬಗ್ಗೆ ಕೇಳಿದ್ದೀರಾ. ಅವರು ಕಾರ್‌ನಲ್ಲಿ ಕೂತಿದ್ದಾರೆ. ಅಂತಹವರನ್ನು ಭೇಟಿ ಆಗುವ ಅವಕಾಶ ನಿಮಗೆ ಮುಂದೆ ಸಿಗಲಾರದು, ಹೋಗಿ ಮಾತನಾಡಿಸಿ" ಎಂದೆ. ಇಬ್ಬರೂ ಮಾತನಾಡಿಸಿ ಬಂದಾಗ "ಇವರೇ ಅಲ್ವಾ ಮೇಡಂ ಡಿ.ಕೆ.ಶಿವಕುಮಾರ್ ವಿರುದ್ಧ ಹೋರಾಟ



ಮಾಡುತ್ತಿರುವವರು. ಟಿವಿಯಲ್ಲಿ ನೋಡಿದ್ವಿ" ಎಂದರು.

ದಾರಿಯುದ್ದಕ್ಕೂ ದೊರೆಸ್ವಾಮಿ ಜೊತೆ ಅವರ ಜೀವನದಲ್ಲಿ ನಡೆದ ಸಂಗತಿಗಳ ಬಗ್ಗೆ ಮಾತುಕತೆ ಸಾಗಿತ್ತು. ಅವರು ನೆನಪಿಸಿಕೊಂಡ ಒಂದು ಪ್ರಕರಣ ಹೀಗಿತ್ತು:

"ಎಮರ್ಜನ್ಸಿ ವಿರೋಧಿಸಿ ನಾನು ಜೈಲು ಸೇರಿದ್ದೆ. ಆಗ ನನ್ನ ಮಗ ದಾವಣಗೆರೆಯಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ. ನಾನು ಜೈಲಿನಲ್ಲಿದ್ದದ್ದರಿಂದ ಅವನ ಹಾಸ್ಟಲ್ ಶುಲ್ಕವನ್ನು ಕಟ್ಟಲು ಆಗಿರಲಿಲ್ಲ. ಆಗ ಅವನು ನನ್ನ ಹೆಂಡತಿಗೆ ಪತ್ರ ಬರೆದು 'ಎರಡು ತಿಂಗಳ ಹಾಸ್ಟಲ್ ಶುಲ್ಕ **400** ರೂಪಾಯಿಗಳನ್ನು ಕೂಡಲೇ ಕಟ್ಟದಿದ್ದರೆ ನನ್ನನ್ನು ಹಾಸ್ಟಲ್‌ನಿಂದ ಹೊರಗೆ ಹಾಕುತ್ತಾರೆ. ಹಣ ಕಳುಹಿಸು' ಎಂದು ತಿಳಿಸಿದ್ದ. ಅವಳ ಹತ್ತಿರ ಹಣವಿರಲಿಲ್ಲ. ಅವಳು ಜೈಲಿಗೆ ಬಂದು ನನಗೆ ವಿಷಯ ತಿಳಿಸಿದಳು. ಏನು ಮಾಡುವುದು? ಅದಕ್ಕೆ ನಾನು 'ಅವನಿಗೆ ಹಾಸ್ಟಲ್ ಬಿಟ್ಟು ನನ್ನೊಂದಿಗೆ ಜೈಲಿಗೆ ಬರಲು ಹೇಳು. ಅವನಿಗೆ ಈ ಅನುಭವವೂ ಸಿಗಲಿ' ಎಂದೆ. ಆಕೆ ಕೋಪ ಮಾಡಿಕೊಂಡು ಹೋದಳು. ನಾನು ಜೈಲಿನಲ್ಲಿರುವುದು ನನ್ನ ಕೆಲವು ಹಳೇ ಕಾಂಗ್ರೆಸ್ ಮಿತ್ರರಿಗೆ ಗೊತ್ತಾಗಿ ಅವರು ನಮ್ಮ ಮನೆಗೆ ಬಂದು ಮನೆಯ ಪರಿಸ್ಥಿತಿ ಹೇಗಿದೆ ಎಂದು ವಿಚಾರಿಸಿದರಂತೆ. ಆಗ ಮಗನ ಬಗ್ಗೆ ನನ್ನ ಹೆಂಡತಿ ಹೇಳಿದ್ದಾಳೆ. ಕೂಡಲೆ ಅವರು ದಾವಣಗೆರೆಗೆ ಹೋಗಿ **400** ರೂಪಾಯಿ ಕಟ್ಟಿ, ಮಗನ ಕೈಗೆ ನೂರು ರೂಪಾಯಿ ಇಟ್ಟು 'ನಿನ್ನ ಅಪ್ಪ ಜೈಲಿನಿಂದ ಬರುವತನಕ ಯಾವುದೇ ಸಹಾಯ ಬೇಕಿದ್ದರೆ ನಮಗೆ ತಿಳಿಸಿ' ಎಂದು ತಾಕೀತು ಮಾಡಿ ಹೋಗಿದ್ದರು."

ದೊರೆಸ್ವಾಮಿಯವರು ಇಂತಹ ಹಲವಾರು ನೆನಪುಗಳನ್ನು ಹಂಚಿಕೊಳ್ಳುತ್ತಾ ನಮ್ಮ ಪ್ರಯಾಣ ಸಾಗಿತ್ತು. ಮಾರ್ಗಮಧ್ಯದಲ್ಲಿ ನಾನು ಒಂದಿಷ್ಟು ಹೊತ್ತು ತೂಕಡಿಸಿದರೂ ದೊರೆಸ್ವಾಮಿಯವರು ಮಾತ್ರ ಎಚ್ಚರವಾಗಿಯೇ ಇದ್ದರು.

ಚಿಕ್ಕಮಗಳೂರಿನಲ್ಲಿ ನಮ್ಮೆಲ್ಲರಿಗೆ ಐಬಿಯಲ್ಲಿ ರೂಮುಗಳನ್ನು ಕಾದಿರಿಸಿದ್ದೆವು. ಆದರೂ ದೊರೆಸ್ವಾಮಿಯವರು ತಮ್ಮ ಅಣ್ಣನ ಅಳಿಯ ಮನೆಯಲ್ಲಿ ತಂಗುವುದಾಗಿ ಹೇಳಿದರು. ಆ ಅಳಿಯನ ಮನೆ ಶಂಕರಮಠದ ಹತ್ತಿರವಿದೆ ಎಂಬುದು ಅವರಿಗೆ ಗೊತ್ತಿತ್ತೇ ಹೊರತು ಸರಿಯಾದ ಅಡ್ರೆಸ್ ಆಗಲಿ, ಫೋನ್ ನಂಬರ್ ಆಗಲಿ ಅವರಿಗೆ ಗೊತ್ತಿರಲಿಲ್ಲ. ಕಾರ್ ಅನ್ನು ನಿಲ್ಲಿಸಿ ಡೈರೆಕ್ಷನ್ ಕೇಳಿದ ಕಡೆಯೆಲ್ಲ ಜನ ದೊರೆಸ್ವಾಮಿಯವರನ್ನು ಗುರುತಿಸಿ ಮಾತನಾಡಿಸುತ್ತಿದ್ದರು.

ಕೊನೆಗೂ ಆ ಮನೆ ಸಿಕ್ಕಿತು. "ಬೆಳಗ್ಗೆ ಎಲ್ಲರೂ ಇಲ್ಲಿಗೆ ತಿಂಡಿಗೆ ಬನ್ನಿ" ಎಂದ ದೊರೆಸ್ವಾಮಿಯವರು ನಮ್ಮನ್ನು ಬೀಳ್ಕೊಟ್ಟರು. ಅವತ್ತು ಬೆಂಗಳೂರಿನಲ್ಲಿ ಕಾರ್ ಹತ್ತಿದ್ದ ಅವರು ಎಲ್ಲೂ ಇಳಿದಿರಲಿಲ್ಲ, ಆದರೂ ಅವರಿಗೆ ಒಂದಿಷ್ಟೂ ದಣಿವಾಗಿರಲಿಲ್ಲ!

ಮಾರನೆ ದಿನ ಬೆಳಗ್ಗೆ ಒಂಭತ್ತೂವರೆಗೆ ಅವರನ್ನು ಅಲ್ಲಿಂದ ಕರೆದುಕೊಂಡು ಡಿಸಿ ಆಫೀಸಿಗೆ ಹೋದೆವು. ಅಲ್ಲಿ ಡಿಸಿ ಮತ್ತು ಎಸ್‌ಪಿ ಅವರೊಂದಿಗೆ ಚರ್ಚಿಸಿದ ನಂತರ ಐಬಿಗೆ ಬಂದೆವು. ಅಲ್ಲಾಗಲೇ ಎಸ್.ಕೆ.ಕಾಂತ, ಜಿ.ಎನ್.ನಾಗರಾಜ್, ಸಿದ್ದನಗೌಡ ಪಾಟೀಲ್, ಲಲಿತಾ ನಾಯಕ್, ಎಚ್.ಎಲ್.ಕೇಶವಮೂರ್ತಿ, ಅಜ್ಜಂಪುರ ವೆಂಕಟೇಶ್, ವಿ.ಎಸ್.ಶ್ರೀಧರ್, ನಗರಿ ಬಾಬಯ್ಯ, ಚಿಕ್ಕಮಗಳೂರಿನ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು, ಎಡಪಂಥೀಯರು, ದಲಿತ ಸಂಘರ್ಷದ ಸದಸ್ಯರು, ವಕೀಲರು ಮತ್ತು ಮಾಧ್ಯಮದವರಲ್ಲದೆ ನೂರಾರು ಜನ ಸೇರಿದ್ದರು. ಎಲ್ಲರಿಗೂ ದೊರೆಸ್ವಾಮಿಯವರೊಂದಿಗೆ ಮಾತನಾಡುವ, ಅವರೊಂದಿಗೆ ಫೋಟೊ ತೆಗೆಸಿಕೊಳ್ಳುವ ಉತ್ಸಾಹ.

ಅದೆಲ್ಲಿಂದಲೋ ನೂರ್ ಝುಲ್ಫಿಕರ್ ಮತ್ತು ಸಿರಿಮನೆ ನಾಗರಾಜ್ ಅವರನ್ನು ಕರೆದುಕೊಂಡು ಬರಲು ಶ್ರೀಧರ್ ಮತ್ತು ಬಾಬಯ್ಯ ಹೋಗಿದ್ದರು. ನಾವೆಲ್ಲ ಐಬಿ ಮುಂದೆ ಅವರ ಆಗಮನಕ್ಕಾಗಿ ಕಾದು ಕೂತಿದ್ದೆವು. ಕಾಂತಾ, ಜಿ.ಎನ್.ನಾಗರಾಜ್ ಮತ್ತು ಸಿದ್ದನಗೌಡ ಪಾಟೀಲ್ ಅವರು ಎಲ್ಲರನ್ನೂ ಉದ್ದೇಶಿಸಿ ಆ ದಿನದ ಬೆಳವಣಿಗೆಯ ಪ್ರಾಮುಖ್ಯತೆ ಬಗ್ಗೆ ಮಾತನಾಡಿದರು.

ನೂರ್ ಮತ್ತು ಸಿರಿಮನೆ ಅವರು ಬರುತ್ತಿದ್ದಂತೆ ನೂಕುನುಗ್ಗಲು ಶುರುವಾಯಿತು. ಒಂದೆಡೆ ಎಲ್ಲರಿಗೂ ಅವರನ್ನು ಸ್ವಾಗತಿಸುವ ಆಶೆ, ಇನ್ನೊಂದೆಡೆ ಮಾಧ್ಯಮದವರಿಗೆ ಹತ್ತಿರದಿಂದ ಫೋಟೋ ಮತ್ತು ವೀಡಿಯೋ ಹಿಡಿಯುವ ತವಕ. ಆ ನೂಕಾಟದಲ್ಲಿ ಮಾಧ್ಯಮದವರೇ ಪರಸ್ಪರ ಜಗಳ ಪ್ರಾರಂಭಿಸಿದರು. ಎಷ್ಟೇ ಪ್ರಯತ್ನಪಟ್ಟರೂ ಮಾಧ್ಯಮದವರನ್ನು ನಿಯಂತ್ರಿಸಲಾಗಲಿಲ್ಲ. ಇದೆಲ್ಲ ನಡೆಯುತ್ತಿದ್ದಾಗ ಒಬ್ಬರು ಬಂದು "ದತ್ತಣ್ಣ (ವೈ.ಎಸ್.ವಿ.ದತ್ತ) ನಿಮಗೆ ಅಭಿನಂದನೆಗಳನ್ನು ಕಳುಹಿಸಿದ್ದಾರೆ" ಎಂದು ನನ್ನ ಕೈಗೆ ಒಂದು ಹೂವಿನ ಹಾರವನ್ನು ಕೊಟ್ಟರು. ಅದನ್ನು ನೂರ್ ಝುಲ್ಫಿಕರ್ ಅವರಿಗೆ ಕೊಟ್ಟು "ದೊರೆಸ್ವಾಮಿಯವರಿಗೆ ಥ್ಯಾಂಕ್ಸ್ ಹೇಳಿ" ಎಂದೆ. ಅವರು ಹಾರವನ್ನು ದೊರೆಸ್ವಾಮಿಯವರಿಗೆ ಹಾಕಿ ಥ್ಯಾಂಕ್ಸ್ ಹೇಳಿದರು.

ಆಮೇಲೆ ಎಲ್ಲರೂ ಡಿಸಿ ಕಚೇರಿಗೆ ಹೋಗಿ ನಿಯಮದ ಪ್ರಕಾರ ನೂರ್ ಹಾಗು ಸಿರಿಮನೆಯವರನ್ನು ಜಿಲ್ಲಾಡಳಿತಕ್ಕೆ ಒಪ್ಪಿಸಿದೆವು. ನೂರ್ ಮತ್ತು ಸಿರಿಮನೆಯವರ ಪತ್ರಿಕಾಹೇಳಿಕೆ ಪ್ರಕ್ರಿಯೆಗಳು ಮುಗಿದನಂತರ ನಾನು "ಸರ್, ಒಂದು ಚರ್ಚಾ ಸಭೆಯನ್ನು ಏರ್ಪಡಿಸಿದ್ದಾರೆ. ಅದನ್ನು ಮುಗಿಸಿದ ಕೂಡಲೇ ಬೆಂಗಳೂರಿಗೆ ಹೊರಡೋಣ" ಎಂದೆ. ಆಗ ದೊರೆಸ್ವಾಮಿಯವರು "ಇಲ್ಲ, ನಾನು ಬಳ್ಳಾರಿಗೆ ಹೋಗುತ್ತೇನೆ" ಎಂದು ಬಾಂಬ್ ಸಿಡಿಸಿದರು. "ಅಲ್ಲಾ ಸಾರ್, ನೀವು ಹೇಗೆ ಬಳ್ಳಾರಿಗೆ ಹೋಗುತ್ತೀರಿ?" ಎಂದು ಅಚ್ಚರಿಯಿಂದ ಕೇಳಿದೆ. "ನನ್ನನ್ನ ಕರೆದುಕೊಂಡು ಹೋಗಲು ಬಂದಿದ್ದಾರೆ" ಎಂದರು.

"ಅವರು ಯಾರು? ಯಾವುದರಲ್ಲಿ ನಿಮ್ಮನ್ನು ಕರೆದುಕೊಂಡು ಹೋಗುತ್ತಾರೆ ಎಂದೆಲ್ಲ ಗೊತ್ತಾದ ಮೇಲೇ ನಾನು ನಿಮ್ಮನ್ನು ಅವರ ಜೊತೆ ಕಳಿಸೋದು" ಎಂದೆ. ಅದಕ್ಕೆ ದೊರೆಸ್ವಾಮಿಯವರು "ಓಹೋ, ಇವರಿಬ್ಬರನ್ನು ಹಸ್ತಾಂತರಿಸಿದ್ದು ಆಯಿತು. ಈಗ ನನ್ನನ್ನೂ ಹಸ್ತಾಂತರಿಸುತ್ತೀಯಾ!" ಎಂದು ಜೋಕ್ ಮಾಡಿದರು. "ಸರ್, ನೀವು ಇವತ್ತು ನಮ್ಮೊಂದಿಗೆ ಬೆಂಗಳೂರಿಗೆ ವಾಪಸ್ ಹೋಗಬೇಕಿತ್ತು, ಆದರೆ ನೀವೀಗ ಬೇರೆಲ್ಲಿಗೋ ಹೊರಟಿದ್ದೀರಿ. ಮನೆಯವರು ಏನಂತಾರೆ?" ಅಂದೆ. "ಅವಳು ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಟ್ಟಿದ್ದಾಳೆ" ಎಂದ ಅವರು ಜೋರಾಗಿ ನಕ್ಕರು.

ಐಬಿಗೆ ಹಿಂದಿರುಗಿದಾಗ ದೊರೆಸ್ವಾಮಿಯವರು ಮಂಚದ ಮೇಲೆ ಕಾಲು ಚಾಚಿಕೊಂಡು ಕೂತಿದ್ದಾಗ ಸುತ್ತುವರಿದಿದ್ದ ಜನರೊಂದಿಗೆ ಮತ್ತೆ ಹರಟಲಾರಂಭಿಸಿದರು. ಆಗ ಶಿವಸುಂದರ್‌ಗೆ ದೊರೆಸ್ವಾಮಿಯವರು ಬಳ್ಳಾರಿಗೆ ಹೊರಟಿದ್ದ ವಿಚಾರ ತಿಳಿಸಿದೆ. "ನನ್ನ ಮನೆಯವರಿಗೆ ಫೋನ್ ಮಾಡಿ ನಾನು ಬಳ್ಳಾರಿಗೆ ಹೋಗಿದ್ದೀನಿ ಅಂತ ತಿಳಿಸಿ" ಎಂದರು. ಶಿವಸುಂದರ್ ಅವರು "ಸಾರ್ ಅವರು ಬೈಯಲ್ಲವಾ?" ಎಂದು ಕೇಳಿದರೆ "ಬೈದರೆ ನೀವು ತಾನೆ ಬೈಸಿಕೊಳ್ಳುವುದು, ಬೈಯಿಸಿಕೊಳ್ಳಿ" ಎಂದು ಗಹಗಹಿಸಿ ನಕ್ಕರು.


ದೊರೆಸ್ವಾಮಿಯವರು ಹೊರಡಲು ಸಿದ್ಧರಾಗಿ ನಿಂತಿದ್ದರೂ ಸುತ್ತುವರಿದಿದ್ದ ಹಲವಾರು ಅಭಿಮಾನಿಗಳು ಮತ್ತು ಮಾಧ್ಯಮದವರು ಅವರನ್ನು ಮಾತನಾಡಿಸುತ್ತಲೇ ಇದ್ದರು. "ನೀವು ಒಬ್ಬ ರಾಕ್‌ಸ್ಟಾರ್. ನಿಮ್ಮನ್ನ ಜನ ಸುತ್ತುವರಿದೇ ಇರುತ್ತಾರೆ" ಎಂದು ತಮಾಷೆ ಮಾಡುತ್ತಾ ಅವರನ್ನು ಐಬಿಯಿಂದ ಕರೆದುಕೊಂಡು ಹೊರಟೆ.

ಬಳ್ಳಾರಿಯಿಂದ ಬಂದಿದ್ದವರ ಕಾರ್ ಹತ್ತುತ್ತಾ "ನನ್ನ ಜೊತೆ ನನ್ನ ಬ್ಯಾಗನ್ನೂ ಹಸ್ತಾಂತರಿಸಿದ್ದೀ ಏನಮ್ಮ?" ಎಂದು ನಗುನಗುತ್ತಾ ಕೇಳಿದರು.

ದೊರೆಸ್ವಾಮಿ ನಿಜಕ್ಕೂ ಅಪರಂಜಿಯಂತಹ ಮನುಷ್ಯ. ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಕ್ರಿಯೆಯಿಂದಾಗಿ ಅವರ ಪರಿಚಯವಾಗಿದ್ದು ನನಗೆ ಹೆಮ್ಮೆಯ ವಿಷಯ. ಹಾಗೆಯೇ ಅವರು ಬರೆದಿರುವ 'ನೆನಪಿನ ಸುರುಳಿ ತೆರೆದಾಗ' ಪುಸ್ತಕದ ಮರುಮುದ್ರಣವನ್ನು ಸದ್ಯದಲ್ಲೇ ನಮ್ಮ 'ಲಂಕೇಶ್ ಪ್ರಕಾಶನ'ವೇ ಮಾಡುತ್ತಿರುವುದೂ ಹೆಮ್ಮೆಯ ಸಂಗತಿಯೇ.

ದೊರೆಸ್ವಾಮಿಯವರದ್ದು ಎಂತಹ ವ್ಯಕ್ತಿತ್ವ ಎಂಬುದನ್ನು ತೋರಲು ಅವರು ಈ ಪುಸ್ತಕಕ್ಕೆ ಬರೆದಿರುವ 'ಲೇಖಕನ ಎರಡು ಮಾತು' ಎಂಬ ಮುನ್ನುಡಿಯ ಹಲವು ಸಾಲುಗಳು ನೀಡಿ ಇದನ್ನು ಮುಗಿಸುತ್ತೇನೆ:

"ಈ ನನ್ನ ನೆನಪಿನ ಸುರುಳಿ ಬಹಳ ಮೌಲಿಕವಾದದ್ದು ಎಂಬ ಭ್ರಾಂತಿ ನನಗಿಲ್ಲ. ಅವು ಓದಿಸಿಕೊಂಡು ಹೋಗುತ್ತವೆ ಎಂಬ ಭರವಸೆಯನ್ನು ಮಾತ್ರ ನೀಡಬಲ್ಲೆ. ಇದು ಗಟ್ಟಿ ಸಾಹಿತ್ಯವಲ್ಲ, ಪೆಪ್ಪರ್‌ಮಿಂಟ್ ಚೀಪಿದಷ್ಟೇ ತೃಪ್ತಿ ಕೊಡಬಲ್ಲದು ಎಂಬ ಅರಿವು ನನಗುಂಟು."



ದೇಶಪಾಂಡೆಗೆ ಮುಕ್ಕಾಲು ರೊಟ್ಟಿ; ಮ್ಯಾಗಿಗೆ ಕಾಲು ಭಾಗ



ಉತ್ತರ ಕನ್ನಡ ಕಾಂಗ್ರೆಸ್‌ನ ಖಾಲಿಬರಡು ರಾಜಕಾರಣ ನಿಗಮ-ಮಂಡಳಿ ಪೀಠಾಧಿಪತಿಗಳ ದೀಕ್ಷೆ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ಮಗ್ಗಲು ಬದಲಿಸಬೇಕಾಗಿ ಬಂದಿದೆ. ಕಾಗೆಗಳಂತೆ ಕಚ್ಚಾಡುತ್ತ ಜಿಲ್ಲಾ ಕಾಂಗ್ರೆಸ್‌ನ್ನು ಹಳ್ಳ ಹಿಡಿಸಿರುವ ಮನೆಹಾಳ ಮಂತ್ರಿ ಆರ್.ವಿ. ದೇಶಪಾಂಡೆ ಮತ್ತು ಮೂರ್ಖ ಮಾಜಿ ಸಂಸದೆ ಮಾರ್ಗರೆಟ್ ಆಳ್ವ ತಂತಮ್ಮ ಬಾಲಂಗೋಚಿಗಳಿಗೆ ಗೂಟದ ಕಾರು ಕೊಡಿಸುವ ಮೇಲಾಟದಲ್ಲಿ ಮುಗ್ಗರಿಸಿದ್ದಾರೆ. ಇಬ್ಬರಿಗೂ ಸಿಕ್ಕಿದ್ದೇ ಸೀರುಂಡೆ ಎಂಬಂತಾಗಿದೆ. ಆದರೂ ತಾವೇ ಗೆದ್ದಿದ್ದೇವೆಂದು ಬಡಾಯಿ ಕೊಚ್ಚಿಕೊಳ್ಳೋದು ಮಾತ್ರ ಬಿಟ್ಟಿಲ್ಲ. ಈ ಎರಡೂ ಎದುರಾಳಿ ಪಡೆಗಳ ನಡುವೆ ಸಮತೋಲನ ಸಾಧಿಸಲು ಸಿದ್ದು-ಪರಂ ತಂತ್ರ ಮಾಡಿದರೂ, ಅಂತಿಮವಾಗಿ ಹಿಕಮತ್ತುದಾರ ದೇಶಪಾಂಡೆಗೇ ರೊಟ್ಟಿಯ ದೊಡ್ಡ ಭಾಗ ದಕ್ಕಿದೆ; ಮ್ಯಾಗಿಗೆ ಸಿಕ್ಕಿರೋದು ಸಣ್ಣ ಚೂರು.


ಸಾಮಾಜಿಕ ನ್ಯಾಯ ಚಿಂತನೆಯ ಸಿದ್ದು ಕಾಲಖಂಡದಲ್ಲಿ ಉತ್ತರ ಕನ್ನಡಕ್ಕೆ ಮೂರು ನಿಗಮ-ಮಂಡಳಿ ದೊರೆತನ ಪ್ರಾಪ್ತವಾಗಿದೆ. ಇದರಿಂದ ಜಿಲ್ಲೆಗೇನು ಭಾಗ್ಯ? ಊಹುಂ, ಇಂಥ ಕೆಲಸಕ್ಕೆ ಬಾರದ ಪದವಿ-ಹುದ್ದೆಯಿಂದ ತೀರಾ ಹಿಂದುಳಿದಿರುವ ಉತ್ತರ ಕನ್ನಡಕ್ಕೆ ಅನುಕೂಲ-ಅಭಿವೃದ್ಧಿ ಆಗುತ್ತದೆಂದು ಭಾವಿಸುವುದೇ ಭ್ರಮೆ! ಇದು ಹಿಂದಿನ ಅನುಭವ. ಬಿಜೆಪಿ ಯುಗದಲ್ಲಿ ಇಂಥದೇ ಬೋಗಸ್ ನಾಲ್ಕು ನಿಗಮ-ಮಂಡಳಿ ಅಧ್ಯಕ್ಷತೆ ಜಿಲ್ಲೆಯ ಚಡ್ಡಿ ಚತುರರಿಗೆ ದೊರಕಿತ್ತು. ಈ ನಾಲಾಯಕರಿಂದ ಜಿಲ್ಲೆಯ ಯಾವ ಜನಸಮುದಾಯಕ್ಕೂ ಪೈಸೆಯಷ್ಟೂ ಪ್ರಯೋಜನ ಆಗಲಿಲ್ಲ. ನಿರಾಶ್ರಿತ ಪುಢಾರಿಗಳಿಗೆ ಪುನರ್ವಸತಿ ಸಿಕ್ಕಿ ಅವರ ಅಡಚಣೆ ನಿವಾರಣೆ ಆಗಿತ್ತು; ಜತೆಗೆ ಅವರ ಬಾಸ್‌ಗಳ ಓಟ್‌ಬ್ಯಾಂಕ್ ರಾಜಕಾರಣದ ತೆವಲು ತೀರಿತ್ತು.


ಈಗಲೂ ಅಂಥದ್ದೇ ಬುರ್ನಾಸ್ ತಂತ್ರಗಾರಿಕೆ ನಡೆದುಹೋಗಿದೆ. ಗತಿಗೇಡಿ ಸ್ವಯಂಘೋಷಿತ ಮರಿ ಮುಖಂಡರ ದಿಸೆ ಬದಲಾಗಿದೆ. ಈಗ ನಿಗಮ-ಮಂಡಳಿ ನವಾಬರಾಗಿರುವ ನಾಮರ್ದ ಮೂವರಿಂದಲೂ ಉತ್ತರ ಕನ್ನಡಕ್ಕೆ ಉದ್ಧಾರ ಆಗೋದು ಅಷ್ಟರಲ್ಲೇ ಇದೆ ಬಿಡಿ. ಖಾಲಿ ಬುರುಡೆಯ ಈ ಮೂವರೂ ನಿಗಮ-ಮಂಡಳಿಯ ಬೊಕ್ಕಸಕ್ಕೆ ಭಾರ-ಕೂಳಿಗೆ ದಂಡವೇ!! ಆದರೆ ಈ ಆಯ್ಕೆ ಹಿಂದಿನ ಒಳರಾಜಕಾರಣದ ಕಸರತ್ತು ಮಾತ್ರ ಮೋಜಾಗಿದೆ. ಒಂದು ಸುದ್ದಿಯ ಪ್ರಕಾರ ದೈತ್ಯ ದೇಶಪಾಂಡೆಗೆ ನಿಗಮ-ಮಂಡಳಿ ಜಂಗೀಕುಸ್ತಿಯಲ್ಲಿ ಮ್ಯಾಗಿಯಜ್ಜಿ ಬರೋಬ್ಬರಿ ಗುದ್ದು ಕೊಟ್ಟಿದ್ದಾರಂತೆ. ಹೀಗಾಗಿ ದೇಶಪಾಂಡೆಯ ಖಾಸಾ ಖದೀಮ ಶಿಷ್ಯರಲ್ಲಿ ಯಾರಿಗೂ ಗೂಟದ ಕಾರಿನ ಯೋಗ ಖುಲಾಯಿಸಿಲ್ಲ ಎಂದೀಗ ಜಿಲ್ಲಾ ರಾಜಕಾರಣದ ಪಡಸಾಲೆಯಲ್ಲಿ ರೋಚಕ ಚರ್ಚೆ ನಡೆಯುತ್ತಿದೆ. ಮತ್ತೊಂದೆಡೆಯಲ್ಲಿ ದೇಶಪಾಂಡೆಯೇ ನಿಗಮ-ಮಂಡಳಿ ಮಹಾ ಸಮರದಲ್ಲಿ ದಿಗ್ವಿಜಯ ಸಾಧಿಸಿದ್ದಾರೆಂಬ ವ್ಯಾಖ್ಯಾನಗಳು ಪುಟದೇಳುತ್ತಿವೆ. ಆತ ತನ್ನ ಪರಮಾಪ್ತರಿಗೆ ಅವಕಾಶ ಕೊಡಿಸಲಾಗದಿದ್ದರೂ, ಮ್ಯಾಗಿ ಚೇಲಾಗಳಿಗೂ ಛಾನ್ಸ್ ಸಿಗದಂತೆ ನೋಡಿಕೊಂಡಿದ್ದಾರಂತೆ; ಮ್ಯಾಗಿ ತನ್ನ ಕುಲಕಂಠೀರವನೊಬ್ಬನಿಗೇ ಪೀಠ ಕೊಡಿಸುವಷ್ಟರಲ್ಲೆ ಸುಸ್ತಾಗಿ ಹೋದರಂತೆ.

ಕಳೆದ ಲೋಕಸಭಾ ಚುನಾವಣೆ ಹೊತ್ತಲ್ಲಿ ಮ್ಯಾಗಿ ಮತ್ತು ದೇಶಪಾಂಡೆಗೆ ತಾವು ಹೆತ್ತ ಹೆಗ್ಗಣಗಳೇ ಎಂಪಿಗಿರಿಗೆ ಯೋಗ್ಯವಾಗಿ ಕಂಡಿದ್ದವು. ಮ್ಯಾಗಿ ತನ್ನ ಸುಪುತ್ರ ನಿವೇದಿತ್ ಮತ್ತು ದೇಶಪಾಂಡೆ ತನ್ನ ಕುಲೋದ್ಧಾರಕ ಪ್ರಶಾಂತ್‌ಗೆ ಕಾಂಗ್ರೆಸ್‌ನ ಎಂಪಿಗಿರಿ ಟಿಕೆಟ್ ಕೊಡಿಸಲು ಮಾಡಬಾರದ್ದೆಲ್ಲ ಮಾಡಿದ್ದರು. ಆಗ ದೇಶಪಾಂಡೆ ತೂಕವೇ ಹೆಚ್ಚಾಗಿ ಹೈಕಮಾಂಡ್ ಪ್ರಶಾಂತ್‌ಗೆ ಟಿಕೆಟ್ ಕೊಟ್ಟಿತ್ತು. ಮ್ಯಾಗಿ ಮಗ ನಿವೇದಿತ್‌ಗೆ ಅಸೆಂಬ್ಲಿಯಿಂದ ಪರಿಷತ್‌ಗೆ ಕಳಿಸುವ ಒಡಂಬಡಿಕೆ ಟಿಕೆಟ್ ಹಂಚಿಕೆ ಹೊತ್ತಲ್ಲಿ ಹೈಕಮಾಂಡ್‌ನ ಪವರ್ ಬ್ರೋಕರ್‌ಗಳು ಮಾಡಿದ್ದರು.

ಆದರೆ ಎಮ್ಮೆಲ್ಸಿ ಆಯ್ಕೆ ಹೊತ್ತಲ್ಲೂ ಮಂತ್ರಿ ದೇಶಪಾಂಡೆ ನಿವೇದಿತ್‌ಗೆ ಅಡ್ಡಗಾಲು ಹಾಕಿದರು. ತನ್ನ ಮಗ ಪ್ರಶಾಂತ್ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಭರ್ಜರಿ ಸೋಲು ಕಂಡು ಗಾಯಗೊಂಡಿರುವಾಗ ಪ್ರತಿಸ್ಪರ್ಧಿ ನಿವೇದಿತ್‌ಗೆ ಎಮ್ಮೆಲ್ಸಿ ಮಾಡಿದರೆ ಗಾಯದ ಮೇಲೆ ಬರೆಯೆಳೆದಂತಾಗುವ ಭಯ ದೇಶಪಾಂಡೆಯದಾಗಿತ್ತು, ಪಾಪ! ಹೈಕಮಾಂಡ್‌ನಲ್ಲಿ ಪವರ್‌ಫುಲ್ ಆಗಿರುವ ಸ್ವ-ಧರ್ಮದ ಹಿತಶತ್ರುಗಳಾದ ಆಸ್ಕರ್ ಫರ್ನಾಂಡಿಸ್-ವಿನ್‌ಸೆಂಟ್ ಜಾರ್ಜ್ ವಗೈರೆಗಳ ಕಿತಾಪತಿಯಿಂದ ಮ್ಯಾಗಿ ಮಾತು ನಡೆದಿರಲಿಲ್ಲ.

ನಿಗಮ-ಮಂಡಳಿ ಪದವಿ ಪ್ರ'ಧಾ'ನದಲ್ಲಿ ಮ್ಯಾಗಿ ತನ್ನ ಮಗನಿಗಾಗಿ ಹಠ ಹಿಡಿದು ಕೂತಿದ್ದರು. ನಿವೇದಿತ್ ಜತೆಗೆ ತಾನು ಹೇಳಿದ ಮತ್ತೊಬ್ಬನಿಗೆ ಸ್ಥಾನ ಕೊಡುವಂತೆ ಆಕೆ ಬೇಡಿಕೆ ಮಂಡಿಸಿದ್ದರು. ಲೋಕಸಭೆ ಎಲೆಕ್ಷನ್ ಟಿಕೆಟ್ ಹಂಚಿಕೆ-ಎಮ್ಮೆಲ್ಸಿಗಿರಿ ಆಯ್ಕೆ ಹೊತ್ತಲ್ಲಿ ತನ್ನ ಕರುಳ ಕುಡಿಗೆ ದೇಶಪಾಂಡೆ-ಆಸ್ಕರ್-ಅಹ್ಮದ್ ಪಟೇಲ್ ವಗೈರೆಗಳು ಹೇಗೇಗೆ ಅನ್ಯಾಯ ಮಾಡಿದ್ದಾರೆಂಬುದನ್ನು ಪರಂ ಮತ್ತು ರಾಹುಲ್ ಎದುರು ಮ್ಯಾಗಿ ಗೋಗರೆಯುತ್ತ ವಿವರಿಸಿದ್ದರು. ತನ್ನ ಎತ್ತಿ ಆಡಿಸಿದ ಮ್ಯಾಗಿಯಜ್ಜಿ ಬಗ್ಗೆ ರಾಹುಲ್‌ಗೆ ಕನಿಕರ ಉಂಟಾಗಿತ್ತು, ಆತ ನೇರ ಸಿಎಂ ಸಿದ್ದುಗೆ ಮಾತಾಡಿ ನಿವೇದಿತ್‌ಗೊಂದು ಗೂಟದ ಕಾರು ನೀಡಲು ಹೇಳಿದ್ದರಂತೆ. ಇತ್ತ ಪರಂ ಕೂಡ ದೇಶಪಾಂಡೆಗೆ "ಹಿಂದೆಲ್ಲ ನಿಮ್ಮ ಮಗನಿಗೆ ಟಿಕೆಟ್ ಮತ್ತಿತರ ಸ್ಥಾನ-ಮಾನ ಕೊಡಲಾಗಿದೆ... ಈ ಸಲ ನಿವೇದಿತ್‌ಗೆ ಕೊಡೋದು ನ್ಯಾಯ ಕಂಡ್ರಿ..." ಎಂದು ಬುದ್ಧಿವಾದ ಹೇಳಿದ್ದರು. ಹೀಗಾಗಿ ಲೋಕಸಭೆ ಎಲೆಕ್ಷನ್‌ನಲ್ಲಿ ದೊಡ್ಡ ಅಂತರದಲ್ಲಿ ಸೋತು ಅಪರಾಧಿ ಪ್ರಜ್ಞೆಗೆ ಜಾರಿದ್ದ ದೇಶಪಾಂಡೆಗೆ ಬಾಯ್ಬಿಡದ ಪರಿಸ್ಥಿತಿ ಎದುರಾಗಿತ್ತು!







ದೇಶಪಾಂಡೆಯ ಅಸಹಾಯಕತೆ ಅನಾಯಾಸವಾಗಿ ನಿವೇದಿತ್‌ಗೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಯಜಮಾನಿಕೆ ಪಡೆಯಲು ನೆರವಾಯ್ತು! ಅರಣ್ಯ-ಕೊಳಚೆ ನಿರ್ಮೂಲನೆ-ವಸತಿ ನಿಗಮದಂಥ ದೊಡ್ಡ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ತಾಯಿ-ಮಗ ನಾಮಕೇವಾಸ್ತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಕಾರು ಒಪ್ಪಿಕೊಳ್ಳಬೇಕಾಗಿ ಬಂದಿದೆ. ಇದು ತಾಯಿ-ಮಗ ತಲುಪಿರುವ ಅಧಃಪತನಕ್ಕೆ ಸಂಕೇತದಂತಿದೆ. ಯಡ್ಡಿ ಬಂಟ್ವಾಳದಲ್ಲಿ ಮಕಾಡೆ ಮಲಗಿದ್ದ ಮಾಜಿಮಂತ್ರಿ-ಶಿಪ್ಪಿಂಗ್ ದೊರೆ ಗೋಣಿ ನಾಗ ಉರುಫ್ ನಾಗರಾಜ್ ಶೆಟ್ಟಿಯ ಪುನರ್ವಸತಿಗಾಗಿಯೇ ಹುಟ್ಟು ಹಾಕಿದ್ದ ಬೋಗಸ್ ಪ್ರಾಧಿಕಾರವಿದು. ಕಾರಿನ ಪೆಟ್ರೋಲ್‌ಗೂ ಈ ಪ್ರಾಧಿಕಾರದಲ್ಲಿ ದುಡ್ಡಿರಲಿಲ್ಲ, ಕೆಲಸಕ್ಕೆ ಬಾರದ ಈ ಪ್ರಾಧಿಕಾರ ತನಗೆ ಬೇಡವೆಂದು ಅರ್ಧದಲ್ಲೇ ನಾಗ ರಾಜಿನಾಮೆ ಬಿಸಾಕಿ ತೊಲಗಿದ್ದ.

ಇಂಥ ಖಾಲಿ ಪ್ರಾಧಿಕಾರದ ಮಾಲೀಕನಾಗಿರುವ ನಿವೇದಿತ್‌ನಿಂದ ಅನುದಾನ ತರಲು ಸಾಧ್ಯವಾ? ಕರಾವಳಿಯ ಪರಿಕಲ್ಪನೆಯೇ ಇಲ್ಲದ ಈ ವಲಸಿಗನಿಂದ ಅಭಿವೃದ್ಧಿ ಸಾಧ್ಯವಾ? ಹುಕ್ಕಿ ಬಂದಾಗ ಅಮ್ಮನ ಜತೆ ಉತ್ತರ ಕನ್ನಡದಲ್ಲಿ ಅಂಡಲೆದದ್ದು ಬಿಟ್ಟರೆ ಈತನಿಗೆ ಸ್ಥಳೀಯ ಕಷ್ಟ-ಸುಖ ಗೊತ್ತೇ ಇಲ್ಲ, ಇಂಥವನಿಂದ ಪ್ರಾಧಿಕಾರಕ್ಕೆ ದಂಡ; ಕರಾವಳಿಗೆ ದೋಖಾ ಆಗಲಿದೆ ಎಂಬುದು ನಿಷ್ಠಾವಂತ ಕಾಂಗ್ರೆಸಿಗರ ಆಕ್ರೋಶ. ಶಿರಸಿಯಲ್ಲಿ ಬಾಡಿಗೆಮನೆ ಮಾಡಿರುವ ನಿವೇದಿತ್‌ನ ಬೇರುಗಳಿರುವುದು ದಿಲ್ಲಿ-ಬೆಂಗಳೂರು ಮತ್ತು ವಿದೇಶದಲ್ಲಿ, ಹೇಗೆ ಸೋತ ತಕ್ಷಣ ಜಿಲ್ಲೆಗೆ ಬೆನ್ನು ಹಾಕಿ ತನ್ನ ವ್ಯವಹಾರಿಕ ಅಡ್ಡೆಯಿರುವ ಮುಂಬೈಗೆ ಪ್ರಶಾಂತ ದೇಶಪಾಂಡೆ ಹಾರಿದನೋ ಹಾಗೇ ಈ ನಿವೇದಿತ್ ಕೂಡ ಜಿಲ್ಲೆಯ ಪಾಲಿಗೆ ಅ-ಥಿತಿಯೇ!! ಈ ನಿವೇದಿತ್ ಮತ್ತು ಪ್ರಶಾಂತ್‌ಗೆ ಉತ್ತರ ಕನ್ನಡ ಎಂದರೆ ರಾಜಕೀಯದ ಆಟಕ್ಕೆ-ಮೇಲಾಟಕ್ಕೆ ಭೌಗೋಳಿಕ ಅಂಕಣವೇ ಹೊರತು ಭಾವನಾತ್ಮಕ ಸಂಬಂಧದ ಪ್ರದೇಶವಲ್ಲ!

ಅನಿರೀಕ್ಷಿತವಾಗಿ ಗೇರು ಅಭಿವೃದ್ಧಿ ನಿಗಮವನ್ನು ಹೊನ್ನಾವರದ ಶಂಭುಗೌಡ ಮತ್ತು ಸಾಂಬರ ಮಂಡಳಿಯನ್ನು ಭಟ್ಕಳದ ಮುಜುಂಬಿಲ್ ಖಾಜಿ ಪಡೆದುಕೊಂಡಿರುವುದು ಖುದ್ದು ಅವರಿಬ್ಬರಿಗೇ ಬೆಚ್ಚಿಬೀಳಿಸಿದೆ. ಭಟ್ಕಳ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರವಾಡಬಲ್ಲ ಗಾಮೊಕ್ಕಲ ಸಮುದಾಯದ ಶಂಭುಗೌಡ ಮತ್ತು ನವಾಯತ ಮುಸ್ಲಿಮ್ ಪಂಗಡದ ಮುಜುಂಬಿಲ್ ಖಾಜಿ ನೇಮಕಾತಿಗೆ ದೇಶಪಾಂಡೆಯಾಗಲಿ, ಮ್ಯಾಗಿಯಾಗಲಿ ಆಸಕ್ತಿ ವಹಿಸಿರಲಿಲ್ಲ, ಆದರೆ ಜಾತಿ ಲೆಕ್ಕಾಚಾರದಲ್ಲಿ ಈ ಇಬ್ಬರ ಆಯ್ಕೆಗೆ ದೇಶಪಾಂಡೆ-ಮ್ಯಾಗಿ ವಿರೋಧ ವ್ಯಕ್ತಪಡಿಸುವಂತೆಯೇ ಇರಲಿಲ್ಲ, ಈ ಅನಿವಾರ್ಯತೆಯಲ್ಲಿ ಅಚಾನಕ್ ಗೌಡ-ಖಾಜಿ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿದೆ.

ಸಿಎಂ ಸಿದ್ದು ಗೆಳೆಯ ಸಿ.ಎಂ. ಇಬ್ರಾಹಿಂ ಮತ್ತು ಮಂತ್ರಿ ರೋಷನ್ ಬೇಗ್‌ರಂಥ ಸಾಬರ ಮುಖಂಡರ ಹಿಡಿದು ಈ ಬಾರಿ ಭಟ್ಕಳದ ಸರ್ವಶಕ್ತ 'ತಂಜೀಮ್' ಮುಂದಾಳುಗಳು ಲಾಬಿ ನಡೆಸಿದ್ದರು. ನಿರಂತರವಾಗಿ ನವಾಯತರನ್ನು ಕಾಂಗ್ರೆಸ್ ಕಡೆಗಣಿಸುತ್ತ ಬಂದಿದೆ. ಈ ಬಾರಿಯಾದರೂ ಒಂದು ನಿಗಮ-ಮಂಡಳಿ ದೊರೆತನ ಕೊಡಿ, ಇಲ್ಲದಿದ್ರೆ ಕಾಂಗ್ರೆಸ್ ಸವಾಸ ನವಾಯತರು ಬಿಡಬೇಕಾಗುತ್ತದೆಂಬ ಧಮಕಿ ತಂಜೀಮ್ ಹಾಕಿತ್ತು, ಮಂತ್ರಿಯಾಗಿದ್ದ ಎಸ್.ಎಂ. ಯಾಹ್ಯಾರ ನಂತರ ಭಟ್ಕಳದ ನವಾಯತರಿಗೆ ಸರಿಯಾದ ಪ್ರಾತಿನಿಧ್ಯ ಸಿಗದಿದ್ದದ್ದು ಸುಳ್ಳಲ್ಲ. ಈಗ ಸಾಂಬಾರ ಮಂಡಳಿ ಅಧ್ಯಕ್ಷರಾಗಿರುವ ಮುಜುಂಬಿಲ್ ನವಾಯತರ ಪ್ರಶ್ನಾತೀತ ಧಾರ್ಮಿಕ ಸಂಸ್ಥೆ ತಂಜೀಮ್‌ನ ಅಧ್ಯಕ್ಷ; ಡಿಸ್‌ಮೀಸ್ಡ್ ಜಿಲ್ಲಾ ನ್ಯಾಯಾಧೀಶ. ಈತನ ಆಯ್ಕೆಯಲ್ಲಿ ಸ್ಥಳೀಯ ಕಾಂಗ್ರೆಸ್ ಶಾಸಕ ಮಂಕಾಳ ವೈದ್ಯನ ಸ್ಕೆಚ್‌ಗಳು ಕೆಲಸ ಮಾಡಿವೆ.

ಭಟ್ಕಳದಲ್ಲಿ ಸುಮಾರು 30 ಸಾವಿರದಷ್ಟಿರುವ ನವಾಯತ ಮುಸ್ಲಿಮರ ಒಲಿಸಿಕೊಳ್ಳದೇ ತಾನು ಮುಂದೆಂದೂ ಶಾಸಕನಾಗದ ಪರಿಸ್ಥಿತಿ ಕ್ಷೇತ್ರದಲ್ಲಿರುದನ್ನು ಮಂಕಾಳ ವೈದ್ಯ ಕರಾರುವಾಕ್ಕಾಗಿ ಅರ್ಥಮಾಡಿಕೊಂಡಿದ್ದಾರೆ. ಬಹುಸಂಖ್ಯಾತ ದೀವರ ಏಕಸಾಮ್ಯದ ರಾಜಕೀಯ ವ್ಯೂಹ ಬೇಧಿಸಿ ಪಕ್ಷೇತರ ಶಾಸಕನಾಗಿ ಗೆದ್ದ ಮಂಕಾಳ ಮೂಲತಃ ಕಾಂಗ್ರೆಸಿಗ. ಗೆದ್ದ ಬಳಿಕ ಮಂತ್ರಿ ದೇಶಪಾಂಡೆ ಪಟಾಲಮ್‌ಗೆ ನುಸುಳಿದ ಆತ ಮಾಜಿ ಶಾಸಕ ಜೆ.ಡಿ. ನಾಯ್ಕ, ಮಾಜಿ ಜಿಪಂ ಅಧ್ಯಕ್ಷ ದಾಮೋದರ ಗರ್ಡೀಕರ್, ಬಿಜೆಪಿಯ ಶಿವಾನಂದ ನಾಯ್ಕ ಮತ್ತಿತರ ದೀವರ ದೊರೆಗಳ ಎದುರು ಹಾಕಿಕೊಂಡು ರಾಜಕಾರಣ ಮಾಡುವಂತಾಗಿದೆ. ಹೀಗಾಗಿ ಆತ ದೀವರೇತರ ಪ್ರಬಲ ಜಾತಿಯನ್ನು ತನ್ನತ್ತ ಸೆಳೆಯುತ್ತ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನಿಂದ ಗೆಲ್ಲುವ ತಂತ್ರ ಈಗಲೇ ಹೆಣೆದಿದ್ದಾರೆ. ಈ ತಂತ್ರದ ಒಂದು ಭಾಗವೇ ಆತ ಪಟ್ಟು ಹಿಡಿದು ಮುಜುಂಬಿಲ್ ಖಾಜಿಯಗೆ ಸಾಂಬಾರ ಮಂಡಳಿ ಕೊಡಿಸಿರುವುದು!

ಶಾಸಕ ಮಂಕಾಳ ವೈದ್ಯ ಜಿಲ್ಲೆಯ ಒರಿಜಿನಲ್ ಕಾಂಗ್ರೆಸ್ ಶಾಸಕರಿಗಿಂತ ದೇಶಪಾಂಡೆಗೆ ಹತ್ತಿರದಲ್ಲಿದ್ದಾರೆ. ದೇಶಪಾಂಡೆಗೋ ಈತನೆಂದರೆ ಅತೀ ವಿಶ್ವಾಸ. ಆತನ ಯಾವ ಬೇಡಿಕೆಯೂ ದೇಶಪಾಂಡೆ ತಿರಸ್ಕರಿಸುವುದಿಲ್ಲ, ಮುಜುಂಬಿಲ್‌ಗೆ ನಿಗಮ-ಮಂಡಳಿ ಕೊಡಿಸಿದರೆ ತನಗೆ ಓಟ್‌ಬ್ಯಾಂಕ್ ರಾಜಕಾರಣಕ್ಕೆ ಅನುಕೂಲವಾಗುವುದನ್ನು ಮಂಕಾಳು ಬಾಸ್ ದೇಶಪಾಂಡೆಗೆ ಮನದಟ್ಟು ಮಾಡಿದ್ದಾನೆ. ದೇಶಪಾಂಡೆ ಬೆಂಗಳೂರಲ್ಲಿ ರೋಷನ್ ಬೇಗ್, ಇಬ್ರಾಹಿಂ ಜತೆ ಸೇರಿ ಮುಜುಂಬಿಲ್ ಖಾಜಿಗೆ ಮುಸ್ಲಿಮ್ ಕೋಟಾದಲ್ಲಿ ಕಿರೀಟ ಧಾರಣೆ ಮಾಡಲು ಲಾಬಿ ಮಾಡಿದ್ದಾ[illegible] ಮಂಕಾಳ ವೈದ್ಯನ ದೂರಾಲೋಚನೆಯ ಆಟ. [illegible] ಮಂಡಳಿಗೆ ಕೇಂದ್ರದಿಂದ ಹಣ ಬರಬೇಕು. ಚಡ್ಡಿ ಸರ್ಕಾರ ಈ ಸಾಬಣ್ಣನಿಗೆ ಸಹಕರಿಸೀತಾ?

ಇಂಥದೇ ಮತ್ತೊಂದು ಜಾತಿ ಗಣಿತ ಬೆಂ[illegible] ಮಂಕಾಳ ವೈದ್ಯ ಮಾಡಿದ್ದಾನೆ. ಗೇರು ಅಭಿವೃದ್ಧಿ [illegible] ಅಧ್ಯಕ್ಷತೆ ಪಡೆದಿರುವ ಶಂಭು ಗೌಡರೂ ಭಟ್ಕಳ ವಿ[illegible] ಕ್ಷೇತ್ರ ವ್ಯಾಪ್ತಿಯ ಹೊನ್ನಾವರ ಭಾಗದವರು. ಗಾಮೊಕ್ಕಲು ಸಮುದಾಯದ ಮತಗಳು ಸುಮಾ[illegible] ಸಾವಿರದಷ್ಟಾದರೂ ಇದೆಯೆಂಬುದು ಒಂದು ಅ[illegible] ಎಸ್.ಎಂ. ಯಾಹ್ಯಾರ ಗರಡಿಯಲ್ಲಿ ತಯಾರಾದ [illegible] ಗೌಡ ಗಾಮೊಕ್ಕಲಿಗರ ದೊಡ್ಡ ನಾಯಕನಾಗಿ [illegible] ಯಾಹ್ಯಾ ಜಿಲ್ಲೆಯಿಂದ ಬೆಂಗಳೂರಿಗೆ ವಲಸ[illegible] ತರುವಾಯ ಶಂಭಣ್ಣ ದೇವೇಗೌಡರ ಸೆಳೆತಕ್ಕೆ ಬಿದ್ದು [illegible] ಪಾಲಾಗಿದ್ದರು. ಜನತಾ-ದಳ ಅಧಿಕಾರದಲ್ಲಿದ್ದಾಗ[illegible] ಗೌಡ ಲೇವಾದೇವಿ ಮಾಡಿ ಹೆಸರು ಕೆಡಿಸಿಕೊ[illegible] ಆದರೆ ಜಾತಿ ಜನರ ಮೇಲೆ ಆತನ ಹಿಡಿತ ಸಡಿಲ[illegible] ಕಾಂಗ್ರೆಸ್‌ಗೆ ಮರಳಿದ ನಂತರ ಆತ ಜಿಪಂ ಸ[illegible] ಬಲಿತರು.

ಸಿದ್ದು ಸಿಎಂ ಆ[illegible] ಶಂಬಣ್ಣ ಜನತಾ[illegible] ಪೂರ್ವಾಶ್ರಮದ ನಂಟು-ಸ[illegible] ನ್ಯಾಯದ ಹಿಕಮತ್ತು ತ[illegible] ಆಗಾಗ ಬೆಂಗಳೂರಿಗೆ [illegible] ಬರುತ್ತಲೇ ಇದ್ದರು. ಜಿಲ[illegible] ದೇಶಪಾಂಡೆ ಹಿಂದುಳಿ[illegible] ತೊಡರುಗಾಲಾಗಿರುವುದ[illegible] ಕಿವಿಗೆ ಬೀಳುವಂತೆ ಮಾಡ[illegible] ದೇಶಪಾಂಡೆಗೆ ಓವರ್‌ಟೇಕ[illegible] ನಿಗಮ-ಮಂಡಳಿ [illegible] ಮಂಡಿಸಿದ್ದರು. ಶಾಸಕ ವ[illegible] ಲಾಭಕ್ಕಾಗಿ ಶಂಭುಗೌ[illegible] ಕಾರ್ಯಾಚರಣೆ ನಡೆಸಲ[illegible] ಜರೂರತ್ತಿಗೆ ಬಿದ್ದರು. ಹ[illegible] ಮಾಡಿ ದೇಶಪಾಂಡೆ ಮನ ಒಲಿಸಿದರು. ಶಂಭು[illegible] ಗೇರು ಅಭಿವೃದ್ಧಿ ನಿಗಮದ ಖುರ್ಚಿ ಕೊ[illegible] ದುಂಬಾಲು ಬಿದ್ದರು. ಅತ್ತ ಶಂಭುಗೌಡ[illegible] ದೇವೇಗೌಡರಂತೆ ಪ್ರಬಲ ಒಕ್ಕಲಿಗ ಗೌಡನಲ್ಲ[illegible] ದುರ್ಬಲ ಗ್ರಾಮ ಒಕ್ಕಲಿಗರ ಗೌಡನೆಂದು [illegible] ಸಲಹೆಗಾರರಿಗೆ ಮನದಟ್ಟು ಮಾಡಿಕೊಟ್ಟರು; [illegible] ಕಾಲಿಗೂ ಉದ್ದಂಡ ಬಿದ್ದರು. ಪೂರ್ವಾಶ್ರಮದ [illegible] ನಂಟನ್ನು ಸರಿಯಾಗಿ ಬಳಸಿಕೊಂಡರು. ದೇಶಪಾ[illegible] ಕೃಪಾಶೀರ್ವಾದವನ್ನೂ ಪಡೆದುಕೊಂಡರು.

ದೇಶಪಾಂಡೆ ಶಿಷ್ಯ ಮಂಕಾಳ ವೈದ್ಯನ ಭ[illegible] ಒಲ್ಲದ ಮನಸ್ಸಿನಿಂದಲೇ ಶಂಭುಗೌಡರ ಪರ ವ[illegible] ನಿಂತರು. ಒಂದಂತೂ ಖರೆ. ಶಂಭುಗೌಡ ಗೇರು [illegible] ನಿಗಮದ ಅಧ್ಯಕ್ಷನಾಗಿರುವುದರಿಂದ ಆತನಿಗೆ ಮ[illegible] ವೈದ್ಯರಿಬ್ಬರಿಗೆ ಬಿಟ್ಟು ಮೂರನೆಯವರ್ಯಾರಿಗೂ ಪ್ರ[illegible] ಖಂಡಿತ ಇಲ್ಲ, ಅಸಹಾಯಕ ಗಾಮೊಕ್ಕಲು ಸಮು[illegible] ನ್ಯಾಯ ಕೊಡಿಸುವ ತಾಕತ್ತು-ಆಲೋಚ[illegible] ಶಂಭುಗೌಡರಿಗಿಲ್ಲ. ದೊಡ್ಡ ಬಾಯಿಯ ಶಂ[illegible] ದಗಲುಬಾಜಿ-ದಗಾಕೋರ ವಿದ್ಯಾ ಪಾರಂಗತ [illegible] ಹೊನ್ನಾವರ-ಭಟ್ಕಳದಲ್ಲಿ 'ಖ್ಯಾ'ತರು. ಶಿಕ್ಷಣ [illegible] ಸರಿಯಾದ ಸಲಹೆಗಾರರೂ ಇಲ್ಲದ ಶಂಭುಗೌ[illegible] ದಲ್ಲಾಳಿಗಳು ಮುತ್ತಿಕೊಂಡಿರುತ್ತಾರೆ. ಹೀಗಾಗಿ [illegible] ಗೇರು ನಿಗಮದ ಅಭಿವೃದ್ಧಿ ಸಾಧ್ಯವೇ ಇಲ್ಲ. ಸಾರಿಗೆ-ಟಿಎ-ಡಿಎಗಷ್ಟೇ ಶಂಭು ನಿಗಮಕ್ಕೆ ಅಧ[illegible]

ಈಗ ಹೇಳಿ ನಿಗಮ-ಮಂಡಳಿ ಆಟದಲ್ಲಿ [illegible] ಕನ್ನಡದ ಅಂಕಣದಲ್ಲಿ ಹೆಚ್ಚು ಪಾಯಿಂಟ್ ದೇಶಪಾಂಡೆಯೋ? ಮ್ಯಾಗಿಯಜ್ಜಿಯೋ?

● ನ[illegible]

...ರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬುದು ...ಯ ಮತ್ತೊಬ್ಬ ಪೋಲಿ ಶಾಸಕನ ಮೂಲಕ ...ಮ್ಮೆ ಸಾಬೀತಾಗಿದೆ.

...ಮ್ಮ ಸರ್ಕಾರವಿದ್ದಾಗಲೇ ಸದನದಲ್ಲಿ ಬ್ಲೂಫಿಲ್ಮ್ ...ಣೆ ಮಾಡಿದ್ದು ಬಿಜೆಪಿ ಮಂತ್ರಿಗಳಾಗಿದ್ದ ಕೃಷ್ಣ ...ಮಾರ್, ಲಕ್ಷ್ಮಣ ಸವದಿ ಮತ್ತು ರೋಣದ ಸಿ.ಸಿ. ...ಲ್. ಆ ಕಾರಣಕ್ಕೆ ಮೂವರೂ ಮಂತ್ರಿ ಪದವಿ ...ಂಡರು. ದೇಶಾದ್ಯಂತ ಛೀ, ಥೂ ಹಾಕಿಸಿಕೊಂಡರು. ...ಮುನ್ನ ಮಂತ್ರಿ ಹಾಲಪ್ಪ ಗೆಳೆಯನ ಪತ್ನಿ ಮೇಲೇ ... ಮಾಡಿ ಜೈಲು ಪಾಲಾದ. ಇದೇ ಚಾಳಿಗೆ ಸಿಲುಕಿದ್ದ ...ರಿ ಮಂತ್ರಿಯಾಗಿದ್ದ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ...ದಲ್ಲಿ ಫೋಟೋ ಸಮೇತ ಪಜೀತಿಗೆ ಬಿದ್ದ. ...ಪಿಯ ಬಿಜೆಪಿ ಶಾಸಕನಾಗಿದ್ದ ರಘುಪತಿ ಭಟ್ಟ ತನ್ನ ...ನ್ನೇ ನೇಣು ಕುಣಿಕೆಗೆ ಹಾಕಿದ್ದು, ಮುಖ್ಯಮಂತ್ರಿ ...ದ್ದ ಖುದ್ದು ಯಡಿಯೂರಪ್ಪ ಪತ್ನಿ ಮೈತ್ರಾದೇವಿಯೇ ...ಬು ರಸಿಕತೆಗೆ ಹೆಣವಾಗಿದ್ದು, ರಾಷ್ಟ್ರ ನಾಯಕ ...ಕುಮಾರ್ ನೀರಾರಾಡಿಯಲ್ಲಿ ಮುಳುಗೆದ್ದಿದ್ದು, ಕಟ್ಟಾ ...ಜಗ್ಗ ನಡುರಾತ್ರಿ ಸಬ್‌ರಿಜಿಸ್ಟ್ರಾರ್ ರೂಪಾದೇವಿಯ ...ೆ ನುಗ್ಗಿದ್ದು, ಇತ್ಯಾದಿ ಬಿಜೆಪಿಯ ವಂಶವಾಹಿ ...ವೋ ಎಂಬಂತೆ ಈಗ ಔರಾದ್‌ನ ಬಿಜೆಪಿ ಶಾಸಕ ... ಚವ್ಹಾಣನ ಸರದಿ.

...ಸೆಂಬರ್ 10ರ ವಿಧಾನಮಂಡಲದ ಅಧಿವೇಶನದ ...ಲ ದಿನವೇ ಪ್ರಭುಲಿಂಗ ಲೀಲೆ ಮೆರೆದಿತ್ತು. ಸದನದ ... ಪಾಳಯದಲ್ಲಿ ಬಸವನಗುಡಿ ಶಾಸಕ ರವಿ ...ಹ್ಮಣ್ಯರ ಪಕ್ಕ ಕುಳಿತಿದ್ದ ಪ್ರಭು ಚವ್ಹಾಣ ಬೀದರ್ ...ದ ಔರಾದ್‌ನ ಬಿಜೆಪಿ ಶಾಸಕ. ಈ ಹಿಂದೆ ತಮ್ಮದೇ ...ರವಿದ್ದಾಗ ಸದನದಲ್ಲೇ ಬ್ಲೂಫಿಲ್ಮ್ ವೀಕ್ಷಿಸಿ ಸಿಕ್ಕಿಬಿದ್ದಿದ್ದ ... ಪಕ್ಷದ ಸೀನಿಯರ್‌ಗಳ ವಿಕೃತಿಯನ್ನು ಕಂಡೂ ...ರೆತುಬಿಟ್ಟ. ತನ್ನ ಸ್ಮಾರ್ಟ್‌ಫೋನ್ ತೆಗೆದದ್ದೇ ಅದರ ...ಟೋ ಗ್ಯಾಲರಿಯನ್ನು ಶೋಧಿಸುತ್ತಾ ಅದೇನನ್ನೋ ...ಬ್ರಹ್ಮಣ್ಯರಿಗೆ ತೋರಿಸಿದ. ರವಿ ಸುಬ್ರಹ್ಮಣ್ಯರಿಗೇನು ...ತೋ-


...ಕ್ಷಣವೇ ತನ್ನ ಸ್ಮಾರ್ಟ್‌ಫೋನ್‌ನಲ್ಲಿ ಮಗ್ನನಾದ ಪ್ರಭು ... ಒಂದೊಂದೇ ಫೋಟೋಗಳನ್ನು ಸರಿಸುತ್ತಾ ನಿರ್ದಿಷ್ಟ ... ಚಿತ್ರಕ್ಕೆ ಬಂದು ನಿಂತ. ಅದು ಕಾಂಗ್ರೆಸ್‌ನ ...ಾಯಕಿ ಸೋನಿಯಾ ಪುತ್ರಿ ಪ್ರಿಯಾಂಕಾ ಗಾಂಧಿ. ...ೀ ಸೀರೆಯುಟ್ಟಿದ್ದ ಫೋಟೋ ಆತನಿಗಿಷ್ಟವಾದಂತಿಲ್ಲ, ...ಣ್ಣದ ಶರ್ಟು ತೊಟ್ಟು ಬ್ಲಾಕ್ ಪ್ಯಾಂಟ್ ಧರಿಸಿದ್ದ ...ಂಕಾ ಕೊಂಚ ಗ್ಲಾಮರ್‌ರಾಗಿಯೇ ಕಾಣಿಸುತ್ತಿದ್ದ ...ಟೋ ಅದು. ಅದನ್ನು ನೋಡಿದ್ದೇ ತಡ, ಪ್ರಭು ...ನ ಪಿತ್ಥ ಕೆರಳಿದೆ. ಜನ್ಮಾಪಿ ಹೆಂಗಸರನ್ನು ಕಂಡೇ ...ನೋ ಎಂಬಂತೆ ಆ ಫೋಟೋ ಮೇಲೆಯೇ ... ಮಾಡಿಬಿಟ್ಟ. ಅದು ಫೋನಿನ ಸ್ಕ್ರೀನ್ ಪೂರ್ತಿ ...ದ್ದೇ ತಡ, ತನ್ನ ಎರಡೂ ಬೆರಳುಗಳನ್ನು ಸ್ಕ್ರೀನಿಗೆ ... ಪ್ರಿಯಾಂಕ ಚಿತ್ರವನ್ನು ಜೂಮ್ ಮಾಡತೊಡಗಿದ. ...ಖ ಮುಖವನ್ನು ದಿಟ್ಟಿಸಿದ. ಅದು ತೃಪ್ತಿಯಾಗಲಿ ...ಟೋ ಇದ್ದಕ್ಕಿದ್ದಂತೆ ಚಿತ್ರದ ತಲೆ ಭಾಗವನ್ನು ಮೇಲಕ್ಕೆ ...ನ ಎದೆ ಭಾಗವನ್ನು ಜೂಮ್ ಮಾಡುತ್ತಲೇ ಹೋದ.

...ದು ಆತನ ವಿಕೃತಿ. ಪ್ರಿಯಾಂಕಾ ಕಾಂಗ್ರೆಸ್‌ನ ಯುವ ...ಕಿ. ಸನ್ನಿ ಲಿಯೋನ್, ವೀಣಾ ಮಲ್ಲಿಕ್, ಸಿಲ್ಕ್‌ಸ್ಮಿತಾ ...ಾ ಯಾರೇ ಐಟಂ ನರ್ತಕಿಯ ಫೋಟೋ ...ುವುದಕ್ಕೂ ಓರ್ವ ರಾಜಕಾರಣಿಯಾಗಿ ಪ್ರಿಯಾಂಕಾ ...ಟೋ ನೋಡುವುದಕ್ಕೂ ವ್ಯತ್ಯಾಸವಿದೆ. ಅಷ್ಟಕ್ಕೂ ... ಚವ್ಹಾಣ್ ಯಾರೋ ಅಬ್ಬೇಪಾರಿಯಾಗಲಿ, ಪಡ್ಡೆ ...ಗನಾಗಲಿ ಅಲ್ಲ, ಇಬ್ಬರು ಮಕ್ಕಳ ತಂದೆ. ಮಗಳು ...ವೆಗೆ ಬಂದಿದ್ದಾಳೆ. ಬೆಳೆದ ಮಗನಿದ್ದಾನೆ. ಕೈಹಿಡಿದ ... ಇನ್ನೂ ಬದುಕಿದ್ದಾಳೆ. ಒಬ್ಬ ಜವಾಬ್ದಾರಿಯುತ ... ಎಂದಾಗಲಿ ಪತ್ನಿಗೆ ನಿಷ್ಠ ಪತಿಯಾಗಿ ಆಗಲಿ ...ದುವುದು ಹಾಳಾಗಲಿ ತಾನೊಬ್ಬ ಶಾಸಕ, ಜನ ತನ್ನನ್ನು ...ಓಟು ಕೊಟ್ಟಿದ್ದಾರೆ. ಅದೂ ಬಿಜೆಪಿ ಪಕ್ಷದ ಶಾಸಕ; ...ಾ ಸಂಸ್ಕೃತಿ, ಭಾರತೀಯ ಪರಂಪರೆ, ಸನಾತನ ಧರ್ಮ, ...ಕ್ತಿ, ರಾಮರಾಜ್ಯ, ಭಾರತ ಮಾತೆ, ಗೋಮಾತೆ ...ದ್ದಾ ಭಾಷಣ ಬಿಗಿಯುವ ಪರಂಪರೆಯವನು ಎಂಬ ... ಪ್ರಜ್ಞೆಯಾದರೂ ಇರಬೇಡವೇ?

...ರಲು ಹೇಗೆ ತಾನೇ ಸಾಧ್ಯ? ಏಕೆಂದರೆ ಬಾಯಲ್ಲಿ ...ಮಂತ್ರ ಮಾಡುವುದು ಕಾಮತಂತ್ರ ಎಂಬುದು ...ಯಲ್ಲಿ ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ದೇಶಭಕ್ತಿಯ ...ಾ ಬಿಗಿಯುವ ಅದರ ಒಬ್ಬೊಬ್ಬ ನಾಯಕನ ...ದಲ್ಲೂ ಹೆಣ್ಣಿನ ನೆರಳಿದೆ, ಕಾಮದ ವಾಸನೆಯಿದೆ. ...ೀತಿಯೇನಿದ್ದರೂ ಭಾಷಣದ ಸರಕಷ್ಟೆ. ಇಲ್ಲದಿದ್ದರೆ ...ರವಿದ್ದಾಗಲೇ ಮೂವರ ಮಂತ್ರಿಗಳೇಕೆ ...ಸಭೆಯಲ್ಲೇ ಬ್ಲೂಫಿಲ್ಮ್ ವೀಕ್ಷಿಸುತ್ತಿದ್ದರು? ಕೇಂದ್ರ ... ಸದಾನಂದಗೌಡರ ಮಗನೇ ಸಿನಿಮಾ ನಟಿ ಜೊತೆ ...ಕೆ, ಜದ್ದು ಪಜೀತಿ ಮಾಡಿಕೊಳ್ಳುತ್ತಾನೆಂದರೆ ಇನ್ನೂ ...ನ ಶಾಸಕ ಪ್ರಭು ಚವ್ಹಾಣ್ ಹೇಗೆ ತಾನೇ ಮದ, ...ಕೆ ವಿಕೃತಿಯನ್ನು ವರ್ಜಿಸಿಯಾನು?

...ಸ, ಕ್ಷೇತ್ರ, ಪಕ್ಷ, ಜವಾಬ್ದಾರಿಯ ಕತೆ ಬದಿಗಿರಲಿ

ಪೋಲಿ ಶಾಸಕನ ಕೀಚಕ ಚೇಷ್ಟೆ
ಪ್ರಭುಲಿಂಗಲೀಲೆ!



ಪ್ರಭು ಚವ್ಹಾಣ್ ವಿಕೃತಿ ಮೆರೆದ ಸಂದರ್ಭವಾದರೂ ಎಂಥಾದ್ದು. ಪ್ರಮುಖ ಮಸೂದೆಗಳನ್ನು ಜಾರಿಗೆ ತರಲೆಂದೇ ಕರೆದ ವಿಶೇಷ ಅಧಿವೇಶನವಿದು. ಎಲ್ಲಕ್ಕೂ ಮಿಗಿಲಾಗಿ ಬಿಜೆಪಿಯೇ ಅಧಿವೇಶನವನ್ನು ಹಾಳುಗೆಡವಲು ರೈತ ಹೋರಾಟದ ಬೊಬ್ಬೆಯಿಡುತ್ತದೆ. ಒಂದೆಡೆ ಸಹಸ್ರಾರು ರೈತರನ್ನು ಸಂಘಟಿಸಿ ಬೆಳಗಾವಿಗೆ ಮುತ್ತಿಗೆ ಹಾಕಿ ಕಾಂಗ್ರೆಸ್ ಸರ್ಕಾರ ಮಹಿಳೆಯರ ಮಾನ-ಪ್ರಾಣ ರಕ್ಷಿಸುವಲ್ಲಿ ವಿಫಲವಾಗಿದೆಯೆಂದು ಪ್ರತಿನಿತ್ಯ ಸರ್ಕಾರವನ್ನು ಬಿಜೆಪಿ ಟೀಕಿಸುತ್ತಿದ್ದರೆ ಇತ್ತ ಬಿಜೆಪಿ ಶಾಸಕನೇ ಸದನದಲ್ಲಿ ಕೂತು ಕಾಮಾಲಾಪನೆ ಮಾಡುತ್ತಾನೆ.

ಬಿಜೆಪಿಯ ಆತ್ಮವಂಚನೆಯನ್ನೇ ತೆಗೆದುಕೊಂಡರೆ ಸಿದ್ದು ಸರ್ಕಾರ ಬಂದಾಗಿನಿಂದಲೂ ಮಹಿಳೆ-ಮಕ್ಕಳ ಮೇಲಿನ ಅತ್ಯಾಚಾರಗಳಿಗೆಲ್ಲ ಅದು ಹೊಣೆ ಮಾಡಿದ್ದು ಕಾಂಗ್ರೆಸ್ ಸರ್ಕಾರವನ್ನು. ಗೃಹಮಂತ್ರಿ ಕೆ.ಜೆ. ಜಾರ್ಜ್ ಕಾರಣಕ್ಕೆ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ ಎಂಬರ್ಥದಲ್ಲಿ ಒಮ್ಮೆ ಮಾತನಾಡುವ ಬಿಜೆಪಿ ಮತ್ತೊಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಇದಕ್ಕೆಲ್ಲ ನೇರ ಹೊಣೆ ಎಂಬಂತೆ ವರ್ತಿಸಿತು. ಕಾಂಗ್ರೆಸ್ ಸರ್ಕಾರ ಬಂದನಂತರವೇ ಶಾಲಾಮಕ್ಕಳ ಮೇಲೆ ಅತ್ಯಾಚಾರ ಹೆಚ್ಚಾಯಿತೆಂದು ಹುಯಿಲೆಬ್ಬಿಸಿತು.

ಪ್ರಶ್ನೆಯೆಂದರೆ ಸಮಾಜವೊಂದು ಈ ಪಾಟಿ ಕುಲಗೆಟ್ಟಿರುವಾಗ ಸಮಾಜದಲ್ಲೇ ಅನಾಚಾರ ಹೆಚ್ಚಿರುವಾಗ ಹೆಣ್ಣಿನ ಮಾನ ಪ್ರಾಣದ ರಕ್ಷಣೆಯೆಂಬುದು ಕೇವಲ ಸರ್ಕಾರದ ಹೊಣೆಗಾರಿಕೆ ಮಾತ್ರವೇ? ಮಠಗಳು, ಧರ್ಮಗಳು, ಸಾಧುಸಂತರು, ಧರ್ಮಗುರುಗಳು, ರಾಜಕೀಯ ಪಕ್ಷಗಳು, ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಹೋರಾಟಗಾರರು, ಸಂಘಟನೆಗಳು, ಖಾಸಗಿ ಸಂಸ್ಥೆಗಳು, ಸಾಂಸ್ಕೃತಿಕ ಚಿಂತಕರು, ಸಿನಿಮಾಗಳು, ಮಾಧ್ಯಮಗಳು, ದೇವಸ್ಥಾನಗಳು, ವೈಯಕ್ತಿಕವಾಗಿ ಯಾರೇ ತಂದೆ-ತಾಯಿಗಳಿಗೆ ಈ ಬಗ್ಗೆ ಯಾವ ಹೊಣೆಗಾರಿಕೆಯೂ ಇಲ್ಲವೆ?

ಹೆಣ್ಣಿನ ಮಾನ ಪ್ರಾಣ ರಕ್ಷಣೆಯ ಹೊಣೆಯನ್ನು ಕೇವಲ ಸರ್ಕಾರ ಮತ್ತು ಪೊಲೀಸರಿಗೆ ಮಾತ್ರವೇ ಸೀಮಿತಗೊಳಿಸುವುದು ಕೇವಲ ಬಿಜೆಪಿಯ ಆತ್ಮವಂಚನೆಯಷ್ಟೇ ಅಲ್ಲ, ಮಾಧ್ಯಮಗಳು, ರಾಜಕೀಯ ಪಕ್ಷಗಳು, ಧರ್ಮಗುರುಗಳ ಆತ್ಮವಂಚನೆಯೂ ಹೌದು. ಮನೆ, ತಂದೆತಾಯಿ, ಹಿರಿಯರು, ದೇವರು, ದೇವಾಲಯ, ಚರ್ಚ್, ಮಸೀದಿಗಳಿಂದ ಶುರುವಾಗಬೇಕಿದ್ದ ಸ್ತ್ರೀರಕ್ಷಣೆಯನ್ನು ಕೇವಲ ಸರ್ಕಾರ ಮತ್ತು ಪೊಲೀಸರ ಮಟ್ಟಕ್ಕೆ ತಂದು ನಿಲ್ಲಿಸಿದ್ದು ಸಮಾಜವೊಂದರ ಆತ್ಮವಂಚನೆಯೂ ಕೂಡ.

ಮಹಿಳೆಯರ ಮಾನಪ್ರಾಣ ರಕ್ಷಣೆಯ ಕುರಿತಂತೆ ಸರ್ಕಾರದ ವಿರುದ್ಧ ಆರೋಪ ಹೊರಿಸುವುದರ ಹೊರತಾಗಿ ಬಿಜೆಪಿ ಸೇರಿದಂತೆ ಯಾವ ರಾಜಕೀಯ ಪಕ್ಷವೂ ಏನೊಂದೂ ಕಾರ್ಯಕ್ರಮ, ಹೋರಾಟ ರೂಪಿಸಲಿಲ್ಲ. ಕಾಮುಕರ ವಿರುದ್ಧ ಸಾಂಸ್ಕೃತಿಕವಾಗಿ ಇಡೀ ದೇಶಾದ್ಯಂತ ಗೋಚರಿಸಿದ ಒಂದೇ ಒಂದು ದನಿಯೆಂದರೆ ಅದು ತನ್ನ ಸತ್ಯಮೇವ ಜಯತೆ ಮೂಲಕ ಬಾಲಿವುಡ್ ನಟ ಅಮೀರ್‌ಖಾನ್ ರೂಪಿಸಿದ ವಿಶಿಷ್ಟ ಕಾರ್ಯಕ್ರಮ. ಹೆಣ್ಣು ಭ್ರೂಣ ಹತ್ಯೆಯ ವಿರುದ್ಧವೂ ಇದೇ ಅಮೀರ್‌ಖಾನ್ ಕಾರ್ಯಕ್ರಮ ಮಾಡಿದ್ದು ಬಿಟ್ಟರೆ ಒಂದೇ ಒಂದು ಕ್ರಾಂತಿಗೀತೆ, ಸಿನಿಮಾ ಹಾಡು, ಮಠಾಧೀಶರ ಕಾರ್ಯತಂತ್ರ, ರಾಜಕೀಯ ಪಕ್ಷಗಳ ಕ್ರಮತಂತ್ರ ಯಾವುದೂ ಘಟಿಸಲಿಲ್ಲ. ಅದರಲ್ಲೂ ವಿರೋಧಿ ಬಿಜೆಪಿ ಇಂಥದೊಂದು ಸಾಮಾಜಿಕ ಪಿಡುಗಿಗೆ ಗೃಹಮಂತ್ರಿ ಕೆ.ಜೆ. ಜಾರ್ಜ್ ಕ್ರಿಶ್ಚಿಯನ್ನಾಗಿರುವುದೇ ಕಾರಣ, ಕಾಂಗ್ರೆಸ್ ಮುಸ್ಲಿಮರಿಗೆ ಮಣೆ ಹಾಕುತ್ತಿರುವುದೇ ಮೂಲ ಎಂಬಂತೆ ವರ್ತಿಸಿತು.

ಆದರೆ ಹೆಣ್ಣಿನ ಬಗ್ಗೆ ಬಿಜೆಪಿಯಲ್ಲೇ ವಂಶವಾಹಿ ವಿಕೃತಿಯೊಂದು ಅಂತರ್ಗತವಾಗಿತ್ತು, ಮುಖ್ಯಮಂತ್ರಿಯಾಗಿದ್ದ ಯಡ್ಡಿಯ ಪತ್ನಿಯ ನಿಗೂಢ ಸಾವು, ರೇಣುಕಾಚಾರ್ಯನ ನರ್ಸ್ ಜಯಲಕ್ಷ್ಮಿ ಪುರಾಣ, ಮಂತ್ರಿ ಹಾಲಪ್ಪನ ರೇಪ್ ರಾದ್ಧಾಂತ, ರಘುಪತಿ ಭಟ್ಟನ ಪತ್ನಿಯ ನೇಣು ಕಾರಣ, ಸದನದಲ್ಲೇ ಮೂವರು ಮಂತ್ರಿಗಳು ಸೇರಿ ಬ್ಲೂಫಿಲ್ಮ್ ವೀಕ್ಷಣಾಯಣ ಮತ್ತು ಸದಾನಂದ ಗೌಡರ ಮಗನ ಪ್ರೇಮಾಯಣ ಇತ್ಯಾದಿಗಳೆಲ್ಲವೂ ಅದರ ಪರಿಣಾಮಗಳೆ. ಕಾಂಗ್ರೆಸ್ಸಿಗೆ ಭ್ರಷ್ಟಾಚಾರ, ಜೆಡಿಎಸ್‌ಗೆ ಗೌಡಿಕೆಗಳ ಹಣೆಪಟ್ಟಿಯಾದಂತೆ ಬಿಜೆಪಿಗೆ ಬಿರುದಾಗಿ ಬಂದದ್ದು ಸ್ತ್ರೀಲೋಲುಪ್ತತೆ. ಇದರ ಮುಂದುವರಿಕೆಯೋ ಪಳಿಯುಳಿಕೆಯೋ ಎಂಬಂತೆ ಈಗದು ಔರಾದ್‌ನ ಬಿಜೆಪಿ ಶಾಸಕ ಪ್ರಭು ಚವ್ಹಾಣನ ಮೂಲಕ ವ್ಯಕ್ತವಾಗುತ್ತಿದೆ.

ಸದನದ ಬಗ್ಗೆ ತನ್ನ ಕ್ಷೇತ್ರದ ಬಗ್ಗೆ ಕರ್ನಾಟಕದ ಸಾಮಾಜಿಕ ಸನ್ನಿವೇಶದ ಬಗ್ಗೆ ಕಿಂಚಿತ್ತಾದರೂ ಕಳಕಳಿಯಿದ್ದರೆ ಪ್ರಭು ಚವ್ಹಾಣ್ ಇಂಥದೊಂದು ವಿಕೃತಿ ಮೆರೆಯುತ್ತಿರಲಿಲ್ಲ. ಬಿಜೆಪಿ ರಾಜ್ಯದ ಪ್ರಮುಖ ವಿರೋಧ ಪಕ್ಷ. ಅದರ ಪ್ರಕಾರವೇ ರೈತರ ಸಮಸ್ಯೆ ವಿರುದ್ಧ ಹೋರಾಡಬೇಕಿದ್ದರೆ ಬಿಜೆಪಿ ಶಾಸಕರ ವರ್ತನೆ, ಚರ್ಯೆಗಳೇ ಬೇರೆಯಾಗಿರುತ್ತಿತ್ತು. ಇತ್ತ ಪ್ರಭು ಚವ್ಹಾಣ್ ತನ್ನ ಮೊಬೈಲಿನಲ್ಲಿ ವಿಕೃತಿ ಮೆರೆಯುತ್ತಿರುವಾಗಲೇ ಬಿಜೆಪಿಯ ಮತ್ತೊಬ್ಬ ಶಾಸಕ-ಹಿರೇಕೆರೂರಿನ ಯು.ಬಿ. ಬಣಕಾರ್ ತನ್ನ ಮೊಬೈಲಿನಲ್ಲಿ ಕ್ಯಾಂಡಿಕ್ರಷ್ ಆಡುವುದರಲ್ಲಿ ನಿರತನಾಗಿದ್ದ!

ವಿಪರ್ಯಾಸವೆಂದರೆ ರಾಜ್ಯಾದ್ಯಂತ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಕ್ಕೆ ಕಾಂಗ್ರೆಸ್ ವೈಫಲ್ಯವೇ ಕಾರಣವೆಂದೋ, ಗೃಹ ಸಚಿವ ಜಾರ್ಜ್ ರಾಜೀನಾಮೆ ನೀಡಬೇಕೆಂದೋ ಸದನದಲ್ಲಿ ಬೊಬ್ಬೆ ಹಾಕಲು ಬಿಜೆಪಿ ಏನು ಷಡ್ಯಂತ್ರ ರಚಿಸಿತ್ತೋ ಅದೇ ಅದರ ಪಾಲಿಗೆ ಮುಳುವಾಗಿದೆ. ಅದರ ಶಾಸಕನೊಬ್ಬ ಹೆಣ್ಣೆಂದರೆ ಯಾವ ಕೀಚಕತನದ ಕಣ್ಣುಗಳಿಂದ ನೋಡುತ್ತಾನೋ ಅಂಥ ಶಾಸಕನನ್ನು ಮೊದಲು ಬಿಜೆಪಿ ಮನುಷ್ಯನನ್ನಾಗಿಸಬೇಕಿತ್ತು. ತನ್ನ ಶಾಸಕರ ವಿಕೃತಿಯನ್ನೇ ತಿದ್ದಲಾಗದ ಬಿಜೆಪಿ ಯಾವ ಮುಖ ಹೊತ್ತು ಮಹಿಳೆಯರ ಮಾನ ರಕ್ಷಣೆಯ ಬೊಬ್ಬೆಯಿಡುತ್ತಿದೆ? ತನ್ನದೇ ನಾಯಕರ ಕಾಮಕಾಂಡವನ್ನು ತಡೆಗಟ್ಟಲಾಗದ ಬಿಜೆಪಿಗೆ ಮಹಿಳೆಯರ ಮಾನ ಪ್ರಾಣದ ಬಗ್ಗೆ ಮಾತನಾಡಲು ಯಾವ ನೈತಿಕತೆಯಿದೆ?

ಕೆಂಭೂತ ಏನೇ ಪುಕ್ಕ ಕಟ್ಟಿಕೊಂಡರೂ ಬಣ್ಣ ಬಯಲಾಗಲೇಬೇಕಂತೆ. ಹಾಗೆ ಬಿಜೆಪಿ ನಾಯಕರಿಗೇನಾದರೂ ಮಹಿಳೆಯರ ಮೇಲೆ ಕಾಳಜಿಯಿದ್ದ ಪಕ್ಷದಲ್ಲಿ ಮೊದಲು ತನ್ನ ಪಕ್ಷದ ನಾಯಕರಿಂದ ಮಹಿಳೆಯರನ್ನು ರಕ್ಷಿಸಬೇಕಷ್ಟೇ!

● ರಾ.ಸೋಮನಾಥ್

ಬಾಂಬೆ ಲಿಂಕು, ಖೋಟಾನೋಟು, ರಿವಾಲ್ವರ್ ಕೇಸು!

2009 ರ ವಿಧಾನಸಭಾ ಚುನಾವಣೆ ಹೊತ್ತಿಗೆ ಇದ್ದಕ್ಕಿದ್ದಂತೆ ಔರಾದ್‌ನಲ್ಲಿ ಪ್ರತ್ಯಕ್ಷನಾದ ಪ್ರಭು ಚವ್ಹಾಣ ಎಲ್ಲಿಂದ ಬಂದ, ಎಲ್ಲಿದ್ದ ಏನು ಮಾಡುತ್ತಿದ್ದ ಇತ್ಯಾದಿ ಏನೊಂದೂ ಅಲ್ಲಿನ ಜನಕ್ಕೆ ಗೊತ್ತಿರಲಿಲ್ಲ. ಔರಾದ್ ಹೇಳಿಕೇಳಿ ಮೀಸಲು ಕ್ಷೇತ್ರ. ಬಿಜೆಪಿಗೆ ದುಡ್ಡು ಸುರಿಯಲು ಮಿಕ ಬೇಕಿತ್ತು. ಪ್ರಭು ಚವ್ಹಾಣನ ಬಳಿ ಬೇಕಾಬಿಟ್ಟಿ ದುಡ್ಡು ಕೊಳೆಯುತ್ತಿತ್ತು. ಅಸಲಿಗೆ ಪ್ರಭು ಚವ್ಹಾಣನದ್ದು ಮುಂಬಯಿ ಮೂಲ. ಯಾವುದೋ ಕಾಲಕ್ಕೆ ಅಂದರೆ ಚಿಕ್ಕವನಿದ್ದಾಗಲೇ ಮನೆಬಿಟ್ಟು ಮುಂಬಯಿ ರೈಲು ಹತ್ತಿದ ಈತ ಮುಂಬಯಿಯ ಮಾರ್ವಾಡಿಯೊಬ್ಬರ ಮನೆಯಲ್ಲಿ ಜೀತಕ್ಕಿದ್ದ!


ಆ ಮಾರ್ವಾಡಿಯ ಮಗ ಯಾವುದೋ ಕಾಲಕ್ಕೆ ಅಮೆರಿಕ ಸೇರಿಕೊಂಡಿದ್ದನಾದ್ದರಿಂದ ಆತನ ವಯೋವೃದ್ಧ ತಂದೆತಾಯಿಗಳನ್ನು ಈತನೇ ನೋಡಿಕೊಳ್ಳುತ್ತಿದ್ದ. ಮೊದಲೇ ವಯಸ್ಸಾಗಿದ್ದ ಮಾರ್ವಾಡಿಗೆ ಕಣ್ಣು ಕಾಣುತ್ತಿರಲಿಲ್ಲ, ಮಾನಸಿಕ ಸ್ಥಿಮಿತವೂ ಇರಲಿಲ್ಲ. ಅದೇ ಸಮಯ ಕಾದಿದ್ದ ಪ್ರಭು ಚವ್ಹಾಣ ಆತನ ಆಸ್ತಿಪಾಸ್ತಿಯನ್ನೆಲ್ಲ ತನ್ನ ಹೆಸರಿಗೆ ಬರೆಸಿಕೊಂಡಿದ್ದೇ ಖಾಲಿ ಛಾಪಾ ಕಾಗದಕ್ಕೂ ಸಹಿ ಪಡೆದಿದ್ದ. ಅದನ್ನೇ ವಿಲ್ ಆಗಿ ಪರಿವರ್ತಿಸಿಬಿಟ್ಟಿದ್ದ.

ಅದೊಂದು ದಿನ ಮಾರ್ವಾಡಿ ಕೊನೆಯುಸಿರೆಳೆದ. ಅಮೆರಿಕದಲ್ಲಿದ್ದ ಆತನ ಮಗ ಅಂತ್ಯಕ್ರಿಯೆಗೆಂದು ಮುಂಬಯಿಗೆ ಬಂದಾಗಲೇ ಗೊತ್ತಾಗಿದ್ದು ತಂದೆಯ ಆಸ್ತಿ ಪೂರ್ತಿ ಮನೆಗೆಲಸದ ಚವ್ಹಾಣನ ಪಾಲಾದ ಸತ್ಯ. ಏನು ತಾನೇ ಮಾಡಲು ಸಾಧ್ಯ? ಆ ಹೊತ್ತಿಗಾಗಲೇ ಚವ್ಹಾಣ ಮುಂಬಯಿಯ ರೌಡಿಗಳ ಲಿಂಕು ಬಳಸಿಕೊಂಡಿದ್ದ. ಲಪಟಾಯಿಸಿದ ಸೊತ್ತು ಮಾರಿಯೇ ಟ್ರಾವೆಲ್ಸ್ ದಂಧೆಗಿಳಿದ. 2006 ರ ಹೊತ್ತಿಗೆ ಖೋಟಾನೋಟು ಪ್ರಕರಣದಲ್ಲಿ ಈತನ ಕಾರನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದರು. ಅಲ್ಲಿಂದಾಚೆಗೆ ಮಹಾರಾಷ್ಟ್ರದ ಬಿಜೆಪಿ ನಾಯಕ ಗೋಪಿನಾಥ್ ಮುಂಡೆ ಜೊತೆ ಬಿದ್ದವನು ಮುಂದೆ ಪ್ರಭಾವದಿಂದಲೇ ಔರಾದ್‌ನ ಬಿಜೆಪಿ ಅಭ್ಯರ್ಥಿಯಾಗಿ ವಕ್ಕರಿಸಿದ.

ಬಂದುಬಂದಿದ್ದೇ ಪ್ರಭು ಚವ್ಹಾಣ ಎಂಥಾ ಗಿಮ್ಮಿಕ್ ಮಾಡಿದನೆಂದರೆ ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳೇ ದಂಗಾಗುವಂತೆ ದುಡ್ಡು ಹಂಚಿದ್ದ. ಐದು ಸಾವಿರ ಕೊಡುತ್ತಿದ್ದ ಜಾಗದಲ್ಲಿ ಐವತ್ತು ಸಾವಿರ, 10 ಸಾವಿರ ಬದಲಾಗಿ ಲಕ್ಷ, ಸಣ್ಣಪುಟ್ಟ ಕಾರ್ಯಕ್ರಮಕ್ಕೂ ರೊಕ್ಕ, ಲೀಡರುಗಳಿಗೆ ಭಕ್ಷೀಸು; ಹೀಗೆ ದುಡ್ಡು ಹಂಚಿಯೇ ಓಟು ಖರೀದಿಸಿ ಗೆದ್ದೂಬಿಟ್ಟ. ಸುರಿಸಿದ ಹಣದ ಹೊಳೆಯೇ ಹಾಗಿತ್ತು, ಬಿಜೆಪಿ ಅಧಿಕಾರದಲ್ಲಿತ್ತಾದ್ದರಿಂದ ಬೇಕಾಬಿಟ್ಟಿ ದುಡ್ಡೂ ಹರಿಯಿತು. ಪ್ರತಿ ಕಾಂಟ್ರಾಕ್ಟಿಗೂ ಲಾಯಕ್ಕಾದ ಲಂಚವನ್ನೇ ಕಿತ್ತು ಚವ್ಹಾಣ 2013 ರ ಚುನಾವಣೆಯಲ್ಲಿ ಹಿಂದಿಗಿಂತಲೂ ದೊಡ್ಡ ಮೊತ್ತದ ದುಡ್ಡು ಸುರಿದಿದ್ದ. ಏಕೆಂದರೆ ಈ ಬಾರಿ ಆತನಿಗೆ ಖಡಾಖಡಿ ಫೈಟು ಕೊಟ್ಟದ್ದು ಕೆಜೆಪಿಯ ಧನಾಜಿ ಯಾದವ್. ತನ್ನ ಛೇಲಾನನ್ನೇ ಕಾಂಗ್ರೆಸ್ಸಿನಿಂದ ನಿಲ್ಲಿಸಿದ್ದ ಚವ್ಹಾಣನಿಗೆ ಇನ್ನೊಂದು ಅಪಾಯವು ಕಾದಿತ್ತು, ಅದು ಜೆಡಿಎಸ್‌ನ ಅಭ್ಯರ್ಥಿ ಬಿ.ಎಂ. ಯಾತನೂರ್!

ಬೀದರ್ ಜಿಲ್ಲೆಗೆ ಎಸ್‌ಪಿಯಾಗಿದ್ದ ಯಾತನೂರ್ ನಿಷ್ಠೂರಿ ಪೊಲೀಸ್ ಅಧಿಕಾರಿಯೆಂದೇ ಹೆಸರಾದವರು. ಎಲ್ಲಿ ಯಾತನೂರ್ ಅಥವಾ ಕೆಜೆಪಿಯ ಜಾದವ್ ತನಗೆ ಮಣ್ಣು ಮುಕ್ಕಿಸುತ್ತಾರೋ ಎಂದು ಭೀತಿಗೆ ಬಿದ್ದ ಚವ್ಹಾಣ ಕೋಟಿ ಕೋಟಿ ಸುರಿದೇ ಚುನಾವಣೆಯಲ್ಲಿ ಹೆಣಗಾಡಿದ. ಆ ಪಾಟಿ ದುಡ್ಡು ಸುರಿಯಲು ಕೆಜೆಪಿ, ಜೆಡಿಎಸ್ ಅಭ್ಯರ್ಥಿಗಳಿಗೆ ಹೇಗೆ ತಾನೇ ಸಾಧ್ಯ?

ಫಲವಾಗಿ ಕೆಜೆಪಿ ವಿರುದ್ಧ 24 ಸಾವಿರ ಮತಗಳ ಅಂತರದಿಂದ ಗೆದ್ದ ಚವ್ಹಾಣ ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ರಿವಾಲ್ವರ್ ಹೊಂದಿದ್ದಕ್ಕೆ ಆಂಧ್ರ ಪೊಲೀಸರ ಆತಿಥ್ಯಕ್ಕೂ ಬಲಿಯಾದ. ಈಗ ನೋಡಿದರೆ ಈ ವಿಕೃತಿ ಬೇರೆ. ಪ್ರಿಯಾಂಕಾ ಫೋಟೋನ್ನೇ ಈ ರೀತಿ ನೋಡುವವನ ಕಣ್ಣಿಗೆ ಇನ್ನು ಬಿಜೆಪಿ ನಾಯಕಿಯರಾದ ಸ್ಮೃತಿ ಇರಾನಿ, ವಸುಂಧರಾ ರಾಜೆ, ಸುಷ್ಮಾ ಸ್ವರಾಜ್, ಮುಂದೆ ಮಗಳಿಲ್ಲ ಇನ್ನು ಯಾವ ರೀತಿ ಕಾಣಲಿಕ್ಕಿಲ್ಲ, ಕನಿಷ್ಠ ಹಿಂದೂ ದೇವತೆಗಳಾದ ಲಕ್ಷ್ಮಿ, ಸರಸ್ವತಿ, ಪಾರ್ವತಿಯರನ್ನಾದರೂ ತಾಯಿಯಂತೆ ನೋಡುತ್ತಾನಾ?



ಧರ್ಮದ ಹೆಸರಿನಲ್ಲಿ ಅಧರ್ಮದ ತಾಂಡವ

ಇತ್ತೀಚಿನ ದಿನಗಳಲ್ಲಿ ಮುಗ್ಧ ಭಕ್ತರ ಧಾರ್ಮಿಕ ಭಾವನೆಗಳಿಗೆ ಆಘಾತ ನೀಡುವಂಥ ಸಂಗತಿಗಳು ಹೆಚ್ಚಾಗಿ ಕೇಳಿಬರುತ್ತಿವೆ. ಮುಗ್ಧ ಭಕ್ತರಿಗೆ ಆಘಾತ ನೀಡುತ್ತಿರುವ ಸಂಗತಿಗಳಲ್ಲಿ ಆರೋಪಿ ಸ್ಥಾನದಲ್ಲಿ ನಿಲ್ಲುತ್ತಿರುವವರು ಬೇರೆ ಯಾರೂ ಅಲ್ಲ; ಸ್ವತಃ ಆ ಧಾರ್ಮಿಕ ಕ್ಷೇತ್ರದ ಹಿಡಿತ ಹೊಂದಿರುವ ಮಹಾನುಭಾವರೇ ಆಗಿರುವುದರಿಂದ ಸದ್ಭಕ್ತರಿಗೆ ಮಾನಸಿಕ ಆಘಾತವಾಗುತ್ತಿರುವುದು ಸಹಜ. ಶ್ರೀ ಕ್ಷೇತ್ರ ಧರ್ಮಸ್ಥಳದ ವಿಷಯದಲ್ಲೂ ಪದೇಪದೇ ಅಮಂಗಳಕಾರಿ ಸುದ್ದಿಗಳೇ ಕೇಳಿಬರುತ್ತಿವೆ.

ಕಳೆದ ನವೆಂಬರ್ 15 ರಂದು ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಒಂದು ವಿಶೇಷ ಪತ್ರಿಕಾಗೋಷ್ಠಿ ನಡೆಯಿತು. ನಾಗರಿಕ ಸೇವಾ ಟ್ರಸ್ಟ್‌ನ ಸ್ಥಾಪಕ ಟ್ರಸ್ಟಿ ರಂಜನ್ ರಾವ್ ಯರ್ಡೂರ್ ಮತ್ತು ಅಧ್ಯಕ್ಷ ಕೆ. ಸೋಮನಾಥ ನಾಯಕ್ ಧರ್ಮಸ್ಥಳ ಕ್ಷೇತ್ರದ ಮಾಲಿಕತ್ವಕ್ಕೆ ಸಂಬಂಧಿಸಿದಂತೆ ಹಲವಾರು ಆಘಾತಕಾರಿ ಅಂಶಗಳನ್ನು ಬಿಚ್ಚಿಟ್ಟಿದ್ದಾರೆ.

ನಾಗರಿಕ ಸೇವಾ ಟ್ರಸ್ಟ್‌ನವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯ ಕೆಲವು ಮುಖ್ಯಾಂಶಗಳತ್ತ ಗಮನ ಹರಿಸೋಣ.

"ಧರ್ಮಸ್ಥಳ ದೇವಸ್ಥಾನದ ಆಡಳಿತವು ಈಗಲೂ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಕುಟುಂಬದ ಕೈಯಲ್ಲಿದ್ದು ನೂರಾರು ಕೋಟಿ ರೂಪಾಯಿ ಆದಾಯವು ಇವರ ನಿಯಂತ್ರಣದಲ್ಲಿದೆ. ಎಷ್ಟು ಆದಾಯವಿದೆ? ಯಾವುದಕ್ಕೆ ಖರ್ಚಾಗುತ್ತಿದೆ? ಎಂಬುದರ ವಿವರವನ್ನು ಇವರು ಸಾರ್ವಜನಿಕವಾಗಿ ನೀಡಿಲ್ಲ, ಪಾರದರ್ಶಕತೆ ಏನೇನೂ ಇಲ್ಲ, ಈ ಕುರಿತು ನಾವು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಪುತ್ತೂರು ಎ.ಸಿ. ಮೂಲಕ ವಿಚಾರಣೆ ನಡೆಯುತ್ತಿದೆ. (ಪ್ರತಿ ಜತೆಗಿದೆ)."

ಶ್ರೀಕ್ಷೇತ್ರದ ವಾರ್ಷಿಕ ಆದಾಯ ಒಂದು ಅಂದಾಜಿನಂತೆ 400ರಿಂದ 450 ಕೋಟಿ ರೂಪಾಯಿಗಳು!



ಇಷ್ಟು ಭಾರೀ ಆದಾಯ ಸಮಾಜ ಸೇವಾಕಾರ್ಯಗಳಿಗೆ, ಧಾರ್ಮಿಕ ಕಾರ್ಯಗಳಿಗೆ ವೆಚ್ಚವಾಗುತ್ತದೆ ಎಂಬುದು ಮುಗ್ಧ ಭಕ್ತರ ನಂಬಿಕೆ. ಹೀಗಿರುವಾಗ ಇದರ ಲೆಕ್ಕಪತ್ರವನ್ನು ಸಾರ್ವಜನಿಕಗೊಳಿಸಿದರೆ ಧರ್ಮಸ್ಥಳ ಕ್ಷೇತ್ರದ ಘನತೆ ಮತ್ತಷ್ಟು ಹೆಚ್ಚಾಗುತ್ತದೆ ಅಲ್ಲವೆ? ಭಕ್ತರು ನೀಡಿದ ಹಣದ ಲೆಕ್ಕಪತ್ರವನ್ನು ಕೊಡದೆ, ಈ ಬಗ್ಗೆ ದೂರು ದಾಖಲಾಗಿ, ಸರ್ಕಾರ ತನಿಖೆ ಮಾಡಬೇಕಾದ ಸ್ಥಿತಿ ಬಂದಿದೆ ಎಂದರೆ ಇದಕ್ಕೆ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಮತ್ತು ಕುಟುಂಬದವರೇ ಹೊಣೆಗಾರರಲ್ಲವೆ?

ಲೆಕ್ಕಪತ್ರದ ಸಂಗತಿ ಹೀಗಾದರೆ ದೇವಸ್ಥಾನದ ಮಾಲಿಕತ್ವಕ್ಕೆ ಸಂಬಂಧಿಸಿದ ವಿಚಾರ ಮತ್ತೊಂದು ರೀತಿಯದು.

"'ಇದೊಂದು ಖಾಸಗಿ ದೇವಸ್ಥಾನ. ಸರಕಾರ ಇದನ್ನು ಮುಟ್ಟುವಂತಿಲ್ಲ' ಎಂದು ಸಾಮಾನ್ಯವಾಗಿ ಎಲ್ಲರೂ ಅಂದುಕೊಂಡಿದ್ದಾರೆ. ಆದರೆ ವಾಸ್ತವ ಮತ್ತು ಸತ್ಯಸಂಗತಿಗಳು ಇದಕ್ಕೆ ತದ್ವಿರುದ್ಧವಾಗಿದೆ. ಕಾನೂನಿನ ದೃಷ್ಟಿಯಿಂದಲೂ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದಲೂ ಅಗಾಧವಾದ ಆದಾಯವಿರುವ ಈ ದೇವಸ್ಥಾನ ಧಾರ್ಮಿಕದತ್ತಿ ಇಲಾಖೆಯ ನಿಯಂತ್ರಣಕ್ಕೆ ಬರುವುದು ಮತ್ತು ಈ ಆದಾಯ ಒಂದು ಕುಟುಂಬಕ್ಕೆ ಮಾತ್ರ ಸೇರದೆ ಹಿಂದು ದೇವಸ್ಥಾನಕ್ಕೆ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ಪರಿಪೂರ್ಣವಾಗಿ ವಿನಿಯೋಗವಾಗುವುದು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಅತ್ಯಗತ್ಯವಾಗಿದೆ" ಎಂಬ ನಾಗರಿಕ ಸೇವಾಟ್ರಸ್ಟ್‌ನ ಪ್ರತಿಪಾದನೆಯನ್ನು ಸಾಮಾಜಿಕ ಅಥವಾ ಧಾರ್ಮಿಕ ಕಾಳಜಿಯುಳ್ಳ ಯಾರೇ ಆದರೂ ಒಪ್ಪಲೇಬೇಕು.

ಈ ಪ್ರತಿಪಾದನೆಗೆ ಕಾನೂನಿನ ಮಾನ್ಯತೆಯೂ ಇದೆ. ಆದರೆ ವೀರೇಂದ್ರ ಹೆಗ್ಗಡೆಯವರ ಕುಟುಂಬ, ಅವರ ತಂದೆ ರತ್ನವರ್ಮ ಹೆಗ್ಗಡೆಯವರ ಕಾಲದಿಂದಲೂ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನದ ಮಾಲಿಕರು ತಾವೇ ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ; ದೇವಸ್ಥಾನದ ಖಾಸಗಿ ಒಡೆತನವನ್ನು ಮುಂದುವರೆಸಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದಾರೆ. ಶ್ರೀಯುತ ರತ್ನವರ್ಮ ಹೆಗ್ಗಡೆಯ[...] ಈ ಹಿಂದೆ ಶಾಸಕರೂ ಆಗಿದ್ದರು ಎಂಬುದು [...] ಉಲ್ಲೇಖನೀಯ.

"ಮದ್ರಾಸ್ ಹಿಂದೂ ರಿಲಿಜಿಯಸ್ ಎಂಡೋಮೆ[...] ಆಕ್ಟ್-1926 ಪ್ರಕಾರ ಅಂದಿನ ಕಮಿಷನರ್ ಈ ದೇ[...] ಧಾರ್ಮಿಕ ದತ್ತಿ ಇಲಾಖೆಗೆ ಪಡೆದದ್ದನ್ನು ರತ್ನ[...] ಹೆಗ್ಗಡೆಯವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಪ್ರಕ[...] ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಮೆಟ್ಟಿಲೇ[...] ಆಗ ಇದ್ದ ಕಾನೂನುಗಳು ಬದಲಾಗಿದ್ದು ಈಗ ಅ[...] ಆದೇಶ ಮುಂದುವರಿಯಬೇಕೆಂದಿಲ್ಲ, ಬದಲಾದ ಕಾನ[...] ಜಾರಿಯಾಗಬೇಕು" ಎಂಬ ನಾಗರಿಕ ಸೇವಾ ಟ್ರಸ್ಟ್ [...] ಒಪ್ಪತಕ್ಕದ್ದೇ. ಈ ಬಗ್ಗೆ ಕಾನೂನು ನಿರ್ವಚನೆ ಹೀ[...]


"ಖಾಸಗಿ ದೇವಸ್ಥಾನವೆಂದಿದ್ದರೂ ಸಾರ್ವಜ[...] ಪ್ರವೇಶಕ್ಕೆ ಅವಕಾಶ ನೀಡುವುದರೊಂದಿಗೆ, ಕ[...] ಸ್ವೀಕರಿಸಿದಲ್ಲಿ ದೇವಸ್ಥಾನದ ಸ್ವರೂಪ[...] 'ಸಾರ್ವಜನಿಕ'ವಾಗುತ್ತದೆ" ಎಂಬುದಾಗಿ ಹಿಂದಿನ [...] ಕೌನ್ಸಿಲ್‌ನಿಂದ ಆರಂಭಿಸಿ (1924) ಇತ್ತೀಚಿನ ಸು[...] ಕೋರ್ಟ್ ಆದೇಶಗಳು ಸ್ಪಷ್ಟವಾಗಿ ಹೇಳಿರುತ್ತವೆ.

ಈ ದೇವಸ್ಥಾನ 'ಹಿಂದೂ' ದೇವಸ್ಥಾನವೇ ಅ[...] ಹಿಂದೂ ದೇವಸ್ಥಾನವಾಗಿ 'ಜೈನ ಪ್ರಧಾನ'ವೇ? [...] ಕುರಿತು ಈಗಿನ ಕಾನೂನು (KHRI & CE A[...] 1997) ಸ್ಪಷ್ಟವಾಗಿದೆ. ಅಂದರೆ ಜೈನ ಪ್ರಧಾನವಾಗಿ[...] ಈಗಿನ ಹೊಸ ಕಾನೂನಿನ (2011 [...] ತಿದ್ದುಪಡಿಯಾದಂತೆ) ವ್ಯಾಪ್ತಿಯೊಳಗೆ ಬರುತ್ತದೆ.


ಈ ದೇವಸ್ಥಾನಕ್ಕೆ 1926ರಲ್ಲಿ ಸರಕಾರದಿಂದ ತ[...] ಬರುತ್ತಿದ್ದ ದಾಖಲೆ ಲಭ್ಯವಾಗಿದೆ. ಇದರ ಪ್ರಕಾರ ಕುಡು[...] ಮಂಜುನಾಥಸ್ವಾಮಿಗೆ ವಾರ್ಷಿಕ ರೂ:220-00 [...] ಕುಡುಮ ಭೂತಕ್ಕೆ ವಾರ್ಷಿಕ ರೂ:88.00 ತ[...] ಪಾವತಿಯಾಗುತ್ತಿತ್ತು. (ಲಗತ್ತಿಸಿದ ಪಟ್ಟಿಯಲ್ಲಿರುವ ಕ್ರ[...] ಮತ್ತು 112)

'ಧರ್ಮಸ್ಥಳ' ಎಂಬುದು ಒಂದು Integr[...] Institution. ಆದ್ದರಿಂದ ಕಾಯ್ದೆಯಲ್ಲಿರು[...] 'ದೇವಸ್ಥಾನ' ಎಂಬ ಶಬ್ದದ ವ್ಯಾಪ್ತಿಗೆ ಬರುವುದಿಲ್ಲ [...] ಹೆಗ್ಗಡೆ ಕುಟುಂಬದ ವಾದ. ಆದರೆ 2011 ರಲ್ಲಿ ಕಾ[...] ಮಾಡಲಾದ ತಿದ್ದುಪಡಿ ಪ್ರಕಾರ ಈ ಪದಗ[...] ಕೈಬಿಡಲಾಗಿದೆ. ಆದ್ದರಿಂದ ಪ್ರಕೃತ ಇದು ದೇವಸ್ಥಾನವಾ[...] ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ.

1976 ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕ[...] ಕುರಿತು ತ್ರಿಸದಸ್ಯ ಪೀಠವು ನೀಡಿದ ಆದೇಶದಲ್ಲಿ [...] ಎಂ.ಎಚ್ ಬೇಗ್‌ರವರು ದಾಖಲಿಸಿದಂತೆ 'ಅಗತ್ಯ[...] ಕಾಯ್ದೆ ತಿದ್ದುಪಡಿ ಮಾಡಬೇಕು' ಎಂಬ (ಧಾರ್ಮಿ[...] ಇಲಾಖಾ ವ್ಯಾಪ್ತಿಗೆ ತರಲು) ಸಲಹೆ ಉಲ್ಲೇಖನೀಯ[...] ಎಲ್ಲಾ ಅಂಶಗಳನ್ನು ಮನಗಂಡು ಸರಕಾರವು [...] ಮಂಜುನಾಥ ಸ್ವಾಮಿ ದೇವಸ್ಥಾನವನ್ನು ಧಾರ್ಮಿ[...] ಇಲಾಖೆಯ ವ್ಯಾಪ್ತಿಗೆ ತ್ವರಿತವಾಗಿ ತರಬೇಕೆಂದೂ [...] ಉಸ್ತುವಾರಿ ಸಚಿವರು ಈ ನಾಡಿನ ಕಾಯ್ದೆ ಧರ[...] ದೇವಸ್ಥಾನಕ್ಕೂ ಅನ್ವಯಿಸುವಂತೆ ಮಾಡಬೇಕೆಂದೂ ನ[...] ಸೇವಾ ಟ್ರಸ್ಟ್ ಆಗ್ರಹಿಸಿದೆ.




ಕರ್ನಾಟಕ ಸರ್ಕಾರ



ದಿನಾಂಕ: 07.11.2014

(ಎಮ್.ಆರ್.ಸೋಮಶೇಖರಪ್ಪ)



SALE DEED OF IMMOVABLE PROPERTIES FOR A CONSIDERATION

EDUCATIONAL SOCIETY (R.) - UJIRE Belthangady Taluk, represented by its present secretary Dr. B. YASHOVARMA (Hereinafter referred to as the PURCHASER of the other part)

ಧರ್ಮಾಧಿಕಾರವೂ... ಬ್ರಿಟಿಷರ ಬಳುವಳಿಯೂ...

ಇತಿಹಾಸವನ್ನು ಕೆದಕಿದರೆ ನಂಬಲು ಕಷ್ಟಕರವಾದ ನಾನಾ ಸತ್ಯಗಳು ಹೊರಬೀಳುತ್ತವೆ. ಧರ್ಮಸ್ಥಳದ ಅಧಿಕಾರ ಹಸ್ತಾಂತರದ ಬಗ್ಗೆ 'ತುಳುನಾಡು' ಎಂಬ ಬಹಳ ಹಿಂದೆಯೇ ಪ್ರಕಟವಾದ ಕೃತಿಯೊಂದರಲ್ಲಿ ವಿಭಿನ್ನವಾದ ಒಂದು ಅಂಶ ಪ್ರಸ್ತಾಪವಾಗಿದೆ. ತುಳುನಾಡು ಕೃತಿಯ ಪುಟ 94ರಲ್ಲಿನ ಉಲ್ಲೇಖ ಹೀಗಿದೆ:

"ಟಿಪ್ಪುವಿಗೆ ವಿರೋಧವಾಗಿ ಬ್ರಿಟಿಷರಿಗೆ ಸಹಾಯವಿತ್ತ ಕುಮಾರ ಹೆಗ್ಗಡೆ ಎಂಬವನಿಗೆ ಬ್ರಿಟಿಷರು ಇಲ್ಲಿಯ ಆಡಳಿತವನ್ನು ಬಿಟ್ಟದ್ದಾಗಿ ತಿಳಿದುಬರುತ್ತದೆ. ಈ ಸ್ಥಳಕ್ಕೆ ಹಿಂದಿನ ಹೆಸರು ಕುಡುಮವೆಂದು. ಈ ಧರ್ಮಸ್ಥಳದ ಮೂಲಿಗರ ಒಂದು ಪಾಲಿನವರು ಮಂಗಳೂರಿನ ಕದಳಿವನ ಅಂದರೆ ಈಗಿನ ಕದ್ರಿ ಎಂಬಲ್ಲಿ ನೆಲೆಸಿ ಇಲ್ಲಿ ಮಂಜುನಾಥೇಶ್ವರನನ್ನು ಪ್ರತಿಷ್ಠಾಪಿಸಿದರು ಎಂದು ಪ್ರತೀತಿ."

ಅಂದಹಾಗೆ ಈ ಮೇಲಿನ 'ತುಳುನಾಡು' ಕೃತಿ ರಚನೆಕಾರ ಡಾ.ಪಾದೂರು ಗುರುರಾಜಭಟ್ ಎಂಬುವವರು. ಈ ಕೃತಿಯನ್ನು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ ಪ್ರಕಟಿಸಿದೆ. ಕೃತಿಕಾರರ ಬಗ್ಗೆ ಈ ಟ್ರಸ್ಟ್‌ನವರೇ ಹೇಳಿರುವ ಕೆಲವು ಸಾಲುಗಳನ್ನು ನೋಡಿ:

"ಇವರು ತಂತ್ರಾಗಮ ಮತ್ತು ವೈದಿಕ ಪೌರೋಹಿತ್ಯಕ್ಕೆ ಕರಾವಳಿಯಲ್ಲೇ ಅತ್ಯಂತ ಸುಪ್ರಸಿದ್ಧವಾದ ಉಡುಪಿ ತಾಲೂಕಿನ ಪಾದೂರು ಗ್ರಾಮದ ತಂತ್ರಿಗಳ ಕುಟುಂಬದಲ್ಲಿ ಜನಿಸಿದವರು. ಬನಾರಸ್ ವಿ.ವಿ.ದಿಂದ ಬಿ.ಎ ಮತ್ತು ಎಂ.ಎ ಪದವಿ ಪಡೆದು, ಮೈಸೂರು ವಿ.ವಿ.ದ ಸುಪ್ರಸಿದ್ಧ ಇತಿಹಾಸಜ್ಞ ಪ್ರೊ. ಎಚ್. ಶೇಷಾದ್ರಿಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಯನ್ನು ಗಳಿಸಿದವರು. ... ತನ್ನ ಸಂಶೋಧನೆಯ ಮೂಲಕ, ಕರಾವಳಿಯ ಆದ್ಯಂತ ಸಂಶೋಧನೆಯ ಒಂದು ದೊಡ್ಡ ಚಳವಳಿಯನ್ನೇ ಬಡಿದೆಬ್ಬಿಸಿದ ಕೀರ್ತಿಗೆ ಪಾತ್ರರಾದರು. ... ಕರಾವಳಿಯ, ತುಳುನಾಡಿನ ಸಾಂಸ್ಕೃತಿಕ-ಧಾರ್ಮಿಕ ಇತಿಹಾಸದ ಪ್ರವರ್ತಕರಲ್ಲಿ "ಡಾ.ಗುರುರಾಜ ಭಟ್ಟ" ಎಂಬ ಹೆಸರು ಢಾಳವಾಗಿ ಮೂಡಿಬರುವಂತೆ ಮಾಡಿದರು."

ಇಂಥಾ ಕೃತಿಕಾರರು ಹೇಳುವಂತೆ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಟಿಪ್ಪುವಿನ ವಿರುದ್ಧ ಬ್ರಿಟಿಷರಿಗೆ ಸಹಾಯ ಮಾಡಿದ್ದಕ್ಕಾಗಿ ಕುಮಾರ ಹೆಗ್ಗಡೆ ಎಂಬುವವನು ಧರ್ಮಸ್ಥಳದ ಅಧಿಕಾರ ಪಡೆದುಕೊಂಡನೆ? ಆ ನಂತರದ ದಿನಗಳಲ್ಲಿ ಧರ್ಮಸ್ಥಳದ ಅಧಿಕಾರ ಆತನ ಕುಟುಂಬ ವರ್ಗದವರಿಗೆ ಅಥವಾ ಸ್ವಜಾತಿ ಬಂಧುಗಳಿಗೆ ಹಸ್ತಾಂತರವಾಗಿದೆಯೆ? ಈ ಎಲ್ಲಾ ಪ್ರಶ್ನೆಗಳ ಬಗ್ಗೆ ಇತಿಹಾಸಕಾರರು ಸಮಗ್ರ ಅಧ್ಯಯನ ಕೈಗೊಳ್ಳಬೇಕಾದ ಜರೂರಿದೆ.

'ಪದ್ಮಭೂಷಣ'ಕ್ಕೆ ಅಪಚಾರ

ಮಾನ್ಯ ವೀರೇಂದ್ರ ಹೆಗ್ಗಡೆಯವರಿಗೆ 2000ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿ ನೀ[...] ಗೌರವಾನ್ವಿತ ಪ್ರಶಸ್ತಿಯನ್ನು ಹೆಗ್ಗಡೆಯವರು ದುರುಪಯೋಗಪಡಿಸಿಕೊಂಡ ಆರೋಪ ಎದುರಿಸುತ್ತಿದ್ದಾರೆ. ನಾ[...] ಸೇವಾ ಟ್ರಸ್ಟ್‌ನ ಪ್ರಕಾರ "ಹೆಗ್ಗಡೆಯವರು ತನಗೆ ಪ್ರಾಪ್ತವಾದ 'ಪದ್ಮಭೂಷಣ' ಪ್ರಶಸ್ತಿಯನ್ನು ದುರುಪಯೋಗಪಡಿಸುತ್ತಿ[...] ಇವರ ಬಗ್ಗೆ ಅಪ್ರಿಯವಾದ, ಅರಗಿಸಿಕೊಳ್ಳಲು ಆಗದಿರುವ ಕಟುಸತ್ಯಗಳನ್ನು ಪ್ರಕಟಿಸುವ ಮಾಧ್ಯಮಗಳ [...] ವ್ಯಕ್ತಿಗಳ ವಿರುದ್ಧ ಹೆಗ್ಗಡೆಯವರು ಸುಳ್ಳು, ಅಸಂಬದ್ಧ ದಾವೆಗಳನ್ನು ಕೋರ್ಟಿನಲ್ಲಿ ಹೂಡಿದ್ದು, ಈ ಮಾಧ್ಯಮ/ವ್ಯ[...] ಅವರ ಕುರಿತು ಬಾಯಿಮುಚ್ಚಿರುವಂತೆ ಪ್ರಯತ್ನಿಸಿದ್ದಾರೆ.... ಈ ದಾವೆಗಳಲ್ಲಿ ಅರ್ಜಿದಾರ ಹೆಗ್ಗಡೆಯವರು 'ಪದ್ಮಭೂ[...] ಬಳಸಿ ತನ್ನ ಮಹತ್ವವನ್ನು ಕೋರ್ಟಿಗೆ ತಿಳಿಸಿ ತನ್ನ ಪರ ತೀರ್ಪಾಗುವಂತೆ ಪರೋಕ್ಷವಾಗಿ ಪ್ರಭಾವ ಬೀರುವ ಉ[...] ಹೊಂದಿರುವುದು ಸ್ಪಷ್ಟ."


ಹೆಗ್ಗಡೆ ತನ್ನ ಹೆಸರಿನ ಮುಂದೆ ಪದ್ಮಭೂಷಣ ಬಳಸಿರುವ ಮೂರು ಕೇಸುಗಳ ಪ್ರತಿಯನ್ನು ಟ್ರಸ್ಟ್ ಪತ್ರಿಕಾಗೋಷ್ಠಿ[...] ಬಹಿರಂಗಪಡಿಸಿದೆ.

ಪದ್ಮ ಪ್ರಶಸ್ತಿಗಳ ಬಗ್ಗೆ ಕೇಂದ್ರ ಸರ್ಕಾರದ ನಿಯಮಾವಳಿಗಳು ಮತ್ತು ಸುಪ್ರೀಂಕೋರ್ಟ್ ನೀಡಿರುವ ತೀರ್ಪು[...] ಹೀಗೆ ಹೆಸರಿನ ಮುಂದೆ ದುರ್ಬಳಕೆ ಮಾಡದಂತೆ ಕಟ್ಟಳೆ ವಿಧಿಸಿವೆ. 'ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಗುರು[...] ಕೊಡುವ ಪ್ರಶಸ್ತಿಗಳೇ ಹೊರತು ವ್ಯಕ್ತಿಗಳಿಗೆ ನೀಡಿರುವ ಬಿರುದು ಬಾವಲಿಯಲ್ಲ' ಎಂದು ಅನೇಕ ಬಾರಿ ಸ್ಪಷ್ಟಪ[...] ಮಾತ್ರವಲ್ಲ, ಇದರ ಉಲ್ಲಂಘನೆ ಮಾಡಿದ ವ್ಯಕ್ತಿಗಳ ಪ್ರಶಸ್ತಿಯನ್ನು ವಾಪಸ್ ಪಡೆಯುವಂತೆ ಸುಪ್ರೀಂ ಆದೇ[...] ಇದೆ.

ಈ ಹಿನ್ನೆಲೆಯಲ್ಲಿ ಟ್ರಸ್ಟ್‌ನವರು ಭಾರತದ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿ ವೀರೇಂದ್ರ ಹೆಗ್ಗಡೆ[...] ಪದ್ಮಭೂಷಣ ಪ್ರಶಸ್ತಿಯನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿದ್ದಾರೆ.

ಧರ್ಮಾಧಿಕಾರಿ ಎನಿಸಿಕೊಂಡವರಿಗೆ ಇದೆಲ್ಲಾ ಬೇಕಿತ್ತಾ?

ಸೋಮನಾಥ್ ನಾಯಕ್



ರ್ನಾಟಕ ರಾಜ್ಯದ ಕಾನೂನು, ಸಂಸದೀಯ ಖರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಟಿ.ಬಿ.ಜಯಚಂದ್ರ ಅವರ ಕಚೇರಿ ಟ್ರಸ್ಟ್ ಸಲ್ಲಿಸಿದ ಗೆ ಸ್ಪಂದಿಸಿದೆ. ತಾ.7.11.2014 ರಂದು ಸಚಿವರ ಕಾರ್ಯದರ್ಶಿಯಾದ ಎಂ.ಆರ್.ಸೋಮಶೇಖರಪ್ಪ ಕೆಎಎಸ್ ಅಧಿಕಾರಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಧರ್ಮಾದಾಯ ದತ್ತಿಗಳ ಇಲಾಖೆಯ ಆಯುಕ್ತರಿಗೆ ಯೊಂದನ್ನು ಬರೆದಿದ್ದಾರೆ.

ಧರ್ಮಸ್ಥಳ ಮಂಜುನಾಥೇಶ್ವರ ದೇವಸ್ಥಾನಕ್ಕೆ ಕರ್ನಾಟಕ ಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿಗಳ ಕಾಯಿದೆ ನ್ನು ಅನ್ವಯಿಸದೇ ಇರುವ ಬಗ್ಗೆ ಬೆಳ್ತಂಗಡಿ ತಾಲ್ಲೂಕು ಸದ ಶ್ರೀ ರಂಜನ್‌ರಾವ್ ಅವರು ಮಾನ್ಯ ಸಚಿವರಿಗೆ ಮನವಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಯನ್ನು ದಯವಿಟ್ಟು ಪರಿಶೀಲಿಸಿ ನಿಯಮಾನುಸಾರ ಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ಮಾನ್ಯ ಂದ ನಿರ್ದೇಶಿತನಾಗಿದ್ದೇನೆ."

ದಲ್ಲದೆ 'ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೇಷನಲ್ ಸೊಸೈಟಿ'ಯ ಹೆಸರಿನಲ್ಲಿ ನುಬಾಹಿರವಾಗಿ ಕೃಷಿಭೂಮಿಯನ್ನು ಕಬ್ಜಾ ಕೊಂಡಿರುವ ಬಗ್ಗೆಯೂ ನಾಗರಿಕ ಸೇವಾ ಟ್ರಸ್ಟ್ ರಾಟ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ -2014ರಂದು ಕಂದಾಯ ಇಲಾಖೆಯ ಪ್ರಧಾನ ದರ್ಶಿಯಾದ ಹೆಚ್.ಕೆ.ಶ್ರೀಪಾದರಾವ್‌ರಿಂದ ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮತ್ತೊಂದು ಪತ್ರ ಯಾಗಿದೆ.

ವಿಷಯ : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೇಷನಲ್ ಸೊಸೈಟಿ (ರಿ), ಉಜಿರೆ ಇವರು ಸುಳ್ಳು ಣಪತ್ರ ಸಲ್ಲಿಸಿ ಕೃಷಿ ಭೂಮಿಯನ್ನು ನುಬಾಹಿರವಾಗಿ ಭೂಸ್ವಾಧೀನ ಮಾಡಿಕೊಂಡಿರುವ

ಈ ವಿಷಯದ ಬಗ್ಗೆ ಪರಿಶೀಲಿಸಿ, ಅರ್ಜಿಯಲ್ಲಿರುವ ಶ ಬಗ್ಗೆ ವಿಚಾರಣೆ/ತನಿಖೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ದಾರರಿಗೆ ನಿಮ್ಮ ಹಂತದಲ್ಲಿಯೇ ಸೂಕ್ತ ಹಿಂಬರಹ ವಂತೆ ತಮ್ಮನ್ನು ಕೋರಲು ನಾನು ಶಿತನಾಗಿದ್ದೇನೆ."

ಥಾ ಸರ್ಕಾರಿ ಪತ್ರಗಳು ಇಲಾಖೆಯಿಂದ ಇಲಾಖೆಗೆ ಯಾಗುವುದು ಮಾಮೂಲಿ ಸಂಗತಿ. ಆದರೆ ಈ ಪತ್ರಗಳು ಮಾಮೂಲಿ ಪತ್ರಗಳಲ್ಲ, ದಕ್ಷಿಣ ದಲ್ಲೇ ಮನೆಮಾತಾಗಿರುವ ಧಾರ್ಮಿಕ ಕ್ಷೇತ್ರ ಸ್ಥಳದಲ್ಲಿ ನಡೆದಿರುವ ಅವ್ಯವಹಾರಗಳ ತನಿಖೆಗೆ ಧಿಸಿದ ಅಧಿಕೃತ ಪತ್ರಗಳು. ಈ ಪತ್ರಗಳು ಖೆಯಂತೆ ಕಡತಕ್ಕೆ ಸೇರಿ ಧೂಳು ತಿನ್ನುತ್ತಾ ಕೂತರೆ, ಸತ್ಯಾಂಶ ತಿಳಿದುಕೊಳ್ಳುವ ಬಗೆಯಾದರೂ ಏನು? ಜನಿಕರ ಮನಸ್ಸಿನಲ್ಲಿ ಮನೆ ಮಾಡಿರುವ ಲಗಳಿಗೆ ತೆರೆ ಎಳೆಯುವುದಾದರೂ ಹೇಗೆ?

ಕಾರ ಕೂಡ ಎಂದಿನ ಜಡತೆ ಮತ್ತು ಉಳ್ಳವರ ದ ಪಕ್ಷಪಾತ ಧೋರಣೆ ಬಿಟ್ಟು ಸರಿಯಾದ ದಿಕ್ಕಿನಲ್ಲಿ ನಡೆಸಬೇಕು. ಈ ನಿಟ್ಟಿನಲ್ಲಿ ಭಕ್ತಾದಿಗಳು, ಜನಿಕರು ಮೂಕ ಪ್ರೇಕ್ಷಕರಾಗುಳಿಯದೆ ನಾಗರಿಕ ಟ್ರಸ್ಟ್‌ನ ಸಾತ್ವಿಕ ಹೋರಾಟದ ಜೊತೆಗೆ ಕೈಜೋಡಿಸಿ ದ ಮೇಲೆ ಒತ್ತಡ ಹಾಕಬೇಕು. ಧರ್ಮದ ಹೆಸರಿನಲ್ಲಿ ನು ಉಲ್ಲಂಘನೆ ಮಾಡುವ ಪಟ್ಟಭದ್ರ ಶಕ್ತಿಗಳಿಗೆ ಶಿಕ್ಷೆಯಾಗಬೇಕು. ಆಗಲಾದರೂ ಮುಗ್ಧ ಭಕ್ತರಿಗೆ ಸಿಕ್ಕೀತು.

ದೊಡ್ಡಿಪಾಳ್ಯ ನರಸಿಂಹಮೂರ್ತಿ

ಚೆಡ್ಡಿಗಳ ಸಮರವನ್ನು ಚೆಂದಿ ಮಾಡಿದ ಚವ್ಹಾಣ್!

ಧೂತ್ತೇರಿ

▶ ಯಾಹೂ

ಬೆಳಗಾವಿಯಲ್ಲಿ ನಡೆಯುವ ಅಧಿವೇಶನಕ್ಕೆ ಚೆಡ್ಡಿಗಳ ಪಡೆ ಪರ್ಯಾಯವಾಗಿ ಸಮರವನ್ನೆ ಸಾರಿದವಂತಲ್ಲಾ, ಮುಖ್ಯವಾಗಿ ಕಳಂಕಿತ ಸಚಿವರ ಪ್ರಶ್ನೆಗೆ ಉತ್ತರ ಕೊಡಬಾರದು, ಅವರು ಹೋದಲ್ಲಿ ಬಂದಲ್ಲಿ ಪ್ರತಿಭಟಿಸಬೇಕು, ಸದನವಲ್ಲದೆ ಸದನದ ಶೌಚಾಲಯಕ್ಕೂ ಕಳಂಕಿತರು ಬರಲು ಅವಕಾಶ ಕೊಡಬಾರದೆಂದು ಠರಾವು ಪಾಸು ಮಾಡಿದ್ದವಂತಲ್ಲಾ, ಇಂತಹ ಠರಾವು ಪಾಸು ಮಾಡುವ ಮೊದಲು, ನಿಷ್ಕಳಂಕ ಚೆಡ್ಡಿಗಳ ಗಮನಕ್ಕೆ, ಈಗ ಜೈಲಲ್ಲಿರುವ ರೆಡ್ಡಿಯಾಗಲಿ, ಕೃಷ್ಣಯ್ಯ ಶೆಟ್ಟಿಯಾಗಲಿ, ಕೃಷ್ಣಪ್ಪನಾಗಲಿ, ಸಂಪಂಗಿಯಾಗಲಿ, ಈಶ್ವರಿಯಾಗಲಿ, ಯಡ್ಡಿಯಾಗಲಿ ಅಥವಾ ಸಿ.ಟಿ. ರವಿಯಾಗಲಿ ನೆನಪಿಗೇ ಬರಲಿಲ್ಲವಂತಲ್ಲಾ, ಇದೆಲ್ಲಕ್ಕಿಂತ ಮುಖ್ಯವಾಗಿ ಇಡೀ ಚೆಡ್ಡಿ ಪಡೆಯೇ ಭ್ರಷ್ಟಗೊಂಡು ಸುರೇಶ್ ಕುಮಾರ್ ಎಂಬುವನು ಪರವಾಗಿಲ್ಲ ಎನ್ನುವಂತಾಗಿದೆ ಎಂತಲ್ಲಾ,

ಬೆಳಗಾವಿಯ ಸಮರ ಸುವರ್ಣಾಕ್ಷರದಲ್ಲಿ ಬರೆದಿಡುವಂತೆ ಯಶಸ್ವಿಯಾಗುತ್ತದೆ ಎಂದು ಚೆಡ್ಡಿ ಪಡೆ ತೊಡೆ ತಟ್ಟಿ ರೆಡಿಯಾಗುತ್ತಿರುವಾಗಲೇ ಔರಾದ್ ಕ್ಷೇತ್ರದ ಬಿಜೆಪಿ ಶಾಸಕ ಪ್ರಭು ಚವ್ಹಾಣ್ ಎಂಬುವನ ಕಾಚವೇ ಕಳಚಿಬಿತ್ತಂತಲ್ಲಾ, ಅದನ್ನು ಕಂಡು ಜೆಡಿಎಸ್‌ನವರು ಬಿದ್ದುಬಿದ್ದು ನಗುತ್ತಿದ್ದರೆ ಕಾಂಗ್ರೆಸ್‌ನವರು ಮುಖ ಮುಚ್ಚಿಕೊಂಡವಂತಲ್ಲಾ, ಇದನ್ನು ಕಂಡ ಜಗದೀಶ್ ಶೆಟ್ಟರ್ ಎಂಬ ಮುಖರಹಿತ ನಾಯಕ "ನಮ್ಮ ಚವ್ಹಾಣ್ ಮುಗ್ಧ, ಆದ್ದರಿಂದ ಕಾಚಾ ಸರಿಯಾಗಿ ಬಿಗಿದಿರಲಿಲ್ಲ" ಎಂದು ಸಮರ್ಥಿಸಿಕೊಂಡನಂತಲ್ಲ, ಥೂತ್ತೇರಿ!

* * *

ಬೆಳಗಾವಿಯ ಅಧಿವೇಶನ ಗಂಭೀರವಾಗಿ ನಡೆಯುತ್ತಿರುವಾಗ ಸದನದ ಭಾಷೆಯಾಗಲಿ, ವಿಷಯವಾಗಲಿ ಅಥವಾ ಶಾಸಕನಾದವನ ನಡವಳಿಕೆಯ ಜವಾಬ್ದಾರಿಯನ್ನಾಗಲಿ ಅರಿಯದ ಪ್ರಭು ಚವ್ಹಾಣ್ ಸದನ ಕಲಾಪವೆಂಬ ಪ್ರಹಸನದಿಂದ ಮುಕ್ತನಾಗಿ ಮೊಬೈಲ್‌ಗೆ ಮಾರುಹೋಗಿದ್ದನಂತಲ್ಲಾ, ಅದರಲ್ಲಿನ ಚಿತ್ರಗಳನ್ನು ಹೊರತೆಗೆದು ನೋಡುತ್ತಿರುವಾಗ, ಈ ದೇಶದ ವಿಸ್ಮಯಗಳಾದ ಮೋದಿಯಿಂದ ಹಿಡಿದು ವಾಜಪೇಯಿ, ಸೋನಿಯಾ, ಪ್ರಿಯಾಂಕವರೆಗೂ ಚಿತ್ರಗಳಿದ್ದವಂತಲ್ಲಾ, ಅದರಲ್ಲಿನ ಯಾವ ಚಿತ್ರಗಳ ಮೇಲೂ ಆತನ ಮನಸ್ಸು ಕೇಂದ್ರೀಕರಣಗೊಳ್ಳದೆ ಸೋನಿಯಾ ಮಗಳು ಪ್ರಿಯಾಂಕಾಳ ಮುಖಕ್ಕಿಂತ ಆಕೆಯ ಎದೆಯ ಭಾಗ ರೋಮಾಂಚನವಾಗಿ ಕಂಡಿತಂತಲ್ಲಾ, ಈ ಪ್ರಯುಕ್ತ ಜೂಮ್ ಮಾಡಿಕೊಂಡು ಪದೇಪದೇ ನೋಡಿದನಂತಲ್ಲಾ, ಇಂತಹ ದೃಶ್ಯ ಶೋಧನೆಗಾಗಿಯೇ ಸದನಕ್ಕೆ ಹೋದ ಟಿ.ವಿ. ಕ್ಯಾಮರಾಗಳಿಗೆ ಸಿಕ್ಕಿ ಬಿದ್ದ ಚವ್ಹಾಣ್ ಬಿಜೆಪಿ ಹೋರಾಟಕ್ಕೆ ಮಣ್ಣು ಹಾಕಿದನಂತಲ್ಲಾ, ಕೊನೆಗೆ ಯಾವ ಮುಖಭಾವವೂ ಇಲ್ಲದೆ ಪಕ್ಷಾತೀತ ವ್ಯಕ್ತಿಯಂತೆ ಮಾತನಾಡಿ, "ನೋಡಿ ಸಾರ್, ಹೆಂಡತಿಯಿಂದ ಬಂದ ಮೆಸೇಜ್ ನೋಡಲೆಂದು ಟ್ರೈ ಮಾಡುವಾಗ ಪ್ರಿಯಾಂಕಳ ಚಿತ್ರ ಬಂತು. ಮೆಸ್ಸೇಜ್ ಅಗಲ ಮಾಡಲೋಸ್ಕರ ಪ್ರಿಯಾಂಕಳ ಎದೆಯನ್ನು ಜೂಮ್ ಮಾಡಬೇಕಾಯ್ತು, ಪ್ರಿಯಾಂಕ ಟೀಶರ್ಟ್ ಹಾಕಿದ್ದಳು. ಆದ್ದರಿಂದ ಇದರಲ್ಲಿ ಅಶ್ಲೀಲವಾದದ್ದೇನೂ ಇಲ್ಲ, ಅಷ್ಟಕ್ಕೂ ನಾನೇನು ಕೃಷ್ಣ ಪಾಲೇಮಾರ್ ಅಥವಾ ಲಕ್ಷ್ಮಣ ಸವದಿಯಷ್ಟು ಕೆಟ್ಟವನಲ್ಲ" ಎಂದನಂತಲ್ಲಾ, ಆಗ ಅಲ್ಲೇ ಇದ್ದ ಬಣಕಾರ "ಸದ್ಯ ನಾನು ಕ್ಯಾಂಡಿಕ್ರಷ್‌ನಲ್ಲಿ ಮುಳುಗಿದ್ದೆ" ಎಂದನಂತಲ್ಲಾ, ಥೂತ್ತೇರಿ !!

* * *

ಬಿಜೆಪಿ ಭಂಡರು ತಮ್ಮ ಎಮ್ಮೆಲ್ಲೆಗಳ ಸಾಹಸವನ್ನು ಸಮರ್ಥಿಸಿಕೊಳ್ಳುತ್ತ "ನೋಡಿ, ನಮ್ಮ ಚವ್ಹಾಣ್ ಕಾಂಗ್ರೆಸ್‌ನ ಪ್ರಿಯಾಂಕಳ ಎದೆ ಭಾಗವನ್ನು ಜೂಮ್ ಮಾಡಿರುವ ಅಪರಾಧಕ್ಕಿಂತಲೂ ನಿಮ್ಮ ಸಿದ್ದರಾಮಯ್ಯ ಸದನದಲ್ಲೇ ನಿದ್ದೆ ಹೋಗಿದ್ದಕ್ಕೆ ಏನು ಹೇಳುತ್ತೀರಿ? ಅವರಿಗೂ ಕಲಾಪದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಆಸಕ್ತಿ ಇಲ್ಲವಾಯ್ತು ಎಂದಾಯ್ತಲ್ಲ" ಎಂದು ಕೇಳಿದವಂತಲ್ಲಾ, ಅದಕ್ಕೆ ಕಾಂಗೈಗಳು "ಸಿದ್ದುಗೆ ಸುಖವಾದ ಆಸನ ಸಿಕ್ಕಿ ಫ್ಯಾನ್ ಗಾಳಿ ಬಂದ ಕೂಡಲೇ ನಿದ್ರೆಗೆ ಜಾರುವ ಒಂದು ಕಾಯಿಲೆ ಇದೆ" ಎಂದವಂತಲ್ಲಾ, ಆಗ ಚೆಡ್ಡಿಗಳು "ನಮ್ಮ ಚವ್ಹಾಣನಿಗೂ ಅದೇ ಕಾಯಿಲೆ ಇದೆ ಕಂಡ್ರೀ. ರಾಷ್ಟ್ರ ನಾಯಕರು ಮತ್ತು ದೇವರ ಫೋಟೋ ನೋಡಿದ ನಂತರ ಕೆಲವು ಭಾಗಕ್ಕೆ ಜೂಮ್ ಮಾಡಿ ನೋಡುವ ಕಾಯಿಲೆ ಇದೆ. ನಿಮ್ಮ ಸಿದ್ದು ನಿದ್ದೆಗೆ ನಮ್ಮ ಚವ್ಹಾಣನ ಜೂಮ್ ಸಮ" ಎಂದವಂತಲ್ಲಾ,



ಆದರೇನು ಕರ್ನಾಟಕಕ್ಕೆ ಮಂತ್ರಿಯಾಗಿ ವಕ್ಕರಿಸಿರುವ ರೆಬಲ್‌ಸ್ಟಾರ್ ಅಂಬರೀಶ್‌ರವರು ಅಮರಾವತಿ ಚಂದ್ರಶೇಖರನ ಹೋಟಲಿನಲ್ಲಿ ಕುಳಿತು, ಕಂಠಪೂರ್ತಿ ಏರಿಸಿ, ಬಾಂಬೆ ಸಿನಿಮಾದ ಹಾಡೇಳುತ್ತ ಕುಳಿತಲ್ಲೇ ಕುಣಿಯುತ್ತಿರುವ ದೃಶ್ಯವನ್ನು ತಮ್ಮ ಪರಿಚಿತರಿಗೆಲ್ಲಾ ಕಳಿಸುತ್ತ "ನಮ್ಮ ಯಾವ ಮಂತ್ರಿ ಹೀಗೆ ಮಾಡಿದ್ದಾನೆ ಹೇಳಿ?" ಎನ್ನತೊಡಗಿವೆಯಂತಲ್ಲಾ, ಇದರಿಂದ ಕೆಂಡಮಂಡಲವಾದ ಅಂಬಿ ಅಭಿಮಾನಿಗಳು ಅಣ್ಣನಿಗೆ ಮಾಡಿದ ಅವಮಾನಕ್ಕಾಗಿ ಅಮರಾವತಿ ಹೋಟೆಲಿನಲ್ಲಿ ಇನ್ನೊಂದು ಅಜರಾಮರವೆನಿಸುವ ಪಾರ್ಟಿ ಮಾಡಿ ಕುಣಿದು ಕುಪ್ಪಳಿಸಲು ತಯಾರಿ ನಡೆಸಿವೆಯಂತಲ್ಲಾ, ಥೂತ್ತೇರಿ !!!

* * *

ಕರ್ನಾಟಕದ ಚೆಡ್ಡಿಗಳು ಬೆಳಗಾವಿಯಲ್ಲಿ ಎಂ.ಇ.ಎಸ್ ದಾಳಿಕೋರರನ್ನೂ ಮೀರಿಸಿ ಧಾಂದಲೆ ಮಾಡುತ್ತಿರುವಾಗ ಅತ್ತ ಉತ್ತರ ಪ್ರದೇಶದ ಚೆಡ್ಡಿಗಳು ಅಮಾಯಕ ಮುಸ್ಲಿಮರನ್ನ ಕರೆದುಕೊಂಡು ಹೋಗಿ "ನಿಮಗೆಲ್ಲಾ ಮನೆ, ಬಿ.ಪಿ.ಎಲ್ ಕಾರ್ಡ್, ತಿಂಗಳ ಖರ್ಚಿಗೆ ಕಾಸು ಕೊಡುತ್ತೇವೆ" ಎಂದು ಆಮಿಷವೊಡ್ಡಿ, ಅವರನ್ನೆಲ್ಲ ಬೆಂಕಿ ಮುಂದೆ ಕೂರಿಸಿದವಂತಲ್ಲಾ, ಆಗ್ರಾದಲ್ಲಿ ಚಳಿ ಇರುವುದರಿಂದ ಬೆಂಕಿ ಹಾಕಿದ್ದಾರೆಂದು ಭಾವಿಸಿದ ಬಡ ಸಾಬರು ಚೆಡ್ಡಿಗಳು ಹೇಳಿದ್ದನ್ನೆಲ್ಲಾ ಮಾಡುತ್ತ ಇರಬೇಕಾದರೆ ಚೆಡ್ಡಿಗಳು ತಿಲಕವಿಟ್ಟು, ದಾರಕಟ್ಟಿ, "ಇನ್ನು ಮುಂದೆ ನೀವು ಹಿಂದೂಗಳು. ಸದ್ಯಕ್ಕೆ ನಿಮಗೆ ಲಗತ್ತಾದ ಹೆಸರುಗಳನ್ನ ಹುಡುಕುತ್ತಿದ್ದೇವೆ" ಎಂದರಂತಲ್ಲಾ, ಆದರೆ "ಜಲ್ದಿ ಬಿ.ಪಿ.ಎಲ್ ಕಾರ್ಡ್, ಮನೆ ಹಕ್ಕುಪತ್ರ ಕೊಡಿ. ನಮಾಜ್‌ಗೆ ಟೈಮಾಯ್ತು ಹೋಗಬೇಕು" ಎಂದು ಸಾಬರು ಎದ್ದೇ ಬಿಟ್ಟರಂತಲ್ಲಾ, ಇದರಿಂದ ಗಲಿಬಿಲಿಯಾದ ಚೆಡ್ಡಿಗಳು "ಅದೆಲ್ಲಾ ಆಮೇಲೆ. ಇಂದಿನಿಂದ ನೀವು ನಮಾಜು ಬಿಟ್ಟು ಪೂಜೆ ಮಾಡಬೇಕು" ಎಂದಾಗ ಸಿಟ್ಟಾದ ಕೆಲ ಸಾಬರು "ಹೋಗೋ ಸೈತಾನ್ ನಿನ್ನಮ್ಮುಂದು ಭೋಸುಡ" ಎಂದು ಹೊರಟೇ ಹೋದವಂತಲ್ಲಾ, ಅತ್ತ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಮಾಡುತ್ತ ಮುಸ್ಲಿಮರನ್ನು ಮತಾಂತರ ಮಾಡುತ್ತ ಸಂಸ್ಕೃತವನ್ನು ಉಳಿಸಲು ಸಂತೆ ಶಿವರದ ಚೆಡ್ಡಿ ಭೈರಣ್ಣನನ್ನು ನೇಮಿಸುತ್ತ ಇಡೀ ಭಾರತಕ್ಕೆ ನಾಲ್ಕು ದಿಕ್ಕಿನಿಂದಲೂ ಬೆಂಕಿ ಹಚ್ಚಲು ಚೆಡ್ಡಿಗಳು ತಯಾರಿ ನಡೆಸುತ್ತಿರುವುದಕ್ಕೆ ಮುಖ್ಯ ಕಾರಣ ಗಾಂಧಿ ಕೊಂದವರ ಕೈಗೆ ದೇಶ ಸಿಕ್ಕಿರುವುದು. ಮನುಷ್ಯ ನಿರ್ಮಿತ ಯಾವ ಧರ್ಮಗ್ರಂಥವೂ ಪರಿಪೂರ್ಣವಲ್ಲ ಎಂಬ ಗಾಂಧಿ ಮಾತು ಚೆಡ್ಡಿಗಳ ತಲೆಗೆ ಹೋಗುತ್ತಿಲ್ಲವಲ್ಲಾ, ಥೂತ್ತೇರಿ!!! ●

ಅಪರಾಧ ಎಸಗಿರುವುದು ಶ್ರೀರಾಮನಲ್ಲವೇ?

ಒಂದು ಪತ್ರ

ನ್ಯಾಯ ತೀರ್ಮಾನ ಮಾಡುವ ನ್ಯಾಯಾಧೀಶರೇ ತಬ್ಬಿಬ್ಬಾಗುವ ಪ್ರಕರಣವೊಂದು ಮಂಗಳೂರಿನಲ್ಲಿ ಈಗ್ಗೆ ಒಂದೆರಡು ವರ್ಷಗಳ ಹಿಂದೆ ನಡೆದ ವರದಿಯಾಗಿತ್ತು. ಆ ಪ್ರಸಂಗ ಹೀಗಿದೆ - ದೈವದ ಆವೇಶ ಬಂದಿದ್ದ ಸಮಯದಲ್ಲಿ ಪಾತ್ರಿಯು ಅಲ್ಲಿನ ಫಲಕವೊಂದನ್ನು ಎಳೆದುಹಾಕಿ ಕೋಲಾಹಲ ಮಾಡಿದ್ದ ಸ್ಪಷ್ಟವಾಗಿ ಅದೊಂದು ಕಾನೂನುವಿರೋಧಿ ಕೃತ್ಯವಾಗಿದ್ದು ಈ ಸಂಬಂಧ ದೂರು ನ್ಯಾಯಾಲಯ ತಲುಪಿದಾಗ, 'ದೈವಾವೇಶ ಸಮಯದಲ್ಲಿ ನಾನು ನಾನಾಗಿರುವುದಿಲ್ಲ, ಹಾಗಾಗಿ ಆಗ ನಾನು ಮಾಡಿದ ಕೃತ್ಯಗಳಿಗೆ ದೈವವೇ ಹೊಣೆ ಹೊರತು ನಾನಲ್ಲ' ಎಂದು ಪಾತ್ರಿ ಕೈತೊಳೆದುಕೊಂಡಿದ್ದ! ಇದು ನಿಜಕ್ಕೂ ಒಂದು ಜಟಿಲ ಸಂಗತಿಯಾಗಿತ್ತು ಮತ್ತು ನ್ಯಾಯಾಲಯಕ್ಕೊಂದು ಸವಾಲಿನ ಕೆಲಸವಾಗಿತ್ತು. ಒಂದರ್ಥದಲ್ಲಿ ಪಾತ್ರಿ ಹೇಳುವುದರಲ್ಲಿ ಅರ್ಥವಿದೆ. ದೈವಾವೇಶ ಬಂದ ಸಂದರ್ಭದಲ್ಲಿ ಮಾಡಿರುವ ಕೃತ್ಯಕ್ಕೆ ಆತ ಹೊಣೆಯಾಗುವುದಾದರೂ ಹೇಗೆ?

ಆದರೆ ನ್ಯಾಯಾಲಯದ ಸಮಸ್ಯೆ ಬೇರೆಯೇ ಬಗೆಯದು. ಅದು ಪ್ರಕರಣವನ್ನು ವಿಲೇ ಮಾಡಲೇಬೇಕಲ್ಲ, ಅಪರಾಧ ಕೃತ್ಯ ನಡೆದಿರುವುದು ಖಚಿತವಿರುವುದರಿಂದ ಅಪರಾಧಿ ಯಾರೆಂದು ಘೋಷಿಸಿ ಶಿಕ್ಷಿಸಲೇಬೇಕಲ್ಲ, ಒಂದು ವೇಳೆ ಪಾತ್ರಿಯ ವಾದವನ್ನು ಒಪ್ಪಿಕೊಂಡದ್ದೇ ಆದರೆ ನ್ಯಾಯಾಲಯವು ದೈವವನ್ನು ಅಪರಾಧಿ ಎಂದು ತೀರ್ಮಾನಿಸಿ ಶಿಕ್ಷೆ ನೀಡಬೇಕಾಗುತ್ತದೆ. ಇದು ಸಾಧ್ಯವೇ? ದೈವಗಳು ನಮ್ಮ ಹುಲುಮಾನವರ ನ್ಯಾಯಾಲಯಗಳ ವ್ಯಾಪ್ತಿಗೆ ಬರುತ್ತವೆಯೇ? ಈ ಕಗ್ಗಂಟನ್ನು ಬಿಡಿಸುವುದಾದರೂ ಹೇಗೆ? ಬಹುಶಃ ದೇಶದ ನ್ಯಾಯ ಶಾಸ್ತ್ರವನ್ನು ರಚಿಸಿದ ಮೇಧಾವಿಗಳಿಗೂ ಮುಂದೊಂದು ದಿನ ಇಂತಹ ಪ್ರಸಂಗ ಎದುರಾದೀತು ಎಂಬ ಕಿಂಚಿತ್ ಊಹೆಯೂ ಇದ್ದಿರಲಿಕ್ಕಿಲ್ಲ.


ಈಗ ನೋಡಿ, ನಮ್ಮ ಪುಣ್ಯ ಭೂಮಿ ಭಾರತದಲ್ಲಿ ದೇವರ ಅಪರಾವತಾರವೇ ಆಗಿರುವ ಅನೇಕ ಸ್ವಾಮೀಜಿಗಳೂ ಅಂಥದ್ದೇ ಸಮಸ್ಯೆಯನ್ನು ಮುಂದಿಡುತ್ತಾ ದೇಶದ ನ್ಯಾಯ ವ್ಯವಸ್ಥೆಯನ್ನು ಪೇಚಿಗೆ ಸಿಲುಕಿಸುತ್ತಿದ್ದಾರೆ. ನಮ್ಮ ವಿಶ್ವ ಪ್ರಸಿದ್ಧ ನಿತ್ಯಾನಂದ ತನ್ನ ಭಕ್ತೆಯೊಂದಿಗೆ ಪ್ರಣಯಕೇಳಿ ನಡೆಸುವ ಮುನ್ನ ಸ್ಪಷ್ಟವಾಗಿ "ನಾನು ಶಿವ, ನೀನು ಪಾರ್ವತಿ, ನೀನೀಗ ಸೇರುತ್ತಿರುವುದು ಮತ್ತು ಸಂತೋಷ ಪಡಿಸುತ್ತಿರುವುದು ಶಿವನನ್ನೇ ಹೊರತು ನನ್ನನ್ನಲ್ಲ" ಎಂದು ಮನವರಿಕೆ ಮಾಡಿಕೊಟ್ಟೇ ಕಾಮಕೇಳಿಯಲ್ಲಿ ತೊಡಗಿದ್ದ.

ನಮ್ಮ ರಾಘವೇಶರು "ನೀನು ದಿವ್ಯಳು, ನಿನ್ನ ಮೇಲೆ ಶ್ರೀರಾಮನ ವಿಶೇಷ ಕರುಣೆಯಾಗಿದೆ, ನಮಗೆ ರಾಮನೊಂದಿಗೆ ಸಂಭಾಷಣೆ ನಡೆಸುವ ಕ್ರಮವಿದೆ. ನಮ್ಮೆಲ್ಲ ಕರುಣೆ, ಪ್ರೀತಿಗಳನ್ನು ನಿನ್ನೆಡೆಗೆ ಹರಿಸಬೇಕೆಂದು ನಮಗೆ ರಾಮನ ಪ್ರೇರಣೆಯಾಗಿದೆ. ಇದು ನಿನ್ನ ಸೌಭಾಗ್ಯ. ಗುರುಪೀಠಕ್ಕೆ ನಿನ್ನನ್ನು ನೀನು ಸಮರ್ಪಿಸಿಕೊಳ್ಳಬೇಕಾದ ಕರ್ತವ್ಯವಿದೆ. ನಿನ್ನನ್ನು ನೀನು ನಮಗೆ ಸಮರ್ಪಿಸಿಕೊಳ್ಳುವುದರಿಂದ ರಾಮನಿಗೆ ಸಂತೋಷವಾಗುವುದು" ಎಂದು ಹೇಳಿಯೇ ಮಿಲನ ಮಹೋತ್ಸವದಲ್ಲಿ ತೊಡಗಿ ರಾಮನನ್ನು ಸಂತೋಷಗೊಳಿಸುವ ಕೆಲಸವನ್ನು ಶ್ರದ್ಧಾಭಕ್ತಿಯಿಂದ ನಡೆಸಿಕೊಟ್ಟಿದ್ದರು.

ಇದು ಸ್ಪಷ್ಟವಾಗಿ ಒಂದು 'ಓಪನ್ ಆಂಡ್ ಶಟ್' ಕೇಸ್ ಆಗಿದೆ. ಯುದ್ಧದಲ್ಲಿ ಸೇನಾಧಿಕಾರಿ ನೀಡಿದ ಆಜ್ಞೆಯನ್ನು ಸೈನಿಕನಾದವನು ಚಾಚೂ ತಪ್ಪದೆ ಪಾಲಿಸುತ್ತಾನೆ. ಅಲ್ಲಿ ಏನಾದರೂ ತಪ್ಪಾದರೆ ಅದಕ್ಕೆ ಸೇನಾಧಿಕಾರಿ ಹೊಣೆಯೇ ಹೊರತು ಸೈನಿಕ ಅಲ್ಲವಲ್ಲವೇ? ಸದರಿ 'ರಾಮಕಥಾ' ಪ್ರಸಂಗದಲ್ಲಿ ರಾಮನಿಂದ ಏನು ಆಜ್ಞೆಯಾಗಿದೆಯೋ ಅದನ್ನು ಪಾಲಿಸುವುದು ರಾಘವೇಶರ ಆದ್ಯ ಕರ್ತವ್ಯವಾಗಿತ್ತು; ಅದನ್ನು ಅವರು ಮಾಡಿದ್ದಾರೆ ಅಷ್ಟೆ. ಮಿಲನ ಮಹೋತ್ಸವದಿಂದ ಅವರಿಗೆ ಒಂದಿಷ್ಟೂ ಸುಖ ಸಿಕ್ಕಿಲ್ಲ. ಸಿಕ್ಕಿದ್ದೆಲ್ಲವೂ ಶ್ರೀರಾಮನಿಗೆ. ಮಾತ್ರವಲ್ಲ ಸ್ವಾಮೀಜಿಗಳ ಬ್ರಹ್ಮಚರ್ಯ ಭಂಗವೂ ಆಗಿರುವುದಿಲ್ಲ ಮತ್ತು ಪೀಠಕ್ಕೆ ಯಾವ ಅವಮಾನವೂ ಆಗಿಲ್ಲ. ಇಲ್ಲಿ ಪ್ರೇರಣೆ ನೀಡಿದಾತ, ಅತ್ಯಾಚಾರ ನಡೆಸಿದಾತ ಎಲ್ಲವೂ ರಾಮನಾಗಿರುವಾಗ ರಾಘವೇಶರ ತಪ್ಪಾದರೂ ಏನಿದೆ? ವಿಷಯ ಇಷ್ಟು ಸರಳವಿದ್ದಾಗಲೂ ಸ್ವಾಮೀಜಿಗಳನ್ನು ನ್ಯಾಯಾಲಯಕ್ಕೆ ಎಳೆಯುವುದು ತಪ್ಪಲ್ಲವೇ? ಮೇಲೆ ಉಲ್ಲೇಖಿಸಿದ ವಾದವನ್ನು ಸ್ವಾಮೀಜಿಗಳು ಮುಂದೆ ನ್ಯಾಯಾಲಯದಲ್ಲಿ ಮಂಡಿಸಿದರೆ ಆಗ ನ್ಯಾಯಾಲಯ ಏನು ಮಾಡುತ್ತದೆ ಎನ್ನುವುದೇ ಈಗ ಉಳಿದಿರುವ ಕುತೂಹಲದ ಪ್ರಶ್ನೆ. ಭಗವಂತನಾದ ಶ್ರೀರಾಮ ಹುಲುಮಾನವರ ನ್ಯಾಯಶಾಸ್ತ್ರದ ವ್ಯಾಪ್ತಿಗೆ ಒಳಪಡುವನೇ? ಅವನಿಗೆ ಸಮನ್ಸ್ ಕಳುಹಿಸುವುದಾದರೂ ಹೇಗೆ? ಎಂಬ ಹತ್ತಾರು ಸಂಕೀರ್ಣ ಪ್ರಶ್ನೆಗಳು ಇಲ್ಲಿವೆ. ಇಲ್ಲಿ ನಿಜವಾದ ಅಪರಾಧಿ ಯಾರು ಎಂದು ತೀರ್ಮಾನಿಸುವ ವಿಚಾರದಲ್ಲಿ ನ್ಯಾಯಾಲಯವು ಖಂಡಿತವಾಗಿಯೂ ಗೊಂದಲಕ್ಕೀಡಾಗುವ ಸಂಭವವಿದೆ ಮತ್ತು ದೇಶದ ಕಾನೂನನ್ನೇ ತಿದ್ದಬೇಕಾದ ಪ್ರಸಂಗ ಬಂದರೂ ಬರಬಹುದು!!

-ಶ್ರೀನಿವಾಸ ಕಾರ್ಕಳ, ಮಂಗಳೂರು

ಮಂಡ್ಯ ಜಿ.ಪಂ.ನಲ್ಲಿ ಸಿಇಒ- ಸದಸ್ಯರ ಬಹಿರಂಗ ಗುದ್ದಾ



ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ಜನಪ್ರತಿನಿಧಿಗಳೇ ವಿಲನ್‌ಗಳಾಗುತ್ತಿದ್ದಾರೆ. ಅಧಿಕಾರ ಸಿಕ್ಕ ಮರುಘಳಿಗೆಯಿಂದ ಬೊಕ್ಕಸವನ್ನು ಬಿಡುವಿಲ್ಲದಂತೆ ಮೆಯ್ದು ಡರ್... ಬುರ್... ಅಂತ ತೇಗುವುದಷ್ಟೇ ನಮ್ಮ ಆಜನ್ಮಸಿದ್ಧ ಹಕ್ಕೆಂದು ಭಾವಿಸಿರುವ ಜಿ.ಪಂ. ಮೆಂಬರ್‌ಗಳು ಇದೀಗ ಜನೋಪಕಾರಿ ಸಿಇಒ ವಿರುದ್ಧವೇ ತಿರುಗಿಬಿದ್ದು ತಾವೆಂತಹ ಖೂಳು ಬಾಕರು ಎಂಬುದನ್ನು ಸಾಬೀತುಪಡಿಸಿದ್ದಾರೆ.

40 ಮಂದಿ ಸದಸ್ಯರಿರುವ ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ಜೆಡಿಎಸ್ ಪಕ್ಷ ಅಧಿಕಾರ ಹಿಡಿದಿದೆ. ಸ್ವಾರ್ಥ, ಸ್ವಜನಪಕ್ಷಪಾತ, ಹಣ, ಅಧಿಕಾರಕ್ಕಾಗಿ ಗುದ್ದಾಟಕ್ಕೇನು ಇಲ್ಲಿ ಕಮ್ಮಿ ಇಲ್ಲ. ಈ ಕಾರಣದಿಂದಲೇ 30 ತಿಂಗಳ ಅಧ್ಯಕ್ಷರ ಅಧಿಕಾರವನ್ನು ತನ್ನಪ್ಪನ ಖಾಸಗಿ ಜಹಗೀರಂತೆ 5-6 ಜನಕ್ಕೆ ಕಡ್ಲೆಪುರಿಯಂತೆ ಜೆಡಿಎಸ್ ನಾಯಕರು ಹಂಚಿ ಬೀಗುತ್ತಿದ್ದಾರೆ. ಎಂಥಾ ನಿಪುಣನೇ ಆದರೂ ಆಡಳಿತದ ಆಳ ಅಗಲ ಅರ್ಥಮಾಡಿಕೊಳ್ಳಲು ಕನಿಷ್ಠ ಮೂರ್ನಾಲ್ಕು ತಿಂಗಳಾದರು ಬೇಕು. ಅಂತದ್ದರಲ್ಲಿ ಒಬ್ಬೊಬ್ಬನಿಗೆ ಐದು ತಿಂಗಳು ಅಧಿಕಾರ ಕೊಟ್ಟರೆ ಅವನಿನ್ನೆಂಥಾ ಅಭಿವೃದ್ಧಿಗೆ ಗುದ್ದಲಿ ಹಾಕಬಲ್ಲ. ಏನಿದ್ದರೂ ತಿಜೋರಿಗೆ ಕನ್ನ ಹಾಕಬಲ್ಲನಷ್ಟೆ. ಈಗಾಗುತ್ತಿರುವುದೂ ಅದೇ. ಐದು ತಿಂಗಳ ಅವಧಿಗೆ ಜಿ.ಪಂ ಗಾದಿಗೆ ವಕ್ಕರಿಸುವ ಅಧ್ಯಕ್ಷ ಕೆಳಗಿಳಿಯುವ ವೇಳೆಗಾಗಲೆ ಭರ್ಜರಿ ಬಂಗಲೆ, ಐಷಾರಾಮಿ ಕಾರು, ಹತ್ತಾರು ಸೈಟುಗಳಿಗೆ ಒಡೆಯನಾಗಿರುತ್ತಾನೆ. ಜನರ ಸಂಕಷ್ಟ ಇವರ್‍ಯಾರಿಗೂ ಬೇಕಾಗಿಲ್ಲ.

ಅವರು ರೋಹಿಣಿ ಸಿಂಧೂರಿ

ಅಂತಹ ಮಂದರ ಜಿ.ಪಂ. ಒಡ್ಡೋಲಗಕ್ಕೆ ಸಿಇಒ ಆಗಿಬಂದವರೇ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ. ಈ ಮುಂಚೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಸ್ವಯಂ ಉದ್ಯೋಗ ಕಾರ್ಯಕ್ರಮದ ನಿರ್ದೇಶಕಿಯಾಗಿದ್ದ ರೋಹಿಣಿ ಉತ್ಸಾಹಿ ಯುವತಿ. ಸರ್ಕಾರದ ಸೌಲತ್ತುಗಳು ಜನರಿಗೆ ದಕ್ಕಬೇಕೆಂಬ ಕಾಳಜಿ ಉಳ್ಳವರು. ಮಂಡ್ಯ ಜಿ.ಪಂಗೆ ಕಾಲಿಡುತ್ತಿದ್ದಂತೆಯೇ ಸೂಕ್ಷ್ಮ ಸಂವೇದನೆಯ ಆಕೆಗೆ ಜನಪ್ರತಿನಿಧಿಗಳ 'ಏತ ನೀರಾವರಿ'ಯ ಕಸರತ್ತು ಚೆನ್ನಾಗಿ ಅರ್ಥವಾಗಿಹೋಗಿತ್ತು. ಇಂಥವರನ್ನು ಇಟ್ಟುಕೊಂಡು ಜನರಿಗೆ ಸೇವೆ ದಕ್ಕಿಸಿಕೊಟ್ಟ ಹಾಗೆಯೇ ಎಂಬ ತೀರ್ಮಾನಕ್ಕೆ ಬಂದವರೇ ಚುನಾಯಿತ ಸದಸ್ಯರನ್ನು ಪಕ್ಕಕ್ಕಿಟ್ಟು ನೇರವಾಗಿ ತಾವೇ ಕಾರ್ಯಾಚರಣೆಗೆ ಇಳಿದಿದ್ದರು. ಬರುತ್ತಿದ್ದಂತೆಯೇ ನಿರ್ಮಲ ಭಾರತ್ ಅಭಿಯಾನದಡಿ ಶೌಚಾಲಯಗಳನ್ನು ಕಟ್ಟಲು ಮುಂದಾದರು.

ರೋಹಿಣಿ ತಮ್ಮನ್ನು ಸೈಡ್‌ಲೈನ್ ಮಾಡಿ ಜನರಿಗೆ ಸೌಲತ್ತುಗಳ ರುಚಿ ತೋರಿಸಿದ್ದು 'ಸನ್ಮಾನ್ಯ' ಅಷ್ಟೂ ಜಿ.ಪಂ. ಸದಸ್ಯರ ತಳ ಉರಿಸಿತ್ತು. ಕೂಡಲೇ, ಸಿಇಒ ಸಿಂಧೂರಿ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ಬೊಬ್ಬೆ ಹಾಕಲಾರಂಭಿಸಿದರು. ಅವರ ಬೊಬ್ಬೆಗಳಿಗೆ ಕ್ಯಾರೇ ಎನ್ನದ ರೋಹಿಣಿ ಸಿಂಧೂರಿ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡು ಹೋಗಲಾರಂಭಿಸಿದರು.

ಅಧಿಕಾರಕ್ಕಾಗಿ ಆ ಪಕ್ಷ, ಈ ಪಕ್ಷ ಅಂತ ಅಂಗಿ ಹರಿದುಕೊಳ್ಳೋ ಸದಸ್ಯರು ರೋಹಿಣಿ ವಿಚಾರದಲ್ಲಿ ಪಕ್ಷಾತೀತ ಒಮ್ಮತಕ್ಕೆ ಬಂದು ಯುದ್ಧ ಸಾರಿಯೇ ಬಿಟ್ಟರು. ಪರಿಣಾಮ ಎರಡು ಬಾರಿ ನಿಗದಿಯಾಗಿದ್ದ ಜಿ.ಪಂ.ಸಾಮಾನ್ಯ ಸಭೆ ನಡೆಯಲೇ ಇಲ್ಲ, ಮೂರನೇ ಬಾರಿ ನಡೆದ ಸಾಮಾನ್ಯ ಸಭೆಯಲ್ಲೂ ಸದಸ್ಯರು ಸಿಇಒ ವಿರುದ್ಧ ಸಾಕಷ್ಟು ಗದ್ದಲ ಎಬ್ಬಿಸಿದರು. ಆಡಳಿತ ಪಕ್ಷದ ಸದಸ್ಯರು ಒಳಗೊಳಗೆ ನೀಡಿದ ಕುಮ್ಮಕ್ಕಿನ ಲಾಭ ಪಡೆದ ಜಿ.ಪಂ. ಪ್ರತಿಪಕ್ಷ ನಾಯಕ ಮಾಜಿ ಸಂಸದ ಜಿ.ಮಾದೇಗೌಡರ ಶಿಷ್ಯ ಬಿ.ಬಸವರಾಜು ಸಿಇಒ ಸಿಂಧೂರಿ ವಿರುದ್ಧ ರಣಕಹಳೆ ಮೊಳಗಿಸಿ ಇಂಥ ಸಿಇಒ ಬೇಡ ಎಂದು ಚಕ್ಕಮಕ್ಕಳ 'ಜನೋಪಕಾರಿ ಧರಣಿ' ಕೂತು ಬಿಟ್ಟದ್ದ.

ಸಿಂಧೂರಿ ವಿರುದ್ಧ ಸಿಟ್ಟು

ರೋಹಿಣಿ ಸಿಂಧೂರಿ ದಕ್ಷ, ಪ್ರಾಮಾಣಿಕ ಅಧಿಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಐಎಎಸ್ ಅಧಿಕಾರಿಗಳಿಗಿರುವಂತೆ ಸ್ವಲ್ಪಮಟ್ಟಿಗೆ ಅಹಂ ಕೂಡ ಇದೆ. ಜಿ.ಪಂ. ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಬೇಕಾದರೆ ಅಧಿಕಾರಿವರ್ಗ ಹಾಗೂ ಜನಪ್ರತಿನಿಧಿಗಳ ನಡುವೆ ಹೊಂದಾಣಿಕೆ ಇರಬೇಕು. ಆದರೆ ಮಂಡ್ಯ ಜಿ.ಪಂ.ನಲ್ಲಿ ಅಧಿಕಾರಿಗಳು ಹಾಗೂ ಸದಸ್ಯರ ನಡುವೆ ಹೊಂದಾಣಿಕೆಯ ಕೊರತೆ ಎದ್ದುಕಾಣುತ್ತಿದೆ. ತಮ್ಮ ಕೆಲವೊಂದು ಅತಿರೇಕದ ವರ್ತನೆಗಳನ್ನು ನೋಡಿಯೂ ನೋಡದಂತಿರಬೇಕು ಎನ್ನುವುದು ಸದಸ್ಯರ ಅಪೇಕ್ಷೆಯಾದರೆ, ಆಗಬರುವುದಕ್ಕೆ ಸಕಾಲದಲ್ಲೇ ಮರ್ಯಾದೆ ಮಾಡುವುದು ರೋಹಿಣಿ ಮೇಡಮ್‌ರ ಜಾಯಮಾನ. ಒಟ್ಟಿನಲ್ಲಿ 'ಎತ್ತು ಏರಿಗೆ ಕೋಣ ನೀರಿಗೆ' ಎನ್ನುವಂತೆ ಅಧಿಕಾರಿ-ಸದಸ್ಯರ ಬಹಿರಂಗ ಗುದ್ದಾಟದಲ್ಲಿ ಅಭಿವೃದ್ಧಿ ಕಾರ್ಯಗಳು ಮರೀಚಿಕೆಯಾಗಿವೆ.

ರೋಹಿಣಿ ಸಿಂಧೂರಿ ಬರುವುದಕ್ಕೆ ಹಿಂದೆ ಸಿಇಒ ಆಗಿದ್ದ ಜಯಣ್ಣ ಎಲ್ಲರಿಗೂ 'ಬೇಕಾದ' ವ್ಯಕ್ತಿಯಾಗಿದ್ದ. ಸದಸ್ಯರ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತಾ ಸರ್ವರಿಗೂ ಬೆಲ್ಲದ ಅಚ್ಚಾಗಿದ್ದ. ಆದರೆ ರೋಹಿಣಿಯವರದ್ದು 'ಆ' ಥರದ ವೈಖರಿ ಅಲ್ಲ. ಕಾನೂನು ಮುಂದಿಟ್ಟುಕೊಂಡು ಕೆಲಸ ಮಾಡುವ ಅಧಿಕಾರಿಣಿ. ಪಾಪ, ನಮ್ಮ ಜನಪ್ರತಿನಿಧಿಗಳ ಪಿತ್ಥ ನೆತ್ತಿಗೇರಿರುವುದೇ ಈ ಕಾರಣಕ್ಕೆ. ಅದರಲ್ಲೂ ಪ್ರತಿಪಕ್ಷ ನಾಯಕ ಕಾಂಗ್ರೆಸ್‌ನ ಬಿ.ಬಸವರಾಜು, ರೋಹಿಣಿ ಸಿಂಧೂರಿ ವರ್ಗಾವಣೆ ಆಗಲೇಬೇಕೆಂದು ಠರಾವು ಹೊರಡಿಸಿದ್ದಾರೆ. ಅಧಿಕಾರದಲ್ಲಿರೋ ಕಾಂಗ್ರೆಸ್ ಸರ್ಕಾರದ ಲಾಭ ಪಡೆದು ಸಿಇಒ ವರ್ಗಾವಣೆಗೂ ಬಸವರಾಜಣ್ಣ ಬಲು ಆಸ್ಥೆ ವಹಿಸಿದ್ದಾರೆ.

ಅಸಲಿಗೆ ಬಸಣ್ಣನಿಗೆ ರೋಹಿಣಿ ಮೇಲೇಕೆ ಅಷ್ಟು ಸಿಟ್ಟು ಎಂದು ಕೆದಕುತ್ತಾ ಹೋದರೆ ರೋಚಕ ಸತ್ಯವೊಂದು ಅನಾವರಣವಾಗುತ್ತೆ. ಮದ್ದೂರು ತಾಲ್ಲೂಕಿನ ಕಾಡುಕೊತ್ತನಹಳ್ಳಿ ಗ್ರಾಮದ ಶ್ರೀ ವೀರಭದ್ರೇಶ್ವರ ಸಮುದಾಯ ಭವನಕ್ಕೆ ನೀಡಲಾಗಿದ್ದ 14.75 ಲಕ್ಷ ರೂ. ಅನುದಾನವನ್ನು ರೋಹಿಣಿ ಮೇಡಮ್ ತಡೆಹಿಡಿದಿದ್ದೇ ಅದರ ಮೂಲ. ಅಂದಹಾಗೆ ಈ ಅನುದಾನಕ್ಕೆ ಪ್ರಸ್ತಾಪ ಸಲ್ಲಿಸಿದ್ದೇ ಬಸವರಾಜಣ್ಣ. 2013-14ನೇ ಸಾಲಿನ 13ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯಲ್ಲಿ 14.75 ಲಕ್ಷ ಅನುದಾನವನ್ನು ವೀರಭದ್ರೇಶ್ವರ ಸಮುದಾಯ ಭವನಕ್ಕೆ ನೀಡಬೇಕೆಂದು ಕಾಂಗ್ರೆಸ್‌ನ ಬಿ.ಬಸವರಾಜು ಪ್ರಸ್ತಾವ ಇಟ್ಟಿದ್ದಾಗ ಜಿ.ಪಂ. ಅಧ್ಯಕ್ಷರಾದಿಯಾಗಿ ಎಲ್ಲಾ ಸದಸ್ಯರು ಒಮ್ಮತದಿಂದ ಒಪ್ಪಿಗೆ ನೀಡಿದ್ದರು.

ಆದರೆ ವೀರಭದ್ರ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ಖಾಸಗಿ ಸಂಸ್ಥೆ ಆಗಿರುವುದರಿಂದ ಸಮುದಾಯ ಭವನ ನಿರ್ಮಾಣಕ್ಕೆ 14.75 ಲಕ್ಷ ರೂ. ಅನುದಾನ ಕೊಡಲು ಕಾನೂನಿನಲ್ಲಿ ಅವಕಾಶವಿಲ್ಲ, ಈ ಹಿನ್ನೆಲೆಯಲ್ಲಿ ಅನುದಾನ ನೀಡಬೇಕೇ, ಬೇಡವೇ ಎಂದು ಸಿಇಒ ರೋಹಿಣಿ ಸರ್ಕಾರಕ್ಕೆ ಪತ್ರ ಬರೆದು ಅನುದಾನಕ್ಕೆ ತಾತ್ಕಾಲಿಕ ತಡೆ ಹೇರಿದ್ದರು. ಕೈಗೆ ಬಂದ 14.75 ಲಕ್ಷ ಅನುದಾನ ಬಾಯಿಗೆ ಬರಲಿಲ್ಲವಲಿಲ್ಲ ಎಂಬ ಕೋಪದಲ್ಲಿ ಪ್ರತಿಪಕ್ಷ ನಾಯಕ ಬಸವರಾಜು 'ರೋಹಿಣಿ ಹಠಾವೊ' ಅಭಿಯಾನ ಉದ್ಘಾಟಿಸಿದ್ದಾರೆ!

ಈ ಮಧ್ಯೆ ಜಿ.ಪಂ. ಅಧ್ಯಕ್ಷೆ ಮಂಜುಳಾ ಪರಮೇಶ್ ಅಧ್ಯಕ್ಷರ ಗೃಹ ಕಚೇರಿ ಪೀಠೋಪಕರಣಕ್ಕೆಂದು 3 ಲಕ್ಷ ರೂ. ಬಿಡುಗಡೆ ಮಾಡುವಂತೆ ಪತ್ರ ಬರೆದಿದ್ದರು. ಆದರೆ ರೋಹಿಣಿ ಸಿಂಧೂರಿಯವರು ಐದಾರು ತಿಂಗಳಿಗೆ ಅಧ್ಯಕ್ಷರಾದವರಿಗೆಲ್ಲ ಮನೆ ಪೀಠೋಪಕರಣಕ್ಕೆ 3 ಲಕ್ಷ ಕೊಡಲು ಸಾಧ್ಯವಿಲ್ಲವೆಂದು ಖಡಕ್ಕಾಗೇ ಹೇಳಿಬಿಟ್ಟಿದ್ದರು. 'ಜಿ.ಪಂ. ಅಧ್ಯಕ್ಷರಾದವರು ಗೃಹಕಚೇರಿಗೆ ಪೀಠೋಪಕರಣಗಳನ್ನು ಕೊಳ್ಳಲು ಜಿ.ಪಂ.ನಲ್ಲಿ ಅವಕಾಶವಿದೆ. ಇದನ್ನು ಹಿಂದಿನ ಹಲವು ಅಧ್ಯಕ್ಷರು ಬಳಸಿಕೊಂಡಿದ್ದಾರೆ. ಆದರೆ ಹೀಗೆ ಐದು ತಿಂಗಳಿಗೊಬ್ಬ ಹೊಸ ಅಧ್ಯಕ್ಷರ ಸಿಂಗಾರಕ್ಕೆ 3 ಲಕ್ಷ ಖರ್ಚು ಮಾಡುವಷ್ಟು ಬೊಕ್ಕಸ ಗಟ್ಟಿಯಾಗಿಲ್ಲ' ಎನ್ನುವುದು ರೋಹಿಣಿ ಮೇಡಮ್‌ರ ವಾದ. ಇದೆಲ್ಲಾ ಜೆಡಿಎಸ್‌ನ 'ಪಂಚ ಮಾಸಿಕ' ಯೋಜನೆಯಡಿ ಅಧ್ಯಕ್ಷೆಯಾದ ಮಂಜುಳಾ ಪರಮೇಶ್‌ಗೆ ಹೇಗೆ ಅರ್ಥವಾಗಬೇಕು. ಆಕೆ ಕೂಡಾ ಬಿ.ಬಸವರಾಜ್ ಜೊತೆ ಸಮಾನ ಮನಸ್ಕ ವೇದಿಕೆ ಸೇರಿಕೊಂಡು ಅಭಿಯಾನಕ್ಕೆ ಕೈಜೋಡಿಸಿದ್ದಾರೆ.

ರೋಹಿಣಿ ಹಠಾವೋ

ಸಿಇಒ ರೋಹಿಣಿ ವಿರುದ್ಧ ರೋಷಗೊಂಡಿದ್ದ ಬಸವರಾಜಣ್ಣ ಜೆಡಿಎಸ್‌ನ ಕೆಲ ಸದಸ್ಯರ ಕುಮ್ಮಕ್ಕಿನೊಂದಿಗೆ ಡಿ.5 ರಂದು ನಡೆದ ಸಾಮಾನ್ಯ ಸಭೆಯನ್ನು ಗುರಾಣಿಯನ್ನಾಗಿ ಬಳಸಿಕೊಂಡರು. ಸಭೆ ಆರಂಭವಾಗುತ್ತಿದ್ದಂತೆ ಎದ್ದು ನಿಂತ ಬಸವರಾಜ್ 'ಸಿಇಒ ರೋಹಿಣಿ ಸಿಂಧೂರಿ ಬಂದ 6 ತಿಂಗಳಾದರೂ ಸರಿಯಾಗಿ ಕಾಮಗಾರಿ ನಡೆದಿಲ್ಲ; ಕುಡಿಯುವ ನೀರಿಗೆ 103 ಕೋಟಿ ಮಂಜೂರಾಗಿದ್ದರೂ ಇನ್ನು 65 ಕೋಟಿ ಬಾಕಿ ಉಳಿದಿದೆ, ಇದನ್ನು ತಂದಿಲ್ಲ; ರಾಜ್ಯದ 29 ಜಿ.ಪಂ.ಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡಿದ್ದು ಮಂಡ್ಯ ಜಿ.ಪಂ.ಗೆ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ, ಇದಕ್ಕೆ ಸಿಇಒ ರೋಹಿಣಿ ಸಿಂಧೂರಿ ನೇರ ಹೊಣೆ; 13ನೇ ಹಣಕಾಸು ಯೋಜನೆಯಡಿ ಬಂದಿರುವ ಹಣಕ್ಕೆ ಕ್ರಿಯಾಯೋಜನೆ ರೂಪಿಸಿಲ್ಲ; ನಿರ್ಮಿತಿ ಕೇಂದ್ರದಿಂದ ನಡೆದಿರುವ ಕಾಮಗಾರಿಗಳನ್ನು ಡಿಸಿ ಅಜಯ್ ನಾಗಭೂಷಣ್ ಪರಿಶೀಲಿಸಿದರೂ ಸಿಇಒ ರೋಹಿಣಿ ಪರಿಶೀಲಿಸಿಲ್ಲ; ಉದ್ಯೋಗ ಖಾತ್ರಿ ಯೋಜನೆ ಹಾಗೂ ಶೌಚಾಲಯ ನಿರ್ಮಾಣ ವಿಚಾರದಲ್ಲಿ ಕೊಟ್ಟಿರುವ ಅಂಶಗಳು ಸತ್ಯವೋ ಸುಳ್ಳೋ ಗೊತ್ತಾಗುತ್ತಿಲ್ಲ; ಶೌಚಾಲಯ ಕಾಮಗಾರಿಗೆ ಎಷ್ಟು ಹಣ ನೀಡಿದ್ದಾರೋ ಸ್ಪಷ್ಟವಾಗಿಲ್ಲ' ಎಂಬಿತ್ಯಾದಿ ಆರೋಪಗಳ ಸುರಿಮಳೆಗೈದ.

ವೀರಭದ್ರ ಟ್ರಸ್ಟ್‌ನ 14.75 ಲಕ್ಷ ಕೈ ತಪ್ಪಿದ ಸಿಟ್ಟಿನಿಂದ ಪಕ್ಕಾ ವೀರಭದ್ರನೇ ಆಗಿಬಿಟ್ಟಿದ್ದ ಬಸಣ್ಣನ ಕೋಪ ಅಷ್ಟಕ್ಕೇ ಮುಗಿಯುವಂತಿರಲಿಲ್ಲ. 'ಸಭೆ ನಡೆಸುವ ಮುನ್ನ ಅಧ್ಯಕ್ಷ-ಉಪಾಧ್ಯಕ್ಷರ ಜೊತೆ ವಿಷಯಗಳ ಬಗ್ಗೆ ಸಿಇಒ ಚರ್ಚಿಸದೆ ಉದ್ಧಟತನ ತೋರಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಂಡಿಲ್ಲ, ಕನ್ನಡ ರಾಜ್ಯೋತ್ಸವ, ಕನಕಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ. ಮಳವಳ್ಳಿ ಜಲಪಾತೋತ್ಸವಕ್ಕೆ ಗೈರುಹಾಜರಾಗಿದ್ದಾರೆ. ಇವೆಲ್ಲಾ ಮದುವೆ ಮುಂಜಿ ಕಾರ್ಯಕ್ರಮವಲ್ಲ, ನೀವು ಸರ್ವಾಧಿಕಾರಿ ಧೋರಣೆ ತೋರುತ್ತಿದ್ದೀರಿ' ಎಂದೆಲ್ಲಾ ಸಿಇಒ ವಿರುದ್ಧ ಬುಸುಗುಟ್ಟಿದ್ದ. ಅಲ್ಲದೇ, 'ನಿಮ್ಮ ಅವಶ್ಯಕತೆ ನಮಗಿಲ್ಲ, ಇಲ್ಲಿಂದ ವರ್ಗಾವಣೆಯಾಗಿ ಹೋಗಿ' ಎಂಬ ಹಿಟ್ಲರ್ ಸ್ಟೈಲಿನ ಫರ್ಮಾನನ್ನೂ ಹೊರಡಿಸಿದ್ದ.

ಬಸವರಾಜಣ್ಣನ ಆರೋಪಗಳಿಗೆ ಸಮಜಾಯಿಷಿ ನೀಡಲು ರೋಹಿಣಿ ಯತ್ನಿಸಿದರಾದರು ಕೇಳಿಸಿಕೊಳ್ಳುವ ತಾಳ್ಮೆ ಬಸವರಾಜ್‌ಗಾಗಲಿ, ಆತನ ಎಡಬಲಗಳಿಗಾಗಲಿ ಇರಲಿಲ್ಲ. ಅದೇ ವೇಳೆಗೆ ರೋಹಿಣಿ ಮೇಡಮ್ ಕೂಡಾ ಕೊಂಚ ತಾಳ್ಮೆಗೆಟ್ಟಿದ್ದರು. ಬಸವರಾಜ್‌ನ ರೋಷದ ಮೂಲ 14.75 ಲಕ್ಷ ಅನುದಾನ ಎನ್ನುವುದು ಅವರಿಗೂ ಚೆನ್ನಾಗಿಯೇ ತಿಳಿದಿತ್ತಾದ್ದರಿಂದ 'ನಾನು ಹೋಗಿ ಹಣ ತರಬೇಕಾಗಿಲ್ಲ, ಕಾಡುಕೊತ್ತನಹಳ್ಳಿ ವೀರಭದ್ರೇಶ್ವರ ಸಮುದಾಯ ಭವನಕ್ಕೆ 14.75ಲಕ್ಷ ರೂ. ಬಗ್ಗೆ ಸರ್ಕಾರಕ್ಕೆ ಪತ್ರ ಬರೆದ ವಿಚಾರವನ್ನು ಮುಂದಿಟ್ಟುಕೊಂಡು ಮಾತನಾಡುವುದು ಸರಿಯಲ್ಲ' ಎಂದು ನೇರವಾಗಿಯೇ ಜಾಡಿಸಿಬಿಟ್ಟರು. ಇಂತಹದ್ದೊಂದು ಮರ್ಮಾಘಾತ ತಗುಲಿಸಿಕೊಂಡ ಬಸವರಾಜ್ 'ಜನಪ್ರತಿನಿಧಿಗಳ ಬಳಿ ದುರಹಂಕಾರದಲ್ಲಿ ಮಾತನಾಡುತ್ತಿದ್ದೀರಾ. ಇದೆಲ್ಲಾ ನಡೆಯೋಲ್ಲ, ನಾನು 3 ಬಾರಿ ಸದಸ್ಯನಾಗಿದ್ದೀನಿ. ನಿಮ್ಮ ಸರ್ವಾಧಿಕಾರಿ ಧೋರಣೆಗೆ ಧಿಕ್ಕಾರ' ಎಂದೆಲ್ಲಾ ಒ ಆಸನದಿಂದ ಎದ್ದು ನೆಲದ ಮೇಲೆ ಕೂತು ಮೇಡಮ್‌ಗೆ ಧಿಕ್ಕಾರ ಕೂಗಲು ಶುರು ಮಾಡಿದ




ಕಾಡುಕೊತ್ತನಹಳ್ಳಿ ಘಟನೆ ಹೊರಗೆ ಬಂದ ಬಣ್ಣ ಬಯಲಾಗುವ ಉದ್ದೇಶದಿಂದ 'ನೀವು ಬೇಡ, ವರ್ಗಾವಣೆಯಾಗಿ ಹೋಗಿ, ನನ್ನ ಮಾತ ರೆಕಾರ್ಡ್ ಮಾಡಿ ಸರ್ಕಾರಕ್ಕೆ ಕಳುಹಿಸಿ' ಎಂದೆಲ್ಲಾ ಅ ಬಸಣ್ಣನಿಗೆ ಕಾಂಗ್ರೆಸ್ ಸದಸ್ಯರು ಸಾಥ್ ನೀ ಮೇಲ್ನೋಟಕ್ಕೆ ಪ್ರತಿಪಕ್ಷ ನಾಯಕ ಬಸವರಾ ಸಂತೈಸುವಂತೆ ಹೇಳಿಕೆಯ ಬಾಣ ಬಿಟ್ಟ ಅ ಜೆಡಿಎಸ್‌ನ ನಾಯಕರು ಒಳಗಿಂದೊಳಗೇ ಜೋರಾಗಲೆಂದೇ ಹಂಬಲಿಸುತ್ತಿದ್ದರು. ಸ್ವತಃ ಮಂಜುಳಾ ಪರಮೇಶ್ ಸಮಾಧಾನಪ ಮುಂದಾಗುತ್ತಿದ್ದಂತೆ 'ನಿಮ್ಮ ಮಾತಿಗೇ ಸಿಇಒ ಮ ಕೊಡೋಲ್ಲ, ನೀವು ಕರೆದಾಗ ಬರೋದಿಲ್ಲ, ಅ ಕುಂತು ಸಭೆ ನಡೆಸುತ್ತಿರುವ ನಿಮಗೆ ಮರ್ಯಾದೆ ಜಾಗಬಿಟ್ಟು ಬನ್ನಿ' ಎಂದು ಬಸವರಾಜ್ ಸವಾಲು

ಆಗ, 'ನಾನು ಕರೆದಾಗ ಸಿಇಒ ಬಂದಿದ್ದಾರೆ' ಅಧ್ಯಕ್ಷೆ ಮಂಜುಳಾ ಹೇಳಿಬಿಟ್ಟರು. ಮತ್ತಷ್ಟೂ ಬಸಣ್ಣ 'ಅಧ್ಯಕ್ಷರೇ ನೀವೇ ಸಿಇಒ ಬಗ್ಗೆ ಸಾಕಷ್ಟು ಹೇಳಿದ್ದೀರಿ. ಅದನ್ನೆಲ್ಲಾ ಇಲ್ಲಿ ಹೇಳುತ್ತಿಲ್ಲ ಅಷ್ಟೆ' ಅಲ್ಲಿಗೇ ರೋಹಿಣಿ ವಿರುದ್ಧದ ಇಡೀ ಕಾರ್ಯಾ ಸರ್ವಸದಸ್ಯರ ಪೂರ್ವನಿಯೋಜಿತ ಎನ್ನುವುದು ಸ ಸಾಬೀತಾಗಿಹೋಗಿತ್ತು.

ಇತ್ತ ಬಸಣ್ಣನ 'ವೀರಭದ್ರ' ಅವತಾರ ತಾ ಸಹಿತ ರಂಗೇರುತ್ತಿರುವಂತೆಯೇ ಅತ್ತ ಮತ್ತೊಬ್ಬ ಸದಸ್ಯೆ ಚಂದ್ರಕಲಾ ನಂಜುಂಡಚಾರ್ 'ಬೇವಿನಹಳ್ಳಿ ಪಂಚಾಯತಿಯಲ್ಲಿ ನಿರ್ಮಿಸಿರುವ ರಾಜೀವ್ ಗಾಂಧಿ ಕೇಂದ್ರದ ಕಟ್ಟಡ ಉದ್ಘಾಟನಾ ಕಾರ್ಯಕ್ರಮಕ್ಕೆ ರಮೇಶ್‌ಬಾಬು ಬಂಡಿಸಿದ್ದೇಗೌಡರನ್ನು ಆಹ್ವಾ ಇಲ್ಲ, ಕೂಡಲೇ ಪಂಚಾಯತಿ ಅಭಿವೃದ್ಧಿ ಅಧಿಕಾ ಅವಮಾನತು ಮಾಡಿ' ಅಂತ ತಮ್ಮ ಶುರುವಿಟ್ಟುಕೊಂಡಿದ್ದರು. ಈ ವಿಚಾರವಾಗಿ ಹಿ ಸಿಇಒ ರೋಹಿಣಿ, ಸದರಿ ಪಿಡಿಒಗೆ ನೋಟಿಸ್ ನಿ ಆದರೆ ಚಂದ್ರಕಲಾ ಮೇಡಮ್‌ರ ಆಕ್ಷೇಪಣೆಯೆ ಇತ್ತು, ಆ ಪಿಡಿಒರನ್ನು ತಾವು ಹೇಳಿದ ಜಾಗಕ್ಕೆ ವ ಮಾಡಬೇಕಿತ್ತಂತೆ. ಉದ್ಧಟತನದ ಈ ಕೇಳಿಸಿಕೊಂಡಿದ್ದ ತಡ 'ನನ್ನ ಸಿಬ್ಬಂದಿಯನ್ನು ನಾನು ಬೇಕಾದರೂ ನಿಯೋಜಿಸುತ್ತೇನೆ, ನೀವು ಇದರಲ್ಲಿ ಮಾಡುವುದು ಸರಿಯಲ್ಲ' ಎಂದು ರೋಹಿಣಿ ರ

ಶೌಚಾಲಯ ನಿರ್ಮಾಣದಲ್ಲಿ ಮಂಡ್ಯ

ತಮಗೆ 'ಅಡ್ಜಸ್ಟ್' ಆಗುತ್ತಿಲ್ಲ ಎನ್ನುವ ಒಂದೇ ಕಾರಣವನ್ನಿಟ್ಟುಕೊಂಡು ಯಾವ ಅಧಿಕಾರಿ ಮೇಲೆ ಸದಸ್ಯರೆಲ್ಲಾ ಆರೋಪದ ಸುರಿಮಳೆ ಗೈಯುತ್ತಿದ್ದಾರೆ ಅಧಿಕಾರಿಣಿಯಿಂದಾಗಿ ಮಂಡ್ಯ ಜಿಲ್ಲಾ ಪಂಚಾಯ ರಾಜ್ಯದಲ್ಲೇ ಹೆಮ್ಮೆಯಿಂದ ಬೀಗುವಂತಾಗಿದೆ. ಭಾರತ ಅಭಿಯಾನ ಯೋಜನೆಯಡಿ ರಾಜ್ಯ ನೀಡಿದ್ದ ಗುರಿಯನ್ನು ಸಾಧಿಸಿ ನಂಬರ್ ಸ್ಥಾನದಲ್ಲಿರೋದು ಮಂಡ್ಯ ಜಿಲ್ಲೆ! ಇದಕ್ಕೆ ಕಾರಣ ಅದೇ ರೋಹಿಣಿ ಸಿಂಧೂರ. ತಾನು ಸಿಇಒ ದಿನದಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ಶೌ ನಿರ್ಮಿಸುವ ವಿವಿಧ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡರು. ಆಟೋ, ಕರಪತ್ರಗಳ ಅಂಗನವಾಡಿ ಆಶಾಕಾರ್ಯಕರ್ತೆಯರು, ಬಳಸಿಕೊಂಡು ಶೌಚಾಲಯದ ಬಗ್ಗೆ ಜನರಲ್ಲಿ



ಕಾಂಗ್ರೆಸ್ ಸದಸ್ಯರೊಂದಿಗೆ ಬಸವರಾಜು ಧರಣಿ

ಾಡಿಸಿದರು. ಜಿಲ್ಲೆಯ ವಿವಿಧ ಗ್ರಾಮಗಳಿಗೆ ತೆರಳಿ ಗಾರಿ ವೀಕ್ಷಿಸಿದ ನಂತರ ಹತ್ತಿರದಲ್ಲೇ ಇರುವ ಶಾಲೆ, ಾಲಯಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಶೌಚಾಲಯದ ಮೂಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ರೀಶ್‌ರವರ ಧ್ವನಿಯನ್ನು ರೆಕಾರ್ಡ್ ಮಾಡಿಸಿ ೖಲ್‌ನಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಿಸಿದ್ದಲ್ಲದೆ, ಮತ್ತು ಸಂಪರ್ಕ ಇಲಾಖೆಯ ಬೀದಿ ನಾಟಕದ ಲಕ ಶೌಚಾಲಯದ ಬಗ್ಗೆ ಜಾಗೃತಿ ಮೂಡಿಸಿದ್ದರು. ದ್ದರ ಪರಿಣಾಮವಾಗಿಯೇ ಮಂಡ್ಯ ಜಿಲ್ಲೆ ನಂಬರ್ ಕೀರ್ತಿಗೆ ಪಾತ್ರವಾಗಿದೆ. ಸರ್ಕಾರ ಜಿಲ್ಲೆಗೆ 31425 ಲಯ ನಿರ್ಮಾಣಕ್ಕೆ ಗುರಿ ನೀಡಿತ್ತು, ಆದರೆ ರೋಹಿಣಿ ರಿ ಅಕ್ಟೋಬರ್ ಅಂತ್ಯಕ್ಕೆ 34,933 ಶೌಚಾಲಯ ರ್ಣಗೊಳಿಸಿ, ಇನ್ನು 40 ಸಾವಿರ ಶೌಚಾಲಯ ಣಕ್ಕೆ ಚಾಲನೆ ನೀಡಿದ್ದಾರೆ. ಒಟ್ಟಾರೆ 1 ಲಕ್ಷ ಲಯ ನಿರ್ಮಿಸಬೇಕೆನ್ನುವುದು ರೋಹಿಣಿ ರಿಯವರ ಗುರಿ. ಇದನ್ನೇ ನೆಪ ಮಾಡಿಕೊಂಡ ು 'ಕೇವಲ ಕಕ್ಕಸ್ ಕಟ್ಟೋದ್ ಬಿಟ್ಟು ಬೇರಾವ ್ಮಿ ಈಯಮ್ಮ ಗಮನ ಹರಿಸುತ್ತಿಲ್ಲ' ಎಂಬ ಅಸ್ತ್ರ ು ಯುದ್ಧಕ್ಕಿಳಿದಿದ್ದಾರೆ. ಇದೊಂಥರ ಕೈಲಾಗದೋನು ಪರಚಿಕೊಂಡ ಎಂಬ ಗಾದೆಯಂತಿದೆ. ಸದಸ್ಯರ ಗೆ ಜನರೇ ಹಿಡಿಶಾಪ ಹಾಕುತ್ತಿದ್ದಾರೆ.


ಮಾಡಲು ಸಾಕಷ್ಟು ಕೆಲಸಗಳಿವೆ

ಲ್ಲೆಯಲ್ಲಿ ಕಾವೇರಿ ಹರಿದರೂ ಕುಡಿಯುವ ನೀರಿನ ತೀವ್ರವಾಗಿದೆ. ನಿರ್ಮಿತಿ ಕೇಂದ್ರಕ್ಕೆ ವಹಿಸಿರುವ ಯುವ ನೀರಿನ ಕಾಮಗಾರಿ ಮಂದಗತಿಯಲ್ಲಿ ತ್ತಿದ್ದು, ಕಳಪೆ ಕಾಮಗಾರಿಯಾಗಿದೆ. ಶಾಲೆಗಳಲ್ಲಿ ಲಯ, ಕೊಠಡಿ ಸೇರಿದಂತೆ ಕುಡಿಯುವ ನೀರೂ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಶೌಚಾಲಯವಿದ್ದರೆ ನೀರಿದ್ದರೆ ಶೌಚಾಲಯವಿಲ್ಲ ಎಂಬ ದುಸ್ಥಿತಿ ಇದೆ. ಮಕ್ಕಳ ಪಾಡಂತೂ ಘೋರವಾಗಿದೆ. ಪ್ರಾಥಮಿಕ ಗ್ಯ ಕೇಂದ್ರಗಳಲ್ಲಿ ವೈದ್ಯರು, ದಾದಿಯರು, ಸಿಬ್ಬಂದಿ ಇದೆ. ಸರ್ಕಾರಿ ಶಾಲಾ ಕಟ್ಟಡಗಳು ಬಿದ್ದುಹೋಗಿವೆ. ವಿತರಿಸುವ ವಿವಿಧ ಯೋಜನೆಗಳ ಅನುದಾನ ಭವಿಗಳನ್ನು ಮುಟ್ಟುತ್ತಿಲ್ಲ. ಕುಡಿಯುವ ನೀರಿನ ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿಲ್ಲ, ಆ ನೀರನ್ನೇ ಜನರಿಗೆ ರೋಗ-ರುಜಿನಗಳು ಬರುತ್ತಿವೆ. ಹಳ್ಳಿಗಳಲ್ಲಿ ಯಿಲ್ಲ. ಚರಂಡಿ-ಗಟಾರುಗಳ ತುಂಬಿಕೊಂಡು ವೆ. ಇಷ್ಟೆಲ್ಲಾ ಸಮಸ್ಯೆಗಳು ಪೆಡಂಭೂತದಂತೆ ಕಾಡುತ್ತಿ ಸಿಇಒ ರೋಹಿಣಿ ಸಿಂಧೂರಿಯನ್ನೇ ಭೂತದಂತೆ ತ್ತಿರುವ ಕೆಲವು ಸದಸ್ಯರು ಅವರ ವರ್ಗಾವಣೆಗೆ ಹಿಡಿಯುವುದನ್ನು ಬಿಟ್ಟು ಸಮಸ್ಯೆಗಳ ನಿವಾರಣೆಯತ್ತ ಹರಿಸಿದರೆ ಮತ ಹಾಕಿದ ಜನರಿಗೆ ಕಿಂಚಿತ್ತಾದರು ಮಾಡಿದಂತಾಗುತ್ತೆ.

ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಇಡುವುದು ಭಾರೀ ಪ್ರಮಾದವೇ ಸರಿ. ಇನ್ನಾದರೂ ು ಕಾಸಿನ ಪ್ರಯೋಜನಕ್ಕೆ ಬಾರದ 'ರೋಹಿಣಿ ಪ್ಲೋ' ಅಭಿಯಾನ ಬಿಟ್ಟು ಜಿ.ಪಂ. ಸದಸ್ಯರು ಗ್ರಾಮೀಣ ಗಳ ಉದ್ಧಾರದತ್ತ ಗಮನ ಹರಿಸುತ್ತಾರಾ ಕಾದು ಬೇಕು.

● ಮಂಡ್ಯ ನಾಗೇಶ್

ಅಚ್ಚರಿ ಮೂಡಿಸಿದ ರಾಘಣ್ಣ




ಮೊನ್ನೆ ಅಪರೂಪಕ್ಕೆ ಒಂದು ಪಾರ್ಟಿಗೆ ಹೋಗಿದ್ದೆ, ಅಲ್ಲಿ ಹಲವಾರು ನಟ ನಟಿಯರು, ರೂಪದರ್ಶಿಗಳು, ಉದ್ಯಮಿಗಳು, ಇತರೆ ಗಣ್ಯರು ಇದ್ದರು. ಪರಿಚಯಸ್ಥರಿಗೆ "ಹಲೋ", "ನಮಸ್ಕಾರ" ಹೇಳುತ್ತಿದ್ದಾಗ ರಾಘವೇಂದ್ರ ರಾಜ್‌ಕುಮಾರ್ ಅವರು ಕಾಣಿಸಿದರು. ಅವರಿಗೂ "ನಮಸ್ಕಾರ ಸರ್" ಎಂದೆ. ಅವರಿಗೆ ನನ್ನ ಪರಿಚಯ ಇದೆಯೋ ಇಲ್ಲವೋ ಗೊತ್ತಿರಲಿಲ್ಲ, ಆದರೇನಂತೆ ಅವರೂ "ನಮಸ್ಕಾರ" ಅಂದರು.

ಕೆಲವು ಕ್ಷಣಗಳ ನಂತರ "ನಿಮ್ಮ ಹತ್ತಿರ ಸ್ವಲ್ಪ ಮಾತಾಡಬಹುದಾ?" ಎಂದು ರಾಘಣ್ಣ ಕೇಳಿದರು. ನನಗೋ ಆಶ್ಚರ್ಯ, ಕುತೂಹಲ! "ಖಂಡಿತವಾಗಿ ಸರ್" ಎಂದೆ. "ಪತ್ರಕರ್ತೆ ನೀವೋ ಅಥವಾ ನಿಮ್ಮ ಅಕ್ಕನೋ?" ಎಂದು ಕೇಳಿದರು. ಸುಮಾರು ಬಾರಿ ಜನರು ನಾನು ಮತ್ತು ನನ್ನ ಅಕ್ಕ ಗೌರಿ ಇಬ್ಬರೂ ಒಂದೇ ಎಂದೋ ಅಥವಾ ನಾನೇ ಗೌರಿ ಎಂದೋ ಕನ್‌ಫ್ಯೂಸ್ ಮಾಡಿಕೊಳ್ಳುತ್ತಾರೆ. ಒಮ್ಮೆ ಒಂದು ಸಮಾರಂಭದಲ್ಲಿ ಜನರಿಗೆ ನನ್ನನ್ನು ಪರಿಚಯ ಮಾಡಿಕೊಡುತ್ತಾ "ಕವಿತಾ ಲಂಕೇಶ್ ಪತ್ರಕರ್ತೆ ಮಾತ್ರವಲ್ಲ, ಕೋಮುವಾದದ ವಿರುದ್ಧ ಹೋರಾಡುತ್ತಿರುವವರು. ಜೊತೆಗೆ ಸಿನಿಮಾ ನಿರ್ದೇಶಕಿ ಕೂಡ" ಎಂದು ಹೇಳುವ ಮೂಲಕ ನನ್ನ ಮತ್ತು ನನ್ನ ಅಕ್ಕನ ಕೆಲಸಕಾರ್ಯಗಳನ್ನು ಮತ್ತು ಸಾಧನೆಗಳನ್ನು ಬೆರೆಸಿಬಿಟ್ಟಿದ್ದರು. ಅದನ್ನು ಕೇಳಿ ನನಗೆ ಮುಜುಗರ, ನಾಚಿಕೆ! ಆದರೂ 'ಪರವಾಗಿಲ್ಲ ಬಿಡು. ಸದ್ಯ ಬೈಯಲಿಲ್ಲವಲ್ಲ' ಎಂದು ಒಳಗೊಳಗೇ ಖುಷಿ ಪಡುತ್ತಾ ಸುಮ್ಮನೆ ಕೂತಿದ್ದೆ!

ಇರಲಿ, ರಾಘವೇಂದ್ರ ರಾಜ್‌ಕುಮಾರ್ ಅವರ ಪ್ರಶ್ನೆಗೆ "ನಾನು ಟೈಮ್ ಪಾಸ್ ಮಾಡೋದಕ್ಕೆ ಕೆಲವೊಮ್ಮೆ ತಲೆಹರಟೆ ವಿಷಯಗಳ ಬಗ್ಗೆ ಬರೆಯುತ್ತಿರುತ್ತೇನೆ. ಆದರೆ ನನ್ನ ಅಕ್ಕ ಪತ್ರಕರ್ತೆ" ಎಂದು ಉತ್ತರಿಸಿದೆ. ಜೊತೆಗೆ "ಯಾಕೆ ಸರ್?" ಎಂದು ಕೇಳಿದೆ.

ಅದಕ್ಕೆ ಅವರು ಕೊಟ್ಟ ಉತ್ತರ ನನ್ನಲ್ಲಿ ಅಚ್ಚರಿ ಮೂಡಿಸಿತು.



ರಾಘವೇಂದ್ರ ಅವರು "ಅಪ್ಪಾಜಿ ನಟಿಸಿದ್ದ 'ಶಬ್ಧವೇದಿ' ಸಿನಿಮಾ ಬಗ್ಗೆ ನಿಮ್ಮ ಅಕ್ಕ ತುಂಬಾ ಕಟುವಾಗಿ ಬರೆದಿದ್ರು. ಅದನ್ನು ನೋಡಿ ನನಗೆ ಮತ್ತು ನಮ್ಮ ಮನೆಯವರಿಗೆಲ್ಲ ಸಿಟ್ಟು ಬಂದಿತ್ತು. ಆದರೆ ಅಪ್ಪಾಜಿ ಏನು ಅಂದಿದ್ರು ಗೊತ್ತಾ? 'ಇಲ್ಲಾ, ಅವಳು ನನ್ನ ಮಗಳ ತರಹ. ಅವಳು ಬರೆದಿರೋದು ಸರಿಯಾಗೆ ಇದೆ. ಅವಳನ್ನು ಕರೆಸು. ನಾನು ಅವಳನ್ನು ಅಪ್ಪಿಕೊಂಡು ಅವಳ ಜೊತೆ ಮಾತನಾಡಬೇಕು. ನನ್ನ ಕೊನೆ ಸಿನಿಮಾ 'ಶಬ್ಧವೇದಿ' ಆಗಬಾರದು. ನಾನು ಇನ್ನೊಂದು ಸಿನಿಮಾ ಮಾಡ್ತಿನಿ' ಅಂದಿದ್ರು" ಎಂದರು.

ಇಷ್ಟು ವರ್ಷಗಳ ನಂತರ ರಾಘವೇಂದ್ರ ರಾಜ್‌ಕುಮಾರ್ ಅವರು ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದು ಅಚ್ಚರಿ ಮೂಡಿಸಿತು. ಅದಕ್ಕಿಂತ ಮಿಗಿಲಾಗಿ ಸ್ವತಃ ರಾಜ್‌ಕುಮಾರ್ ಅವರ ಪ್ರತಿಕ್ರಿಯೆ ನನ್ನನ್ನು ಮಂತ್ರಮುಗ್ಧಳನ್ನಾಗಿಸಿತು. "ಹ್ಯಾಟ್ಸ್ ಆಫ್ ಟು ರಾಜ್‌ಕುಮಾರ್" ಅಂತ ಮನಸ್ಸಿನಲ್ಲೇ ಅಂದುಕೊಂಡೆ.

ರಾಜ್‌ಕುಮಾರ್ ಮತ್ತು ಅವರ ಕುಟುಂಬ ಕನ್ನಡಿಗರಿಗೆ ಇಷ್ಟವಾಗುವುದು ಅವರ ಸರಳತನಕ್ಕೆ ಮತ್ತು ನೇರತನಕ್ಕೆ ಹೆಚ್ಚಾಗಿ ತಮ್ಮ ಟೀಕಾಕಾರರೊಂದಿಗೂ ಗೌರವಯುತವಾಗಿ ನಡೆದುಕೊಳ್ಳುವುದಕ್ಕೆ.

ಇದನ್ನು ಹೇಳುವಾಗ ಇನ್ನೆರಡು ಪ್ರಕರಣಗಳು ನೆನಪಾಗುತ್ತಿವೆ. ಹಿಂದೊಮ್ಮೆ ನಾನು ಒಂದು ಎಫ್‌ಎಂ ಚಾನೆಲ್‌ಗೆ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾಗ ಪುನೀತ್ ರಾಜ್‌ಕುಮಾರ್ ಅವರ ಅಪಾಯಿಂಟ್‌ಮೆಂಟ್ ಕೇಳಿದೆ. ಆಗ ಪುನೀತ್ "ನಾನು ಶೂಟಿಂಗ್‌ನಲ್ಲಿದ್ದೀನಿ. ಅಲ್ಲಿಗೇ ಬನ್ನಿ. ಮಾತಾಡೋಣ" ಎಂದರು. 'ಶೂಟಿಂಗ್ ಅಂದ್ರೆ ತುಂಬಾ ಟೆನ್‌ಶನ್ ಇರುತ್ತೆ, ಎಷ್ಟು ಹೊತ್ತು ಕಾಯಬೇಕೋ ಏನೋ' ಎಂದುಕೊಳ್ಳುತ್ತಲೇ ನಾನು ಅಲ್ಲಿಗೆ ಹೋದೆ. ಆದರೆ ಪುನೀತ್ ಅವರು ಶಾಟ್ ಮಧ್ಯೆ ಬ್ರೇಕ್ ಸಿಕ್ಕಾಗಲೆಲ್ಲ ಬಂದು ನನ್ನ ಜೊತೆ ಮಾತನಾಡಿ ಒಂದೇ ಒಂದು ಗಂಟೆಯಲ್ಲಿ ನನಗೆ ಸಂದರ್ಶನ ಕೊಟ್ಟಿದ್ದರು. 'ಗೋಲ್ಡ್', 'ಸಿಲ್ವರ್' ಅಂತೆಲ್ಲ ಬಿರುದುಗಳನ್ನು ಇಟ್ಟುಕೊಂಡಿರುವ ಇತರೆ ನಟರಲ್ಲಿ ಇಂಟರ್‌ವ್ಯೂಗೆ ಸಮಯ ಕೇಳಿದಾಗ 'ಈಗ ಆಗಲ್ಲ, ತುಂಬಾ ಬ್ಯುಸಿ ಇದ್ದೀನಿ' ಎನ್ನುತ್ತಾ ಮುಂದೂಡುತ್ತಾ ಕೊನೆಗೂ ಕೈಕೊಟ್ಟಿದ್ದರು. ಆ ಕಾರಣಕ್ಕೆ ಅವತ್ತು ಪುನೀತ್ ನಿಜಕ್ಕೂ 'ಪವರ್ ಸ್ಟಾರ್' ಅನ್ನಿಸಿತ್ತು.

ಶಿವರಾಜ್‌ಕುಮಾರ್ ಕೂಡ ಸರಳ ಮತ್ತು ಸಜ್ಜನ. ಇತ್ತೀಚೆಗೆ ಸಿನಿಮಾ/ ಟಿವಿ ಮತ್ತು ಮಾಧ್ಯಮ ಸದಸ್ಯರ ನಡುವೆ ಬ್ಯಾಡ್ಮಿಂಟನ್ ಸ್ಪರ್ಧೆ ಜರುಗಿತು. ಆ ಕಾರ್ಯಕ್ರಮಕ್ಕೆ ಆಗಲೇ ಒಂದಿಬ್ಬರು ಹೀರೋಗಳು ಆಗಮಿಸಿದ್ದರು. ಆದರೆ ಶಿವಣ್ಣ ಬಂದ ಕೂಡಲೇ ನೂಕುನುಗ್ಗಲು. ಗದ್ದಲ ಸ್ವಲ್ಪ ಕಡಿಮೆಯಾದ ನಂತರ ನಾನು ಶಿವಣ್ಣನ ಹತ್ತಿರ ಹೋಗಿ "ಹಲೋ ಸರ್" ಎಂದೆ. ಆಗ ಶಿವಣ್ಣ "ನಮಸ್ಕಾರ. ಚೆನ್ನಾಗಿದ್ದೀರಾ? ಸದ್ಯದಲ್ಲೇ ನನ್ನ ಮಗಳ ನಿಶ್ಚಿತಾರ್ಥ ಇದೆ. ದಯವಿಟ್ಟು ಬನ್ನಿ" ಎಂದು ಆಹ್ವಾನಿಸಿದ್ದರು.

ರಾಜ್‌ಕುಮಾರ್ ಎಂಬ ಮೇರು ನಟ ಬರಿ ಬೆಳ್ಳಿಪರದೆಯ ಮೇಲೆ ಮಾತ್ರ ಜಗ ಮೆಚ್ಚಿದ ಮನುಷ್ಯ ಆಗಿರಲಿಲ್ಲ, ಜೊತೆಗೆ ನಿಜ ಜೀವನದಲ್ಲೂ ಎಲ್ಲರೂ ಮೆಚ್ಚುವಂತಹ ಮನುಷ್ಯರಾಗಿದ್ದರು ಹಾಗು ಸರಳತೆ ಮತ್ತು ಸಜ್ಜನಿಕೆ ತರಹದ ಉತ್ತಮ ಮೌಲ್ಯಗಳನ್ನು ತಮ್ಮ ಕುಟುಂಬದವರಲ್ಲೂ ಬಿತ್ತಿದ್ದರು ಎಂಬುದಕ್ಕೆ ಅವರ ಪುತ್ರರೇ ಸಾಕ್ಷಿ ಎನ್ನಿಸಿತು.

● ಕವಿತಾ ಲಂಕೇಶ್



'ಶಾಂತಿಗಾಗಿ ನಾಗರಿಕ ವೇದಿಕೆ' ಸಭೆಯಲ್ಲಿ ಸಿಎಂ ಸಿದ್ದರಾಮಯ್ಯನವರೊಂದಿಗೆ ಚರ್ಚೆ....

ನಕ್ಸಲ್ ನಾಯಕರಿಗೆ ಸುಸ್ವಾಗತ!!



ಡಿಸೆಂಬರ್ 8ನೇ ತಾರೀಕು. ಚಿಕ್ಕಮಗಳೂರು ನಗರದ ಸರ್ಕಾರಿ ಪ್ರವಾಸಿಮಂದಿರದ ಆವರಣದಲ್ಲಿ ಕಿಕ್ಕಿರಿದ ಜನಜಂಗುಳಿ. ಜನರೆಂದರೆ ಜನಸಾಮಾನ್ಯರು ಮಾತ್ರವಲ್ಲ; ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು, ಸಾಹಿತಿಗಳು, ಬುದ್ಧಿಜೀವಿಗಳು, ಪತ್ರಕರ್ತರು, ವಕೀಲರು ಮಾತ್ರವಲ್ಲದೆ ಕೆಲವು ರಾಜಕೀಯ ಮುಖಂಡರೂ ಅಲ್ಲಿ ನೆರೆದಿದ್ದರು. ವಿವಿಧ ವಾಹಿನಿಗಳ ವರದಿಗಾರರು ತಮ್ಮ ಕ್ಯಾಮೆರಾಮನ್‌ಗಳೊಂದಿಗೆ ಸಜ್ಜಾಗಿದ್ದರು. ಎಲ್ಲಾ ಪತ್ರಿಕೆಗಳ ವರದಿಗಾರರೂ ಅಲ್ಲಿ ಹಾಜರಿದ್ದರು. ಸಾಲದ್ದಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಬೇರೆ.

ಮಧ್ಯಾಹ್ನ 2.30ರ ಸಮಯ. ಶಾಂತಿಗಾಗಿ ನಾಗರಿಕ ವೇದಿಕೆಯ ಸದಸ್ಯರಾದ ಪ್ರೊ. ನಗರಿ ಬಾಬಯ್ಯ ಮತ್ತು ಪ್ರೊ. ವಿ.ಎಸ್.ಶ್ರೀಧರ್‌ರವರು ತಮ್ಮೊಂದಿಗೆ ನಕ್ಸಲ್ ನಾಯಕರಾದ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್‌ರನ್ನು ಅಲ್ಲಿಗೆ ಕರೆತಂದರು. ಹಿರಿಯರಾದ ದೊರೆಸ್ವಾಮಿ ಮತ್ತು ಪತ್ರಕರ್ತೆ ಗೌರಿ ಲಂಕೇಶ್‌ರವರು ಹಸ್ತಲಾಘವ ನೀಡಿ ಅವರನ್ನು ಬರಮಾಡಿಕೊಂಡರು. ಯಾರೋ ಅಭಿಮಾನಿಯೊಬ್ಬ ತಂದಿದ್ದ ಹೂಮಾಲೆಗಳನ್ನು ದೊರೆಸ್ವಾಮಿಯವರು ನಕ್ಸಲ್ ನಾಯಕರ ಕೊರಳಿಗೆ ಹಾಕಿದರು. ವಿಶೇಷ ಫೋಟೋ ಹಾಗೂ ಫೂಟೇಜ್ ತೆಗೆದುಕೊಳ್ಳಲು ಕ್ಯಾಮೆರಾಮನ್‌ಗಳು ನೀಮುಂದು ತಾಮುಂದು ಎಂದು ಒಮ್ಮೆಗೇ ನುಗ್ಗಿದರು. ಸಾಲದ್ದಕ್ಕೆ ಹಸ್ತಲಾಘವ ನೀಡಲು ಅಭಿಮಾನಿಗಳ ನೂಕುನುಗ್ಗಲು. ಜೊತೆಯಲ್ಲಿ ಫೋಟೋ ತೆಗೆಸಿಕೊಳ್ಳಲು ತಳ್ಳಾಟ. ಎಷ್ಟೋ ಕಾಲದಿಂದ ಭೇಟಿಯಾಗಬೇಕೆಂದು ತವಕಿಸುತ್ತಿದ್ದ ಬಂಧು-ಮಿತ್ರರ ಕಣ್ಣುಗಳಲ್ಲಿ ಆನಂದಭಾಷ್ಪ; ಆದರಾಭಿಮಾನದ ಆಲಿಂಗನ.

ಹೀಗೆ ಅದೊಂದು ಅತ್ಯಂತ ಭಾವಪೂರ್ಣ ಸನ್ನಿವೇಶವಾಗಿತ್ತು.

ಈ ಸನ್ನಿವೇಶ ಕರ್ನಾಟಕದ ಸಾಮಾಜಿಕ ಚಳವಳಿಗಳ ಇತಿಹಾಸದಲ್ಲಿ ಮಾತ್ರವಲ್ಲ, ಇಡೀ ದೇಶದ ಇತಿಹಾಸದಲ್ಲೇ ಇದೊಂದು ಚಾರಿತ್ರಿಕ ಮೈಲಿಗಲ್ಲು, ಯಾಕೆಂದರೆ ಈ ನಕ್ಸಲ್ ನಾಯಕರು ತಮ್ಮ ಸಶಸ್ತ್ರ ಹೋರಾಟದ ಹಾದಿಯನ್ನು ಪ್ರಜ್ಞಾಪೂರ್ವಕವಾಗಿ ಬದಲಿಸಿಕೊಂಡು ಪ್ರಜಾತಾಂತ್ರಿಕ ಚಳವಳಿಯ ಮುಖ್ಯವಾಹಿನಿಗೆ ಆಗಮಿಸಿದ್ದಾರೆ. ಹಿಂಸೆ - ಪ್ರತಿಹಿಂಸೆಗಳನ್ನು ಕೊನೆ ಮಾಡಿ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಇಂಥಾ ಚಾರಿತ್ರಿಕ ಪ್ರಕ್ರಿಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿ ರಾಜ್ಯ ಸರ್ಕಾರ ಶ್ಲಾಘನೀಯ ಕೆಲಸ ಮಾಡಿದೆ.

ವಾಸ್ತವದಲ್ಲಿ ಈ ಕಾರ್ಯಕ್ರಮ ಡಿಸೆಂಬರ್ 2ನೇ ತಾರೀಕು ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ನಡೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು, ಆದರೆ ಇವರಿಬ್ಬರ ಮೇಲಿನ ಕೇಸುಗಳು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಗೆ ಬರುವುದರಿಂದ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ನಡೆಸಲು ಕೆಲವು ಕಾನೂನು ಅಡಚಣೆಗಳು ಎದುರಾದವು. ಈ ಹಿನ್ನೆಲೆಯಲ್ಲಿ ಡಿಸೆಂಬರ್ 8ರಂದು ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕೃತ ಕಾರ್ಯಕ್ರಮ ಎಂಬುದು ಅಂತಿಮವಾಗಿ ಫಿಕ್ಸ್ ಆಗಿತ್ತು.

ಸರ್ಕಾರದ ಅಧಿಕೃತ ಯೋಜನೆ ಪ್ರಕಾರ 'ನಕ್ಸಲರ ಶರಣಾಗತಿ ಮತ್ತು ಪುನರ್ವಸತಿ'ಯ ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲೂ ಒಂದು ಜಿಲ್ಲಾ ಸಮಿತಿ ಅಸ್ತಿತ್ವದಲ್ಲಿದೆ. ಸ್ಥಳೀಯ ಜಿಲ್ಲಾಧಿಕಾರಿ ಅದರ ಅಧ್ಯಕ್ಷರಾಗಿರುತ್ತಾರೆ. ಎಸ್.ಪಿ ಮುಂತಾದವರು ಸಮಿತಿಯ ಸದಸ್ಯರಾಗಿರುತ್ತಾರೆ. ಇದಲ್ಲದೆ ರಾಜ್ಯಮಟ್ಟದಲ್ಲಿ ಒಂದು ರಾಜ್ಯ ಸಮಿತಿಯಿರುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸದರಿ ಸಮಿತಿಯಲ್ಲಿ ಹಿಂದಿನಿಂದಲೂ ಕೇವಲ ಅಧಿಕಾರಿ ವರ್ಗ ಮಾತ್ರ ಇರುವುದು ವಾಡಿಕೆ. ನಾಗರಿಕ ಸಮಾಜದ ಪ್ರತಿನಿಧಿಗಳಿಗಾಗಲಿ, ಚುನಾಯಿತ ಪ್ರತಿನಿಧಿಗಳಿಗಾಗಲಿ ಇಲ್ಲಿ ಯಾವುದೇ ಸ್ಥಾನವಿರಲಿಲ್ಲ.

ಇಂಥಾ ಪರಿಸ್ಥಿತಿಯಲ್ಲಿ ಎಸ್‌ಪಿ, ಡಿಸಿ ಗಳಂಥ ಅಧಿಕಾರಿ ವರ್ಗಗಳ ಮೇಲೆ ವಿಶ್ವಾಸವಿಟ್ಟು ನಕ್ಸಲ್ ನಾಯಕರು ಬರಲು ನಿರಾಕರಿಸುತ್ತಾರೆ. ಈ ಕೊರತೆಯನ್ನು ಮನಗಂಡ ರಾಜ್ಯ ಸರ್ಕಾರ ಸಮಿತಿಗೆ ನಾಗರಿಕ ಪ್ರತಿನಿಧಿಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮಸ್ಯೆಯ ಸಿಕ್ಕನ್ನು ಬಿಡಿಸಲು ಪ್ರಬುದ್ಧ ತೀರ್ಮಾನ ತೆಗೆದುಕೊಂಡು ರಾಜ್ಯ ಸಮಿತಿಗೆ ಎಚ್.ಎಸ್.ದೊರೆಸ್ವಾಮಿ, ಎ.ಕೆ.ಸುಬ್ಬಯ್ಯ ಮತ್ತು ನಮ್ಮ ಸಂಪಾದಕಿ ಗೌರಿ ಲಂಕೇಶ್‌ರನ್ನು ಸೇರ್ಪಡೆ ಮಾಡಿದರು. ಇದರೊಂದಿಗೆ ಮಾತುಕತೆ ಮತ್ತೊಂದು ನಿರ್ಣಾಯಕ ಹಂತ ತಲುಪಿತ್ತು.

ನೂರ್ ಮತ್ತು ಸಿರಿಮನೆಯವರು ಮೊದಲಿಗೆ ನಾಗರಿಕ ಸಮಿತಿಯ ಎದುರು ಹಾಜರಾಗುವ ಇಚ್ಛೆ ವ್ಯಕ್ತಪಡಿಸಿದ್ದರಿಂದ ಡಿಸಿ ಕಚೇರಿಯ ಸಮೀಪದಲ್ಲೇ ಇರುವ ಪ್ರವಾಸಿಮಂದಿರದಲ್ಲಿ ಈ ಸ್ವಾಗತ ಕಾರ್ಯಕ್ರಮ ಏರ್ಪಾಟಾಗಿತ್ತು. ಅಸ್ತಿತ್ವದಲ್ಲಿರುವ ನೀತಿಯ ಪ್ರಕಾರ ಸರ್ಕಾರ ಇದನ್ನು 'ನಕ್ಸಲರ ಶರಣಾಗತಿ ಮತ್ತು ಪುನರ್ವಸತಿ' ಪ್ಯಾಕೇಜು ಎಂದು ಕರೆಯುತ್ತಿದ್ದರೂ, ಈ ಬಗ್ಗೆ ನಕ್ಸಲ್ ನಾಯಕರ ನಿಲುವು ಸ್ವಲ್ಪ ಭಿನ್ನವಾದುದು.

ಸನ್ಮತಿ ಡಾಟ್ ಕಾಮ್ ಎಂಬ ಅಂತರ್ಜಾಲ ಪತ್ರಿ[ಕೆಗೆ] ಇತ್ತೀಚೆಗೆ ಅವರು ನೀಡಿರುವ ಸಂದರ್ಶನದಲ್ಲಿ ಶರಣಾ[ಗತಿ] ಎಂಬ ಬಗ್ಗೆ ಅವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾ[ರೆ]. "ಶರಣಾಗತಿ ಎಂದರೆ ವಾಸ್ತವವಾಗಿ ಪ್ರಭುತ್ವದ ಮುಂ[ದೆ] ತಲೆ ಬಾಗುವುದು ಎಂದರ್ಥ. ಅದರರ್ಥ ನಮ್ಮ ರಾಜಕೀ[ಯ] ಅಭಿಪ್ರಾಯಗಳು ಹಾಗೂ ಅವುಗಳನ್ನಾಧರಿಸಿದ ನ[ಮ್ಮ] ಆಚರಣೆ, ಇವುಗಳಿಗಾಗಿ ಪಶ್ಚಾತ್ತಾಪಪಡುವುದು; ನ[ಮ್ಮ] ಸೈದ್ಧಾಂತಿಕ ನಿಲುವುಗಳನ್ನು, ಕಡೆಗೆ ಹೋರಾಡು[ವ] ಸ್ಫೂರ್ತಿಯನ್ನು ಸಹ ಬಿಟ್ಟುಕೊಡುವುದು. ಅದರ ಅರ್ಥ ಹೋರಾಟದಲ್ಲಿರುವ ಸಂಗಾತಿಗಳ ಕುರಿತ ನಮ್ಮಲ್ಲಿರಬಹುದಾದ ಮಾಹಿತಿಗಳನ್ನೆಲ್ಲ ಬಿಟ್ಟುಕೊಡುವುದು ಎಂದೂ ಆಗುತ್ತದೆ. ಸಾರಾಂಶದಲ್ಲಿ ಪ್ರಭುತ್ವ ಬಯಸಿದಂ[ತೆ] ನಡೆಯಲು ಒಪ್ಪಿಕೊಂಡು, ಜನತೆಯ ಹಾಗೂ ಚಳವಳಿ[ಯ] ಹಿತಾಸಕ್ತಿಗಳಿಗೆ ದ್ರೋಹ ಬಗೆಯುವುದು ಎಂದಾಗುತ್ತ[ದೆ].

ಎರಡು ರೀತಿಯ ಶರಣಾಗತಿಗಳು ನಮ್ಮ ಮುಂ[ದೆ] ಕಾಣಬರುತ್ತವೆ. ಒಂದು: ಪ್ರಭುತ್ವದ ಬಲಪ್ರಯೋಗದಿಂದಾ[ಗಿ] ಸಂಭವಿಸುವ ಪೊಳ್ಳು ಶರಣಾಗತಿಗಳು. ಎರಡನೆಯದ[ು] ಭಯ, ಹತಾಶೆ ಅಥವಾ ದಣಿವು ಮತ್ತು ಅಸಹಾಯಕ[ತೆ]ಯಿಂದಾಗಿ ನಡೆಯುವ ನಿಜವಾದ ಶರಣಾಗತಿಗಳು ಇಲ್ಲ[ವೆ] ಸ್ವಂತ ಲಾಭಕ್ಕಾಗಿ ಹಾಗೂ ಸಂಕುಚಿತ ಹಿತಾಸಕ್ತಿಯಿಂ[ದ] ಪ್ರಭುತ್ವದೊಂದಿಗೆ ಶಾಮೀಲಾಗಿ ನಡೆಯುವ ಶರಣಾಗತಿಗ[ಳು]. ನಾವು ಈ ಎರಡು ರೀತಿಯ ವರ್ಗೀಕರಣಕ[್ಕೆ] ಸೇರುವುದಿಲ್ಲ....

ಸರ್ಕಾರ ಕೊಡಮಾಡುವ ಹಣಕಾಸಿನ ಕೊಡುಗೆಗ[ಳು] ಅಥವಾ ಪುನರ್ವಸತಿ ಯೋಜನೆಗಳಿಂದ ನಮ[ಗೆ] ಆಗಬೇಕಾದ್ದೇನೂ ಇಲ್ಲ. ನಮ್ಮ ಬದುಕು ಸಮಾಜದ[ಲ್ಲಿ] ಸಂಕಷ್ಟದಲ್ಲಿರುವ ಜನಸಮೂಹದ ಜೊತೆಗೂಡಿಕೊಂಡಿ[ದೆ]. ಸಮಾಜದ ಎಲ್ಲಾ ನೈಜ ಪ್ರಜಾಸತ್ತಾತ್ಮಕ, ಪ್ರಗತಿಪರ ಮ[ತ್ತು] ಕ್ರಾಂತಿಕಾರಿ ಶಕ್ತಿಗಳ ಜೊತೆ ಹೆಜ್ಜೆ ಹಾಕುವುದು ನ[ಮ್ಮ] ಉದ್ದೇಶವಾಗಿದೆ. ನಾವು ಮರಳಬಯಸುತ್ತಿರುವುದು ಜನತೆ[ಯ] ಪ್ರಜಾಸತ್ತಾತ್ಮಕ ಹೋರಾಟಗಳ ಮುಖ್ಯಧಾರೆಗೆ ಅಥ[ವಾ] ಇನ್ನೂ ಸರಿಯಾಗಿ ಹೇಳುವುದಾದರೆ ಅಂಥ ಹೋರಾಟ[ಗಳ] ಪರ್ಯಾಯ ಧಾರೆಗೆ. ನಾವು ಮುಕ್ತವಾಗಿ ಈ ಹೋರಾ[ಟದ] ಧಾರೆಯಲ್ಲಿ ಪಾಲ್ಗೊಳ್ಳಲು ಬಯಸುತ್ತಿದ್ದೇವೆ."

ಸಾಮಾಜಿಕ ಚಳವಳಿಗಳ ಮುಖ್ಯವಾಹಿನಿಗೆ ನಕ್ಸ[ಲ್] ನಾಯಕರನ್ನು ಸ್ವಾಗತಿಸಲು ಕರ್ನಾಟಕದ ನಾಗರಿಕ ಸಮಾಜ[ದ] ಸ್ಪಂದನೆ ಅಭೂತಪೂರ್ವವಾದುದು. ಸ್ವಾತಂ[ತ್ರ್ಯ] ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಪತ್ರಕರ್ತೆ ಗೌ[ರಿ] ಲಂಕೇಶ್, ಮಾಜಿ ಮಂತ್ರಿ ಎಸ್.ಕೆ. ಕಾಂತಾ, ಮಾ[ಜಿ] ಸಚಿವೆ ಬಿ.ಟಿ.ಲಲಿತಾ ನಾಯಕ್, ಶಿಕ್ಷಣ ತಜ್ಞರಾ[ದ] ಡಾ.ಜಿ.ರಾಮಕೃಷ್ಣ ಸಾಮಾಜಿಕ ಕಾರ್ಯಕರ್ತ ಶಿವಸುಂದರ[್], ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿದ್ದನಗೌ[ಡ] ಪಾಟೀಲ್, ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕರ್ನಾಟಕ ಜನಶಕ್ತಿ ಸಂಘಟನೆ[ಯ] ಡಾ.ವಾಸು, ಗೌರಿ, ಮಲ್ಲಿಗೆ, ಕುಮಾರ ಸಮತಳ, ಕರ್ನಾಟ[ಕ] ರಾಜ್ಯ ರೈತಸಂಘದ ಮುಖಂಡರಾದ ವೀರಸಂಗಯ[್ಯ], ಕೋಮು ಸೌಹಾರ್ದ ವೇದಿಕೆಯ ಕೆ.ಎಲ್.ಅಶೋ[ಕ್], ದಲಿತ ಸಂಘರ್ಷ ಸಮಿತಿಯ ಮುಖಂಡರಾ[ದ] ಎನ್.ವೆಂಕಟೇಶ್, ಸಿ.ಜಿ.ಗಂಗಪ್ಪ, ಎಚ್.ಮುನಿವೆಂಕಟ[ಪ್ಪ], ಸಿಪಿಐ(ಎಂ.ಎಲ್)(ರೆಡ್‌ಫ್ಲ್ಯಾಗ್) ಪಕ್ಷದ ಚಿಕ್ಕಮಗಳೂರು ಜಿ[ಲ್ಲಾ] ಮುಖಂಡ ರುದ್ರಯ್ಯ, ಚಿತ್ರದುರ್ಗದ ಪ್ರಗತಿಪ[ರ]

ಕೇಸುಗಳ ಬಲೆಯಲ್ಲಿ....

ಅಧಿಕೃತ ದಾಖಲೆಗಳ ಪ್ರಕಾರ ಸಿರಿಮನೆ ನಾಗರಾಜ್ ವಿರುದ್ಧ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಒಂದು ಪ್ರಕರಣವನ್ನು ದಾಖಲಿಸಲಾಗಿದೆ. ನಾಗರಾಜ್ ಮೇಲಿರುವ ಈ ಪ್ರಕರಣವು 2002ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನದ ವಿರುದ್ಧ ಶೃಂಗೇರಿಯಲ್ಲಿ ನಡೆಸಲಾದ, ನರ್ಮದಾ ಬಚಾವೊ ಆಂದೋಲನದ ಮೇಧಾ ಪಾಟ್ಕರ್ ಸಹಿತ ನಾಡಿನ ಹಲವಾರು ಹಿರಿಯ ಹೋರಾಟಗಾರರು ಪಾಲ್ಗೊಂಡಿದ್ದ ಸ್ಥಳೀಯ ಆದಿವಾಸಿಗಳ ಒಂದು ಬಹಿರಂಗ ಪ್ರತಿಭಟನಾ ಪ್ರದರ್ಶನ ಹಾಗೂ ಆ ಸಂದರ್ಭದಲ್ಲಿ ಬಜರಂಗದಳದ ಗೂಂಡಾಗಳೊಂದಿಗೆ ನಡೆದ ಘರ್ಷಣೆಗೆ ಸಂಬಂಧಿಸಿದ್ದು. ಕಾನೂನು ದೃಷ್ಟಿಯಿಂದ ಈ ಪ್ರಕರಣ ಬಹಳ ಸಣ್ಣದು (ಮೈನರ್) ಹಾಗೂ 'ಹೀಯ್ನಸ್' ಸ್ವರೂಪದ್ದಲ್ಲ, ಅದರಲ್ಲಿನ ಎಲ್ಲಾ ಆಪಾದಿತರೂ 2003ರಲ್ಲೇ ಖುಲಾಸೆಯಾಗಿದ್ದಾರೆ. ಹೀಗಿದ್ದರೂ ನಾಗರಾಜ್‌ರ ಮೇಲೆ ಒಂದು ಲಕ್ಷ ರೂಪಾಯಿ 'ಬಹುಮಾನ' ಘೋಷಿಸಿದ್ದದ್ದು ಇದುವರೆಗೆ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ದಮನಕಾರಿ ನೀತಿಗೆ ಸಾಕ್ಷಿ.

ನೂರ್ ಝುಲ್ಫಿಕರ್ ಮೇಲಿನ ಪ್ರಕರಣಗಳು ಹೆಚ್ಚು ಗಂಭೀರ ಸ್ವರೂಪದವು. ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಲಾ ಎರಡರಂತೆ ಒಟ್ಟು ನಾಲ್ಕು ಪ್ರಕರಣಗಳಿವೆ. ಅವೆಲ್ಲವೂ 2005ರ ನಂತರ ಹಾಕಿರುವಂಥವು. ಆ ವೇಳೆಯಲ್ಲಿ ಇವರುಗಳು ತಮ್ಮ ಮಾತೃಪಕ್ಷದೊಳಗೆ ದ್ವಿಪಥ ಸಂಘರ್ಷದ ಉತ್ತುಂಗದಲ್ಲಿದ್ದರು. ಹೀಗಾಗಿ ಮಲೆನಾಡಿನ ಕಾಡಿನಲ್ಲಿ ಸಕ್ರಿಯರಾಗಿದ್ದ ನಕ್ಸಲೀಯರ ಜೊತೆ ಇವರಿಗೆ ಸಂಪರ್ಕವನ್ನೇ ಕಡಿದುಹಾಕಲಾಗಿತ್ತು.

2006ರಲ್ಲಿ ಸಿಪಿಐ (ಮಾವೋವಾದಿ) ಪಕ್ಷದಿಂದ ಹೊರಬಂದ ನಂತರ ಎರಡು ಪ್ರಕರಣಗಳು ದಾಖಲಾಗಿವೆ. ಇವರು ಆರ್‌ಸಿಪಿ ರಚಿಸಿಕೊಂಡ ಸುದ್ದಿಗಳು ಪ್ರಕಟವಾದ ಒಂದು ವರ್ಷದ ನಂತರ, ಅಂದರೆ 2008ರಲ್ಲಿ ಮತ್ತೊಂದು ಕೇಸು ಜಡಿಯಲಾಗಿದೆ. ಇವರ ತಲೆಗೂ ಒಂದು ಲಕ್ಷ ರೂಪಾಯಿ ಬಹುಮಾನ ಘೋಷಿಸಲಾಗಿತ್ತು.

2006ರ ಪ್ರಕರಣದಲ್ಲಿ ಕ್ರಿಮಿನಲ್ ಇಂಟಿಮಿಡೇಶನ್, ಡಕಾಯಿತಿ ಮತ್ತು ಕೊಲೆ ಯತ್ನಕ್ಕೆ ಸಂಬಂಧಿಸಿದ ಸೆಕ್ಷನ್‌ಗಳನ್ನು ಸೇರಿಸಲಾಗಿದೆ. ಆದರೆ ಈ ಪ್ರಕರಣವನ್ನು ಮತ್ತಷ್ಟು ಗಂಭೀರವಾದುದನ್ನಾಗಿ ಮಾಡಲೆಂದು ಯುಎಪಿಎ (ಅನ್‌ಲಾಫುಲ್ ಆಕ್ಟಿವಿಟೀಸ್ ಪ್ರಿವೆನ್ಷನ್ ಆಕ್ಟ್) ಮತ್ತು ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್‌ಗಳನ್ನು ಅದರಲ್ಲಿ ಸೇರಿಸಲಾಗಿದೆ. ಯುಎಪಿಎ ಮತ್ತು ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್‌ಗಳಿದ್ದಲ್ಲಿ ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಅಂತಹ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ಅವಕಾಶವಿಲ್ಲವೆಂದು ರಾಜ್ಯ ಸರ್ಕಾರ ತನ್ನ 'ಅಸಹಾಯಕತೆ'ಯನ್ನು ತೋರಿಸುತ್ತಿದೆ. ಇದು ಪರಿಸ್ಥಿತಿ.

ಸುಳ್ಳು ಕೇಸುಗಳ ಮೂಲಕ ಇಂಥಾ ಸಂದಿಗ್ಧ ಸ್ಥಿತಿ ಸೃಷ್ಟಿಯಾಗಲು ಯಾರು ಕಾರಣ ಎಂಬ ಚರ್ಚೆ ಇಲ್ಲಿ ಅಪ್ರಸ್ತುತ. ಆದರೆ ಈಗ ಸೃಷ್ಟಿಯಾಗಿರುವ ಇಕ್ಕಟ್ಟಿನ ಸ್ಥಿತಿಯಲ್ಲಿ ಸುಳ್ಳು ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು; ಇಲ್ಲವೇ ಕಾನೂನು ವಿಚಾರಣಾ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಮೇಲ್ಕಂಡ ಪ್ರಕರಣಗಳ ಸತ್ಯಾಸತ್ಯತೆ ನಿಷ್ಕರ್ಷೆಯಾಗಬೇಕು. ಇದು ಪ್ರಜಾತಾಂತ್ರಿಕ ವ್ಯವಸ್ಥೆಯ ಬಗ್ಗೆ ವಿಶ್ವಾಸವಿರುವ ಎಲ್ಲ ಪ್ರಗತಿಪರರ ಒಕ್ಕೊರಲಿನ ಆಗ್ರಹ.

'ನೂರು ಹೂವುಗಳು ಅರಳಲಿ'

ನಕ್ಸಲ್ ನಾಯಕರು ಕಾನೂನು ಪ್ರಕ್ರಿಯೆಗಾಗಿ ಜಿಲ್ಲಾಧಿಕಾರಿಯ ನೇತೃತ್ವದ ಜಿಲ್ಲಾ ಸಮಿತಿಯತ್ತ ತೆರಳಿದ ನಂತ[ರ] ಚಿಕ್ಕಮಗಳೂರಿನಲ್ಲಿ ಮತ್ತೊಂದು ವಿಶೇಷ ವಿದ್ಯಮಾನ ಸಂಭವಿಸಿತು. ಜಿಲ್ಲಾಧಿಕಾರಿ ಕಚೇರಿಯ ಬಳಿಯಲ್ಲೇ ಇರು[ವ] ಪ್ಲಾಂಟರ್ಸ್ ಕ್ಲಬ್ ಸಭಾಂಗಣದಲ್ಲಿ ಒಂದು ಅಪೂರ್ವವಾದ ಸಭೆ ಏರ್ಪಟ್ಟಿತ್ತು. ನಾಡಿನ ದಲಿತ, ರೈತ ಮತ್ತ[ು] ಪ್ರಗತಿಪರ ಸಂಘಟನೆಗಳ ಅನೇಕ ನಾಯಕರು ಮಾತ್ರವಲ್ಲದೆ ವಿವಿಧ ಕಮ್ಯುನಿಸ್ಟ್ ಪಕ್ಷಗಳ ರಾಜ್ಯಮಟ್ಟದ ನಾಯಕರ[ು] ಪ್ರಗತಿಪರ ಧಾರೆಯ ಸಾಹಿತಿ ಬುದ್ಧಿಜೀವಿಗಳು ಗೌರಿ ಲಂಕೇಶ್ ಅಧ್ಯಕ್ಷತೆಯಲ್ಲಿ ಸಮಾಗಮಗೊಂಡಿದ್ದರು.

ಹಿರಿಯರಾದ ಜಿ.ರಾಮಕೃಷ್ಣ ಮಾತನಾಡಿ 'ಸಮಾಜ ಘಾತುಕ ಬಲಪಂಥೀಯ ಶಕ್ತಿಗಳು ಬೆಳೆಯುತ್ತಿರು[ವ] ಇಂದಿನ ಸಂದರ್ಭದಲ್ಲಿ ಎಡ ಪಕ್ಷಗಳ ವಿವಿಧ ಧಾರೆಗಳು ಒಗ್ಗೂಡಿ ಹೋರಾಟಕ್ಕಿಳಿಯಬೇಕು; ತಾವು ಹೇಳುತ್ತಿರುವುದ[ು] ಮಾಡುತ್ತಿರುವುದು ಮಾತ್ರ ಸರಿ, ಬೇರೆಯವರದು ತಪ್ಪು ಎಂಬ ಸಂಕುಚಿತ ಧೋರಣೆಯಿಂದ ಹೊರಬರಬೇಕು' ಎಂದು ಕರೆ ಕೊಟ್ಟರು.

ಮಾಜಿ ಸಚಿವ ಎಸ್.ಕೆ.ಕಾಂತಾ ಅವರು ಬೀದರ್‌ನ ಕೊಳಾರ ಕೈಗಾರಿಕಾ ಪ್ರದೇಶದ ಕೆಮಿಕಲ್ ಫ್ಯಾಕ್ಟರಿಗ[ಳ] ವಿರುದ್ಧದ ಹೋರಾಟದಲ್ಲಿ ಸಿರಿಮನೆ ನಾಗರಾಜ್‌ರ ಪರಿಶ್ರಮವನ್ನು ನೆನಪಿಸಿಕೊಂಡರು. "ಇಂದಿನ ರಾಜಕಾರ[ಣ] ಭ್ರಷ್ಟವಾಗಿ ಹೋಗಿದೆ; ಫ್ಯಾಸಿಸ್ಟ್ ರಾಜಕಾರಣ ದೇಶದಲ್ಲಿ ತಲೆಯೆತ್ತಿದೆ. ಇಂಥಾ ಸಂದರ್ಭದಲ್ಲಿ ಬದ್ಧತೆ, ಪ್ರಾಮಾಣಿಕತೆಯು[ಳ್ಳ] ಶಕ್ತಿಗಳ ಅಗತ್ಯ ಬಹಳ ಇದೆ" ಎಂದು ಒತ್ತಿ ಹೇಳಿದರು.

ಸಿಪಿಐ(ಎಂ) ಪಕ್ಷದ ಮುಖಂಡರಾದ ಜಿ.ಎನ್.ನಾಗರಾಜ್, ಸಿಪಿಐನ ಸಿದ್ದನಗೌಡ ಪಾಟೀಲ್, ರೈತ ಸಂಘ[ದ] ಮುಖಂಡರಾದ ವೀರಸಂಗಯ್ಯ, ರೆಡ್‌ಫ್ಲ್ಯಾಗ್ ಸಂಘಟನೆಯ ರುದ್ರಯ್ಯ ಮುಂತಾದವರು ಮಾತನಾಡಿ ಎಡ ಮ[ತ್ತು] ಇತರೆ ಪ್ರಜಾತಾಂತ್ರಿಕ ಶಕ್ತಿಗಳೆಲ್ಲರೂ ಒಗ್ಗೂಡಲೇ ಬೇಕಾದ ಅನಿವಾರ್ಯತೆ ಉಂಟಾಗಿದೆ ಎಂಬುದನ್ನು ಪ್ರತಿಪಾದಿಸಿದರ[ು].

ಒಟ್ಟಾರೆ ಹೇಳುವುದಾದರೆ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್‌ರನ್ನು ಮುಖ್ಯವಾಹಿನಿಗೆ ಸ್ವಾಗತಿಸು[ವ] ಕಾರ್ಯಕ್ರಮ ವಿವಿಧ ದಲಿತ, ರೈತ, ಪ್ರಗತಿಪರ ಶಕ್ತಿಗಳು ಮಾತ್ರವಲ್ಲದೆ ವಿವಿಧ ಎಡಪಕ್ಷಗಳು ಒಗ್ಗೂಡಿ ಕೆಲ[ಸ] ಮಾಡಬೇಕೆಂಬ ಆಶಯವನ್ನು ಮುನ್ನೆಲೆಗೆ ತಂದಿದೆ. ಹೀಗೆ ವಿವಿಧ ಧಾರೆಗಳನ್ನು ಒಂದೆಡೆಗೆ ಕೂಡಿಸಿ ಸಾಮಾ[ನ್ಯ] ಶತ್ರುಗಳ ವಿರುದ್ಧ ಹೋರಾಟ ರೂಪಿಸುವಲ್ಲಿ ಮುಖ್ಯವಾಹಿನಿಗೆ ಮರಳುತ್ತಿರುವ ನಕ್ಸಲ್ ನಾಯಕರಿಗೆ ಬಹುಮು[ಖ್ಯ] ಪಾತ್ರವಿದೆ ಎಂಬುದು ಬಹುಜನರ ನಿರೀಕ್ಷೆ.

ಾದಿ ಮುರುಳ ರಾಜೇಂದ್ರ ಒಡೆಯರ್, ಮಂಗಳೂರಿನ ಪ್ರಗತಿಪರ ಟಗಾರ ಭೂಮಿಗೌಡ, ಬಳ್ಳಾರಿಯ ಹೋರಾಟಗಾರ ಕರಿಯಪ್ಪ ಗುಡಿಮನಿ, ೂರಿನ ಹಾಡುಗಾರ, ಕವಿ ದಾನಪ್ಪ ನಿಲೋಗಲ್, ಶಿವಮೊಗ್ಗದಿಂದ ನಾದಿ ನಾಯಕ ದಿವಾಕರ್ ಹೆಗ್ಡೆ, ಮಾನವ ಹಕ್ಕು ಹೋರಾಟಗಾರರಾದ ಶ್ರೀಪಾಲ್, ಪತ್ರಕರ್ತರಾದ ಶೃಂಗೇಶ್, ಸಾಗರದ ಪ್ರಗತಿಪರ ವೇದಿಕೆಯ ರಾಘವೇಂದ್ರ, ಬೆಂಗಳೂರಿನಿಂದ ಪಿಡಿಎಫ್ ಸಂಘಟನೆಯ ಪ್ರೊ.ನಗರಿ ಪ್ರೊ.ಶಿವರಾಮಯ್ಯ, ಪ್ರೊ.ವಿ.ಎಸ್.ಶ್ರೀಧರ್, ಚಿಕ್ಕಮಗಳೂರು ಜಿಲ್ಲಾ ಅಧ್ಯಕ್ಷ ವಿಜಯ್ ಕುಮಾರ್, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚ್.ದೇವರಾಜ್, ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಗಾಯತ್ರಿ ಗೌಡ - ಹೀಗೆ ನಾನಾ ಹಿನ್ನೆಲೆಯ ನೂರಾರು ಗಣ್ಯರು ಈ ಸ್ವಾಗತ ಕ್ರಮಕ್ಕೆ ಸಾಕ್ಷಿಯಾದರು.

ಸಂದರ್ಭದಲ್ಲಿ ಈ ಇಬ್ಬರು ನಕ್ಸಲ್ ನಾಯಕರ ಬಂಧುಗಳು ಹಾಗೂ ಮಿತ್ರರು ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದು ಮತ್ತೊಂದು ವಿಶೇಷ. ನಾಗರಾಜ್‌ರ ಪತ್ನಿ ಹೇಮಲತಾ ಮತ್ತು ಮಗಳು ಪಲ್ಲವಿ ಸಾಮಾಜಿಕ ಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ ಪರಿವರ್ತನೆಯನ್ನೇ ನ್ನಾಗಿ ಹೊಂದಿರುವ ಈ ವಿಶೇಷ ಕುಟುಂಬದ ಸದಸ್ಯರು ಒಟ್ಟಾಗಿ ಪೂರ್ವದ ಕ್ಷಣವನ್ನು ಹಲವರು ತಮ್ಮ ಮೊಬೈಲ್‌ಗಳಲ್ಲಿ ಕ್ಲಿಕ್ಕಿಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಹಿರಿಯ ನ್ಯಾಯವಾದಿ ಬ್ಬಯ್ಯ, ಸಾಹಿತಿ ದೇವನೂರು ಮಹಾದೇವ ಹಾಗೂ ಪತ್ರಕರ್ತ ಇಂದೂಧರ ಮರ ಇವರುಗಳು ತೀವ್ರ ಅನಾರೋಗ್ಯದ ಕಾರಣದಿಂದ ಈ ಐತಿಹಾಸಿಕ ಕ್ರಮದಲ್ಲಿ ಭಾಗವಹಿಸಲಾಗಲಿಲ್ಲ, ಈ ಮೂವರ ಅನುಪಸ್ಥಿತಿ ಎದ್ದು ತ್ತು.

ಮರುದಿನ ಅಂದರೆ ಡಿಸೆಂಬರ್ 9ರಂದು ಪೊಲೀಸ್ ಬಂದೋಬಸ್ತ್‌ನಲ್ಲಿ ಯಕರನ್ನು ಕೊಪ್ಪ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯ್ತು. ಕೆ ನಡೆಸಿದ ನ್ಯಾಯಾಧೀಶರು ಸಿರಿಮನೆ ನಾಗರಾಜ್‌ರವರಿಗೆ ಜಾಮೀನು ರು ಮಾಡಿ ಬಿಡುಗಡೆಗೆ ಆದೇಶಿಸಿದರು. ಆದರೆ ನೂರ್ ಅವರ ವಿವಿಧ ಠಾಣೆಗಳಲ್ಲಿ ಗಂಭೀರ ಪ್ರಕರಣಗಳಿರುವುದರಿಂದ ಅವರು ರಲು ಕೆಲವು ವಾರಗಳ ಕಾಲ ಬೇಕಾಗಬಹುದೆಂದು ನಿರೀಕ್ಷಿಸಲಾಗಿದೆ. ವರೆಗೆ ನೂರ್ ಶ್ರೀಧರ್ ಅವರು ಚಿಕ್ಕಮಗಳೂರು ಜಿಲ್ಲಾ ಬಂಧದಲ್ಲಿರುವಂತೆ ನ್ಯಾಯಾಧೀಶರು ಸೂಚಿಸಿದ್ದಾರೆ.

ಕೊಪ್ಪ ಪಟ್ಟಣದ ನ್ಯಾಯಾಲಯದ ಆವರಣಕ್ಕೆ ಸಿರಿಮನೆ ನಾಗರಾಜ್ ಸುದ್ದಿ ತಿಳಿದ ನಾಗರಾಜ್‌ರ ಬಂಧುಮಿತ್ರರು ಕೋರ್ಟ್ ಮುಂದೆ ಮಿಸಿದ್ದರು. ಕೊಪ್ಪದಲ್ಲಿ 'ಗುಬ್ಬಗದ್ದೆ ಕಾಡು ಉಳಿಸಿ' ಹೋರಾಟದ ರು, 'ಮುಂಜಾವು' ಪತ್ರಿಕೆಯ ಓದುಗರು, ಹಳೆಯ ಮಿತ್ರರು, ಬಂಧುಗಳು ನಾನಾ ಹಿನ್ನೆಲೆಯ ಜನರು ತಮ್ಮನೆಚ್ಚಿನ ನಾಗರಾಜ್‌ರನ್ನು ಮಾತನಾಡಿಸಲು ಅವರ ಜನಪ್ರಿಯತೆ, ಸ್ನೇಹಪರತೆಗೆ ಸಾಕ್ಷಿ.

ಇಂಥಾ ಚಾರಿತ್ರಿಕ ವಿದ್ಯಮಾನವನ್ನು ಸಾಕಾರಗೊಳಿಸಿದ 'ಶಾಂತಿಗಾಗಿ ನಾಗರಿಕರ (Citizen's Initiative for Peace - CIP)ಯ ಎಲ್ಲಾ ಪರಿಶ್ರಮವನ್ನು ನಾವು ಇಲ್ಲಿ ಸ್ಮರಿಸಲೇಬೇಕು.

ಇಷ್ಟೆಲ್ಲಾ ಹಿರಿಯರು, ವಿವಿಧ ಸಂಘಟನೆಗಳ ಮುಖಂಡರು ಹೀಗೆ ಆಣಿನೆರೆ ಕಾರಣವಾದರೂ ಏನು? ಇಷ್ಟೆಲ್ಲಾ ಜನರು ನಕ್ಸಲ್ ಬೆಂಬಲಿಗರೇ? ಹಾನುಭೂತಿಪರರೇ? ಇತ್ಯಾದಿ ಪ್ರಶ್ನೆಗಳು ಮೂಡುವುದು ಸಹಜ. ಈ ವನ್ನು ಅರ್ಥಮಾಡಿಕೊಳ್ಳಲು ನಾವು ವಸ್ತುಸ್ಥಿತಿಯನ್ನು ವಾಸ್ತವ ನೆಲೆಗಟ್ಟಿನಿಂದ ಬೇಕು. ಕರ್ನಾಟಕದ ಪ್ರಗತಿಪರ ವಲಯದ ಬಹುತೇಕರಲ್ಲಿ ನಕ್ಸಲೀಯ ಯ ಬಗ್ಗೆ ಒಂದು ನಿರ್ದಿಷ್ಟ ಗ್ರಹಿಕೆಯಿದೆ. ನಕ್ಸಲೀಯರ ಉದ್ದೇಶ, ಗಳು ಸರಿಯಾದವು; ಆದರೆ ಸಶಸ್ತ್ರ ಹೋರಾಟದ ಅವರ ಮಾರ್ಗ ಮ ಎಂಬುದೇ ಆ ಗ್ರಹಿಕೆ. ನಕ್ಸಲ್ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಸಾಮಾಜಿಕ ಬದ್ಧತೆ ಹಾಗೂ ತ್ಯಾಗಗುಣಗಳ ಬಗ್ಗೆ ಈ ವಲಯದ ಲ್ಲಿ ಸಕಾರಣವಾದ ಗೌರವಾಭಿಮಾನವೂ ಇದೆ.

ಹಿನ್ನೆಲೆಯಲ್ಲಿ ಸುಮಾರು ಎರಡೂವರೆ ದಶಕಗಳ ಕಾಲ ನಕ್ಸಲ್ ಯಲ್ಲಿ ತೊಡಗಿಸಿಕೊಂಡು, ಹಾಲಿ ಭೂಗತರಾಗಿರುವ ನಕ್ಸಲ್ ನಾಯಕರು ಂತ್ರಿಕ ಮುಖ್ಯವಾಹಿನಿಗೆ ವಾಪಸ್ ಬರುತ್ತಾರೆ ಎಂಬ ಸುದ್ದಿ ತಿಳಿದ ದ ಪ್ರಗತಿಪರ ವಲಯ ಸಹಜವಾಗಿಯೇ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ. ಸೆಂಬರ್ 11ರಂದು ಉದಯವಾಣಿ ಪತ್ರಿಕಾ ಸಂದರ್ಶನದಲ್ಲಿ ಸಿರಿಮನೆ ಜ್ ನೀಡಿರುವ ಉತ್ತರವನ್ನು ಇಲ್ಲಿ ಉಲ್ಲೇಖನೀಯ. 'ಆ ಹಿರಿಯ ದರೆಲ್ಲಾ ನಿಮ್ಮನ್ನು ಬರಮಾಡಿಕೊಳ್ಳುವುದಕ್ಕೆ ಯಾಕೆ ಆಗಮಿಸಿದ್ದರು? ಕ್ಕೆ ಕಾರಣವೇನು?' ಎಂಬ ಪ್ರಶ್ನೆಗೆ "ಅಷ್ಟೆಲ್ಲ ಹಿರಿಯರು ಬಂದಿದ್ದರ ಮಾಧಾನವಾಗಿ ನೋಡಿದರೆ ಎರಡು ವಿಷಯ ನನಗೆ ಕಂಡುಬಂತು. ನೆಯದು, ಎಲ್ಲ ಚಳವಳಿಗಳು ಒಟ್ಟುಗೂಡಿ ಒಂದು ವೇದಿಕೆ ಅಡಿಯಲ್ಲಿ ಟ ಮಾಡುವುದು ಇವತ್ತಿನ ಚಾರಿತ್ರಿಕ ಅಗತ್ಯ ಎಂಬುದನ್ನು ಸಾರಿ ತಿತ್ತು, ಎರಡನೆಯದು, ಈ ವೇಳೆ ನಮ್ಮ ಪಾತ್ರ ಗುರುತಿಸಿಕೊಂಡು ಾಟ ಮಾಡುವ ಜವಾಬ್ದಾರಿ ಇದೆ ಎಂಬುದು ನನಗೆ ಕೆಯಾಯಿತು."

ಹಿಂದೆ ನೂರ್ ಮತ್ತು ನಾಗರಾಜ್‌ರವರು ಒಂದು ಪತ್ರಿಕಾ ಹೇಳಿಕೆ ದ್ದು, ಆ ಹೇಳಿಕೆ ಕೂಡ ಮೇಲಿನ ಅವರ ಆಶಯವನ್ನು ಸ್ಪಷ್ಟಪಡಿಸುತ್ತದೆ. ಸಾರ "ಕರ್ನಾಟಕದಲ್ಲಿ ನಾನಾ ಸೈದ್ಧಾಂತಿಕ ಹಿನ್ನೆಲೆಗಳ ಜನ ಚಳವಳಿಗಳೂ ಹಿನ್ನಡೆ ಅನುಭವಿಸಿವೆ. ಎಲ್ಲಾ ಜನಪರ ಸಂಘಟನೆಗಳು ಹಾಗೂ ತಮ್ಮನ್ನು ಆತ್ಮಾವಲೋಕನಕ್ಕೆ ಒಡ್ಡಿಕೊಳ್ಳುವ, ಆತ್ಮಸಾಕ್ಷಿಯನ್ನು ಂದಿಲ್ಲದ ಪ್ರಾಮಾಣಿಕ ಶಕ್ತಿಗಳು ಜನರ ಹಕ್ಕುಗಳಿಗಾಗಿ ದನಿಯೆತ್ತಲು ಬೇಕಿರುವ ಕಾಲ ಇದು ... ಈ ನಿಟ್ಟಿನಲ್ಲಿ ಕರ್ನಾಟಕದ ಸಮಾನ ಹೋರಾಟಗಾರರೆಲ್ಲರ ಜೊತೆಗೂಡಿ ಬಲಿಷ್ಠ ಪ್ರಜಾ ಚಳವಳಿಯನ್ನು ಸುವುದೇ ನಮ್ಮ ಗುರಿ."

ಈ ಹೊಸ ಪ್ರಕ್ರಿಯೆಗೆ ಒಳಗಾಗಿ ಜೈಲಿನಲ್ಲಿರುವ ನಕ್ಸಲ್ ನಾಯಕ ಶ್ರೀಧರ್ ಕೂಡ ಆದಷ್ಟು ಬೇಗ ಹೊರಬಂದು ಮುಖ್ಯವಾಹಿನಿ ಾಗಲಿ; ನಮ್ಮ ಸಾಮಾಜಿಕ ಚಳವಳಿಗಳಿಗೆ ಹೊಸ ಕಸುವು ತುಂಬಲಿ ಹಾರೈಸೋಣ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಮುಖ್ಯವಾಹಿನಿಗೆ ಮರಳುತ್ತಿರುವ ಸಂದರ್ಭದಲ್ಲಿ...

ಆತ್ಮೀಯ ಹೋರಾಟದ ಒಡನಾಡಿಗಳೆ, ಸಂಬಂಧ ಪಟ್ಟ ಸಮಿತಿ ಸದಸ್ಯರೆ ಹಾಗೂ ಮಾಧ್ಯಮದ ಮಿತ್ರರೆ,

ಹೋರಾಟಗಾರರಾಗಿ ನಮ್ಮ ಮಟ್ಟಿಗೆ ಇದೊಂದು ಮಹತ್ವದ ದಿನವಾಗಿದೆ. ಒಂದು ದಶಕಕ್ಕೂ ಹೆಚ್ಚುಕಾಲ ಅನಿವಾರ್ಯ ಕಾರಣಗಳಿಂದಾಗಿ ಭೂಗತರಾಗಿ ಕಾರ್ಯ ನಿರ್ವಹಿಸುತ್ತಿದ್ದ ನಾವು ಮುಕ್ತ ಅವಕಾಶವನ್ನು ಬಯಸುತ್ತಿದ್ದೆವಾದರೂ ಇಂಥಾ ಸಂದರ್ಭವೊಂದನ್ನು ಎದುರು ನೋಡಿರಲಿಲ್ಲ.

ಎಡಪಂಥೀಯ ಚಳವಳಿಯಲ್ಲಿ ಭೂಗತರಾಗಿರುವವರಿಗೆ ಸಾಮಾನ್ಯವಾಗಿ ಎರಡು ದಾರಿಗಳು ಮಾತ್ರ ತೆರೆದು ಕೊಂಡಿರುತ್ತವೆ. ಸರಿಯೋ-ತಪ್ಪೋ, ಸಾವೋ-ಬದುಕೋ ಅದೇ ಹಾದಿಯಲ್ಲಿ ಮುಂದುವರಿಯುವುದು ಅಥವಾ ಹೋರಾಟವನ್ನು ಕೈಬಿಟ್ಟು ಶರಣಾಗತರಾಗಿ ವೈಯಕ್ತಿಕ ಬದುಕಿನಲ್ಲಿ ನೆಲೆ ನಿಲ್ಲುವುದು. ಆದರೆ ಹೋರಾಟದ ಮಾರ್ಗವನ್ನು ಬದಲಾಯಿಸಿಕೊಂಡು ಮತ್ತೆ ಪ್ರಜಾತಾಂತ್ರಿಕ ಚಳವಳಿಯಲ್ಲಿ ಮುಕ್ತವಾಗಿ ತೊಡಗಿಸಿಕೊಂಡ ಉದಾಹರಣೆ ವಿರಳಾತಿವಿರಳ. ಕರ್ನಾಟಕದ ಸಂದರ್ಭದಲ್ಲಂತೂ ಇಲ್ಲವೇ ಇಲ್ಲ ಎನ್ನಬಹುದು.

ಕರ್ನಾಟಕಕ್ಕೆ ಇಂದು ಅಗತ್ಯವಿರುವುದು ವಿಶಾಲ, ಪ್ರಾಮಾಣಿಕ, ಗಂಭೀರ ಹಾಗೂ ದಿಟ್ಟ ಪ್ರಜಾ ಚಳವಳಿಯೇ ಹೊರತು ಜನರಿಂದ ಪ್ರತ್ಯೇಕವಾಗುಳಿದಿರುವ ಸಂಕುಚಿತ ಹಾಗೂ ದುಡುಕುತನದ ಸಶಸ್ತ್ರ ಹೋರಾಟವಲ್ಲ ಎಂಬ ದೃಢ ಅಭಿಪ್ರಾಯ ನಮ್ಮದು. 8 ವರ್ಷಗಳ ಹಿಂದೆ ನಾವು ಸಿಪಿಐ 'ಮಾವೋವಾದಿ' ಪಕ್ಷವನ್ನು ತೊರೆಯಲು ಇದೇ ಪ್ರಮುಖ ಕಾರಣ. ಆದರೆ ಆ ಪಕ್ಷದಿಂದ ಹೊರ ಬಂದರೂ ಸರ್ಕಾರ ಹಾಕಿರುವ ಕೇಸುಗಳಿಂದಾಗಿ ಅಜ್ಞಾತವಾಸ



ಸಿರಿಮನೆ ನಾಗರಾಜ್

ನೂರ್ ಶ್ರೀಧರ್

ದಲ್ಲಿದ್ದುಕೊಂಡೇ ಪ್ರಜಾ ಚಳವಳಿಗೆ ಪೂರಕವಾದ ಕೆಲಸವನ್ನು ಮಾಡುವುದು ಅನಿವಾರ್ಯವಾಗಿತ್ತು. ಇಂದು ನಿಮ್ಮೆಲ್ಲರ ಸಹಕಾರದಿಂದಾಗಿ ಸಾಮಾಜಿಕ ಕಳಕಳಿಯುಳ್ಳ ಎಲ್ಲರೊಟ್ಟಿಗೆ ಸೇರಿ ಹೆಚ್ಚು ಪರಿಣಾಮಕಾರಿಯಾಗಿ ಸಾಮಾಜಿಕ ಚಟುವಟಿಕೆ ಯಲ್ಲಿ ತೊಡಗಿಸಿಕೊಳ್ಳುವ ಸಂದರ್ಭ ಒದಗಿಬಂದಿದೆ.

ಇಂಥಾ ವಿನೂತನ ಪ್ರಜಾತಾಂತ್ರಿಕ ವಿದ್ಯಮಾನ ಕರ್ನಾಟಕದಲ್ಲಿ ಅನಾವರಣಗೊಳ್ಳಲು ಪ್ರಧಾನ ಕಾರಣ ಇಲ್ಲಿನ ಪ್ರಜ್ಞಾವಂತ ಹಾಗೂ ಪ್ರಜಾತಾಂತ್ರಿಕ ನಾಗರಿಕ ಸಮಾಜದ ಕಾಳಜಿಪೂರ್ವಕ ಸತತ ಪ್ರಯತ್ನ ಎಂದೇ ಹೇಳಬೇಕು. ಹಿರಿಯರಾದ ದೊರೆಸ್ವಾಮಿಯವರು, ಎ. ಕೆ. ಸುಬ್ಬಯ್ಯನವರು, ಗೌರಿ ಲಂಕೇಶ್, ದೇವನೂರ ಮಹಾ ದೇವ, ಇಂಧೂಧರ ಹೊನ್ನಾಪುರ, ವಿ.ಎಸ್. ಶ್ರೀಧರ್, ಪಾರ್ವತೀಶ, ಬರಗೂರು ರಾಮಚಂದ್ರಪ್ಪ ಮುಂತಾದ ಗಣ್ಯರು ಮಾತ್ರವಲ್ಲದೆ ಇತ್ತೀಚೆಗೆ ನಮ್ಮನ್ನಗಲಿದ ಅನಂತಮೂರ್ತಿ ಯವರನ್ನೂ ಒಳಗೊಂಡು ಕರ್ನಾಟಕದ ಸಮಸ್ತ ಪ್ರಗತಿಪರರು ಈ ಪ್ರಕ್ರಿಯೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಒತ್ತಾಸೆಯಾಗಿ ನಿಂತರು. ಪ್ರಜಾತಾಂತ್ರಿಕ ಸಮುದಾಯದ ಈ ದನಿ ಗಟ್ಟಿಗೊಳ್ಳುವುದರಲ್ಲಿ ಮಾಧ್ಯಮ ಮಿತ್ರರ ಪೂರಕ ಪಾತ್ರವೂ ಬಹಳ ಮುಖ್ಯವಾದುದು.

ಹಾಗೆಯೇ ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಹಾಗೂ ಈ ಉದ್ದೇಶಕ್ಕೆಂದೇ ರಚಿತವಾಗಿರುವ ಸಂಬಂಧಪಟ್ಟ ರಾಜ್ಯ ಸಮಿತಿ ಈ ಪ್ರಕ್ರಿಯೆಗೆ ಸಕಾರಾತ್ಮಕ ವಾಗಿ ಸ್ಪಂದಿಸಿದ್ದರಿಂದ ಈ ಹೊಸ ರೀತಿಯ ಪ್ರಯತ್ನ ಸಾಕಾರರೂಪಕ್ಕೆ ಬರಲು ಸಾಧ್ಯವಾಗಿದೆ. ನಮಗೆ ಸಮಾನ ಮನಸ್ಕರೊಂದಿಗೆ ಜೊತೆಗೂಡಿ ಕೆಲಸ ಮಾಡುವ ಹೊಸ ಅವಕಾಶಗಳು ತೆರೆದಂತಾಗಿದೆ. ಇದಕ್ಕಾಗಿ ಮೇಲ್ಕಂಡ ಎಲ್ಲರಿಗೂ, ವಿಶೇಷವಾಗಿ "ಶಾಂತಿಗಾಗಿ ನಾಗರಿಕ ವೇದಿಕೆಯ ಗಣ್ಯರಿಗೆ ನಮ್ಮ ಹೃದಯಪೂರ್ವಕ ಧನ್ಯವಾದಗಳು.

ಆತ್ಮೀಯರೆ,

ನಾವು ಬಹಿರಂಗವಾಗಿ ಬರುವ ತೀರ್ಮಾನ ತೆಗೆದು ಕೊಂಡದ್ದು ಹೋರಾಟದಿಂದ ಬೇಸತ್ತೋ, ಸರ್ಕಾರಿ ಪ್ಯಾಕೇಜಿನ ಆಸೆಯಿಂದಲೋ ಅಥವ ವೈಯಕ್ತಿಕ ಸುಖವನ್ನು ಬಯಸಿಯೋ ಖಂಡಿತ ಅಲ್ಲ. ಬದಲಿಗೆ, ಸಾಮಾಜಿಕ ಹೋರಾಟದಲ್ಲಿ ನಿರತರಾಗಿರುವ ಪ್ರಾಮಾಣಿಕ ಮನಸ್ಸುಗಳೊಂದಿಗೆ ಕೈಜೋಡಿಸಿ ಸಮಾಜ ಪರಿವರ್ತನೆಯ ಹೊಸ ಮಾರ್ಗಗಳನ್ನು ಅನ್ವೇಷಿಸಬೇಕು ಎಂಬ ಏಕೈಕ ಕಾರಣಕ್ಕಾಗಿ. ಆ ಮೂಲಕ ಜನರ ಕಷ್ಟಗಳಿಗೆ ಇನ್ನೂ ಹತ್ತಿರವಾಗಬೇಕು. ಜನರೊಟ್ಟಿಗೆ ಇನ್ನೂ ನಿಕಟ ರೀತಿಯಲ್ಲಿ ಬೆರೆತು ಕೆಲಸ ಮಾಡಬೇಕು ಎಂಬುದು ನಮ್ಮ ಆಶಯ. ಇಂದು ನಮ್ಮ ಸಮಾಜ ಅತ್ಯಂತ ಸಂದಿಗ್ಧ ಹಾಗೂ ಸಂಕ್ರಮಣ ಕಾಲಘಟ್ಟ ದಲ್ಲಿದೆ. ಸಮಾಜದಲ್ಲಿ ವರ್ಗ, ಜಾತಿ, ಲಿಂಗ, ಧರ್ಮ, ಭಾಷೆ, ಪ್ರಾಂತ್ಯ ಇತ್ಯಾದಿ ರೂಪಗಳಲ್ಲಿ ಶೋಷಣೆ, ತಾರತಮ್ಯ ಹಾಗೂ ಅಸಮಾನತೆ ದಿನೇದಿನೇ ಹೆಚ್ಚಾಗುತ್ತಲೇ ಇವೆ. ಇಂಥಾ ವಿಷಮ ಸನ್ನಿವೇಶದಲ್ಲಿ, ಒಂದೆಡೆ ಈ ಅಸಮಾನತೆಗಳ ವಿರುದ್ಧ ಹೋರಾಡುತ್ತಾ ಬಂದ ವಿವಿಧ ಧಾರೆಯ ಪ್ರಗತಿಪರ ಚಳವಳಿಗಳು ಸಾಪೇಕ್ಷವಾಗಿ ದುರ್ಬಲಗೊಂಡಿವೆ. ಮತ್ತೊಂದೆಡೆ ಈ ಎಲ್ಲಾ ಅಸಮಾನತೆಗಳನ್ನು ಪೋಷಿಸುವ ಹಾಗೂ ಪ್ರಚೋದಿಸುವ ವಿವಿಧ ಮುಖವಾಡಗಳ ಪ್ರತಿಗಾಮಿ ಶಕ್ತಿಗಳು ಕರ್ನಾಟಕದಲ್ಲೂ, ಭಾರತದಲ್ಲೂ ಬೆಳೆಯುತ್ತಿವೆ.

ಈ ವಿದ್ಯಮಾನಗಳು ನಮ್ಮ ಸೂಕ್ಷ್ಮ ಸಾಮಾಜಿಕ ಸಂರಚನೆ ಮೇಲೆ, ಜನರ ಬದುಕು ಹಾಗೂ ಮನಸ್ಥಿತಿಯ ಮೇಲೆ ಘೋರ ಪರಿಣಾಮಗಳನ್ನು ಬೀರುತ್ತಿವೆ, ಬೀರಲಿವೆ. ಹೀಗಾಗಿ ಚಳವಳಿಗಾರರಾದ ನಾವುಗಳು ಅಳವಡಿಸುತ್ತಾ ಬಂದ ಹೋರಾಟದ ಮಾರ್ಗ ಹಾಗೂ ಕಾರ್ಯವೈಖರಿಗಳ ಬಗ್ಗೆ ಪುನರಾವಲೋಕನ ಮಾಡಿಕೊಳ್ಳಬೇಕಾದ ತುರ್ತು ಒದಗಿದೆ. ಎಲ್ಲಾ ಜನಪರ, ಜೀವಪರ ಶಕ್ತಿಗಳು ಒಟ್ಟಿಗೆ ಕಲೆತು, ಸುತ್ತಲ ಅನ್ಯಾಯ, ನೋವು, ಸಾವು ಹಾಗೂ ವಿನಾಶದ ವಿರುದ್ಧ ಅನೇಕ ಹೊಸ ರೀತಿಯ ದಿಟ್ಟ ಹಾಗೂ ನಿಸ್ವಾರ್ಥ ಹೋರಾಟಗಳನ್ನು ಹಮ್ಮಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.

ಮುಖ್ಯವಾಹಿನಿಗೆ ಮರಳುವ ನಮ್ಮ ಈ ತೀರ್ಮಾನ ಸಹ ಇಂದಿನ ಸಂದರ್ಭದ ಕರೆಗೆ ನಮ್ಮದೇ ರೀತಿಯ ಪ್ರಾಮಾಣಿಕ ಪ್ರತಿಕ್ರಿಯೆಯಾಗಿದೆ. ಹಾಗಾಗಿ ನಮ್ಮ ಈ ಹೆಜ್ಜೆ ನಾವು ನಂಬಿದ ಸಮಸಮಾಜಕ್ಕಾಗಿ ಶ್ರಮಿಸಬೇಕೆಂಬ ಆಶಯಗಳ "ಶರಣಾಗತಿಯಾಗಿರದೆ", ಭೂಗತ ಹಾಗೂ ರಹಸ್ಯ ಮಾರ್ಗದಿಂದ "ಬಹಿರಂಗ ಹಾಗೂ ಪ್ರಜಾತಾಂತ್ರಿಕ ಹೋರಾಟಗಳ ಮುಖ್ಯವಾಹಿನಿಗೆ" ಮರಳುವಿಕೆ ಎಂಬುದು ನಮ್ಮ ದೃಢ ಅಭಿಪ್ರಾಯವಾಗಿದೆ.

ನಮ್ಮ ಹೋರಾಟದ ಬದುಕಿನ ಈ ನಿರ್ಣಾಯಕ ಘಟ್ಟದಲ್ಲಿ, ಕರ್ನಾಟಕದ ನಾಗರಿಕ ಸಮಾಜ ನಮ್ಮ ನಿಲುವು ಹಾಗೂ ಬದ್ಧತೆಯ ಮೇಲೆ ವಿಶ್ವಾಸವನ್ನಿಟ್ಟು ಈ ಪ್ರಕ್ರಿಯೆಗೆ ಬೆಂಬಲವಾಗಿ ನಿಂತಿದೆ. ನಿಮ್ಮೆಲ್ಲರ ವಿಶ್ವಾಸಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವುದು ನಮ್ಮ ಕರ್ತವ್ಯ ಎಂದು ನಾವು ಭಾವಿಸುತ್ತೇವೆ. ಚಳವಳಿಯ ಬೆಳವಣಿಗೆಯ ದೃಷ್ಟಿಯಿಂದ ನಮ್ಮಿಂದ ಹೆಚ್ಚಿನ ನಿರೀಕ್ಷೆಗಳನ್ನು ಇಟ್ಟುಕೊಂಡಿರುವ ಅನೇಕ ಮಿತ್ರರಿದ್ದಾರೆ ಎಂಬ ಸಂಗತಿ ಕೂಡ ನಮ್ಮ ಗಮನದಲ್ಲಿದೆ. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಬದುಕಲು ನಾವು ಸಂಪೂರ್ಣ ನಿಷ್ಠೆಯೊಂದಿಗೆ ಶ್ರಮಿಸುತ್ತೇವೆ ಎಂದು ನಿಮ್ಮೆಲ್ಲರ ಸಮ್ಮುಖದಲ್ಲಿ ದೃಢವಾಗಿ ಹೇಳಬಯಸುತ್ತೇವೆ.

ಇನ್ನೂ ಕೆಲವರು ನಮ್ಮ ಈ ತೀರ್ಮಾನವನ್ನು ಅನುಮಾನದಿಂದಲೂ ನೋಡುತ್ತಿದ್ದಾರೆ. ಹಲವಾರು ಪ್ರಶ್ನೆಗಳು, ಗೊಂದಲಗಳು ಅವರ ಮನಸ್ಸಿನಲ್ಲಿವೆ. ನಾವು ಈ ಸಂದರ್ಭದಲ್ಲಿ ಆ ಎಲ್ಲ ಮಿತ್ರರಿಗೆ ಮನಃಪೂರ್ವಕವಾಗಿ ಹೇಳಬಯಸುವುದಿಷ್ಟೆ. ನಮ್ಮ ಈ ನಡೆ, ಸರಿಯೋ ತಪ್ಪೋ ಎಂಬುದನ್ನು ಭವಿಷ್ಯದ ನಮ್ಮ ಕ್ರಿಯೆಯೇ ರುಜುವಾತು ಪಡಿಸಬೇಕಿದೆ. ಸದ್ಯಕ್ಕೆ ನಾವು ಹೇಳಬಹುದಾದದ್ದಿಷ್ಟೆ: ನಾವು ಸಾಮಾಜಿಕ ಕಾರ್ಯಕರ್ತರಾಗಿದ್ದವರು-ಸಾಮಾಜಿಕ ಕೆಲಸವನ್ನು ಅದೇ ನಿಷ್ಠೆ ಹಾಗೂ ಬದ್ಧತೆ ಜೊತೆ ಮುಂದುವರಿಸುತ್ತೇವೆ. ಸಕಲ ರೀತಿಯ ಅಸಮಾನತೆಗಳಿಗೆ ಎದುರಾಗಿ ಮನುಕುಲದ ಮಾನವೀಯ ಮುನ್ನಡೆಗಾಗಿ ದುಡಿದ, ಮಡಿದ ಸಮಸ್ತ ಹೋರಾಟದ ಚೇತನಗಳನ್ನು ಸ್ಮರಿಸಿಕೊಳ್ಳುತ್ತಾ ಅವರ ಆಶಯಗಳ ಸಾಕಾರಕ್ಕಾಗಿ ಬಲಿಷ್ಠ ಪ್ರಜಾ ಚಳವಳಿಯನ್ನು ನಿರ್ಮಿಸಲು ಕಟಿಬದ್ಧರಾಗಿರುವ ಕಾಲಾಳುಗಳಾಗಿ ದುಡಿಯುತ್ತೇವೆ.

ಆತ್ಮೀಯರೆ,

ಮುಖ್ಯವಾಹಿನಿಗೆ ಮರಳುವ ಪ್ರಕ್ರಿಯೆಯಲ್ಲಿ ಇದು ಮೊದಲ ಹೆಜ್ಜೆ ಮಾತ್ರ. ಸ್ವತಂತ್ರ ಅವಕಾಶವನ್ನು ಪಡೆದುಕೊಳ್ಳಲು, ಸಲ್ಲದ ಆರೋಪಗಳಿಂದ ಮುಕ್ತವಾಗಲು ಇನ್ನೂ ಹಲವು ಹಂತದ ಕಾನೂನು ಪ್ರಕ್ರಿಯೆ ಹಾಗೂ ತೊಡಕುಗಳ ಮೂಲಕ ಸಾಗಿಬರಬೇಕಾದ ಅನಿವಾರ್ಯತೆಯಿದೆ. ಈ ಪಯಣದಲ್ಲಿಯೂ ನಿಮ್ಮೆಲ್ಲರ ನೆರವು ಹಾಗೂ ಸಹಕಾರ ಮುಂದುವರಿಯಲೆಂದು ವಿನಂತಿ.


ವಿನೆಲ್ಲಾ ಅಡಚಣೆಗಳಿದ್ದಾಗ್ಯೂ ನಮ್ಮನ್ನು ಅಪಾರ ಗೌರವ ಹಾಗೂ ಘನತೆಯೊಂದಿಗೆ ಪ್ರಜಾ ಚಳವಳಿಗಳ ಮುಖ್ಯವಾ ಹಿನಿಗೆ ಬರಮಾಡಿಕೊಳ್ಳುತ್ತಿರುವ ನಿಮಗೆಲ್ಲರಿಗೂ ಮತ್ತೊಮ್ಮೆ ಮನಃಪೂರ್ವಕ ಧನ್ಯವಾದಗಳು.

ಹೋರಾಟದ ವಂದನೆಗಳೊಂದಿಗೆ,

ನಿಮ್ಮ

ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್

ಸಿರಿಮನೆಯ ಗೆಳೆಯ ನಾಗರಾಜ್



"ಇತ್ತೀಚೆಗೆ ಕಾಡು ಬಿಟ್ಟು ನಾಡಿಗೆ ಬಂದು ಮುಖ್ಯವಾಹಿನಿಗೆ ಸೇರಿದ ಸಿರಿಮನೆ ನಾಗರಾಜ್ ಹಿಂದೊಮ್ಮೆ ಕಾಡು ಸೇರಿದಂದಿನಿಂದ ನಮಗೆಲ್ಲ ಒಗಟಾಗಿ ಕಾಡಿದ ವ್ಯಕ್ತಿ. ಏಕೆಂದರೆ ಹಿಂಸೆಯ ಪದವೇ ಅವರ ಬಾಯಲ್ಲೆಂದೂ ಬಂದಿರಲಿಲ್ಲ, ಎಂತಹ ಸಮಯದಲ್ಲೂ ತಾಳ್ಮೆ ಕಳೆದುಕೊಳ್ಳದ ವ್ಯಕ್ತಿ. ನಮ್ಮ ಸಿಟ್ಟಿಗೆ ಸಾಂತ್ವನ ಹೇಳುತ್ತ ಸಹನೆ ಕಳೆದುಕೊಂಡರೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ ಎಂದು ಹೇಳುತ್ತಿದ್ದವರು. ಅದನ್ನೆ ತಮ್ಮ 'ಮುಂಜಾವು' ಎಂಬ ಪತ್ರಿಕೆಯಲ್ಲೂ ಬರೆಯುತ್ತಿದ್ದರು, ಬರೆದಂತೆ ಬದುಕುತ್ತಿದ್ದರು.

ಎಂಬತ್ತರ ದಶಕದಲ್ಲಿ ಚಿಕ್ಕಮಗಳೂರಿನ ಸಿಪಿಐ ನಾಯಕ ಬಿ.ಕೆ. ಸುಂದರೇಶ್ ಒಮ್ಮೆ ಮಾತನಾಡುತ್ತ "ಈ ಸಿರಿಮನೆ ನಾಗರಾಜ್ ಯಾವುದೇ ಹೋರಾಟದಲ್ಲಿ ನಮಗಿಂತಲೂ ಬದ್ಧತೆ ಇರುವ ವ್ಯಕ್ತಿ. ಎಂತಹ ಸನ್ನಿವೇಶದಲ್ಲೂ ಅವರಷ್ಟು ತಾಳ್ಮೆ ನಮ್ಮಲ್ಲಿಲ್ಲ" ಎಂದು ಹೇಳಿದ್ದರು. ಸುಂದರೇಶ್ ಇದ್ದಿದ್ದರೆ ಸಿರಿಮನೆ ಕಾಡು ಪಾಲಾಗುತ್ತಿರಲಿಲ್ಲ; ಸಿ.ಟಿ.ರವಿ ಎಂಬ ಸಮಸ್ಯೆ ಚಿಕ್ಕಮಗಳೂರಲ್ಲಿ ಉದ್ಭವವಾಗುತ್ತಿರಲಿಲ್ಲ; ಇನ್ನೂ ಎಂತೆಂಥವೊ ಅನಾಹುತಗಳು ನಡೆಯುತ್ತಿರಲಿಲ್ಲ.

ಸಿರಿಮನೆ ಬ್ರಾಹ್ಮಣರು ಎಂಬುದು ನಮ್ಮ ತಲೆಯಲ್ಲೆಂದೂ ಸುಳಿಯಲಿಲ್ಲ, ಏಕೆಂದರೆ ಜಾತಿ ಎಂಬ ಮೂಢನಂಬಿಕೆಯನ್ನು ಬಿಟ್ಟು ಅವರು ಬಯಲಿಗೆ ಬಂದು ಬಹಳ ವರ್ಷವಾಗಿತ್ತು, ತೊಂಬತ್ತರ ದಶಕದಲ್ಲಿ ತಮ್ಮ ತಂಗಿಯನ್ನು ಹರಿಜನರ ಹುಡುಗನಿಗೆ ಕೊಟ್ಟು ಮದುವೆ ಮಾಡಿದ್ದರು. ಇದು ಕೊಪ್ಪ ಶೃಂಗೇರಿ ಹರಿಹರಪುರದ ಬ್ರಾಹ್ಮಣರಿಗೆ ಸಿಡಿಲಿನ ಸಂಗತಿಯಾಗಿತ್ತು, ಆಗ ಸಿರಿಮನೆ ಚಿಕ್ಕಪ್ಪನ ಹೆಣ್ಣುಮಕ್ಕಳಿಗೆ ಯಾರೊ ಬ್ರಾಹ್ಮಣರು "ನಿಮಗ್ಯಾರೂ ಹರಿಜನರ ಹುಡುಗರು ಸಿಕ್ಕಲಿಲ್ಲವೆ? ನಿಮಗಿನ್ನು ಅವರೇ ಗತಿ" ಎಂದು ಮೂದಲಿಸಿದರು. ಆಘಾತಗೊಂಡ ಆ ಇಬ್ಬರು ಹೆಣ್ಣುಮಕ್ಕಳು ಮೆಟಾಸಿಡ್ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಅದೇ ಸಮಯಕ್ಕೆ ಹರಿಹರಪುರ ಮಠದ ಜಗದ್ಗುರುಗಳ ಮೇಲೆ ಒತ್ತಡ ತಂದ ಬ್ರಾಹ್ಮಣರು ಸಿರಿಮನೆ ಕುಟುಂಬವನ್ನು ಬಹಿಷ್ಕರಿಸಿದರು. ಇದು ಸಿರಿಮನೆಯವರ ತಂದೆತಾಯಿಗಳಿಗೆ ತುಂಬಾ ನೋವುಂಟುಮಾಡಿತ್ತು, ತಮ್ಮ ಮಗಳು ಹರಿಜನರ ಹುಡುಗನನ್ನು ಮದುವೆಯಾಗಲು ಒಪ್ಪಿಗೆ ಕೊಟ್ಟಿದ್ದ ಅವರು ಈ ಬಹಿಷ್ಕಾರದಿಂದ ಘಾಸಿಗೊಳಗಾಗಿದ್ದರು.

ಆಗ ಏನೋ ಮಾಡಲು ಹೋಗಿ ಇನ್ನೇನೂ ಆಯ್ತಲ್ಲ ಎಂದು ಗಾಬರಿಗೊಂಡಿದ್ದ ಸಿರಿಮನೆ "ಈ ಸಮಸ್ಯೆಯನ್ನು ತೇಜಸ್ವಿಯ ಬಳಿ ಚರ್ಚಿಸೋಣ ಬನ್ನಿ ಗೌಡರೆ" ಎಂದು ಫೋನು ಮಾಡಿದರು. ಸುಂದರೇಶ್ ಜೊತೆ ನಾನು ಮೂಡಿಗೆರೆ ಬಸ್‌ಸ್ಟ್ಯಾಂಡಿನಲ್ಲಿ ಇಳಿದಾಗ ಸಿರಿಮನೆ ಮತ್ತು ಒಬ್ಬ ಮಹಿಳೆ ಒಂದು ಪುಟಾಣಿ ಹೆಣ್ಣು ಮಗುವಿನೊಂದಿಗೆ ನಿಂತಿದ್ದರು.

ಆ ಮಹಿಳೆ ಸಿರಿಮನೆಯವರ ತಾಯಿ, ಮಗು ಅವರ ಕೊನೆಯ ತಂಗಿ ಇರಬಹುದೆಂದು ನಾನು ಊಹಿಸಿದೆ. ಆದರೆ ನಿಜ ಗೊತ್ತಾದಾಗ ತುಂಬಾ ಅಚ್ಚರಿಗೊಂಡೆ. ಯಾಕೆಂದರೆ ಹೇಮಾ ಅವರಿಗೆ ಇನ್ನು ಮದುವೆಯೇ ಆಗುವುದಿಲ್ಲವೆಂಬಷ್ಟು ವಯಸ್ಸಾದಾಗ ಸಿರಿಮನೆ ಅವರ ಕೈಹಿಡಿದಿದ್ದರು. ಅವರಿಗೊಂದು ಹೆಣ್ಣು ಮಗುವಾಗಿತ್ತು, ಅವಳೇ ಮಲ್ಲಿಗೆ. ಇಷ್ಟಾದರೂ ನನ್ನ ಅವ್ವನಂತಿದ್ದ ಹೇಮಾ ಅವರನ್ನು ಸಿರಿಮನೆ ಹೆಂಡತಿಯಂತೆ ಮಾತನಾಡಿಸುತ್ತಿದ್ದುದು ನನಗೆ ಒಪ್ಪಿತವಾಗುತ್ತಿರಲಿಲ್ಲ. ಸಿರಿಮನೆ ಹೋರಾಟದ ಬದ್ಧತೆ ವಿಷಯದಲ್ಲಿ ಅತ್ಯಂತ ಪ್ರಾಮಾಣಿಕ ವ್ಯಕ್ತಿ ಎಂದು ಸುಂದರೇಶ್ ಹೇಳಿದ್ದು ನೆನಪಿಗೆ ಬಂದು ಸುಮ್ಮನಾದೆ.

ತೇಜಸ್ವಿಯವರ ಮನೆಗೆ ಹೋಗಿ ಕಾಯಲಾರಂಭಿಸಿದೆವು. ಸ್ವಲ್ಪ ಸಮಯದ ನಂತರ ತೇಜಸ್ವಿ ಮನೆ ಹಿಂದಿನ ಕಾಡಿನಿಂದ ಒಂಟಿಸಲಗದಂತೆ ಬಂದು "ತುಂಬ ಹೊತ್ತಾಯ್ತೇನ್ರಿ ಬಂದು?" ಎಂದರು. ನಮ್ಮೆಲ್ಲ ಮಾತುಗಳಿಗೆ ಹಾಸ್ಯ ಮಾಡುತ್ತಿದ್ದ ಅವರು ಸಿರಿಮನೆ ಸಹೋದರಿಯರು ಮೆಟಾಸಿಡ್ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ವಿಷಯ ಕೇಳಿ ಗಂಭೀರವಾದರು. ಕಡೆಗೆ "ಈಗ ನಾವೇನು ಮಾಡಬೇಕು ಹೇಳಿ" ಎಂದರು. "ಹರಿಹರಪುರ ಮಠದ ಜಗದ್ಗುರುಗಳು ನಮ್ಮನ್ನು ಬಹಿಷ್ಕರಿಸಿದ್ದಾರೆ. ನಮ್ಮ ಜೊತೆ ಬಂದಿದ್ದ ತಂದೆತಾಯಿ ಕ್ಷಮೆ ಕೇಳಿ ಮತ್ತೆ ವಾಪಸು ಹೋಗುತ್ತಿದ್ದಾರೆ. ಏನು ಮಾಡದು ಸಾರ್" ಎಂದರು ಸಿರಿಮನೆ. "ಹೋಗ್ಲಿ ಬಿಡ್ರಿ ಅತ್ಲಗೆ. ಅವುನ್ಯಾಕೆ ಯಳದಾಡ್ತಿರಿ. ಈ ಜಗದ್ಗುರುಗಳವುರಲ್ಲಾ ಅವುರ ಜೊತೆ ಮಾತಾಡಕ್ಕೆ ಸಾಧ್ಯವೇಯಿಲ್ಲ ಕಂಡ್ರೀ. ನೀವು ತಿಂದಂಗೂ ಚಪಾತಿ ಯಸಿತಾಯಿರತರೆ. ಕಡಿಗೆ ಸೋಲೋದು ನಾವೆಯ. ಅವುರಿಗೆ ಗೊತ್ತಿದ್ದೂ ಅಂಗೆ ಮಾಡ್ತರೆ ಕಂಡ್ರೀ. ಗೊತ್ತಿದ್ದೂ ಮಾಡೋರ್ನ ಸೋಲಸಕ್ಯಾಗುತ್ತೇನ್ರಿ? ಏನಪ್ಪಾ ಅಂದ್ರೆ ನಾವು ಸಭೆ ಮಾಡಿ ಬೈಯ್ಯಬಹುದಷ್ಟೆ" ಎಂದರು. ತೇಜಸ್ವಿ ಸಲಹೆಯಂತೆ ಶೃಂಗೇರಿಯಲ್ಲಿ ಜಗದ್ಗುರುಗಳನ್ನು ವಾಚಾಮಗೋಚರವಾಗಿ ಬೈಯ್ಯುವ ಸಭೆ ಏರ್ಪಡಿಸುವ ತೀರ್ಮಾನದಿಂದ ಎದ್ದು ಬಂದೆವು. ಈ ಸಂಗತಿ ರಾಮದಾಸರಿಗೆ ತಲುಪಿ ಅವರು ತೇಜಸ್ವಿ ಜೊತೆ ಚರ್ಚಿಸಿದ ನಂತರ ಶೃಂಗೇರಿಯಲ್ಲಿ ಅಂತರ್ಜಾತಿ ವಿವಾಹಿತರ ಸಮಾವೇಶ ಜರುಗುವಂತೆ ಏರ್ಪಾಡು ನಡೆಯತೊಡಗಿದವು.

ಶೃಂಗೇರಿಯಲ್ಲಿ ಅಕ್ಟೋಬರ್ ಎರಡರಂದು ಗಾಂಧಿ ಜಯಂತಿಯ ದಿನವೇ ಅಂತರ್ಜಾತಿ ವಿವಾಹಿತರ ಸಮಾವೇಶ ನಿಗದಿಯಾಯಿತು. ಆ ದಿನವೇ ಶ್ರೀರಂಗಪಟ್ಟಣದಲ್ಲಿ ರೈತ ಸಂಘ, ಪ್ರಗತಿರಂಗ ಹಾಗು ಭಾಷಾ ಚಳವಳಿ ನಾಯಕರೆಲ್ಲಾ ಸೇರಿ ಒಟ್ಟಾಗಿ ಚುನಾವಣೆ ಎದುರಿಸುವಂತಹ ಚರ್ಚಾಸಭೆಯನ್ನು ನಂಜುಂಡಸ್ವಾಮಿ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ಆದರೆ ಶೃಂಗೇರಿ ಸಭೆಗೆ ರಾಮದಾಸ್ ಮತ್ತು ತೇಜಸ್ವಿ ಬಂದಿದ್ದರಿಂದ ಶ್ರೀರಂಗಪಟ್ಟಣದ ಸಭೆಗೆ



ಪ್ರಗತಿರಂಗದ ನಾಯಕರು ಹೋಗಲಿಲ್ಲ, ಸಹಜವಾಗಿ ಕೆಂಡಮಂಡಲವಾದ ನಂಜುಂಡಸ್ವಾಮಿಯವರು "ಇದೆಲ್ಲಾ ಆ ಲಂಕೇಶನ ಕಿತಾಪತಿ" ಎಂದು ಟೀಕಿಸಿ ದೂರ ಸರಿದರು.

ನಾವು ಹಿಂದುಮುಂದು ನೋಡದೆ ನಿಗದಿಪಡಿಸಿದ ದಿನಾಂಕದಂದು ಒಂದು ದೊಡ್ಡ ಅನಾಹುತವೇ ನಡೆದುಹೋಯಿತು. ಹತ್ತಿರ ಬರಲಿದ್ದ ರೈತಸಂಘದ ಲೀಡರುಗಳು, ಪ್ರಗತಿರಂಗದ ವಿದ್ವಾಂಸರು, ಭಾಷಾ ಚಳವಳಿಯ ಕ್ರಾಂತಿಕಾರಿಗಳು ಪರಸ್ಪರ ದ್ವೇಷ ಕಾರಿಕೊಂಡು ದೂರಹೋದದ್ದರಿಂದ ಬಿಜೆಪಿ ಬೆಳೆಯುವಂತಾಯಿತು. ಚಿಕ್ಕಮಗಳೂರಲ್ಲಿ ದಲಿತ ಸಂಘ, ಸಿಪಿಐ ಮತ್ತು ಪ್ರಗತಿಪರ ಚಳವಳಿಗಾರರೆಲ್ಲಾ ಹಿನ್ನಡೆಗೆ ಬಂದು ಸಾಮಾಜಿಕ ಸಮಸ್ಯೆಯಂತಿರುವ ಸಿ.ಟಿ. ರವಿ ಬೆಳೆಯುವಂತಾಯಿತು.

ಸಿರಿಮನೆ ಹೋರಾಟದ ಫಲವಾಗಿ ಶೃಂಗೇರಿಯಲ್ಲಿ ಅಂತರ್ಜಾತಿ ವಿವಾಹಿತರ ಸಮಾವೇಶ ನಡೆದರೂ ಆನಂತರ ಅವರ ಎಲ್ಲಾ ಹೋರಾಟ ಮತ್ತು 'ಮುಂಜಾವು' ಪತ್ರಿಕೆಯ ಲೇಖನಗಳಿಗೆ ಸಮಾಜಘಾತುಕ ಶಕ್ತಿಗಳಿಂದ ತುಂಬಾ ಪ್ರತಿರೋಧ ವ್ಯಕ್ತವಾದವು. ಗುಬಗದ್ದೆ ಕಾಡನ್ನು ಕಡಿಯದಂತೆ ಅವರು ರೂಪಿಸಿದ ಹೋರಾಟಕ್ಕೆ ಲಂಕೇಶ್, ತೇಜಸ್ವಿ, ರಾಮದಾಸ್ ಬಂದು ಒಂದು ದಿನ ಉಪವಾಸ ಕುಳಿತು ಹೋದರು. ಆದರೂ ಕೋರ್ಟು ಮರ ಕಡಿಯುವವರ ಪರ ತೀರ್ಪು ನೀಡಿತು. ಕೊಪ್ಪದ ಕ್ರಿಕೆಟ್ ಮೈದಾನ ಹೋರಾಟದಲ್ಲಿ ಸಿರಿಮನೆ ವೈರಿಗಳನ್ನು ಸೃಷ್ಟಿಸಿಕೊಂಡರು. ಒಂದು ಹಂತದಲ್ಲವರು ಕೊಲೆ ಆಗುವ ಸಂಭವವೂ ಇತ್ತು, ಆ ಸಮಯದಲ್ಲಿ ಪತ್ರಕರ್ತ ಗಂಗಾಧರ ಮೂರ್ತಿ ಕೊಲೆಯಾಗಿದ್ದರಿಂದ 'ಅದೇ ಹಾದಿಯಲ್ಲಿ ಸಿರಿಮನೆ ನಾಗರಾಜ್' ಎಂದು ಲೇಖನ ಬರೆದ ನಾನು "ಈ ಪ್ರಾಂತ್ಯದ ಅನ್ಯಾಯಗಳ ವಿರುದ್ಧ ಹೋರಾಟವನ್ನು ಸ್ಥಗಿತ ಮಾಡಿ, ನಮ್ಮಂತೆ ಬದುಕುವ ಕಲೆಯನ್ನು ಕರಗತ ಮಾಡಿಕೊಳ್ಳಿ" ಎಂದು ಹೇಳಿಬಂದಿದ್ದೆ.

ಕ್ರಮೇಣ ನಮ್ಮ ಸಾಂಸ್ಕೃತಿಕ ಲೋಕದ ಲೀಡರುಗಳೆಲ್ಲಾ ತಮ್ಮ ತಮ್ಮ ವಿರುದ್ಧವೇ ಹೋರಾಡಿಕೊಂಡು ಕಣ್ಮರೆಯಾಗತೊಡಗಿದರು. ನಾವೆಲ್ಲಾ ತಬ್ಬಲಿತನವನ್ನು ಅನುಭವಿಸುತ್ತ ಊರೊಳಗೆ ಇರುವಾಗ ಸಿರಿಮನೆ ಕಾಡು ಸೇರಿಕೊಂಡು ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸಿದರು. ಏಕೆಂದರೆ ಅವರ ಮನಸ್ಸಿಗೂ, ಕೈಯಲ್ಲಿ ಕೋವಿ ಹಿಡಿದು ಅಮಾಯಕರನ್ನು ಉಡಾಯಿಸುವ ಮನಸ್ಸಿಗೂ ಸಂಬಂಧವೇ ಇರಲಿಲ್ಲ, ಅದಕ್ಕಿಂತ ಮುಖ್ಯವಾಗಿ ಯಾವ ತಪ್ಪನ್ನೂ ಮಾಡದೇ ಕಾಡು ಸೇರಿಕೊಂಡು ಪಾಂಡವರಂತೆ ಅಲೆಯುವುದು ಮೂರ್ಖತನದ ಪರಮಾವಧಿ ಎಂಬುದು ನಮ್ಮ ಭಾವನೆಯಾಗಿತ್ತು.

ಸಿ.ಟಿ.ರವಿಯಂತವನು ಎಸಿ ನಿಯಂತ್ರಿತ ಮನೆಯಲ್ಲಿ ಕುಳಿತು ಬಾಬಾಬುಡನ್‌ಗಿರಿಗೆ ಬೆಂಕಿ ಹಚ್ಚುವುದು ಹೇಗೆ, ದಿನ ಬೆಳಗಾಯ್ತೆಂದರೆ ಜಿಲ್ಲಾ ಕಚೇರಿಗೆ ಕಲ್ಲು ಹೊಡೆಯುವುದು ಹೇಗೆ ಎಂದು ಮನೆಹಾಳ ಕಾರ್ಯಕ್ರಮಗಳನ್ನು ರೂಪಿಸುತ್ತಿರುವ ಸಮಯದಲ್ಲೇ, ಅಗಾಧ ಕಾಡೊಳಗೆ ನಿಶಾಚರಿಗಳಂತೆ ಅಲೆಯುವವರು ಖಂಡಿತ ಆತ್ಮಹತ್ಯೆ ದಾರಿಯ ಜನ ಎಂದು ಅನ್ನಿಸಿತ್ತು.

ಅದಕ್ಕಿಂತಲೂ ನಮ್ಮ ದೇಶದ ಪೊಲೀಸರು, ಮಿಲಿಟರಿ ಇತ್ಯಾದಿ ಪಡೆಗಳ ಅರಿವಿದ್ದವರು ಗಾಂಧಿ ಮಾರ್ಗ ಹಿಡಿದುಹೊರಡುತ್ತಾರೆ. ಆ ಮಾರ್ಗದ ಯಶಸ್ವೀ ಹೋರಾಟಗಾರ ದೊರೆಸ್ವಾಮಿ ಇನ್ನೂ ನಮ್ಮ ಜೊತೆಯಲ್ಲೇ ಇದ್ದಾರೆ. ಇಂತಹ ಎಲ್ಲಾ ಆಲೋಚನೆಗಳ ಜೊತೆಗೆ ನಮ್ಮ ಜೊತೆಯಿದ್ದ ಸಿರಿಮನೆ ಅವರು ನಾವು ಅವರ ಒಡನಾಟವನ್ನು ಎಲ್ಲೂ ಹೇಳಿಕೊಳ್ಳದ ಸ್ಥಿತಿ ತಂದಿಟ್ಟರಲ್ಲಾ ಎಂಬ ಸಂಕಟದಿಂದ ಬದುಕುವಂತೆ ಮಾಡಿಬಿಟ್ಟಿದ್ದರು. ಈಗ ಆ ಸಂಕಟವನ್ನು ನಮ್ಮನ್ನು ದೂರ ಮಾಡಿದ್ದಾರೆ. ಕಾಡಿಗಿಂತ ನಾಡೇ ಲೇಸೆಂದು ಬಗೆದ ನೂರ್ ಝುಲ್ಫಿಕರ್ ಸಂಭ್ರಮದಿಂದಲೇ ಜೈಲಿಗೆ ಹೋಗಿದ್ದಾರೆ.

ಜೈಲೆಂದರೆ ಹೆದರುವ ಅಗತ್ಯವಿಲ್ಲ, ನಮ್ಮ ಸ್ವತಂತ್ರ ಹೋರಾಟಗಾರರ ಅರ್ಧ ಆಯಸ್ಸು ಮುಗಿದದ್ದೇ ಜೈಲಿನಲ್ಲಿ, ನೆಹರು ಭಾರತದ ಪ್ರಧಾನಿಯಾಗಿದ್ದಷ್ಟು ಕಾಲ ಜೈಲಿನಲ್ಲಿ ಕಳೆದರು. ಈಗಿನ ಜೈಲು ಸುಧಾರಣೆಗೊಂಡು ಕೆಲವರ ಮನೆಗಳಂತೆಯೇ ಇವೆ. ಇಡೀ ಮನೆಯ ಸುತ್ತ ಕಬ್ಬಿಣದ ಗ್ರಿಲ್ ಹಾಕಿಸಿರುವ ಮನೆಗಳನ್ನು ನೋಡಿದರೆ ಜೈಲುಗಳೇ ಆರಾಮವಾಗಿ ಕಾಣುತ್ತಿವೆ!

ಒಮ್ಮೆ ನಕ್ಸಲರನ್ನು ಬೇಟೆಯಾಡಿ ಮುಗಿಸಲು ಹೊರಟ ಪೊಲೀಸರ ಜೊತೆ ನಾನೂ ಹೊರಟೆ. ಪೊಲೀಸರು ಆಡುತ್ತಿದ್ದ ಮಾತುಗಳು 'ಇವತ್ತು ಬೇಟೆ ಗ್ಯಾರಂಟಿ' ಎಂಬ ರಣೋತ್ಸಾಹದಲ್ಲಿ ಅವರಿದ್ದಂತಿತ್ತು, ಅವರ ಮಾತುಗಳನ್ನು ಕೇಳಿ ನನ್ನ ಎದೆ ಒಡೆದುಕೊಳ್ಳತೊಡಗಿತ್ತು, ಆದರೂ ಇತ್ತೀಚಿನ ಮನುಷ್ಯ ದುರಂತ ನೋಡಲು ಹಾತೊರೆಯುತ್ತಾನೆ. ಅಂತಹ ಭಂಡ ಧೈರ್ಯದಲ್ಲಿ ಪೊಲೀಸರ ವಾಹನವನ್ನೇರಿ ಕುಳಿತೆ.

ಅದಾಗಲೇ ಬ್ಯಾಂಕು, ಸರಕಾರಿ ಕಚೇರಿ ಮತ್ತು ಬಸ್ಟ್ಯಾಂಡಿನಲ್ಲೆಲ್ಲಾ 'ನಕ್ಸಲರನ್ನು ಹಿಡಿದುಕೊಟ್ಟರೆ ಬಹುಮಾನ' ಎಂಬ ಪೋಸ್ಟರ್‌ಗಳು ರಾರಾಜಿಸುತ್ತಿದ್ದವು. ಅದರಲ್ಲಿ ಸಿರಿಮನೆ ಅವರ ಫೋಟೋ ಎದ್ದು ಕಾಣುತ್ತಿತ್ತು, ನನಗ್ಯಾಕೊ ನಕ್ಸಲ[...] ಗುಂಪಿನಲ್ಲಿ ಸಿರಿಮನೆ ಇರುವುದು ತಮಾಷೆಯಾಗಿ[...] ಹಾಸ್ಯಾಸ್ಪದವಾಗಿಯೂ ಕಾಣುತ್ತಿತ್ತು. ಇಂತಹ ಸಿರಿಮ[...] ನನ್ನ ಕಣ್ಣೆದುರು ಯಾವುದೋ ಪೊಲೀಸ್ ಪ್ಯಾದೆ ಕೈಯಲ್ಲಿ ಹತನಾಗಿ ಘೋಷಣೆಯೊಂದಿಗೆ ಪ್ರಾಣ ಬಿಡುವ ದೃಶ್ಯ ಕಲ್ಪಿಸಿಕೊಂಡು ಹೊರಟೆ.

ಒಂದು ಎತ್ತರವಾದ ಗುಡ್ಡದಲ್ಲಿ ಜಮೆಯಾದ ಪೊಲೀಸರ ಜೊತೆ ಹರಟುತ್ತಾ ಅವರ ಪವರ್‌ಫುಲ್ ಬೈನಾಕ್ಯುಲರ್‌ಗೆ ನಾನೂ ಕಣ್ಣು [...] ದೂರದ ಮನೆಯೊಂದರ ಅಂಗಳದಲ್ಲಿ ಹೆಂಗಸೊಬ್ಬಳು ಅಡಿಕೆ ಒಣಗಿ ಹಾಕುತ್ತಿದ್ದರು. ಬೈನಾಕ್ಯುಲರ್ ತಂತ್ರದಿಂದ ಆಕೆಯ ಪೃಷ್ಠಭಾಗವನ್ನು ನನ್ನ ಮುಸುಡಿ ಹತ್ತಿರವೇ ಎಳೆದುಕೊಳ್ಳಬಹುದಿತ್ತು. ಹಾಗೇ ಮಾಡಿ ಒಂದಿಷ್ಟು ಶೃಂಗಾರದ ಮಾತುಗಳಿಂದ ಪೊಲೀಸರನ್ನು ನಗಿಸಿದೆ.

ಆಗ ಒಬ್ಬ ಪೊಲೀಸ್ ತಮ್ಮ ನಕ್ಸಲ್ ಬೇಟೆಯ ಕಾರ್ಯಾಚರಣೆಯನ್ನು ಹೇಳಿದರು. ಅಲ್ಲೊಂದು ಕಾಡಿನ ನಡುವೆಯಿದ್ದ ಮನೆಗೆ ನಕ್ಸಲರು ಬಂದುಹೋಗುತ್ತಾರೆಂದು ತಿಳಿದ ಪೊಲೀಸರು ಕಾಯುತ್ತ ಕುಳಿತರು, ಬೆಳಗಿನ ಜಾ[...] ಒಂದು ಮಿಕ ಬಂತು. ಅವಾಗಲೇ ಉಡಾಯಿಸುವುದಕ್ಕಿಂತ ಮನೆಯೊಳಕ್ಕೆ ಹೋಗ[...] ಎಂದು ಕಾಯ್ದರು. ಬೆಳಗಾಯಿತು. ಸುಮಾರು ಎರಡು ಗಂಟೆ ಕಾದರೂ ಮನೆಯ ಬಾಗಿಲು ತೆರೆಯಲಿಲ್ಲ. ಎಂಟು ಗಂಟೆಗೆ ಪೊಲೀಸರ ಬಾಗಿಲು ಬಡಿತ ಜೋರಾದ ನಂತರ ತೆರೆಯಿತ[...] ಮನೆಯವರು ತಣ್ಣಗಿದ್ದರು. "ಬೆಳಗಿನ ಜಾವ ಬಂದವರು ಯಾರು?" ಎಂದು ಪೊಲೀಸರು ಕೇಳಿದರು. "ಅದು ನಮ್ಮ ಚಿಕ್ಕಪ್ಪ" ಎಂಬ ಉತ್ತ[...] ಬಂತು. "ಮತ್ತೆ ಇಷ್ಟೊತ್ತು ಬಾಗಿಲು ಬಡಿದರೂ ಬಾಗಿಲು ತೆಗೆಯಲಿಲ್ಲ?" ಎಂದರು. "ನಕ್ಸಲರು ಬಾಗಿಲು ತಟ್ಟುತ್ತಿದ್ದಾರೆ ಅಂತ ತೆಗೆಯಲಿಲ್ಲ" ಎಂ[...] ಆ ಮನೆಯವರು ಪೊಲೀಸರಿಗೇ ನಕ್ಸಲ್ ಪಟ್ಟ ಕಟ್ಟಿದರು. ಮೋಸ ಹೋದ ಮುಖಭಾವದಲ್ಲಿ ಪೊಲೀಸರು ಬಂದರಂತೆ. ಇಂತಹ ನಕ್ಸಲ್ ಕಾರ್ಯಾಚರಣೆ ಕತೆಗಳಿಂದ ಸಮಯ ಹೋದದ್ದೇ ಗೊತ್ತಾಗಲಿಲ್ಲ.

ಅಷ್ಟರಲ್ಲಿ ಊಟ ಬಂತು. ಎಲ್ಲರೂ ನಕ್ಸಲರ ಊಟ ಮಾಡಿದಷ್ಟೇ ಖುಷಿಯಿಂದ ಊಟ ಮಾಡಿ[...] ಸವೆದ ದಾರಿಯಲ್ಲಿ ನಕ್ಸಲರನ್ನು ಹುಡುಕುತ್ತ ಹೊರಟರು. ನನಗೇನೋ ಜ್ಞಾನೋದಯವಾದಂತಾ[...] ಪೊಲೀಸ್ ಮುಖ್ಯಾಧಿಕಾರಿಯನ್ನು ಕುರಿತು "ಸಾರ್ ಕಾರ್ಯಾಚರಣೆಯ ಶೈಲಿಯಲ್ಲೇ ವೀರಪ್ಪನ್ ಕಾರ್ಯಾಚರಣೆ ನಡೆದಿತ್ತು ಸಾರ್. ಅದಕ್ಕೆ ಅವನು ಇಪ್ಪತ್ತು ವರ್ಷ ಕಾಲ ಬದುಕಿ, ಮದುವೆಯಾಗಿ, ಎರಡು ಮಕ್ಕಳನ್ನು ಪಡೆದು ತನ್ನ ವೈರಿಗಳನ್ನೆಲ್ಲಾ ನಿರ್ನಾಮ ಮಾಡಿದ್ದು" ಎಂದೆ. ಅವರು ನಕ್ಕು ನ[...] ಮಾತಿಗೆ ಇನ್ನಷ್ಟು ಮಾಹಿತಿ ಸೇರಿಸಿದರು.

ಅದೇನಾದರಾಗಲಿ, ನಮ್ಮ ಯಾವುದೇ ಮಾತಿ[...] ಕಿವಿಗೊಡದೆ ನಕ್ಸಲರು ಎಂದು ಹೆಸರಿಟ್ಟುಕೊಂಡು ಕಾಡಿಗೆ ಹೋದವರನ್ನು ತಾಯಿ ತನ್ನ ಮಕ್ಕಳನ್ನು ಹುಡುಕಿ ತಂದಂತೆ ಕರೆತಂದ ಗೌರಿಗೆ ನಮ್ಮೆಲ್ಲರ ಅಭಿನಂದನೆಗಳು.

● ಬಿ. ಚಂದ್ರೇಗ[...]

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರರೆಂಬ ಸಂದಣಿ

ತಲೆದೋರುವ ಮುನ್ನ, ಅಲ್ಲಿಂದತ್ತ ಬಯಲೆ ಸ್ವರೂಪವಾಯಿತ್ತು

ಆ ಸ್ವರೂಪಿನ ಘನತೆಯ ಉಪಮಿಸಬಾರದು.

ನೋಡಬಾರದ ಬೆಳಗು, ಕೂಡಬಾರದ ಮೂರ್ತಿ.

ಅಖಂಡ ಅಪ್ರತಿಮ ನಮ್ಮ ಗುಹೇಶ್ವರಲಿಂಗದ ಬೆಳಗಿನ ಮೂಲವ

ಲಿಂಗಸಂಗಿಗಳಲ್ಲದೆ ಮಿಕ್ಕಿನ ಅಂಗವಿಕಾರಿಗಳೇನಬಲ್ಲರೊ?

-ಅಲ್ಲಮಪ್ರಭುದೇವರು

ಈ ವಚನವು ವಿಜ್ಞಾನದ ತಾಯಿಯಾಗಿದೆ. ಗುಹೇಶ್ವರನು ...ಕೆ ಎಂಬ ವಸ್ತುವಿನೊಳಗಿನ ಚೈತನ್ಯವಾಗಿದ್ದಾನೆ. ಚೈತನ್ಯದ ...ಜಾಲರೂಪವೇ ಬಯಲು. ಆ ಬಯಲೆಂಬುದು ...ಕಾಶವನ್ನು ಪಡೆದುಕೊಂಡಾಗ ಚೈತನ್ಯವನ್ನೊಳಗೊಂಡ ...ಪ ನಿರ್ಮಾಣವಾಯಿತು.

ಬಯಲೇ ಚೈತನ್ಯವಾಗಿದೆ. ಆ ಚೈತನ್ಯದಿಂದಲೇ ವಸ್ತು ...ಬ ವಿಶ್ವವು ರೂಪಗೊಂಡಿದೆ. ಆ ವಿನಾಶಕ್ಕೊಳಗಾಗುವ ...ಎಂಬ ವಸ್ತುವಿನೊಳಗೆ ಚೈತನ್ಯವು ತನ್ನ ಅವಿನಾಶವಾದ ...ಜಾಲರೂಪಿನೊಂದಿಗೆ ಉಳಿದುಕೊಂಡಿದೆ. ಕಾಲಮಿತಿ ...ನ್ನು ಹೊಂದಿರುವ ವಸ್ತು ಎಂಬುದು ಚೈತನ್ಯದ ...ರಿಕೆಯ ರೂಪವಾದರೆ ಕಾಲಾತೀತವಾದ ಚೈತನ್ಯವು ...ವಿನ ನಿರಾಕಾರ ಸ್ಥಿತಿಯಾಗಿದೆ. ವಿಶ್ವವೆಂಬ ಗುಹೆಯು ...ಕೇಶ್ವರನ ಅಂಶದಿಂದಲೇ ರೂಪುಗೊಂಡಿದೆ. 'ರೂಪಿಂಗೆ ...ದುಂಟು' ಎಂದು ಅಲ್ಲಮ ಇನ್ನೊಂದು ವಚನದಲ್ಲಿ ...ದ್ದಾರೆ. ವಸ್ತುರೂಪವು ವಾಸ್ತವವಾಗಿದೆ ಆದರೆ ಸತ್ಯವಲ್ಲ. ...ಸ್ತವ ಎಂಬುದು ಕಾಲಮಿತಿಯೊಳಗೆ ಇರುವಂಥದ್ದು. ...ದಿಂದಲೇ ವಾಸ್ತವದೊಳಗೆ ಇರುವ ವಸ್ತುವಿಗೆ ಸಾವು ...ಟು ಎಂದು ಅಲ್ಲಮ ತಿಳಿಸುತ್ತಾರೆ. ಚೈತನ್ಯವೆಂಬುದು ...ತ ಮತ್ತು ನಿರಂತರ ಚಲನಶೀಲವಾದುದು. ಚೈತನ್ಯವು ...ಲಾತೀತವಾದುದು. ಅದಕ್ಕೆ ಸಾವಿಲ್ಲ. ವಸ್ತುರೂಪವಾದ ...ದೇಹವೆಂಬ ಅಶಾಶ್ವತ ಗುಹೆಯಲ್ಲಿ ಚೈತನ್ಯವೆಂಬ ಶಾಶ್ವತ ...ಶ್ವರನಿದ್ದಾನೆ. ಇಂಥ ಚೈತನ್ಯರೂಪಿ ಈಶ್ವರನೇ ವಿಶ್ವದ ...ಮೂಲಾಧಾರ.

...ಬಯಲು ಬಯಲನೆ ಬಿತ್ತಿ ಬಯಲು ಬಯಲವ ಬೆಳೆದು

...ಬಯಲು ಬಯಲಾಗಿ ಬಯಲಾಯಿತಯ್ಯಾ.

...ಬಯಲ ಜೀವನ, ಬಯಲ ಭಾವನೆ,

...ಬಯಲ ಬಯಲಾಗಿ ಬಯಲಾಯಿತಯ್ಯಾ.

...ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು.

...ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

-ಅಲ್ಲಮಪ್ರಭುದೇವರು

ಎಂದು ಅಲ್ಲಮಪ್ರಭುದೇವರು ಬಯಲೆಂಬ ಚೈತನ್ಯದ ...ಯನ್ನು ತಿಳಿಸಿದ್ದಾರೆ. ಈ ಪರಮಸತ್ಯವನ್ನು ತಾವು ...ತುಕೊಂಡ ಬಗ್ಗೆ ಈ ವಚನದಲ್ಲಿ ಸೂಚಿಸಿದ್ದಾರೆ. ಈ ...ತ್ವದ ಬಯಲೇ ಗುಹೇಶ್ವರನ ಮೂಲರೂಪವಾಗಿದೆ. ...ಬಯಲು ರೂಪು ತಾಳಿದ ನಂತರವೇ ಬ್ರಹ್ಮ ವಿಷ್ಣು ...ದ್ರ ಈಶ್ವರ ಸದಾಶಿವ ಪರಮೇಶ್ವರರೆಂಬ ಸಂದಣಿ ...ತಲೆದೋರಿದೆ.

...ಈ ಬಯಲೆಂಬ ಘನವನ್ನು ಅರಿತು ಸರ್ವಸಮತ್ವ ...ದದೊಂದಿಗೆ ಮುನ್ನಡೆಯುವವನು ಘನತೆಯುಳ್ಳವ ...ನಾಗುತ್ತಾನೆ. ಅವನೇ ಘನತೆಯುಳ್ಳ ಮಾನವ ಎಂದೆನಿಸಿ ...ಕೊಳ್ಳುತ್ತಾನೆ. ಆತ ಯಾವುದೇ ಧರ್ಮದಲ್ಲಿರಲಿ, ಯಾವುದೇ ...ಜಾತಿಯವನಾಗಿರಲಿ ಆತನೇ ಮಾನವಘನತೆಯನ್ನು ...ಹೊಂದಿದ ಮಾರ್ಗದರ್ಶಿಯಾಗುತ್ತಾನೆ. "ಹೊಲೆಯ ...ಗಿಳಿಗನಾದಡೆ ಅವನ ಹೊರೆಯಲಿಪ್ಪುದು ಲೇಸು" ...ದು ಬಸವಣ್ಣನವರು ಹೇಳಿದ್ದಾರೆ. ಮಾನವ ಘನತೆ ...ಯೊಂದಿಗೆ ಯಾರು ಬದುಕಿನ ಮಾರ್ಗವನ್ನು ಕಂಡುಕೊಂಡಿ... ...ರೋ ಅವರ ಮಾರ್ಗದರ್ಶನದಲ್ಲಿ ಬದುಕಬೇಕೆಂಬುದು ...ಬಸವಣ್ಣನವರ ಆಶಯವಾಗಿದೆ. ಮನುವಾದಿಗಳು ...ಕಡೆಗಣಿಸುವ ಹೊಲೆ ಮಾದಿಗ ಜಾತಿಗಳಲ್ಲೇ ಅಂಥ ...ಘನತೆವೆತ್ತವರು ಜನಿಸಿರಬಹುದು; ಆದರೆ ಅವರೇ ...ಸ್ಥಾನದಲ್ಲಿ ಇರುವವರು ಎಂದು ಬಸವಣ್ಣನವರು ...ಮಾನವಘನತೆಯ ಮಹತ್ವವನ್ನು ಸಾರಿದ್ದಾರೆ.


...ಮೇಲುಕೀಳೆಂಬ ಜಾತಿಗಳು, ಬಡವ ಶ್ರೀಮಂತ ಎಂಬ ...ವರ್ಗಗಳು, ಹೆಣ್ಣು ಗಂಡೆಂಬ ಭೇದಭಾವಗಳು, ಕರಿಯ ...ಬಿಳಿಯ ಎಂಬ ವರ್ಣಭೇದಗಳು ಮಾನವ ಘನತೆಗೆ ಕಳಂಕ ...ತರುವಂಥವುಗಳಾಗಿವೆ. ಈ ಎಲ್ಲ ಭೇದಭಾವಗಳನ್ನು ಎತ್ತಿಹಿಡಿ... ...ವ ವೈದಿಕಧರ್ಮವು ಮಾನವಘನತೆಯ ಕಡುವೈರಿ... ...ಗಿದೆ. ಅಂತೆಯೆ ಬಸವಾದಿ ಶರಣರು ವೈದಿಕಧರ್ಮವನ್ನು ...ತಿರಸ್ಕರಿಸಿ ತುಳಿತಕ್ಕೊಳಗಾದ ಅಸ್ಪೃಶ್ಯರು ಮೊದಲು ಮಾಡಿ ...ಎಲ್ಲ ಜಾತಿಜನಾಂಗಗಳ ಕಾಯಕಜೀವಿಗಳ ಘನತೆಯನ್ನು ...ಎತ್ತಿಹಿಡಿಯುವ ಜನಸಾಮಾನ್ಯರ ಧರ್ಮವಾದ ಲಿಂಗವಂತ ...ಧರ್ಮವನ್ನು ದಯೆ ಮತ್ತು ಅಹಿಂಸೆಯ ನೆಲೆಯ ಮೇಲೆ ಚಳವಳಿಯ ಧರ್ಮವಾಗಿಸಿ ಎಲ್ಲ ತೆರನಾದ ಅಸಮಾನತೆಗಳ ವಿರುದ್ಧ ಹೋರಾಡಿದರು. ಈ ಕಾರಣದಿಂದಲೇ ಲಿಂಗವಂತ ಧರ್ಮವು ನಿಜವಾದ ಅರ್ಥದಲ್ಲಿ ಮಾನವಘನತೆಯ ಧರ್ಮವೇ ಆಗಿದೆ.







ಮಾನವಘನತೆ



ಮಾನವಘನತೆ ಎಂಬ ಅರಿವಿನ ಕುರುಹು ಆದಂಥ ಇಷ್ಟಲಿಂಗವನ್ನು ಬಸವಣ್ಣನವರು ಸೃಷ್ಟಿಸಿದರು. ಎಲ್ಲ ಅನಿಷ್ಟಗಳನ್ನು ಪರಿಹರಿಸುವಂಥ ವಿವೇಚನಾ ಶಕ್ತಿಯನ್ನು ಕೊಡುವುದರ ಸಂಕೇತವಾದ ಈ ಇಷ್ಟಲಿಂಗವು ಮಹಾಘನವೆಂಬ ಲಿಂಗದೇವನ ಕುರುಹು ಆಗಿ ಮಾನವಘನತೆಯನ್ನು ಎತ್ತಿಹಿಡಿಯಿತು. ಯಾವ ಅಸ್ಪೃಶ್ಯರಿಗೆ ಮತ್ತು ತುಳಿತಕ್ಕೊಳಗಾದವರಿಗೆ ಮಂದಿರಗಳಲ್ಲಿ ಪ್ರವೇಶವನ್ನು ಮನುವಾದಿಗಳು ನಿರಾಕರಿಸಿದ್ದರೋ ಅಂಥವರಿಗಾಗಿ ಇಷ್ಟಲಿಂಗ ಜನ್ಮತಾಳಿದ್ದು ಕ್ರಾಂತಿಕಾರಿಯಾದ ಅನನ್ಯ ಘಟನೆಯಾಗಿದೆ. ಯಾರ ಎದೆಯ ಮೇಲೆ ಲಿಂಗವಿದೆಯೊ ಅವರು ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳನ್ನು ಮಾಡುವಂತಿಲ್ಲ. ಇಷ್ಟಲಿಂಗ ಪೂಜೆ ಎಂಬುದು ಎಲ್ಲ ರೀತಿಯ ಅಸಮಾನತೆಗಳನ್ನು ತೊಡೆದು ಹಾಕುತ್ತ ಮಾನವ ಏಕತೆಯನ್ನು ಸಾಧಿಸುವ ಅರಿವನ್ನು ಕೊಡುವಂಥದ್ದು.

ಲಿಂಗವ ಪೂಜಿಸಿ ಫಲವೇನಯ್ಯಾ

ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?

ಲಿಂಗವ ಪೂಜಿಸಿ ಫಲವೇನಯ್ಯಾ

ಕೂಡಲಸಂಗಮದೇವರ ಪೂಜಿಸಿ

ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ?

-ಬಸವಣ್ಣನವರು

ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಈ ವಚನವು ಲೌಕಿಕ ಅನುಭವ ಮತ್ತು ಅಲೌಕಿಕ ಅನುಭಾವಕ್ಕೆ ಸಂಬಂಧಿಸಿದಂತೆ ಏಕಕಾಲಕ್ಕೇ ಸಮತೆಯನ್ನು ಎತ್ತಿಹಿಡಿಯುವ ವಚನವಾಗಿದೆ. ಮಾನವರು ಸೃಷ್ಟಿಯಲ್ಲಿನ ಎಲ್ಲದರ ಜೊತೆ ಹಾಗೂ ಸೃಷ್ಟಿಕರ್ತನ ಜೊತೆ ಸಮಾನತೆಯನ್ನು ಹೊಂದುತ್ತ ಒಂದಾಗಬೇಕು ಎಂಬ ಮಹದಾಶಯವನ್ನು ಈ ವಚನ ಹೊಂದಿದೆ. ಮಧುರಭಕ್ತಿಯು 'ಶರಣ ಸತಿ ಲಿಂಗ ಪತಿ' ಎಂಬ ಭಾವದೊಂದಿಗೆ ದೇವರ ಜೊತೆ ಭಕ್ತನು ಅಭೇದ್ಯನಾಗುವಂತೆ ಮಾಡುತ್ತದೆ. ದೇವಕಳೆ ಮತ್ತು ಭಕ್ತಕಳೆಯಲ್ಲಿ ಸಮತೆಯನ್ನು ಸಾಧಿಸುವುದರ ಮೂಲಕ ಎಲ್ಲವೂ ಸಮಸುಖದಲ್ಲಿ ಬೆರೆತುಹೋಗುವಂತೆ ಮಾಡುತ್ತದೆ. ತನ್ನ ತಾನರಿದು ತಾನೇ ಸ್ವಯಂಭೂವಾಗುವಂಥ ಎತ್ತರಕ್ಕೇರುವ ಸಾಧ್ಯತೆಯನ್ನು ಭಕ್ತ ತನ್ನೊಳಗಿನ ಮಹಾಘನವನ್ನು ಅರಿತಾಗ ಪಡೆದುಕೊಳ್ಳುವಂತಾಗುವನು.

ಈ ವಚನ ಲೌಕಿಕದ ಸಂದರ್ಭದಲ್ಲೂ ಮಹತ್ವದ್ದನ್ನೇ ಸಾಧಿಸಿದೆ. ಸಮರತಿ ಪದವು ಲಿಂಗಭೇದವನ್ನು ತಿರಸ್ಕರಿಸುತ್ತದೆ. ಸಮಕಳೆಯು ಬ್ರಹ್ಮತೇಜಸ್ಸು, ಕ್ಷಾತ್ರತೇಜಸ್ಸು ಭ್ರಮಾತ್ಮಕವಾದುವು ಎಂದು ಸಾರುತ್ತದೆ. ಘನತೆಯುಳ್ಳ ಮಾನವರೆಲ್ಲರ ತೇಜಸ್ಸು ಒಂದೇ ಆಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಸಮಸುಖದ ಅರಿವು ವರ್ಗಭೇದವನ್ನು ಅಳಿಸಿಹಾಕುತ್ತದೆ. ಬಡವರಿಗೊಂದು ಬದುಕು, ಶ್ರೀಮಂತರಿಗೊಂದು ಬದುಕು ಎಂಬ ಮಿಥ್ಯೆಯನ್ನು ಒಡೆದುಹಾಕುತ್ತದೆ. ನದಿಯೊಳಗೆ ನದಿ ಬೆರೆಯುವ ಹಾಗೆ ಇಡೀ ಮಾನವಕುಲ ಜಾತಿ, ಮತ, ಕುಲ, ವರ್ಣ, ವರ್ಗ, ಲಿಂಗ ಮತ್ತು ಧರ್ಮಭೇದಗಳಿಲ್ಲದೆ ಒಂದಾಗುವಂಥ ಅರಿವನ್ನು ಮೂಡಿಸುತ್ತ ಅದನ್ನು ಆಚರಣೆಯಲ್ಲಿ ತರುವುದೇ ಲಿಂಗಪೂಜಾ ಫಲ ಎಂದು ಬಸವಣ್ಣನವರು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ನಮ್ಮೊಳಗಿನ ಮಹಾಘನದ ಅರಿವಿಲ್ಲದೆ ನಾವು ಘನತೆಯುಳ್ಳವರಾಗುವುದಿಲ್ಲ ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿದೆ.

ಘನಗಂಭೀರ ಮಹಾಘನದೊಳಗೆ

ಘನಕ್ಕೆ ಘನವಾಗಿದ್ದೆನಯ್ಯಾ.

ಕೂಡಲಸಂಗಮದೇವಯ್ಯನೆಂಬ

ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ

ಮುಗ್ಧವಾದುದೇನೆಂಬೆನಯ್ಯಾ.

-ಬಸವಣ್ಣನವರು

ನಮ್ಮೊಳಗಿನ ಘನದ ಅರಿವಾದಾಗ ಮಾತ್ರ ನಾವು ಘನತೆವೆತ್ತರಾಗುತ್ತೇವೆ. ಮಾನವಘನತೆ ಎಂಬುದು ಮಾನವ ತನ್ನೊಳಗಿನ ಮಹಾಘನದ ಅರಿವನ್ನು ಹೊಂದಿದಾಗ ಮಾತ್ರ ಬರುವಂಥದ್ದು. ಘನತೆವೆತ್ತ ಮಾನವ ಪ್ರಜ್ಞಾಪೂರ್ಣವಾದ ಮುಗ್ಧತೆಯನ್ನು ಹೊಂದಿದವನಾಗಿರುತ್ತಾನೆ. ಆತ ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬುದನ್ನು ಮುಗ್ಧತೆಯೊಂದಿಗೆ ಅನುಭವಿಸುತ್ತ ಎಲ್ಲರೊಳಗೆ ಒಂದಾಗಿ ಹೋಗುತ್ತಾನೆ. ಆತನ ದೃಷ್ಟಿಯಲ್ಲಿ ಎಲ್ಲರೂ ಶಿವಸ್ವರೂಪಿಗಳಾಗಿರುತ್ತಾರೆ. ಆತ ಚಾತುರ್ವರ್ಣಾತೀತನಾಗಿ ಸರ್ವಸಮತ್ವದ ದೃಷ್ಟಾರನಾಗುತ್ತಾನೆ. ಆ ಮೂಲಕ ಮಾನವಕುಲದ ವಿಮೋಚನೆಯ ಲಿಂಗತತ್ತ್ವವನ್ನು ವಚನಗಳ ಮೂಲಕ ಸಾರುತ್ತಾನೆ. ಹೀಗೆ ಮಾನವಘನತೆ ಎಂಬುದು ಪರಿಪೂರ್ಣವಾದುದು, ಸರಳವಾದುದು, ಸಹಜವಾದುದು, ಉತ್ಕೃಷ್ಟವಾದುದು.

ಇಂಥ ಮಾನವಘನತೆಯುಳ್ಳ ಶರಣರು ಶ್ರೀಮಂತಿಕೆಯನ್ನು ತಿರಸ್ಕರಿಸುತ್ತ ಶರಣಸಂಕುಲವೆಂಬ ಮೇಲಿಲ್ಲದ, ಕೀಳಿಲ್ಲದ ಮತ್ತು ಸರ್ವಸಮತ್ವದ ಶ್ರೀಮಂತ ಸಮಾಜವನ್ನು ಸೃಷ್ಟಿಸಿದರು. ಶರಣರ ಘನತೆವೆತ್ತ ವ್ಯಕ್ತಿತ್ವವನ್ನು ಬಸವಣ್ಣನವರು ಬಹುಸುಂದರವಾಗಿ ಚಿತ್ರಿಸಿದ್ದಾರೆ.

ಮನೆ ನೋಡಾ ಬಡವರು; ಮನ ನೋಡಾ ಘನ

ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.

ಪಸರಕ್ಕನುಪಿಲ್ಲ; ಬಂದ ತತ್ಕಾಲಕ್ಕೆ ಉಂಟು.

ಕೂಡಲಸಂಗನ ಶರಣರು ಸ್ವತಂತ್ರಧೀರರು.

-ಬಸವಣ್ಣನವರು

ಶರಣರು ಭೌತಿಕ ಜಗತ್ತಿನಲ್ಲಿ ಬಡವರಾಗಿದ್ದಾರೆ. ಆದರೆ ಅನುಭಾವದ ಜಗತ್ತಿನಲ್ಲಿ ಘನತೆಯುಳ್ಳ ಮನಸ್ಥಿತಿಯವರಾಗಿದ್ದಾರೆ. ಅವರು ಪರಧನ, ಪರಸ್ತ್ರೀಯರನ್ನು ಮುಟ್ಟದೆ ಶುಚಿತ್ವವನ್ನು ಸಾಧಿಸಿದ್ದಾರೆ. ಅವರು ಯಾವುದೇ ರೀತಿಯ ಸೋಂಕಿಗೆ ಒಳಗಾಗದ ಪವಿತ್ರಾತ್ಮರಾಗಿದ್ದಾರೆ. ಅವರು ಸರ್ವಾಂಗಗಳ ಮೇಲೆ ವಿಜಯವನ್ನು ಸಾಧಿಸಿದ ಕಲಿಗಳಾಗಿದ್ದಾರೆ. ಅವರು ಕಣ್ಣಿನ ಮೇಲೆ ವಿಜಯವನ್ನು ಸಾಧಿಸಿದ್ದರಿಂದ ಅವರ ಕಣ್ಣುಗಳು ಕೆಟ್ಟದ್ದನ್ನು ನೋಡ ಬಯಸುವುದಿಲ್ಲ. ಮೂಗಿನ ಮೇಲೆ ವಿಜಯ ಸಾಧಿಸಿದ್ದರಿಂದ ವಾಸನಾಮಯ ಜಗತ್ತಿನ ಕಡೆಗೆ ಅವರು ಹೋಗುವಂಥವರಲ್ಲ. ಕಿವಿಯ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಕೇಳುವತವಕ ಅವರಿಗಿಲ್ಲ. ಕೈಗಳ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಮುಟ್ಟಲಾರರು. ಕಾಲುಗಳ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದರ ಕಡೆಗೆ ಹೋಗಲಾರರು. ನಾಲಗೆಯ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಸೇವಿಸಲಾರರು. ಹೀಗೆ ಅವರು ಸರ್ವಾಂಗ ಕಲಿಗಳು.

ಬಡತನದ ಮೇಲೂ ವಿಜಯ ಸಾಧಿಸಿದ್ದರಿಂದ ಅವರು ಸಂಗ್ರಹಬುದ್ಧಿಯನ್ನು ಹೊಂದಿಲ್ಲ. ಸ್ವಾರ್ಥಕ್ಕಾಗಿ ಸಂಗ್ರಹಿಸುವುದನ್ನು ಅವರು ತಿರಸ್ಕರಿಸುತ್ತಾರೆ. ಆದರೆ ಕಾಯಕಜೀವಿಗಳಾದ ಅವರು ತಮ್ಮ ಶಕ್ತಿ ಸಾಮರ್ಥ್ಯದ ಮೇಲೆಯೆ ಬದುಕುವುದರಿಂದ ಅವರಿಗೆ ದೈನಂದಿನ ಬದುಕಿನಲ್ಲಿ ಯಾವ ಕೊರತೆಯೂ ಇಲ್ಲ. ಅವರ ಬಳಿಹೋದ ಸಂದರ್ಭದಲ್ಲಿ ಯಾರೂ ನಿರಾಶರಾಗದಂಥ ವಾತಾವರಣ ಸಹಜವಾಗಿಯೇ ಇರುತ್ತದೆ. ತತ್ಕಾಲಕ್ಕೆ ಸಿಗುವ ಪದಾರ್ಥಗಳ ಜೊತೆಗೆ ಅವರ ದಾಸೋಹಂಭಾವ ಇದಕ್ಕೆ ಕಾರಣವಾಗಿದೆ. ಈ ಎಲ್ಲ ಕಾರಣಗಳಿಂದ ಕೂಡಲಸಂಗನ ಶರಣರು ಸ್ವತಂತ್ರಧೀರರಾಗಿದ್ದಾರೆ. ಅಂಥ ಸಾತ್ವಿಕ ಶಕ್ತಿಯೊಂದಿಗೆ ಮಾನವಘನತೆಯ ರಕ್ಷಣೆಗಾಗಿ ಹೋರಾಡುವ ಕಲಿಗಳಾಗಿದ್ದಾರೆ.

ಇಂಥವರೇ ನಿಜವಾದ ಲಿಂಗವಂತರು. ಇಂಥ ಲಿಂಗವಂತರು ಇದ್ದಲ್ಲಿ ಮೇಲು ಕೀಳಿನ ನಿಂದೆ ಇರುವುದಿಲ್ಲ. ಮಾನವರಿಗೆ ಅಪಮಾನವಾಗುವ ಸ್ಥಾನದಲ್ಲಿ ಈ ಲಿಂಗವಂತರು ಇರುವುದಿಲ್ಲ. ಅಂತೆಯೇ ಕೂಡಲಸಂಗನ ಶರಣರಾದ ಅವರನ್ನು ಯಾರೊಂದಿಗೂ ಹೋಲಿಸಲು ಸಾಧ್ಯವಿಲ್ಲ. ಅವರು ನಿಜಮಾನವರಾಗಿ ಮಹಾಘನವಾಗಿದ್ದಾರೆ. ಆ ಮೂಲಕ ಶಿವಸ್ವರೂಪಿಗಳೇ ಆಗಿದ್ದಾರೆ ಎಂದು ಬಸವಣ್ಣನವರು ಸೂಚಿಸಿದ್ದಾರೆ.

ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು.

ಅವರೆಂತಿದ್ದಡೇನು? ಹೇಗಿದ್ದಡೇನು? ಲಿಂಗವಂತರವರು.

ಉಪಮಿಸಬಾರದ ಮಹಾಘನವು ಕೂಡಲಸಂಗನ ಶರಣರು.

-ಬಸವಣ್ಣನವರು

ಆದರೆ ಬರಿ ಇಷ್ಟಲಿಂಗವನ್ನು ಕಟ್ಟಿಕೊಂಡವರು ಲಿಂಗವಂತರಾಗುವುದಿಲ್ಲ ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ. "ಎನ್ನ ತನು ಭಕ್ತ ಮನ ಭವಿ" ಎಂದು ತಿಳಿಸುವ ಮೂಲಕ ಅಂತರಂಗ ಶುದ್ಧಿಯಾಗದೆ ಹೊರಗೆ ಶುದ್ಧಿಯಾಗದು ಎಂದು ಸ್ಪಷ್ಟಪಡಿಸಿದ್ದಾರೆ. ಶುದ್ಧವಾಗಿ ಕಾಣುವುದೆಲ್ಲವೂ ಶುದ್ಧವಾದುದಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾರೆ.

ನಮ್ಮೊಳಗಿನ ಮಹಾಘನವನ್ನು ಅರಿಯದೆ ನಾವು ಪರಿಶುದ್ಧರಾಗೆವು. ಮಾನವಘನತೆಯನ್ನು ಹೊಂದಬೇಕಾದಲ್ಲಿ ನಮ್ಮೊಳಗಿನ ಮಹಾಘನವನ್ನು ಅರಿಯುವುದೊಂದೇ ಮಾರ್ಗ ಎಂದು ಅಕ್ಕಮಹಾದೇವಿ ತಿಳಿಸುತ್ತಾರೆ. ಐಹಿಕ ಜಗತ್ತಿನ ವಸ್ತುಮೋಹದಲ್ಲೇ ಮುಳುಗಿದವರು ತಮ್ಮೊಳಗಿನ ಮಹಾಘನವನ್ನು ಅರಿಯುವುದಿಲ್ಲ ಎಂಬುದು ಅಕ್ಕನ ಉವಾಚವಾಗಿದೆ.

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.


ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.

ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ,

ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ.

-ಅಕ್ಕಮಹಾದೇವಿ

ಬಸವಧರ್ಮ ಎಂಬ ಲಿಂಗವಂತ ಧರ್ಮ ಜನ್ಮತಾಳಿದ ಕನ್ನಡದ ನೆಲದಲ್ಲಿ ಇಂದಿಗೂ ಅಸ್ಪೃಶ್ಯತೆ, ಜಾತೀಯತೆ ಮತ್ತು ಎಲ್ಲೆಡೆ ಮನುವಾದಿ ವೈದಿಕತೆ ತಾಂಡವವಾಡುತ್ತ ಮಾನವ ಘನತೆಗೆ ಕುಂದು ತರುತ್ತಿರುವುದು ವಿಪರ್ಯಾಸವಾಗಿದೆ.



● ರಂಜಾನ್ ದರ್ಗಾ

ಮಲೆನಾಡು ರಾಜ್ಯಕ್ಕಾಗಿ ಕೂಗು: ಸರ್ಕಾರ ಎಚ್ಚೆತ್ತುಕೊಳ್ಳಬೇಕು

ಉನ್ನತ ಅಧಿಕಾರ ಸ್ಥಾನವನ್ನು ಅಲಂಕರಿಸಿರುವವರೆಲ್ಲರೂ ಉತ್ತರ ಭಾರತೀಯರು. ಅವರಿಗೆ ಸ್ಥಳೀಯ ಸಮಸ್ಯೆಗಳು ಏನು ಎಂಬುದು ತಿಳಿದಿಲ್ಲ, ತಮಗೆ ಐ.ಎ.ಎಸ್., ಐ.ಪಿ.ಎಸ್. ಹಾಗೂ ಐ.ಎಫ್.ಎಸ್. ಅಧಿಕಾರವಿದೆ ಎಂದು ಹೇಳಿಕೊಂಡು ಸರ್ವಾಧಿಕಾರಿ ಧೋರಣೆಯನ್ನು ತೋರುತ್ತಾ ಕೊಡಗು ಜಿಲ್ಲೆಯಲ್ಲಿ ಈಗ ಆಡಳಿತ ಮತ್ತು ಜನರ ನಡುವೆ ಬಹಳ ದೊಡ್ಡ ಕಂದಕವನ್ನು ಸೃಷ್ಟಿ ಮಾಡಿದ್ದಾರೆ ಜಿಲ್ಲೆಯ ಹಿರಿಯ ಅಧಿಕಾರಿಗಳು.

ಕೊಡಗು ಜಿಲ್ಲೆ ಇದರಿಂದಾಗಿ ಒಂದು ರೀತಿಯಲ್ಲಿ ಅನಾಥ ಭಾವನೆಯನ್ನು ಹೊಂದಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತವಾದರೆ, ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿಗಳು ಹಾಗೂ ಬಹುತೇಕ ಗ್ರಾಮ ಪಂಚಾಯತಿಗಳು ಬಿಜೆಪಿಯ ವಶದಲ್ಲಿ ಇದೆ. ಇದರ ಜೊತೆಗೆ ಸಂಸದರು ಹಾಗೂ ಶಾಸಕರು ಕೂಡ ಬಿಜೆಪಿಯವರೇ ಇದ್ದಾರೆ. ಇದರಿಂದಾಗಿ ಸರಕಾರ ಮತ್ತು ಸ್ಥಳೀಯ ಶಾಸಕರ ನಡುವಿನ ಬಾಂಧವ್ಯದ ಕೊರತೆ ಜಿಲ್ಲೆಯ ಆಡಳಿತ ಮತ್ತು ಅಭಿವೃದ್ಧಿಯ ಮೇಲೆ ದುಷ್ಪರಿಣಾಮವನ್ನು ಬೀರಿದೆ. ಅಧಿಕಾರಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲದಷ್ಟು ದುರ್ಬಲವಾಗಿದೆ ಆಡಳಿತಾರೂಢ ಕಾಂಗ್ರೆಸ್ ಪಕ್ಷ. ಇಂತಹ ವಾತಾವರಣವೇ ಇರಲಿ ಎಂದು ಬಿಜೆಪಿ ಬಯಸುತ್ತಿದೆ. ರಾಜ್ಯದಲ್ಲಿ ಬಿಜೆಪಿ ವಿರೋಧಿ ಅಲೆ ಇದ್ದಾಗಲೂ ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸಿಗೆ ಸ್ಥಾನಗಳಿಸಲು ಸಾಧ್ಯವಾಗಲಿಲ್ಲ. ವಿಧಾನಸಭೆಯ ಸ್ಪೀಕರ್ ಆಗಿ ಕೆ.ಜಿ.ಬೋಪಯ್ಯ ಸಾಕಷ್ಟು ವಿವಾದಕ್ಕೆ ಒಳಗಾಗಿದ್ದು ಇದರಿಂದಾಗಿ ಅವರನ್ನು ಸೋಲಿಸುವುದು ಸುಲಭ ಎಂದಿದ್ದಾಗಲೂ, ಅವರನ್ನು ಸೋಲಿಸಲು ಸಾಧ್ಯವಾಗಲಿಲ್ಲ, ಇದಕ್ಕೆಲ್ಲಾ ದುರ್ಬಲ ನಾಯಕತ್ವದ ಕೈಯಲ್ಲಿ ಕಾಂಗ್ರೆಸ್ ಪಕ್ಷ ನಲುಗುತ್ತಿರುವುದು ಕಾರಣವಾಗಿದೆ.

ಅನುರಾಗ್ ತಿವಾರಿ ಕೊಡಗಿನ ಜಿಲ್ಲಾಧಿಕಾರಿ. ಉತ್ತರ ಪ್ರದೇಶ ಮೂಲದ ಈ ವ್ಯಕ್ತಿ ಬಹಳ ಬುದ್ಧಿವಂತ. ತನ್ನ ಬುದ್ಧಿವಂತಿಕೆಯನ್ನು ಜನರ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಸಾರ್ವಜನಿಕರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಇಟ್ಟುಕೊಳ್ಳಲು ಉಪಯೋಗಿಸದೆ, ಜನರಿಗೆ ಕಿರುಕುಳ ನೀಡಲು ಮತ್ತು ತನ್ನ ಅಧಿಕಾರದ ದರ್ಪವನ್ನು ಪ್ರದರ್ಶಿಸಲು ಬಳಸುತ್ತಿರುವುದರಿಂದ, ಜಿಲ್ಲಾಧಿಕಾರಿ ಹಾಗೂ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ ಹಾಗೂ ಸಾರ್ವಜನಿಕರು, ಜಿಲ್ಲಾಧಿಕಾರಿ ಹಾಗೂ ಸಂಘಸಂಸ್ಥೆಗಳ ನಡುವೆ ಬಹಳ ದೊಡ್ಡ ಕಂದಕ ಏರ್ಪಟ್ಟಿದೆ. ಆಡಳಿತ ಪಕ್ಷದವರನ್ನು ಕೂಡ ಡೋಂಟ್ ಕೇರ್ ಎನ್ನುವಂತೆ ಅವರು ನಡೆದುಕೊಳ್ಳುತ್ತಿರುವುದರಿಂದ ಅವರೊಬ್ಬ ಸರ್ವಾಧಿಕಾರಿಯಾಗಿ ಕಂಡುಬರುತ್ತಿದ್ದಾರೆ. ಜಿಲ್ಲಾಧಿಕಾರಿಯನ್ನು ಶ್ರೀಸಾಮಾನ್ಯ ಹಾಗಿರಲಿ, ಆಡಳಿತ ಪಕ್ಷದವರೇ ಸುಲಭವಾಗಿ ಭೇಟಿಯಾಗಲು ಸಾಧ್ಯವಿಲ್ಲ.

ಕಾಂಗ್ರೆಸಿನೊಳಗೆ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಹಾಗೂ ಕಾಂಗ್ರೆಸ್ ಪಕ್ಷದ ನಡುವೆ ಇರುವಂತಹ ಶೀಥಲ ಸಮರದ ಲಾಭವನ್ನು ಅನುರಾಗ್ ತಿವಾರಿ ಪಡೆದುಕೊಂಡು, ಕಾಂಗ್ರೆಸ್ ಪಕ್ಷವನ್ನು ಕೂಡ ನಿರ್ಲಕ್ಷಿಸುತ್ತಿದ್ದಾರೆ. ಇದರಿಂದಾಗಿ ಆಡಳಿತ ವ್ಯವಸ್ಥೆ ಎಂಬುದು ಪ್ರಜಾಪ್ರಭುತ್ವದ ಹಾದಿಯಲ್ಲಿ ಇಲ್ಲ, ಜಿಲ್ಲಾಧಿಕಾರಿಗಳ ವಿರುದ್ಧ ಕೊಡಗು ಜಿಲ್ಲಾ ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿಗಳಿಗೆ ನೇರವಾಗಿ ದೂರು ನೀಡಿದೆ. ಪ್ರತೀ ಬಾರಿ ಐ.ಎ.ಎಸ್. ಅಧಿಕಾರಿಗಳ ವರ್ಗಾವಣೆ ಎಂದಾಗ ತಮ್ಮ ಜಿಲ್ಲಾಧಿಕಾರಿ ವರ್ಗವಾಗಿದ್ದಾರೆಯೇ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಉತ್ಸುಕದಿಂದ ನೋಡುತ್ತದೆ. ಏನೆಲ್ಲಾ ಪ್ರಯತ್ನಪಟ್ಟರೂ ತನ್ನನ್ನು ವರ್ಗಾಯಿಸಲು ಸಾಧ್ಯವಾಗಿಲ್ಲ ಎಂಬ ಅಹಂ ಅವರ ನೆತ್ತಿಗೆ ಏರಿದ್ದು, ಮತ್ತಷ್ಟು ಜನವಿರೋಧಿ ಧೋರಣೆಯನ್ನು ಅವರು ತಳೆಯುತ್ತಾ ಬಂದಿದ್ದಾರೆ. ತನ್ನ ಕಚೇರಿಯಲ್ಲಿ ಸಾರ್ವಜನಿಕರು ಕುಳಿತುಕೊಳ್ಳಲು ಸಾಕಷ್ಟು ಆಸನವನ್ನೂ ಇಡದೆ, ಊಳಿಗಮಾನ್ಯ ಪದ್ಧತಿ ಜಾರಿಗೆ ತರಲು ಪ್ರಯತ್ನಿಸಿದ್ದಾರೆ.



ಜನರೊಂದಿಗೆ ನಿಕಟವಾಗಿ ಸಂಪರ್ಕವನ್ನು ಇಟ್ಟುಕೊಳ್ಳಬೇಕಾದಂತಹ ಮತ್ತೊಂದು ಇಲಾಖೆ ಪೊಲೀಸ್ ಇಲಾಖೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಈ ಇಲಾಖೆಯ ಕರ್ತವ್ಯ. ಇದರ ಮುಖ್ಯಸ್ಥರು ಶ್ರೀಮತಿ ವಾರ್ತಿಕಾ ಕಟಿಯಾರ್ ಎಂಬ ಉತ್ತರ ಭಾರತದ ಮಹಿಳೆ. ಇಂಗ್ಲಿಷ್ ಹಾಗೂ ಹಿಂದಿ ಬಿಟ್ಟು ಬೇರೆ ಭಾಷೆ ಮಾತನಾಡಲು ಸಾಧ್ಯವೇ ಇಲ್ಲದಂತಹ ಇವರಿಗೂ ಅಧಿಕಾರ ಎಂಬುದು ನೆತ್ತಿಗೇರಿದೆ. ಸಾರ್ವಜನಿಕರೊಂದಿಗೆ ಹಾಗಿರಲಿ, ತನ್ನ ಕಚೇರಿಯ ಸಿಬ್ಬಂದಿಗಳೊಂದಿಗೆ ಬಾಂಧವ್ಯವನ್ನು ಇಟ್ಟುಕೊಳ್ಳದ ಅಧಿಕಾರಿ ಇವರು. ಮದುವೆ ಮನೆಯಲ್ಲಿ ಧ್ವನಿವರ್ಧಕ ಹಾಕಿದರೆ ತನ್ನ ಪುಟ್ಟ ಮಗುವಿಗೆ ನಿದ್ರಾಭಂಗವಾಗುತ್ತದೆ ಎಂದು ಹೇಳಿಕೊಂಡು ಧ್ವನಿವರ್ಧಕವನ್ನು ವಶಪಡಿಸಿಕೊಂಡು ಜನರಿಂದ ಛೀಮಾರಿ ಹಾಕಿಸಿಕೊಂಡವರು ಇವರು. ವಾರ್ತಿಕಾ ಕಟಿಯಾರ್‌ರವರು ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಜಿಲ್ಲೆಯಲ್ಲಿ ಅನುಚೇತ್‌ರವರು ತಮ್ಮ ಸರಕಾರಿ ಬಂಗ್ಲೆಯನ್ನು ನವೀಕರಿಸಿದ್ದರು. ವಾರ್ತಿಕಾ ಕಟಿಯಾರ್ ಅಧಿಕಾರ ವಹಿಸಿಕೊಂಡ ನಂತರ ಮತ್ತೊಮ್ಮೆ ಬಂಗ್ಲೆಯನ್ನು ನವೀಕರಿಸಿದರು. ಅಷ್ಟು ದಿನಗಳ ಕಾಲ ರೆಸಾರ್ಟ್‌ನಲ್ಲಿ ತಂಗಿದ್ದರು. ರೆಸಾರ್ಟ್ ಸಂಸ್ಕೃತಿಯವರಿಗೆ ಜನಸಾಮಾನ್ಯರ ಸಮಸ್ಯೆಗಳು ಖಂಡಿತವಾಗಿಯೂ ತಿಳಿಯುವುದಿಲ್ಲ. ಬ್ರಿಟಿಷರ ಸಂತತಿ ಎನ್ನುವಂತೆ ವರ್ತಿಸುವ ಇವರ ಬಳಿ ಸಾರ್ವಜನಿಕರು ಅಹವಾಲು ಹೇಳುವಂತಿಲ್ಲ ಏಕೆಂದರೆ ಇವರಿಗೆ ಭಾಷೆ ಅರ್ಥವಾಗುವುದಿಲ್ಲ ಕೇಳುವ ವ್ಯವಧಾನವೂ ಇಲ್ಲ, ಇದಲ್ಲದೆ ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಗಳಾಗಿರುವವರು ಕೇರಳ ಮೂಲದ ಅಭಿರಾಮ್ ಜಿ. ಶಂಕರ್‌ರವರು. ಅರಣ್ಯ ಇಲಾಖೆಯ ಬಹುತೇಕ ಅಧಿಕಾರಿಗಳು ಉತ್ತರ ಭಾರತದವರು ಮತ್ತು ಹೊರ ರಾಜ್ಯದವರು. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಗಮೋಹನ್ ಶರ್ಮ ಕೂಡ ಉತ್ತರ ಭಾರತೀಯರು. ಅವರು ಜಿಲ್ಲಾ ಉಸ್ತುವಾರಿ ಸಚಿವರು ನಡೆಸುವ ಸಭೆಯಲ್ಲಿಯೂ ಕೂರಲು ಹಿಂದೇಟು ಹಾಕುತ್ತಾರೆ. ಅವರಿಗೆ ಸರಿಸಮಾನವಾದ ವೇದಿಕೆ ಇದ್ದರೆ ಮಾತ್ರ ಅವರು ಸಭೆಗಳಲ್ಲಿ ಭಾಗವಹಿಸುತ್ತಾರೆ. ಇಲ್ಲದಿದ್ದರೆ ಅವರ ಪ್ರೋಟೋಕಾಲ್ ಅವರಿಗೆ ಸಚಿವರ ಜೊತೆಯಲ್ಲಿ ಕೂರಲೂ ಅಡ್ಡಿ ಮಾಡುತ್ತದೆ ಅಂತೆ.

ಇಂತಹ ಮನೋಭಾವದ ಅಧಿಕಾರಿಗಳು ಇರುವ ಕೊಡಗು ಜಿಲ್ಲೆಗೆ ಇತ್ತೀಚೆಗೆ ಡಾ.ಕಸ್ತೂರಿರಂಗನ್ ಸಮಿತಿಯ ವರದಿಯ ಬಗ್ಗೆ ಸಾರ್ವಜನಿಕರ ಆಕ್ಷೇಪಣೆಗಳನ್ನು ಹಾಗೂ ಅಭಿಪ್ರಾಯವನ್ನು ಪಡೆಯಲು ಕರ್ನಾಟಕ ರಾಜ್ಯ ಸರಕಾರ ನೇಮಿಸಿದ ತಜ್ಞರ ತಂಡ ಆಗಮಿಸಿತ್ತು, ಪಶ್ಚಿಮಘಟ್ಟ ಪ್ರದೇಶವನ್ನು ಸೂಕ್ಷ್ಮ ಪರಿಸರ ತಾಣವನ್ನಾಗಿ ಸಂರಕ್ಷಿಸುವ ವಿಚಾರದಲ್ಲಿ ಸ್ಥಾಪಿಸಲ್ಪಟ್ಟ ಈ ಎರಡೂ ಸಮಿತಿಗಳು ಆರಂಭದಿಂದಲೂ ಸಾರ್ವಜನಿಕರ ಮತ್ತು ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯದೆ, ಏಕಪಕ್ಷೀಯವಾಗಿ ಕೇಂದ್ರ ಸರಕಾರಕ್ಕೆ ವರದಿಯನ್ನು ನೀಡಿತ್ತು, ಇದರಿಂದ ದೇಶದಾದ್ಯಂತ ಈ ವರದಿಯನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಸಾರ್ವಜನಿಕರು ಆಕ್ಷೇಪಗಳನ್ನು ಸಲ್ಲಿಸುತ್ತಾ ಬಂದಿದ್ದರು. ಹಾಗಾಗಿ ಪ್ರೊ. ಮಾಧವ ಗಾಡ್ಗಿಲ್ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಡಾ. ಕಸ್ತೂರಿರಂಗನ್ ಸಮಿತಿ ವರದಿಯನ್ನು ಸ್ವೀಕರಿಸುವುದಾಗಿ ಕೇಂದ್ರ ಸರಕಾರ ಮುಚ್ಚಳಿಕೆಯನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟಿತ್ತು, ಆದರೆ ಈ ಬಗ್ಗೆ ಕರಡು ಅಧಿಸೂಚನೆಯನ್ನು ಹೊರಡಿಸಿ, ಜನರ ಆಕ್ಷೇಪಣೆಯನ್ನು ಪಡೆದ ನಂತರವಷ್ಟೇ ಅಂತಿಮವಾಗಿ ಅಧಿಸೂಚನೆಯನ್ನು ಹೊರಡಿಸುವುದಾಗಿ ಹೇಳಿತ್ತು.

ತಜ್ಞರ ಸಮಿತಿ ಕೊಡಗು ಜಿಲ್ಲೆಗೆ ಆಗಮಿಸಿದ ವೇಳೆಯಲ್ಲಿ ಸಾರ್ವಜನಿಕರು ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ಹೇಳಲು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಜಿಲ್ಲಾ ಆಡಳಿತ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿತ್ತು, ಆದರೆ ಸರ್ವಾಧಿಕಾರಿ ಮನೋಭಾವದ ಜಿಲ್ಲಾಧಿಕಾರಿ ಅನುರಾಗ್ ತಿವಾರಿಯವರು ಸಭೆ ನಡೆಯುವ ಪ್ರದೇಶದ ಸುತ್ತ ಬಿಗಿಯಾದ ಪೊಲೀಸ್ ಬಂದೋಬಸ್ತನ್ನು ಕಲ್ಪಿಸುವ ಮೂಲಕ ಒಂದು ರೀತಿಯ ಭಯದ ವಾತಾವರಣವನ್ನು ಸೃಷ್ಟಿಸಿದ್ದರು. ಜೊತೆಗೆ ಒಂದು ಗ್ರಾಮದಿಂದ ಕೇವಲ ಇಬ್ಬರು ಸಭೆ ನಡೆಯುವ ಸ್ಥಳಕ್ಕೆ ಬರಲು ಅವಕಾಶವನ್ನು ನೀಡಬೇಕು ಎಂದು ಪೊಲೀಸರಿಗೆ ಸೂಚಿಸಿದ್ದರು. ಹಾಗಾಗಿ ಈ ಸಭೆ ಆಕ್ಷೇಪಣೆಗಳನ್ನು ಸಲ್ಲಿಸಲು ಇರುವ ಸಭೆಯಾಗದೆ, ಗೊಂದಲದ ಗೂಡಿನ ಸಭೆಯಾಗಿತ್ತು. ಸಂಸತ್ತಿನ ಅಧಿವೇಶನದ ನಡುವೆಯೂ ಈ ಸಭೆಗಾಗಿ ಸಂಸದ ಪ್ರತಾಪ ಸಿಂಹ ಆಗಮಿಸಿದ್ದರು. ಶಾಸಕರುಗಳು ಹಾಗೂ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸದಸ್ಯರುಗಳು ಸಭೆಗೆ ಆಗಮಿಸಿದ್ದರು.



ರಾಜ್ಯ ಸರಕಾರ ಆಕ್ಷೇಪಣೆಗಳನ್ನು ಕೇಳುವ ಮುನ್ನ ವರದಿಯನ್ನು ಕನ್ನಡಕ್ಕೆ ಭಾಷಾಂತರಿಸಿ ನೀಡಿಲ್ಲ ಎನ್ನುವುದರ ಜೊತೆಗೆ ಈ ವರದಿಯಿಂದ ಕೃಷಿಕರಿಗೆ ಆಗುವಂತಹ ಪ್ರಯೋಜನಗಳ ಬಗ್ಗೆ ಉಲ್ಲೇಖವಿಲ್ಲ ಎಂಬ ಮೂಲಭೂತ ಆಕ್ಷೇಪಣೆಗಳನ್ನು ಕೊಡಗು ಜಿಲ್ಲೆಯಲ್ಲಿ ಡಾ.ಕಸ್ತೂರಿರಂಗನ್ ಸಮಿತಿ ವರದಿ ವಿರೋಧಿ ಸಮಿತಿಯ ಮುಖ್ಯಸ್ಥರಾಗಿರುವ ಚೇರಂಡ ನಂದಾ ಸುಬ್ಬಯ್ಯರವರು ಎತ್ತಿದ್ದು ಜಿಲ್ಲಾಧಿಕಾರಿ ಅನುರಾಗ್ ತಿವಾರಿಯವರಿಗಾಗಲಿ ಅಥವಾ ಇತರೇ ಅಧಿಕಾರಿಗಳಿಗಾಗಲಿ ತೃಪ್ತಿಯಾಗಲಿಲ್ಲ, ತಮ್ಮ ಹುಳುಕುಗಳನ್ನು ಎತ್ತಿ ತೋರುವ ವಿಚಾರವನ್ನು ಅವರು ಸಹಿಸಲು ಸಿದ್ಧರಿರಲಿಲ್ಲ, ಹಾಗಾಗಿ ಅಲ್ಲಿಂದಲೇ ಸಭೆಯಲ್ಲಿ ಗೊಂದಲಗಳು ಆರಂಭವಾಗಿದ್ದವು.

ಶಾಸಕ ಕೆ.ಜಿ.ಬೋಪಯ್ಯ ಈ ಸಭೆ ಪ್ರಜಾಪ್ರಭುತ್ವದ ಮಾದರಿಯಲ್ಲಿ ನಡೆಯದೆ, ಸರ್ವಾಧಿಕಾರಿ ಧೋರಣೆಯಲ್ಲಿ ನಡೆಯುತ್ತಿದೆ ಎಂದು ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ವ್ಯವಸ್ಥಿತವಾಗಿ ಸಭೆಯನ್ನು ನಡೆಸಬೇಕಾದ ಜವಾಬ್ದಾರಿಯನ್ನು ಹೊರಬೇಕಾಗಿದ್ದ ಜಿಲ್ಲಾಧಿಕಾರಿಗಳು, ಕಾಟಾಚಾರಕ್ಕಾಗಿ ಸಭೆ ಎನ್ನುವಂತೆ ಸಭೆಯನ್ನು ಆಯೋಜಿಸಿದ್ದರಿಂದ, ಗೊಂದಲ ಸಾಕಷ್ಟು ಆಗಿತ್ತು.

ಸುಮಾರು 55 ಗ್ರಾಮಗಳು ಈ ವರದಿಯ ಆಧಾರದಲ್ಲಿ ಸೂಕ್ಷ್ಮ ಪರಿಸರ ವಲಯದ ವ್ಯಾಪ್ತಿಗೆ ಬರುವ ಹಿನ್ನಲೆಯಲ್ಲಿ, ಕೃಷಿ ಆಧಾರಿತ ಜಿಲ್ಲೆಯಾದ್ದರಿಂದ, ಕೃಷಿಕ ವರ್ಗದವರು ಸಹಜವಾದ ಆತಂಕಕ್ಕೆ ಈಡಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುತ್ತಿದ್ದ ವೇಳೆಯಲ್ಲಿ ಸಭೆಯ ಗಾಂಭೀರ್ಯವನ್ನು ಅರಿಯದ ರೀತಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ಶಿವಶಂಕರ್ ಎಂಬವರು ಉಪವಿಭಾಗಾಧಿಕಾರಿಯಾಗಿರುವ ಅಭಿರಾಮ್ ಜಿ. ಶಂಕರ್‌ರವರೊಂದಿಗೆ ಹರಟುತ್ತಾ ಕುಳಿತುಕೊಂಡು ನಗುತ್ತಿರುವುದನ್ನು ಗಮನಿಸಿದ ಶಾಸಕ ಕೆ.ಜಿ.ಬೋಪಯ್ಯ ಹಾಗೂ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಶರೀನ್ ಸುಬ್ಬಯ್ಯ ಗಂಭೀರವಾದ ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಮತ್ತು ನೋವನ್ನು ಹೇಳುತ್ತಿರುವಾಗ, ನಗುತ್ತಿರುವುದು ಏಕೆ ಎಂದು ಪ್ರಶ್ನಿಸಿದರು. ಅಧಿಕಾರಿ ತಮ್ಮನ್ನು ಗೇಲಿ ಮಾಡುತ್ತಿದ್ದಾರೆ ಎಂಬ ಭಾವನೆ ಸಾರ್ವಜನಿಕರಿಗೆ ಬಂದಿತ್ತು, ಅಧಿಕಾರಿಗಳ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತಿದ್ದ ಸಾರ್ವಜನಿಕರು ನಗುತ್ತಿರುವ ಅಧಿಕಾರಿಯನ್ನು ಸಭೆಯಿಂದ ಹೊರಕ್ಕೆ ಕಳುಹಿಸಬೇಕೆಂದು ಆಗ್ರಹಿಸಿದರು. ಆಗ ಸಾರ್ವಜನಿಕರು, ಪೊಲೀಸರು ಮತ್ತು ಅಧಿಕಾರಿಗಳ ನಡುವೆ ಮಾತಿನ ಚಕಮಕಿ, ನೂಕಾಟ ನಡೆಯಿತು. ಕೊನೆಗೆ ಸಭೆ ನಡೆಸುವುದು ಅಸಾಧ್ಯ ಎನ್ನುವಂತಹ ಪರಿಸ್ಥಿತಿ ಬಂದಾಗ, ಅಧಿಕಾರಿ ಶಿವಶಂಕರ್‌ರವರನ್ನು ಹೊರಕ್ಕೆ ಕಳುಹಿಸಿದರು.

ಐವರ ವಿರುದ್ಧ ಮೊಕದ್ದಮೆ

ಇಷ್ಟಕ್ಕೆ ಈ ಪ್ರಕರಣವನ್ನು ಮುಗಿಸಬಹುದಾಗಿತ್ತು ಆದರೆ ಜಿಲ್ಲಾಧಿಕಾರಿ ಅನುರಾಗ್ ತಿವಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ವಾರ್ತಿಕಾ ಕಟಿಯಾರ್‌ರವರಿಗೆ ತಮ್ಮ ಸರ್ವಾಧಿಕಾರವನ್ನು ಪ್ರದರ್ಶಿಸಲು ಈ ಅವಕಾಶವನ್ನು ಬಳಸಿಕೊಳ್ಳಬೇಕಾಗಿತ್ತು, ಹಾಗಾಗಿ ಅಧಿಕಾರಿಗಳೆಲ್ಲರೂ ಸೇರಿ ಸಭೆ ನಡೆಸಿ ಸಂಜೆ 4 ಗಂಟೆಗೆ ನಡೆದ ಘಟನೆಗೆ ರಾತ್ರಿ 10 ಗಂಟೆಗೆ ತನ್ನ ಮೇಲೆ ಹಲ್ಲೆ ನಡೆದಿದೆ ಎಂದು ಶಿವಶಂಕರ್‌ರವರಿಂದ ಪುಕಾರನ್ನು ಪಡೆದು ಐವರ ವಿರುದ್ಧ ಮೊಕದ್ದಮೆ ದಾಖಲಿಸಿದರು. ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ ಜಿಲ್ಲಾ ಪಂಚಾಯತ್ ಸದಸ್ಯ ಎಸ್.ಎನ್.ರಾಜಾರಾವ್, ಶಾಸಕ ಕೆ.ಜಿ.ಬೋಪಯ್ಯನವರ ಆಪ್ತ ಕಾರ್ಯದರ್ಶಿ ಮಧುದೇವಯ್ಯ ಹಾಗೂ ಸುಭಾಶ್‌ರವರ ಜೊತೆಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದ ಚೇರಂಡ ನಂದಾ ಸುಬ್ಬಯ್ಯರವರ ವಿರುದ್ಧ ಮೊಕದ್ದಮೆ ದಾಖಲಿಸಿದರು. ಹಾಗೂ ನವೆಂಬರ್ 29ರಂದು ಶನಿವಾರ ಕ್ರಿಮಿನಲ್ ವ್ಯಕ್ತಿಯೊಬ್ಬರನ್ನು ಬಂಧಿಸುವ ರೀತಿಯಲ್ಲಿ ನಂದಾ ಸುಬ್ಬಯ್ಯ ಅವರನ್ನು ಬಂಧಿಸಿ, ಬಂಧಿಸಿದ ವಿಚಾರವನ್ನು ಮನೆಗೂ ತಿಳಿಸಲು ಅವಕಾಶ ನೀಡದೆ, ವಕೀಲರನ್ನೂ ಸಂಪರ್ಕಿಸಲು ಅವಕಾಶ ನೀಡದೆ, ಮೊಬೈಲನ್ನೂ ಕಿತ್ತುಕೊಂಡು ಅಧಿಕಾರಿಶಾಹಿ ಪ್ರವೃತ್ತಿಯನ್ನು ಪ್ರದರ್ಶಿಸಿದರು. ಮಾನವ ಹಕ್ಕಿನ ಉಲ್ಲಂಘನೆಯನ್ನು ಮಾಡಿದ್ದರು. ಶನಿವಾರ ಬಂಧಿಸಿದ ಕಾರಣವೇನೆಂದರೆ, ನ್ಯಾಯಾಲಯ ಅವರಿಗೆ ಜಾಮೀನು ನಿರಾಕರಣೆ ಮಾಡಿದರೆ, ಕೆಲವು ದಿನಗಳ ಕಾಲ ಅವರು ನ್ಯಾಯಾಂಗ ಬಂಧನದಲ್ಲಿ ಇರಬೇಕಾಗುತ್ತದೆ ಎಂಬುದಾಗಿತ್ತು, ಆದರೆ ನ್ಯಾಯಾಲಯ ಅವರಿಗೆ ಜಾಮೀನು ನೀಡಿತ್ತು.

ಅಧಿಕಾರಿಗಳ ಈ ಧೋರಣೆಯ ವಿರುದ್ಧ ಕೆರಳಿದ ಜಿಲ್ಲಾ ಪಂಚಾಯತ್ ಅಧ್ಯಕ್ಷರೂ ಮತ್ತು ಸದಸ್ಯರು ಅಧಿಕಾರಿ ಶಿವಶಂಕರ್ ವಿರುದ್ಧ ಪೊಲೀಸ್ ಪುಕಾರು ನೀಡಿದರು. ಮತ್ತು ಶಿವಶಂಕರ್‌ರವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಆದರೆ ತಾನೇ ಪೊಲೀಸ್ ಅಧಿಕಾರಿ ಮತ್ತು ತಾನೇ ನ್ಯಾಯಾಧೀಶ, ಎಂದು ಭಾವಿಸಿರುವ ಪೊಲೀಸ್ ವರಿಷ್ಠಾಧಿಕಾರಿ, ಅಧಿಕಾರಿಯ ವಿರುದ್ಧ ಸುಳ್ಳು ದೂರು ನೀಡಿದ್ದಾರೆ ಎಂದು ಹೇಳಿದರು.

ಎಲ್ಲಾ ಘಟನೆಗಳು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಮ್ಮುಖದಲ್ಲಿಯೇ ನಡೆದಿದ್ದ ಕಾರಣ ಮತ್ತು ಸಭೆಯನ್ನು ಜಿಲ್ಲಾಧಿಕಾರಿಗಳೇ ಆಯೋಜಿಸಿದ್ದ ಕಾರಣ ಈ ಘಟನೆಯ ಬಗ್ಗೆ ದೂರು ನೀಡಬೇಕಾಗಿದ್ದವರು ಜಿಲ್ಲಾಧಿಕಾರಿಗಳು. ಆದರೆ ಅವರು ನೇರವಾಗಿ ಶಾಮೀಲಾಗದೆ, ಒಂದು ರೀತಿಯಲ್ಲಿ ಸೂತ್ರಧಾರಿಯಂತೆ ವರ್ತಿಸಿದರು. ಘಟನೆಗಳ ಬಗ್ಗೆ ಪೊಲೀಸರು ಸ್ವಯಂ ಮೊಕದ್ದಮೆ ದಾಖಲಿಸಲೂ ಅವಕಾಶವಿತ್ತು, ಹಾಗೂ ಮಾಡದೆ, ಗೂಢಾಲೋಚನೆಯನ್ನು ನಡೆಸಿ ಅಧಿ… ದೂರು ನೀಡುವಂತೆ ಮಾಡಿ ಪ್ರಕರಣವನ್ನು ದಾಖಲಿಸಿಕೊಂಡರು.

ಕೊಡಗು ಬಂದ್

ಪೊಲೀಸರ ಮತ್ತು ಜಿಲ್ಲಾಡಳಿತದ ಈ ದಬ್ಬಾಳಿಕೆಯನ್ನು ವಿರೋಧಿಸಿ ಮ… ಕಸ್ತೂರಿರಂಗನ್ ಸಮಿತಿ ವರದಿ ಜಾರಿಗೆ ತರುವುದನ್ನು ವಿರೋಧಿಸಿ ಡಿಸೆಂ… 2ರಂದು ಕೊಡಗು ಜಿಲ್ಲಾ ಬಂದ್‌ಗೆ ಕರೆ ನೀಡಲಾಯಿತು. ಎಲ್ಲಾ ರಾಜಕೀ… ಪಕ್ಷಗಳು ಈ ಬಂದ್‌ಗೆ ಬೆಂಬಲವನ್ನು ಘೋಷಿಸಿದವು. ಹೀಗೆ ಬಂದ್‌ಗೆ ಆ… ನೀಡಿದ್ದು ಜಿಲ್ಲಾ ಆಡಳಿತದ ಪ್ರತಿಷ್ಠೆಗೆ ಭಂಗ ಉಂಟುಮಾಡಿದ ರೀತಿಯಲ್ಲಿ ವ… ಪೊಲೀಸ್ ವರಿಷ್ಠಾಧಿಕಾರಿ ವಾರ್ತಿಕಾ ಕಟಿಯಾರ್ 10 ಸೆಕೆಂಡುಗಳ ಪತ್ರಿಕಾಗೋ… ನಡೆಸಿ, ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಬಲಾತ್ಕಾರವಾಗಿ ಬಂದ್ ಮಾ… ಮೊಕದ್ದಮೆ ದಾಖಲಿಸಲಾಗುವುದು ಎಂಬ ಎಚ್ಚರಿಕೆಯನ್ನು ನೀಡಿ, ಪತ್ರಿಕಾಗೋಷ್ಠಿ… ಪತ್ರಕರ್ತರು ಹೊರ ನಡೆಯುವ ಮುನ್ನವೇ ತನ್ನ ಕಚೇರಿಯಿಂದ ತೆರಳಿ… ಇದರಿಂದ ಈ ಬಂದ್ ಬಗ್ಗೆ ಪೊಲೀಸರ ಭಾವನೆ ಏನಾ… ಎಂಬುದು ಸ್ಪಷ್ಟವಾಯಿತು. ಅವರಿಗೆ ಆಡಳಿತ ಪಕ್ಷವೂ… ಎಲ್ಲಾ ಪಕ್ಷಗಳು ಬಂದ್‌ಗೆ ಬೆಂಬಲ ನೀಡಿದ್ದು ಮತ್ತು… ಸಂಸ್ಥೆಗಳು ಕೂಡ ಬೆಂಬಲ ನೀಡಿದ್ದು ನುಂಗಲಾರದ ತುತ್ತಾ… ಬಂದನ್ನು ವಿಫಲಗೊಳಿಸಲು ಜಿಲ್ಲಾಡಳಿತಕ್ಕೆ ಸಾಧ್ಯವಾಗಲಿಲ್ಲ, ಹಾ… ಬಂದ್ ವೇಳೆ ಕೆಲವರು ಬಲತ್ಕಾರ ಮಾಡಿದ್ದಾರೆ ಎಂದು… ಮೊಕದ್ದಮೆಯನ್ನು ದಾಖಲಿಸಿದರು.

ಪೊಲೀಸ್ ಇಲಾಖೆ ಒಂದು ರೀತಿಯ ಪ್ರತೀ… ಮನೋಭಾವವನ್ನು ಪ್ರದರ್ಶಿಸುತ್ತಾ ಬಂತು. ತಮ್ಮ ಪ್ರ… ಧಕ್ಕೆ ಬಂದಂತೆಲ್ಲಾ ಸಾರ್ವಜನಿಕರ ವಿರುದ್ಧ ಮತ್ತಷ್ಟು ಕಿರು… ನೀಡುವ ಪ್ರವೃತ್ತಿಯನ್ನು ವಾರ್ತಿಕಾ ಕಟಿಯಾರ್ ಪ್ರದರ್ಶಿ… ತೊಡಗಿದರು. ಅರಣ್ಯ ಅಧಿಕಾರಿ ಶಿವಶಂಕರ್‌ರವರ ಮೇಲೆ ಹಲ್ಲೆ ನಡೆಸಿ… ವಿರುದ್ಧ ಗೂಂಡಾ ಕಾಯ್ದೆಯ ಅಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗು… ಎಂಬ ಹೇಳಿಕೆಯನ್ನು ಅವರು ನೀಡಿದರು. ಅಂದರೆ ಜಿಲ್ಲಾಡಳಿತ ಸಾರ್ವಜನಿಕರೊ… ನೇರವಾಗಿ ಸಂಘರ್ಷಕ್ಕೆ ಸಿದ್ಧವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮಲೆನಾಡು ರಾಜ್ಯದ ಇಂಗಿತ

ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವವರು ಸ್ವತಃ ಗೃಹ ಸಚಿವರಾ… ಕೆ.ಜೆ.ಜಾರ್ಜ್‌ರವರು. ಜೊತೆಗೆ ಇವರು ಕೊಡಗು ಜಿಲ್ಲೆಯಲ್ಲಿ ಈ ಹಿಂದೆ ಇದ್ದ… ಹಾಗಾಗಿ ಅವರು ಅಧಿಕಾರಿಗಳ ಈ ಪ್ರವೃತ್ತಿಗೆ ಕಡಿವಾಣವನ್ನು ಹಾಕಬೇಕಾ… ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಬಹುತೇಕ ನೆಲಕಚ್ಚಿದ ಸ್ಥಿತಿಯಲ್ಲಿ ಇ… ಕಾರಣ ಇಂತಹ ಅವಕಾಶವನ್ನು ಬಳಸಿಕೊಂಡು ಜನರಲ್ಲಿ ಸರಕಾರದ ಬಗ್ಗೆ ಉತ್ತಮ… ಭಾವನೆ ಬರುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿತ್ತು. ಆದರೆ ಜಾರ್ಜ್… ಈ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಘಟನೆಗಳು ನಡೆಯುವ ವೇಳೆಯಲ್ಲಿ ಅ… ಡಿಸೆಂಬರ್ 1ಕ್ಕೆ ಪ್ರಗತಿ ಪರಿಶೀಲನಾ ಸಭೆ ನಿಗದಿಯಾಗಿತ್ತು, ಹಿಂದಿನ ದಿನ … ಅಕಾಡೆಮಿಯ ಕಾರ್ಯಕ್ರಮವೂ ನಿಗದಿಯಾಗಿತ್ತು ಇವೆಲ್ಲವನ್ನೂ ರದ್ದುಪಡಿಸಿ, ಜನ… ಸರಕಾರ ಮತ್ತು ಕಾಂಗ್ರೆಸ್ ಪಕ್ಷ ಮತ್ತಷ್ಟು ದೂರವಾಯಿತೇ ವಿನಹ, ಲಾಭವ… ಆಗಲಿಲ್ಲ, ಸಚಿವ ಜಾರ್ಜ್‌ರವರು ತಮ್ಮ ಅಧಿಕಾರವನ್ನು ಚಲಾವಣೆ ಮಾ… ಅಧಿಕಾರಿಗಳ ಮಾತಿಗೆ ಮಣೆ ಹಾಕಿದರು.

ಈ ಎಲ್ಲಾ ಘಟನೆಗಳು ನಡೆಯುವಾಗ ಕೊಡಗಿನಲ್ಲೇ ಇದ್ದಂತಹ ವಿ… ಪರಿಷತ್ ಮಾಜಿ ಸದಸ್ಯ ಎ.ಕೆ.ಸುಬ್ಬಯ್ಯ ಕೂಡ ಅಧಿಕಾರಿಗಳ ಈ ಪ್ರವೃತ್ತಿ… ಖಂಡಿಸಿ ಹೇಳಿಕೆಯನ್ನು ನೀಡಿದರು. ಅಧಿಕಾರಿಗಳು ಜನಸೇವಕರು ಎಂಬು… ಅರಿತುಕೊಳ್ಳಬೇಕು ಎಂದು ಹೇಳಿರುವ ಅವರು, ಪೊಲೀಸ್ ಇಲಾಖೆಯ ವರ್ತನೆ… ಖಂಡಿಸಿ ಈ ವಿಚಾರದಲ್ಲಿ ಸಚಿವ ಜಾರ್ಜ್ ಹಾಗೂ ಮುಖ್ಯಮಂತ್ರಿ ಸಿದ್ಧರಾ… ಮಧ್ಯ ಪ್ರವೇಶಿಸಬೇಕು ಎಂದು ಹೇಳಿದರು.

ಸರಕಾರ ಜನವಿರೋಧಿ ಧೋರಣೆಯನ್ನು ತಳೆದಿದೆ ಎನ್ನುವಾಗ ಸಹಜ… ಜನರು ಕೆರಳುತ್ತಾರೆ. ಇಂತಹ ಸಂದರ್ಭಕ್ಕೆ ಕಾಯುವ ಬಿಜೆಪಿ, ಇದರ ಲಾಭ… ಪಡೆಯಲು ಸಜ್ಜಾಯಿತು. ಹಿರಿಯಣ್ಣನ ಪಾತ್ರವನ್ನು ವಹಿಸಿಕೊಂಡು, ಸರ್ವ … ಸಭೆ ನಡೆಯುವಂತೆ ನೋಡಿಕೊಂಡಿತು. ಈ ಸಭೆಯಲ್ಲಿ ಅಧಿಕಾರಿ ವರ್ಗ… ಸರ್ವಾಧಿಕಾರ ಮನೋಭಾವವನ್ನು ಖಂಡಿಸಿದ್ದೇ ಅಲ್ಲದೆ, ಕರ್ನಾಟಕ ರಾಜ್ಯ ಸ… ಕೊಡಗು ಜಿಲ್ಲೆಯ ಜನರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ನಿರಂತರವಾಗಿ ವಿಫಲವಾ… ಎಂಬ ವಿಚಾರವನ್ನು ಮಂಡಿಸಿ, ರಾಜ್ಯ ಸರಕಾರದ ಈ ಧೋರಣೆಯ … "ಮಲೆನಾಡು ರಾಜ್ಯ" ಸ್ಥಾಪನೆಗೆ ಬೇಡಿಕೆಯನ್ನು ಇಡುವ ಬಗ್ಗೆ ಪ್ರಸ್ತಾಪಿಸಲಾ… ಇದೊಂದು ಅಪಾಯಕಾರಿ ಬೆಳವಣಿಗೆ.

ಈಗಾಗಲೇ ಉತ್ತರ ಕರ್ನಾಟಕದವರು ರಾಜ್ಯ ಸರಕಾರದ ನಿರ್ಲಕ್ಷ್ಯ ಭಾ… ವಿರುದ್ಧ ಕೆರಳಿದ್ದು, ಹೈದರಾಬಾದ್ ಕರ್ನಾಟಕವನ್ನು ಪ್ರತ್ಯೇಕಗೊಳಿಸಬೇಕು … ವಿಚಾರವನ್ನು ಮುಂದಿಡುತ್ತಿದೆ. ಕೊಡಗು ಜಿಲ್ಲೆ ಪ್ರತ್ಯೇಕ ರಾಜ್ಯವಾಗಬೇಕು … ಬೇಡಿಕೆ ಈ ಹಿಂದೆ ಇತ್ತು, ಈಗ ಅದು ಮತ್ತೊಂದು ರೂಪದಲ್ಲಿ ಸ… ಕೊಡಗು ಎಂಬ ಬೇಡಿಕೆಯನ್ನು ಇಟ್ಟುಕೊಂಡು ಹೋರಾಟ ನಡೆಯುತ್ತಿದೆ. ಬ… ಹಿಂದೆಯೇ ಮಲೆನಾಡು ಭಾಗದ ಜನರಿಗೆ ಸರಕಾರ ಸೂಕ್ತ ಸ್ಪಂದನೆ ನೀಡ… ಹಾಗಾಗಿ ಪ್ರತ್ಯೇಕ ಮಲೆನಾಡು ರಾಜ್ಯವಾಗಬೇಕು ಎಂಬ ವಿಚಾರವನ್ನು … ಸಚಿವ ಬಿ.ಎ. ಜೀವಿಜಯ ತೇಲಿಬಿಟ್ಟಿದ್ದರು.

ಅಧಿಕಾರಿಶಾಹಿ ಪ್ರವೃತ್ತಿಯ ವಿರುದ್ಧ ಮತ್ತು ಕಸ್ತೂರಿರಂಗನ್ ಸಮಿತಿಯ ವ… ವಿರುದ್ಧ ಜನವರಿ 1ರಂದು ಕೊಡಗಿನಲ್ಲಿ ಬೃಹತ್ ಸಮಾವೇಶವೊಂದನ್ನು ಆಯೋ… ಬಗ್ಗೆ ಕೊಡಗು ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಂಘ ಸ… ಒಟ್ಟಾಗಿ ಹೇಳಿಕೆಯನ್ನು ನೀಡಿವೆ. ಇಂತಹ ವಾತಾವರಣ ಏತಕ್ಕಾಗಿ ಸೃಷ್ಟಿಯಾ… ಎಂದು ರಾಜ್ಯ ಸರಕಾರ ಇಲ್ಲಿಯವರೆಗೆ ತಲೆಕೆಡಿಸಿಕೊಂಡಿಲ್ಲ, ಪ್ರತ್ಯೇಕ … ಕೂಗು ಒಮ್ಮೆ ಆರಂಭವಾದರೆ ಅದನ್ನು ಶಮನ ಮಾಡುವುದು ಅಷ್ಟು ಸು… ವಿಚಾರವಲ್ಲ, ದುರ್ಬಲ ಸರಕಾರ ಇದ್ದಾಗ ಅಧಿಕಾರಿಗಳು ಸರ್ವಾಧಿಕಾರಿಗಳಾ… ಹಾಗಾದಾಗ ಇಂತಹ ಕೂಗುಗಳು ಮೊಳಗುತ್ತವೆ. ಈ ಕೂಗು ಗಟ್ಟಿಯಾಗಿ … ಮುನ್ನವೇ ಇಂತಹ ಕೂಗು ಏಳದಂತೆ ಮಾಡುವುದು ಸರಕಾರದ ಕರ್ತವ್ಯ. … ಸರಕಾರ ಮಾತ್ರ ಏನೂ ಆಗದ ರೀತಿಯಲ್ಲಿ ಕುಂಭಕರ್ಣನ ನಿದ್ರೆಯಲ್ಲಿ ಇದೆ. … ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ದುಬಾರಿಯಾಗಬಹುದು ಎಂಬ… ಸಂಶಯವಿಲ್ಲ.

● ಬಿ.ಎನ್. ಮನು

"ಪ್ರಜಾಪ್ರಭುತ್ವದ ಮೇಲಿನ ಲಜ್ಜಾಹೀನ ದಾಳಿ" ಮತ್ತು ಸಂಘ ಪರಿವಾರ

ಕಾಶ್ಮೀರದಲ್ಲಿ ನಡೆದ ಇತ್ತೀಚಿನ ಉಗ್ರಗಾಮಿ ದಾಳಿಗಳ ...ದಿನವೇ ಜಾರ್ಖಂಡದಲ್ಲಿ ಚುನಾವಣಾ ರ್‍ಯಾಲಿ ...ದನ್ನು ಉದ್ದೇಶಿಸಿ ಮಾತನಾಡಿದ ಭಾರತದ ಪ್ರಧಾನಿ ...ದ್ರ ಮೋದಿ "ಕಾಶ್ಮೀರದಲ್ಲಿ ಸಂಭವಿಸಿದ ಭಯೋ... ...ಕ ದಾಳಿ ಭಾರತದ ಪ್ರಜಾಪ್ರಭುತ್ವದ ಮೇಲಿನ ...ಹೀನ ದಾಳಿಯಾಗಿದೆ..." ಎಂದು ಹೇಳಿರುವುದಾಗಿ ...ಯಾಗಿದೆ. 'ಆಹಾ! ಎಂಥಾ ಉಲ್ಲೇಖನೀಯ ...ಗಳು! ಪ್ರಜಾಪ್ರಭುತ್ವದ ಬಗ್ಗೆ ಎಷ್ಟೊಂದು ಕಾಳಜಿ!!' ...ಮೈಮರೆಯುವ ಮುನ್ನ ಕೆಲವು ಐತಿಹಾಸಿಕ ...ಗಳನ್ನು ನೆನಪಿಸಿಕೊಳ್ಳುವುದು ಉತ್ತಮ. ಅದೇನೆಂದು ...ದೆ ನೋಡೋಣ.


ಪ್ರಜಾಪ್ರಭುತ್ವ ನಿಂತಿರುವುದೇ ಅದರ ಅತ್ಯಂತ ಪ್ರಮುಖ ...ಗಳಾದ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಯ ... ಸ್ವಾತಂತ್ರ್ಯಾನಂತರದಲ್ಲಿ ಪ್ರಜಾಪ್ರಭುತ್ವ ಮಾದರಿಯನ್ನು ... ಮಾಡಿಕೊಂಡಿರುವ ನಾವು ಈ ಮೌಲ್ಯಗಳ ...ಗೋಸ್ಕರ ನಮಗೊಂದು ಸಂವಿಧಾನವನ್ನು ...ಕೊಂಡಿರುವೆವು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ...ವುದು ಅಂದರೆ ಸಂವಿಧಾನದ ಬಗ್ಗೆ ಗೌರವ ಮತ್ತು ... ಸಮಾಜದಲ್ಲಿರುವ ವಿವಿಧ ಜಾತಿ, ಮತ, ಪಂಥಗಳ ...ಸಮಾನತೆ ಮತ್ತು ಸಹೋದರತೆಯ ಭಾವನೆಗಳನ್ನು ...ದಿರುವುದು ಎಂದರ್ಥ. ಆದರೆ ಸಂಘಪರಿವಾರದ ...ಗೆ ಇಂಥಾ ಭಾವನೆಗಳೂ ಇಲ್ಲ, ಪ್ರಜಾಪ್ರಭುತ್ವ ... ಸಂವಿಧಾನದಲ್ಲಿ ನಂಬಿಕೆಯೂ ಇಲ್ಲವೆನ್ನುವುದು ...ದೇ ಮಾತುಗಳಿಂದ ಮತ್ತೆ ಮತ್ತೆ ಸಾಬೀತಾಗಿದೆ. ... ಜರ್ಮನಿಗಳ ಸರ್ವಾಧಿಕಾರ ಮಾದರಿಗಳನ್ನು ...ಕೊಂಡು ಅವುಗಳನ್ನೇ ಆದರ್ಶವಾಗಿರಿಸಿಕೊಂಡಿ...ವರಿಗೆ ಚುನಾವಣಾ ಪ್ರಜಾಪ್ರಭುತ್ವ ಕೇವಲ ಒಂದು ...ಮು ಅಷ್ಟೇ. ವಾಸ್ತವವಾಗಿ ಅವರ ನಂಬಿಕೆಗಳೆಲ್ಲವೂ ...ಕೃತವಾಗಿರುವುದು ಅವರ ಪೂಜನೀಯ ಗುರುಗಳಾದ ...ರ್, ಗೋಲ್ವಲ್ಕರ್ ಕಲಿಸಿಕೊಟ್ಟಂಥ ಏಕವ್ಯಕ್ತಿ ...ಕತ್ವ, ಜನಾಂಗ ಶ್ರೇಷ್ಠತೆ, ಹಿಂದೂತ್ವ ಮತ್ತು ...ಧರ್ಮಗಳ ಕುರಿತ ದ್ವೇಷದ ಮೇಲೆ. ಆದುದರಿಂದಲೆ ... ವ್ಯಕ್ತಿಕೇಂದ್ರಿತ ನಾಯಕತ್ವದ ಚಹರೆಗಳನ್ನು ಹಾಗೂ ...ಷವಾಗಿ ಚುನಾವಣೆಗಳ ಸಂದರ್ಭದಲ್ಲಿ ...ಧರ್ಮೀಯರ ವಿರುದ್ಧ ಮುಗಿಲು ಮುಟ್ಟುವ ಅತ್ಯುಗ್ರ ...ಣಗಳು ಮತ್ತು ದಾಳಿಗಳನ್ನು ಕಾಣುತ್ತಿದ್ದೇವೆ. 2014ರ ...ವಣೆಗಳಲ್ಲಿ ಉತ್ತರ ಪ್ರದೇಶದ ಬುಂದೇಲ್‌ಖಂಡದಿಂದ ... ಬಂದು ಈಗ ಮೋದಿ ಸರ್ಕಾರದಲ್ಲಿ ಸಹಾಯಕ ...ತ್ರಿಯಾಗಿರುವ ಸಾಧ್ವಿ ನಿರಂಜನ್ ಜ್ಯೋತಿ ...ದೇನನ್ನೂ ಮಾಡಿಲ್ಲ, ಆಕೆ ಅಗ್ಗದ ಜನಪ್ರಿಯತೆ ... ಫೋಟುಗಳ ಬೇಟೆಗಾಗಿ ತನ್ನ ಹಿರಿಯರಾದ ಮೋದಿ, ...ಣ, ಗಿರಿರಾಜ, ಸಿಂಘಾಲ್, ಉಮಾ, ತೊಗಾಡಿಯಾ, ...ನಾಥ, ಬಲಿಯಾನ್, ಕಲ್ಲಡ್ಕ, ಕಟೀಲು ಮೊದಲಾದ ...ರು ನಾಯಕರ ವಿಷ ಕಾರುವ ಸಂಪ್ರದಾಯವನ್ನೇ ...ದುವರಿಸಿದ್ದಾಳೆ. ಪಾಪ, ಆಕೆಯದೇನು ತಪ್ಪು, ಆಕೆ ... ಭಾಷಣಗಳಲ್ಲಿ 'ಗುಜರಾತ್ ಮಾದರಿ'ಯನ್ನು ...ಸರಿಸಲು ಪ್ರಯತ್ನಿಸಿದ್ದಾಳೆ ಅಷ್ಟೇ! ಜ್ಞಾಪಕವಿದೆಯೆ ...ಸೊಹ್ರಾಬುದ್ದೀನ್ ಶೇಖ್‌ನಂಥಾ ವ್ಯಕ್ತಿಯನ್ನು ಏನು ...ಬೇಕು' ಎಂದು ಕೇಳಿ ಸಭೆಯಲ್ಲಿದ್ದ ತನ್ನದೇ ಜನರಿಂದ ...ಬೇಕು' ಎಂಬ ಉತ್ತರ ಪಡೆದದ್ದು? 2002ರ ...ಹೋಮದ ನಂತರ ನಿರಾಶ್ರಿತರ ಶಿಬಿರಗಳನ್ನು ...ನ್ನು ಉತ್ಪಾದಿಸುವ ಕಾರ್ಖಾನೆಗಳು' ಎಂದು ಕರೆದದ್ದು? ...ಮಿಯಾಂ ಮುಶರ್ರಫ್' ಎಂದು ಹೀಯಾಳಿಸಿದ್ದು?

ಭಾರತದ ಪ್ರಜಾಪ್ರಭುತ್ವದ ಖಾತರಿಯಾಗಿರುವ ...ಧಾನದ ಮೇಲೆ ಕೈ ಇಟ್ಟು ಪ್ರಮಾಣವಚನ ಸ್ವೀಕರಿಸುವ ...ಪ್ರತಿನಿಧಿಗಳು ಸಾಂವಿಧಾನಿಕ ಮೌಲ್ಯಗಳನ್ನು ಧಿಕ್ಕರಿಸುವ ...ವರ್ತನೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದರೆ ಅದು ... ಪ್ರಜಾಪ್ರಭುತ್ವದ ಮೇಲಿನ ದಾಳಿಯೇ. ಅದಕ್ಕೂ ...ರ ದಾಳಿಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ, ಉಗ್ರರ ...ಯನ್ನು ಪ್ರಜಾಪ್ರಭುತ್ವದ ಮೇಲಿನ ಲಜ್ಜಾಹೀನ ...ವೆಂದು ಸರಿಯಾಗಿಯೇ ಖಂಡಿಸುವ ಪ್ರಧಾನಿ ಮೋದಿ ... ಸಹೋದ್ಯೋಗಿಗಳು ಮತ್ತು ಸಂಸದರ ಅವಾಚ್ಯ ... ಆಕ್ಷೇಪಣೀಯ ಮಾತುಗಳನ್ನಷ್ಟೇ ಅಲ್ಲ, ಇತ್ತೀಚಿನ ...ಲಿಯ ಸಂತ ಸೆಬಾಸ್ಟಿಯನ್ ಚರ್ಚ್ ಮೇಲಿನ ...ಯೂ ಸೇರಿದಂತೆ ದೇಶಾದ್ಯಂತ ಅಲ್ಪಸಂಖ್ಯಾತ ...ಯರ ವಿರುದ್ಧ ನಡೆಯುತ್ತಿರುವ ದಾಳಿ, ಹಲ್ಲೆ ...ಕಾರ್ಯಾಚರಣೆಗಳನ್ನು ಸಹಿತ ಪ್ರಜಾಪ್ರಭುತ್ವದ ಮೇಲೆ ...ನಡೆಸುವ ಲಜ್ಜಾಹೀನ ದಾಳಿಯೆಂದು ಕರೆದು ನೇರ, ... ಮಾತುಗಳಲ್ಲಿ ಖಂಡಿಸಬೇಕಲ್ಲವೇ? ಯಾಕೆ ...ಸುತ್ತಿಲ್ಲ? ಯಾಕೆ ಕಾನೂನು ಕ್ರಮ ಜರುಗಿಸುತ್ತಿಲ್ಲ? ... ಪೊಳ್ಳು ಮಾತುಗಳಲ್ಲಿ ತೇಲಿಸುವ ಯತ್ನ? ...ದಾಗಿಗ ಸಂಘ ಪರಿವಾರದ ಇತಿಹಾಸವನ್ನು ಒಂದಿಷ್ಟು ...ಬೇಕಾಗುತ್ತದೆ.

ಐತಿಹಾಸಿಕ ಸತ್ಯಗಳು

1992ರ ಡಿಸೆಂಬರ್ 6ರ ಬಾಬರಿ ಮಸೀದಿ ಧ್ವಂಸ ಕಾರ್ಯಾಚರಣೆಯ ನಂತರ ದೇಶಾದ್ಯಂತ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು, ಅಂತಹ ಸನ್ನಿವೇಶದಲ್ಲಿ ಸಂಘ ಪರಿವಾರ ಜನವರಿ 1, 1993ರಂದು 'ಶ್ವೇತ ಪತ್ರ'ವೊಂದನ್ನು ಹೊರಡಿಸಿದೆ. ಅದರ ಶೀರ್ಷಿಕೆ: "ವರ್ತಮಾನ್ ಇಂಡಿಯನ್‌ಸಂವಿಧಾನ್." ಅದರಲ್ಲಿ ಸಂವಿಧಾನವನ್ನು "ಹಿಂದೂ ವಿರೋಧಿ"ಯೆಂದು ಖಂಡಿಸುವುದರೊಂದಿಗೆ ಸಂಘ ಪರಿವಾರ ದೇಶದಲ್ಲಿ ಸ್ಥಾಪಿಸ ಬಯಸುವ ರಾಜ್ಯಾಡಳಿತ ಕ್ರಮದ ರೂಪುರೇಷೆಗಳನ್ನು ನೀಡಲಾಗಿದೆ. ಅದರ ಮುಖಪುಟದಲ್ಲಿ ಎರಡು ಪ್ರಶ್ನೆಗಳಿದ್ದವು: "ಭಾರತದ ಸಮಗ್ರತೆ, ಸಹೋದರತೆ ಮತ್ತು ಕೋಮು ಸಾಮರಸ್ಯವನ್ನು ನಾಶಪಡಿಸಿದವರಾರು?" ಮತ್ತು "ಹಸಿವು, ನಿರುದ್ಯೋಗ, ಭ್ರಷ್ಟಾಚಾರ ಮತ್ತು ಅಧಾರ್ಮಿಕತೆಗಳನ್ನು ಹರಡಿಸಿದವರಾರು?"

ಆ 'ಶ್ವೇತಪತ್ರ'ದ ಪ್ರಕಟಣೆಯ ಹಿಂದೆ ಸಾಕಷ್ಟು ಪೂರ್ವ ತಯಾರಿ ನಡೆದಿದೆ. ಬಾಬರಿ ಮಸೀದಿಯನ್ನು ಕೆಡವಿದ ಬೆನ್ನಲ್ಲೆ ಡಿಸೆಂಬರ್ 25, 1992ರಂದು ಓರ್ವ ಬಿಜೆಪಿ ಸಂಸದನ ಮನೆಯಲ್ಲಿ ಪತ್ರಿಕಾಗೋಷ್ಠಿಯೊಂದನ್ನು




ನಡೆಸಲಾಯಿತು. ಅದನ್ನು ನಡೆಸಿದವರು 'ಶ್ವೇತಪತ್ರ'ದ ಲೇಖಕ ಸ್ವಾಮಿ ಮುಕ್ತಾನಂದ ಮತ್ತು ಸ್ವಾಮಿ ವಾಮದೇವ ಮಹಾರಾಜ್ ಎಂಬವರು. ಗೋಷ್ಠಿಯಲ್ಲಿ ಅವರು "ನಮಗೆ ಈ ದೇಶದ ಕಾನೂನುಗಳಲ್ಲಿ ವಿಶ್ವಾಸವಿಲ್ಲ. ... ಸಾಧುಗಳು ದೇಶದ ಕಾನೂನಿಗಿಂತಲೂ ಮಿಗಿಲು.... ಈ ದೇಶದಲ್ಲಿ ಜನಿಸಿದ ಸಕಲರನ್ನೂ ಇಲ್ಲಿನ ಹುಟ್ಟುಪೌರರೆಂದು ಪರಿಗಣಿಸುವ ಭಾರತದ ಪೌರತ್ವ ಕಾಯಿದೆ 'ಅಸಂಬದ್ಧ'ವಾಗಿದೆ... ದೇಶ ಈ 'ಹಿಂದೂ ವಿರೋಧಿ ಸಂವಿಧಾನ'ವನ್ನು ತಿರಸ್ಕರಿಸಬೇಕು" ಎಂದೆಲ್ಲ ಹೇಳಿದ್ದರು. ಇದಾದ ಒಂದು ವಾರದೊಳಗಾಗಿ 'ಶ್ವೇತಪತ್ರ' ಪ್ರಕಟವಾಗಿದೆ.

'ಶ್ವೇತಪತ್ರ'ದ ಶೀರ್ಷಿಕೆಯಲ್ಲಿ 'ಇಂಡಿಯನ್' ಎನ್ನುವ ಇಂಗ್ಲಿಷ್ ಪದವನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಅದರ ಸೂಚ್ಯಾರ್ಥ ಇಷ್ಟೆ: ಪ್ರಸಕ್ತವಾಗಿ ದೇಶದಲ್ಲಿರುವುದು 'ಇಂಡಿಯನ್' ಸಂವಿಧಾನ, 'ಹಿಂದೂ' ಸಂವಿಧಾನವಲ್ಲ. ಶ್ವೇತಪತ್ರದ ಮುನ್ನುಡಿಯಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಸ್ವಾಮಿ ಹೀರಾನಂದ ಎಂಬಾತ ಬರೆದ ಆ ಮುನ್ನುಡಿಯ ಕೆಲವು ವಾಕ್ಯಗಳನ್ನು ನೋಡಿ: "ದೇಶದ ಪ್ರಸಕ್ತ ಸಂವಿಧಾನವು ನಮ್ಮ ಸಂಸ್ಕೃತಿ, ಚಾರಿತ್ರ್ಯ ಸನ್ನಿವೇಶ, ಸಂದರ್ಭ ಇತ್ಯಾದಿಗಳಿಗೆ ವಿರುದ್ಧವಾಗಿದೆ. ಅದು ವಿದೇಶಿ ದೃಷ್ಟಿಕೋನವುಳ್ಳದ್ದು... ನಾವು ನಮ್ಮ ಆರ್ಥಿಕ ನೀತಿ, ನ್ಯಾಯಾಂಗ, ಆಡಳಿತ ಮತ್ತಿತರ ರಾಷ್ಟ್ರೀಯ ಸಂಸ್ಥೆಗಳ ಸ್ವರೂಪದ ಕುರಿತು ಮರುಚಿಂತನೆ ನಡೆಸುವ ಮುನ್ನ ಪ್ರಸಕ್ತ ಸಂವಿಧಾನವನ್ನು ರದ್ದುಗೊಳಿಸಲೇ ಬೇಕಾಗುತ್ತದೆ... ನಮ್ಮ ಸಂವಿಧಾನದಿಂದ ಆಗಿರುವ ಹಾನಿಗೆ ಹೋಲಿಸಿದರೆ ಬ್ರಿಟಿಷರ ಇನ್ನೂರು ವರ್ಷಗಳ ಸುದೀರ್ಘ ಆಳ್ವಿಕೆಯಿಂದ ಆಗಿರುವ ಹಾನಿ ಅತ್ಯಲ್ಪ. ಭಾರತವನ್ನು ಇಂಡಿಯಾ ಆಗಿ ಪರಿವರ್ತಿಸುವ ಷಡ್ಯಂತ್ರ ಈಗಲೂ ಮುಂದುವರಿದಿದೆ... ಜಗತ್ತಿನೆಲ್ಲೆಡೆ ನಮ್ಮನ್ನು ಇಂಡಿಯನ್ಸ್ ಎಂದು ಕರೆಯಲಾಗುತ್ತದೆ... ಸ್ವಾತಂತ್ರ್ಯ ಹೋರಾಟ ನಡೆದಿರುವುದು ಹಿಂದೂಸ್ತಾನದ ಹೆಸರಲ್ಲಿ, ವಂದೇ ಮಾತರಂ ನಮ್ಮ ರಾಷ್ಟ್ರಗೀತೆ... ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂದೂಸ್ತಾನ ಮತ್ತು ವಂದೇ ಮಾತರಂಗಳನ್ನು ಬೇರು ಸಹಿತ ಕಿತ್ತೆಸೆಯಲಾಗಿದೆ. 'ಬ್ರಿಟಿಷರ ಅರಸನಾದ' ಐದನೆ ಜಾರ್ಜ್‌ನನ್ನು ಸ್ವಾಗತಿಸಲೆಂದು ರಚಿಸಿದ್ದ 'ಜನಗಣ ಮನ' ಇಂದು ನಮ್ಮ ರಾಷ್ಟ್ರಗೀತೆಯಾಗಿ ಬಿಟ್ಟಿದೆ....."

ಶ್ವೇತಪತ್ರದಲ್ಲಿ "ನಮ್ಮ ಸಂವಿಧಾನದ ಸೃಷ್ಟಿಕರ್ತರು ಭಾರತದ ಚರಿತ್ರೆ ಹಾಗೂ ಸಂಸ್ಕೃತಿಗಳನ್ನು ಸರಿಯಾಗಿ ತಿಳಿದಿರದ, ಪಾಶ್ಚಾತ್ಯೀಕರಣಗೊಂಡ ವ್ಯಕ್ತಿಗಳು" ಎಂದು ದೂರಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದನ್ನು ಖಂಡಿಸ ಲಾಗಿದೆ. ಅಲ್ಪಸಂಖ್ಯಾತರ ಬಗ್ಗೆ ಇನ್ನಷ್ಟು ಕೆಟ್ಟ ಮಾತುಗಳಿವೆ. ಭಾಷೆಯ ಮೇಲೆ ಹತೋಟಿಯಿಲ್ಲದೆ ಸಂವಿಧಾನವನ್ನು ಉಗ್ರವಾಗಿ ಟೀಕಿಸಲಾಗಿದೆ: "ಈ ಸಂವಿಧಾನವನ್ನು ಕಸದಗುಪ್ಪೆಯೆಂದು ಕರೆಯಬಹುದು... ಭಾರತದ ಸಂವಿಧಾನವು ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ ವೈರಿಯಾಗಿದೆ."

ಅಂದು ವಸ್ತುತಃ ಆರೆಸ್ಸೆಸ್‌ನ ಪರಮೋಚ್ಚ ನಾಯಕನಾಗಿದ್ದ ರಾಜೇಂದ್ರ ಸಿಂಗರ ಹೇಳಿಕೆಯೊಂದು ಜನವರಿ 14, 1993ರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾಗಿದೆ:

ಪರಮಸತ್ವವುಳ್ಳ ಭಾರತ ಹಾಗೂ ಅದರ ಸಂಪ್ರದಾಯ, ಸಂಸ್ಕೃತಿ ಮತ್ತು ಮೌಲ್ಯಗಳ ಅವಶ್ಯಕತೆಗಳಿಗೆ ನಮ್ಮ ವ್ಯವಸ್ಥೆಯ ಅಸಮರ್ಪಕ ಸ್ಪಂದನವೆ ಪ್ರಸಕ್ತ ಸಂಘರ್ಷಕ್ಕೆ ಭಾಗಶಃ ಕಾರಣವಾಗಿದೆ... ಈ ದೇಶದ ಸಂವಿಧಾನವು ದೇಶದ ಕೆಲವು ನಿರ್ದಿಷ್ಟ ವೈಶಿಷ್ಟ್ಯಗಳನ್ನು ಪ್ರತಿಫಲಿಸಬೇಕು. 'ಇಂಡಿಯ



ದಟ್ ಈಸ್ ಭಾರತ್' ಎನ್ನುವ ಬದಲು 'ಭಾರತ್ ದಟ್ ಈಸ್ ಹಿಂದೂಸ್ತಾನ್' ಎನ್ನಬೇಕಿತ್ತು. ಅಧಿಕೃತ ದಾಖಲೆಗಳಲ್ಲಿ 'ಸಮ್ಮಿಳಿತ ಸಂಸ್ಕೃತಿ'ಯನ್ನು ಉಲ್ಲೇಖಿಸ ಲಾಗುತ್ತದೆ. ಆದರೆ ನಮ್ಮದು ಖಂಡಿತಾ ಸಮ್ಮಿಳಿತ ಸಂಸ್ಕೃತಿಯಲ್ಲ, ಸಂಸ್ಕೃತಿ ಅಂದರೆ ಬಟ್ಟೆಬರೆ ಧರಿಸುವುದಾಗಲಿ ಅಥವಾ ಭಾಷೆಗಳನ್ನಾಡುವುದಾಗಲಿ ಅಲ್ಲ. ಅತ್ಯಂತ ಮೂಲಾರ್ಥದಲ್ಲಿ ನೋಡಿದರೆ ಈ ದೇಶದಲ್ಲಿರುವುದು ಒಂದು ವಿಶಿಷ್ಟ ಸಾಂಸ್ಕೃತಿಕ ಏಕತೆ. ಯಾವುದೇ ದೇಶ ಬದುಕುಳಿಯಬೇಕಿದ್ದರೆ ಅದರಲ್ಲಿ ವಿಭಾಗಗಳಿರಲು ಸಾಧ್ಯವಿಲ್ಲ. ಇವೆಲ್ಲವೂ ಹೇಳುವುದೇನೆಂದರೆ ಸಂವಿಧಾನದಲ್ಲಿ ಬದಲಾವಣೆಗಳು ಅವಶ್ಯವಾಗಿವೆ. ಭವಿಷ್ಯದಲ್ಲಿ ಈ ದೇಶದ ಸಂಸ್ಕೃತಿ ಹಾಗೂ ಪ್ರಚಲಿತ ಮನೋಧರ್ಮಕ್ಕೆ ಹೆಚ್ಚು ಅನುರೂಪವಾಗಿರುವಂತಹ ಸಂವಿಧಾನವೊಂದನ್ನು ಅಳವಡಿಸಬೇಕಾಗಿದೆ.

1993ರ ಜನವರಿ 24ರಂದು ಆಂಧ್ರ ಪ್ರದೇಶದ ಅನಂತಪುರದಲ್ಲಿ ಮಾತನಾಡಿದ ಅಂದಿನ ಬಿಜೆಪಿ ಅಧ್ಯಕ್ಷ ಮುರಳಿ ಮನೋಹರ ಜೋಶಿ "ಸಂವಿಧಾನದ ಪುನರಾವಲೋಕನ ಆಗಬೇಕೆಂದು ಮತ್ತೊಮ್ಮೆ ಆಗ್ರಹಿಸಿದರು."

ಕೊನೆಯ ಮಾತು

ಹೀಗಿದೆ ಸಾಂವಿಧಾನಿಕ ಪ್ರಜಾಪ್ರಭುತ್ವದ ಮೇಲೆ ಸಂಘ ಪರಿವಾರಿಗರ ಲಜ್ಜಾಹೀನ ದಾಳಿಗಳ ಇತಿಹಾಸ. ಇದರ ಬೆಳಕಿನಲ್ಲಿ ನೋಡಿದಾಗ ಮೋದಿ ಸರ್ಕಾರ ಯಾಕೆ ಯೋಗಿ, ಸಾಧ್ವಿತರಹದವರ ಭಾಷಣಗಳನ್ನು ಮತ್ತು ಕೋಮು ದಾಳಿ, ಗಲಭೆ ಇತ್ಯಾದಿಗಳನ್ನು ನೇರ, ಸ್ಪಷ್ಟ ಮಾತುಗಳ ಖಂಡನೆಯೂ ಇಲ್ಲದೆ ಕಾನೂನುಕ್ರಮವೂ ಇಲ್ಲದೆ ಬರೀ ಹೊರಳು ಮಾತುಗಳಲ್ಲಿ ತೇಲಿಸಲೆತ್ನಿಸುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗದು. ಕೊನೆಯದಾಗಿ ಮತ್ತೊಂದು ಮುಖ್ಯ ವಿಷಯ. ಇಂದು ಸಂಘ ಪರಿವಾರದ ಸಂವಿಧಾನ ವಿರೋಧಿ ನಿಲುವು ಬಹಿರಂಗವಾಗಿ ಪ್ರಕಟವಾಗದಿರಬಹುದು. ಆದರೂ ಆ ಜ್ವಾಲಾಮುಖಿ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಲೇ ಇದೆ ಎಂಬುದನ್ನು ಮರೆಯಬಾರದು.

(ಆಧಾರ: 'ಬಿಜೆಪಿ ಮತ್ತು ಆರೆಸ್ಸೆಸ್', ಎ.ಜಿ.ನೂರಾನಿ, 2001)

ಪ್ರೇಮದ ಕೊಲೆ ಅಜರಾಮರ!



ಒಂದು ತಾಜಾ ಪ್ರೇಮವನ್ನು ದಾರುಣವಾಗಿ ಕೊಲ್ಲಲಾಯಿತು
ಪ್ರೀತಿಸಿ ಮದುವೆಯಾದ ನಾವು ಕೊಲೆಗಾರರ ಜತೆಗಿದ್ದೆವು
ಪ್ರೇಮವೆಂಬ ದೇವರೇ ಕ್ಷಮಿಸು.

ಎಳೆಗಿಳಿಗಳ ಕೊರಳ ಕತ್ತರಿಸಲು
ಮಂಡಹತಾರಗಳ ಪರೇಡು
ಮರಿಹಂಸಗಳ ಹೊಟ್ಟೆ ಹರಿಯಲು
ಚಾಕುಚೂರಿಗಳ ರಂಗತಾಲೀಮು
ಜೋಡಿ ಮೈನಾಗಳ ಸುಟ್ಟುಹಾಕಲು
ಪೊಲೀಸು ಠಾಣೆಯಿಂದಲೇ ಬಂದೂಕು
ಪ್ರೇಮಿಗಳ ಕೊಲ್ಲುವ ಜಾತ್ರೆಗೆ
ಊರ ದೊಣ್ಣೆಗಳ ಹೆಜ್ಜೆಮೇಳ.

ನಮ್ಮ ಭರತಿ ಯೌವನದ ಪ್ರತಿಬಿಂಬಗಳ
ಹೊತ್ತ ಚಂದದ ಕನ್ನಡಿಗಳು
ಪುಡಿಪುಡಿಯಾಗುವದನ್ನು ಹೇಗೆ ನೋಡುವುದು?
ಒಂದು ಅಪ್ಪಟ ಪ್ರೇಮದ ಗೋರಿ ಕಟ್ಟಿದೆವು
ಖುದಾನ ಆಸ್ಥಾನದಲ್ಲಿ ವಿಚಾರಣೆ ನಡೆದರೆ
ಜೀವಗಳನ್ನು ಕೊಲ್ಲದ ಅವರು
ಸ್ವರ್ಗಕ್ಕೆ ಹೋದಾರು
ಪ್ರೇಮವನ್ನು ಕೊಂದ ನಮಗೆ ನರಕವೇ ಗತಿ!

ಅವಳು ಸಂಗಾತಿಯಾಗುವದಾದರೆ
ಹಿಂದೂ ಆಗುವೆನೆಂದು ಆತ ಹಲುಬಿದ
ಗೋಡೆಗಳನ್ನು ಬಾಗಿಲುಗಳೆಂದು ಭ್ರಮಿಸಿ
ಬಡಿಯುತ್ತಲೇ ಇದ್ದ.
ಅವನು ಸಂಗಾತಿಯಾಗುವದಾದರೆ
ಬುರಖಾ ತೊಡುವುದಾಗಿ ಅವಳು ಗೋಗರೆದಳು
ಬರುವವರಿಗೆ ಬಯಲಾಗಿದ್ದ ಧರ್ಮ ಕೂಡ
ಬೆದರಿ ರಪ್ಪನೇ ಬಾಗಿಲು ಮುಚ್ಚಿತು.

ಮಸೀದಿಯ ದಾರಿಯಲ್ಲಿ
ಅವನ ನೋವು ಆಕಾಶವಾಯಿತು
ಗರ್ಭಗುಡಿಯ ಒಳಗೇ
ಅವಳ ಕಣ್ಣೀರು ಕಡಲಾಯಿತು.

ಅನುಕ್ಷಣ ಉದುರುತ್ತಲೇ ಇವೆ
ಪ್ರೇಮದ ನಕ್ಷತ್ರಗಳು
ಲೆಕ್ಕ ಇಡುವವರಾರು?
ಈ ಭೂಮಿ
ಅರಳುವ ಮುಂಚೆಯೇ ಉದುರುವ
ಪ್ರೇಮ ಪುಷ್ಪಗಳ ಹೂದಾನಿ!

● ಡಾ.ಎಂ.ಡಿ. ಒಕ್ಕುಂದ

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

ಪೆಟ್ರೋಲಿನ ಸ್ವರ್ಗ

ವಿಜ್ಞಾನ ಎಂಬುದು ಸದಾ ಚಲನಶೀಲವಾದ ನಿರಂತರ ಪ್ರಕ್ರಿಯೆಯುಳ್ಳ ಚಟುವಟಿಕೆ. ಇದರಲ್ಲಿ ಅನೇಕ ಆಗುಹೋಗುಗಳು ಮನುಕುಲವು ಬಹಳ ಹಿಂದಿನಿಂದಲೂ ನಂಬಿ ಬಂದ ಸತ್ಯವನ್ನು ಒಮ್ಮೆಲೆ ಬದಲಿಸಿಬಿಡುತ್ತದೆ. ಆದರೆ ಈ ಹೊಸ ಬದಲಾವಣೆಗಳನ್ನು ಇದ್ದಕ್ಕಿದ್ದಂತೆ ಒಪ್ಪುವ ಮನಸ್ಸುಗಳು ಕಡಿಮೆ. ಪೆಟ್ರೋಲಿನ ಸಂಗತಿಯನ್ನೇ ತೆಗೆದುಕೊಳ್ಳಿ. ಸದ್ಯದಲ್ಲೇ ಪೆಟ್ರೋಲ್ ಇಲ್ಲದಂತಾಗುತ್ತದೆ. ಆದ್ದರಿಂದಲೇ ನಿರಂತರ ಬೆಲೆ ಏರಿಸಿಕೊಂಡು ಹೋಗುವ ಪೆಟ್ರೋಲ್ ಜೊತೆ ಜೀವನವನ್ನು ಸಾಗಿಸಬೇಕಿದೆ ಎಂಬ ನಂಬಿಕೆ ನಮ್ಮಲ್ಲಿದೆ. ಇಂತಹ ಸಂದರ್ಭದಲ್ಲಿ 'ಪೆಟ್ರೋಲ್ ಸ್ವರ್ಗ' ಎಂದರೆ ಸಹಜವಾಗಿ ಅಚ್ಚರಿಯಾಗುತ್ತದೆ.

'ಪೆಟ್ರೋಲಿನ ಸ್ವರ್ಗ ಎಂಬುದು ಇರುವುದುಂಟೇ?' ಎಂದು ಹುಬ್ಬೇರಿಸುತ್ತೀರೇನೋ? ಏಕೆಂದರೆ ಇನ್ನೂ ಸೀಮೆಎಣ್ಣೆಗೆ ಕಷ್ಟ ಪಡುವ, ಅಡಿಗೆ ಗ್ಯಾಸ್ ಅಂಗಡಿಯ ಮುಂದೆ ಕಾಯುವ, ಅಷ್ಟೇಕೆ ಪೆಟ್ರೋಲಿನ ಬಂಕಿನ ಮುಂದೆಯೂ ಸಾಲಾಗಿ ಗಂಟೆಗಟ್ಟಲೇ ಕಾಯುವ ದೃಶ್ಯವೂ ಸಾಮಾನ್ಯವಾಗಿದೆ. ಎಷ್ಟೋ ಊರುಗಳಲ್ಲಿ ಈಗಲೂ ಗ್ಯಾಸಿಗೆ ಪಡುವ ಪಾಡು ಅಷ್ಟಿಷ್ಟಲ್ಲ. ಹೀಗಿದ್ದೂ ಪೆಟ್ರೋಲ್ ಸ್ವರ್ಗ ಎಂಬುದು ಇರಬಹುದೇ ಎಂಬ ಪ್ರಶ್ನೆಗೆ ಉತ್ತರ 'ಇದ್ದಿರಲಾರದು' ಅನ್ನಿಸೀತು. ಏನೇ ಇರಲಿ ಈಗ ಹೇಳುತ್ತಿರುವುದಂತೂ ನಿಜಕ್ಕೂ ಪೆಟ್ರೋಲಿನ ಸ್ವರ್ಗವನ್ನು ಕುರಿತೆ.

ಇದನ್ನು ಕೇಳಿ ನಿಮಗೆ ಆಶ್ಚರ್ಯ, ಖುಷಿ ಎರಡೂ ಒಟ್ಟೊಟ್ಟಿಗೆ ಆಗಿರಬಹುದು. ಗ್ಯಾಸಿಗೆ ಬುಕ್ ಮಾಡಿ ವರ್ಷಗಟ್ಟಲೇ ಕಾದದ್ದು, ಅದೆಷ್ಟು ಬಾರಿ ಅಂಗಡಿಗೆ ಅಲೆದದ್ದು, ಇತ್ಯಾದಿಗಳೆಲ್ಲ ನಿಮಗಿನ್ನು ನೆನಪಿರಬಹುದು. ಆದರೆ ಇತ್ತೀಚೆಗೆ ಗ್ಯಾಸ್ ಕಂಪನಿಗಳು ಜಾಹಿರಾತು ಕೊಟ್ಟು ಒಂದೇ ದಿನದಲ್ಲಿ ಗ್ಯಾಸ್ ಕನೆಕ್ಷನ್ ಕೊಡುವುದನ್ನು ನಾವು ಕಂಡಿದ್ದೇವೆ. ಇದು ಹೇಗೆ ಸಾಧ್ಯವಾಯಿತು?

ಈ ಜಗತ್ತು ಶಕ್ತಿಮೂಲಗಳ ಕೊರತೆಯನ್ನು ಅನುಭವಿಸುತ್ತಲೇ ವಿಕಾಸಗೊಂಡಿದೆ. ಅನೇಕ ಆಳ್ವಿಕೆಗಳೇ ಈ ತೈಲೋದ್ಯಮದಲ್ಲಿ ಕಳೆದುಹೋಗಿವೆ. ಎಂತೆಂತಹ ಏರಿಳಿತಗಳನ್ನು ಈ ಭಾರಿ ಉದ್ಯಮ ಕಂಡಿದೆ. ಇಷ್ಟು ಸುಲಭವಾಗಿ ದೊಡ್ಡ ಸ್ವರ್ಗವನ್ನು ಕೊಡಲಾದೀತೆ? ಕನಸೇ ಎನ್ನುವಿರಾ? ಪೆಟ್ರೋಲಿನ ಸಮುದ್ರಗಳನ್ನು ಊಹಿಸುವುದೂ ಕನಸೆ ಎನಿಸಬಹುದು. ಆದರೆ ಈ ಬಗ್ಗೆ ಅನೇಕ ಸಿದ್ಧಾಂತಗಳು ನಮ್ಮ ಮುಂದಿವೆ. ಇಡೀ ತೈಲದ ಉದ್ಯಮವೂ ಇಂತಹ ಸಿದ್ಧಾಂತ ದೃಷ್ಟಾಂತಗಳಿಂದಲೇ ನಿರಂತರತೆಯನ್ನು ಕಾಯ್ದುಕೊಳ್ಳುವ ಬಯಕೆಯಲ್ಲಿದೆ.

ಸುಮಾರು ಎಪ್ಪತ್ತರ ದಶಕದಲ್ಲಿ ಭಾರಿ ತೈಲ ಕೊರತೆಯನ್ನು ಜಗತ್ತು ಅನುಭವಿಸಿತು. ಮುಂದಿನ ತಲೆಮಾರುಗಳು ಅಪಾರ ಶಕ್ತಿಯ ಕೊರತೆಯನ್ನು ಎದುರಿಸುವ ಬಗ್ಗೆ ಚರ್ಚೆಗಳು ಮತ್ತು ಆಲೋಚನೆಗಳು ಹುಟ್ಟಿದವು. ಸರಿಯಾದ ಪರ್ಯಾಯವನ್ನು ಶಕ್ತಿಮೂಲಗಳ ಹಿನ್ನೆಲೆಯಿಂದ ಹುಡುಕುವ ಸಂಶೋಧನೆಗಳು ಆರಂಭಗೊಂಡವು. ಸರಿಸುಮಾರು ಒಂದೂವರೆ ದಶಕಗಳ ಕಾಲದ ಈ ಏರಿಳಿತದ ಶಕ್ತಿ ದುಸ್ತರ ಸಂಪನ್ಮೂಲಗಳ ಸಂರಕ್ಷಣೆಗೂ ಒತ್ತು ಕೊಡುವಂತಹ ಚಿಂತನೆಗಳನ್ನು ಹುಟ್ಟಿಹಾಕಿತು. ಪೆಟ್ರೋಲ್ ಕೈಗಾರಿಕಾಕ್ರಾಂತಿಯ ಮೂಲ. ಅದರ ಫಲವಾದ ಅನೇಕಾನೇಕ ಪದಾರ್ಥಗಳ ಮೂಲ ಪೆಟ್ರೋಲ್ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಸ್ತುತ ಪರಿಸ್ಥಿತಿಯೇ ಬೇರೆ. ಮೊದಲಿಗಿಂತ ಕೊಂಚ ಭಿನ್ನವಾದ ಸ್ಥಿತಿಯನ್ನು ಹಾಗೆಯೇ ಶಕ್ತಿ ಬಳಕೆಗಳ ವೈಪರೀತ್ಯವನ್ನೂ ನಾವು ಕಾಣುತ್ತಿದ್ದೇವೆ. ಇಂದು 'ಗ್ಯಾಸ್ ಕನೆಕ್ಷನ್ ಒಂದೇ ದಿನದಲ್ಲಿ? ಹೌದು!' ಎಂಬ ಎಚ್‌ಪಿ ಕಂಪನಿಯ ಜಾಹೀರಾತು ನಮ್ಮ ಮುಂದಿರುವಾಗ ಪೆಟ್ರೋಲ್‌ನ ಸ್ವರ್ಗ ಇದ್ದರೂ ಇದ್ದೀತು ಅನ್ನಿಸಬಹುದಲ್ಲವೇ? ಹಾಗೇನಾದರೂ ಆದಲ್ಲಿ ಅದಕ್ಕಿಂತ ದೊಡ್ಡ ವರ ಯಾವುದಿದ್ದೀತು?

ಈಗಿನ ಜನಪ್ರಿಯವಾದ ಗ್ರಹಿಕೆ ಮತ್ತು ಅರಿವೆಂದರೆ ಪೆಟ್ರೋಲ್ - ಜೈವಿಕ ವಿಕಾಸದ ಸೃಷ್ಟಿ. ಅದರ ಬಗ್ಗೆ ಜನಪ್ರಿಯ ಮಾಧ್ಯಮಗಳಲ್ಲಿ ಅನುಮಾನಗಳಿಲ್ಲ. ಅಂದರೆ ಹಿಂದೆಂದೋ ಆಗಿಹೋದ ಜೈವಿಕ ಪಳಿಯುಳಿಕೆಯ ಮೂಲದಿಂದ ಈ ಪೆಟ್ರೋಲಿನ ಸಂಪತ್ತು ಭೂಮಿಯನ್ನು ಸೇರಿದೆ. ಹೀಗೆ ಉಳಿದ ಉಳಿಕೆಗಳು ಆಕ್ಸೈಡುಗಳಾಗದೆ ಸಂಗ್ರಹವಾಗಿ ಪೆಟ್ರೋಲಿನ ಸಂಪತ್ತಿಗೆ ಕಾರಣವಾಗಿವೆ ಎನ್ನುತ್ತದೆ ಈ ಸಿದ್ಧಾಂತ. ಇದು ಜನಪ್ರಿಯ ವಾದವೂ ಹೌದು. ಬಹುಶಃ ಬಹುಪಾಲು ಪೆಟ್ರೋಲಿನ ಕಂಪನಿಗಳ ಸಂಶೋಧಕರ ಅಭಿಪ್ರಾಯವೂ ಹೌದು. ಆದರೆ ಇದಕ್ಕೆ ಭಿನ್ನವಾಗಿ ಯೋಚಿಸುವುದೆಂದರೆ ಅದೊಂದು ಒಗ್ಗಿದ ವಿಜ್ಞಾನಕ್ಕೆ ಪೆಟ್ಟು ಕೊಟ್ಟಂತೆ. ಆದರೂ ಅಂತಹ ಪ್ರಯತ್ನಗಳಿಗೆ ಕೊನೆಯೇನೂ ಇಲ್ಲ. ಅಷ್ಟೇಕೆ, ಅವು ಬಹಳ ಸೃಜನಶೀಲ ಚರ್ಚೆಗೆ ಒಳಪಟ್ಟಿವೆ ಎಂದರೆ ಸಾಮಾನ್ಯ ವಿವೇಚನೆಗೆ ಅಚ್ಚರಿಯಾಗಬಹುದು.

'ಸ್ವರ್ಗಕ್ಕೆ ಏಣಿಹಾಕುವುದು' ಎನ್ನುವುದು ಸಾಮಾನ್ಯವಾದದು. ಆದರಿಲ್ಲಿ ಪೆಟ್ರೋಲಿನ ಸ್ವರ್ಗಕ್ಕೇ ಏಣಿ ಹತ್ತುವುದಲ್ಲ ಬದಲಾಗಿ ಇಳಿಯುವುದು. ಇರಲಿ, ಇಂತಹ ಒಂದು ಸ್ವರ್ಗದ ಕನಸನ್ನು ಕಟ್ಟಿದವರ್‍ಯಾರು? ಅದಕ್ಕೊಂದು ಅದ್ಭುತ ಹಿನ್ನೆಲೆ ಇದೆ. ಈ ಕುತೂಹಲದ ಸಂಗತಿಗಳು ಅತಿಹೆಚ್ಚು ಚರ್ಚೆಯನ್ನು ಹುಟ್ಟಿಹಾಕಿದವು. ಅವುಗಳ ಸಮಗ್ರ ಚಿತ್ರಣ ಇಲ್ಲಿನ ಟಿಪ್ಪಣಿಗಳಲ್ಲಿದೆ. ನಾಳಿನ ಜೀವನವನ್ನು ನಿರ್ಧರಿಸುವ ಈ ಶಕ್ತಿ ಮೂಲಗಳ ಬಗೆಗೆ 'ಹೀಗೂ ಆದೀತಾ?' ಎಂಬ ಯೋಚನೆಗಳನ್ನು ಹಂಚುವ ಆಶಯವೂ ಇಲ್ಲಿದೆ.





ಈ ಅಜೈವಿಕ ಸಿದ್ಧಾಂತದ ಇತಿಹಾಸಕ್ಕೆ ದೊಡ್ಡ ವಿಕಾಸದ ಹಿನ್ನೆಲೆಯಿದೆ. ಆದರೂ ಅದಕ್ಕೆ ಮಹತ್ವ ಬಂದಿದ್ದು ಮತ್ತು ಬಹಳ ಚರ್ಚೆ ಹುಟ್ಟಿಹಾಕಿದ್ದು ಥಾಮಸ್ ಗೋಲ್ಡ್ ಎಂಬ ವಿಜ್ಞಾನಿ. ಆತನ **Deep Hot Biosphere -The myths of fossil fuels** ಪ್ರಕಟಣೆ ವಿಜ್ಞಾನದಲ್ಲಿ ಬಹು ದೊಡ್ಡ ಗಲಾಟೆಯನ್ನು ಹುಟ್ಟಿ ಹಾಕಿತು.

1998-99 ರಲ್ಲಿ ಬೆಳಗಾಗುವುದರಲ್ಲಿ ಆತ ಅತ್ಯಂತ ವಿವಾದಾಸ್ಪದವಾದ ಸಿದ್ಧಾಂತವನ್ನು ಸೃಷ್ಟಿಸಿದ ವಿಜ್ಞಾನಿ ಎಂದು ಗುರುತಿಸಲ್ಪಟ್ಟ. ಆತ ಹೇಳಿದ್ದೇನೆಂದರೆ ಈವರೆಗೆ ನಂಬಿರುವ ಪೆಟ್ರೋಲಿನ ಹುಟ್ಟಿನ ಗುಟ್ಟು ನಿಜವಲ್ಲ, ಅದು ಬೇರೆಯದೆ ಆಗಿದೆ ಎಂದು. ಅದಕ್ಕೂ ಮುಖ್ಯವಾಗಿ, ನಮ್ಮ ಕಣ್ಣೆದುರಿನಲ್ಲಿ ಕಾಣುತ್ತಿರುವ ಜೀವ ಸಂಪತ್ತಿಗಿಂತಲೂ ಅಗಾಧವಾದ ಸಂಪತ್ತು ಕಾಣದ ನೆಲದೊಳಗೆ ಅಡಗಿದೆ ಎಂದು ಹೇಳಿದ. ಅದು ಜಗತ್ತು ನಂಬಿದ ಸತ್ಯಕ್ಕೆ ದೊಡ್ಡ 'ಶಾಕ್' ಆಗಿತ್ತು. ಭೂಮಿಯ ಮೇಲಿನ ಎಲ್ಲಾ ಜೈವಿಕ ಸಂಪತ್ತು ಹಾಗೂ ಸಾಗರದಲ್ಲಿ ಈಜಾಡುತ್ತಿರುವ ಜೀವರಾಶಿಯನ್ನು ಒಟ್ಟು ಮಾಡಿದರೆ ಆಗುವ ಸಂಪತ್ತಿಗಿಂತಲೂ ಹೆಚ್ಚು ಜೀವರಾಶಿ ಭೂಮಿಯ ಆಳದಲ್ಲಿದೆ. ಇವು ನಾವು ಕಾಣುವಂತೆ ಸೂರ್ಯ ಶಕ್ತಿಯಿಂದ ಬದುಕುತ್ತಿರುವ ಜೀವಿಗಳಂತೆ ಅಲ್ಲ, ಬದಲಾಗಿ ಸುಮಾರು **100** ಸೆ.ಗಿಂತಲೂ ಹೆಚ್ಚಿನ ಶಾಖದಲ್ಲಿ ಬದುಕುತ್ತಾ ನಿರಂತರ ಮೀಥೇನನ್ನೂ, ಹೈಡ್ರೋಕಾರ್ಬನ್‌ಅನ್ನು ವಿಕಸಿಸುತ್ತಿವೆ ಎಂಬ ಆತನ ಅಭಿಪ್ರಾಯ ಜನಪ್ರಿಯ ನಂಬಿಕೆಯನ್ನೇ ಬುಡಮೇಲು ಮಾಡುವ ವಾದವಾಗಿತ್ತು.

ಮೆಟಲ್ ಕಾರ್ಬೈಡ್ ಸಿದ್ಧಾಂತ

ಎಲ್ಲರ ಖುಷಿಗೆ ಅಥವಾ ಆಸೆಗೆ ಅಂತಹದ್ದೊಂದು ಇರಲಿ ಎನ್ನುವುದಾದರೆ ಅದಕ್ಕೆ ಇರುವ ವೈಜ್ಞಾನಿಕ ಸಾಕ್ಷಿಗಳೇನು? ಅಂತಹ ಚರ್ಚೆಗಿರುವ ಜಾಗತಿಕ ಇತಿಹಾಸದಲ್ಲಿನ ದಾಖಲೆಗಳು ಇಲ್ಲಿನ ಪ್ರಮುಖ ವಸ್ತು. ಇಂತಹದ್ದೊಂದು ಸ್ವರ್ಗಕ್ಕೆ ಮೊದಲು ಕನಸನ್ನು ಬಿತ್ತಿದವನೆಂದರೆ ಜನಪ್ರಿಯ ರಸಾಯನಶಾಸ್ತ್ರಜ್ಞ ಹಾಗೂ ಆವರ್ತಕೋಷ್ಟಕವನ್ನು ಕೊಟ್ಟ ರಷಿಯಾದ ವಿಜ್ಞಾನಿ ಮೆಂಡಲೀಫ್. ಪೆಟ್ರೋಲಿಗಾಗಿ ಆಳಕ್ಕೆ ಕೊರೆಯುವ ಆರಂಭದ ದಿನಗಳವು. 1877ರ ಸಮಯದಲ್ಲೇ ಇಂತಹ ಮೂಲವನ್ನು ಮೊದಲು ಅನುಮಾನಿಸಿದವರು ಈ ಮೆಂಡಲೀಫ್. ಇದನ್ನು ಮೆಟಲ್ ಕಾರ್ಬೈಡ್ ಸಿದ್ಧಾಂತ ಎಂದು ಗುರುತಿಸಲಾಗುತ್ತದೆ. ಅದರ ಪ್ರಕಾರ ಆಳದಲ್ಲಿ ಲೋಹಗಳ ಕಾರ್ಬೈಡುಗಳು ಅತಿ ಹೆಚ್ಚಿನ ಉಷ್ಣತೆಯಿಂದ ನೀರಿನ ಜತೆಯಲ್ಲಿ ಸಂಯೋಗ ಹೊಂದಿ ವರ್ತಿಸಿ ಘನೀಕರಿಸಿ ಹೈಡ್ರೋಕಾರ್ಬನ್‌ಗಳಾಗಿ ಉತ್ಪನ್ನವಾಗುತ್ತವೆ. ಇದು ಪ್ರಯೋಗಶಾಲೆಯಲ್ಲಿ ಘನೀಕರಿಸಿದಂತೆಯೇ ಸಾಧ್ಯವಾಗುತ್ತವೆ. ಈ ಕೆಳಗಿನ ಸಮೀಕರಣ ಇದನ್ನು ವಿವರಿಸುವುದು.

$$CaC_2 + 2H_2O = C_2H_2 + Ca(OH)_2$$

ಇಥಲೀನಿನ ಉತ್ಪಾದನೆಯೂ ಇದೇ ರೀತಿ ಸಾಧ್ಯವಾಗುವುದರಿಂದ ಇದು ಕೆಲವು ಖಗೋಳಶಾಸ್ತ್ರಜ್ಞರಲ್ಲಿ ಮತ್ತು ರಷಿಯಾದ ಭೂಗರ್ಭಶಾಸ್ತ್ರಜ್ಞರಲ್ಲಿ ಅತ್ಯಂತ ಜನಪ್ರಿಯವಾದ ಸಿದ್ಧಾಂತವಾಗಿದೆ.

ಭೂಮಿಯ ಆಳದಲ್ಲಿ ಇಂಗಾಲದ ಮತ್ತು ಜಲಜನಕದ ಸಂಯುಕ್ತಗಳು ಉತ್ಪನ್ನವಾಗುವುದಾದರೆ ಅವು ನಿರಂತರವೂ ಆಗಿರಬಹುದೆಂಬುದು ಇಂತಹ ಅಂದಾಜುಗಳ ವಿವರಣೆ.

ಅದಕ್ಕೆ ಥಾಮಸ್ ಗೋಲ್ಡ್ ಕೊಟ್ಟದ್ದು ಜತೆಯಲ್ಲಷ್ಟು ಒಗ್ಗರಣೆ. ಹಾಗೆಂದು ಒಮ್ಮೆಲೆ ಆತನ ಸಿದ್ಧಾಂತಕ್ಕೆ ಕೃತಿ ಚೌರ್ಯದ ಅಪವಾದವೂ ಸೇರಿಕೊಂಡಿದೆ. ಆತ ರಷಿಯಾದ ವಿಜ್ಞಾನಿಗಳಿಂದ ಕದ್ದ ಸಿದ್ಧಾಂತವೆಂದೂ ಅಪವಾದಗಳಿವೆ. ಅಂದರೆ ಅಂತಹ ಸಿದ್ಧಾಂತ ಅಥವಾ ಸಾಧ್ಯತೆಯಿದ್ದಿರಬಹುದೆಂಬ ಅನುಮಾನ ಸಾಮಾನ್ಯರನ್ನು ಕಾಡುತ್ತದೆ.

ನೆಬುಲಾದ ಘನಿಕರಣ ಸಿದ್ಧಾಂತ

1080 ರಲ್ಲಿ ಸೊಕೊಲಾಫ್ ಎಂಬ ವಿಜ್ಞಾನಿ "ಬಿಟುಮಿನ" (**Bitumina**) ಎನ್ನುವ ಪದವೊಂದನ್ನು ಸಲಹೆ ಮಾಡಿದ. ಅದು ಟಾರು ಮೊದಲ್ಗೊಂಡು ಎಲ್ಲ ಪೆಟ್ರೋಲಿನ ಉತ್ಪನ್ನಗಳನ್ನೂ ಒಳಗೊಂಡದ್ದಾಗಿತ್ತು. ಮೂಲತಃ ಆಗಸದಿಂದ ಬಂದ ಮೀಟಿಯರೈಟ್‌ಗಳಿಂದ ಭೂಮಿಯ ವಿಕಾಸದಲ್ಲಿ ನೆಬುಲೆ ಕೊಟ್ಟ ಕಾಣಿಕೆ ಎನ್ನುವ ವಾದವನ್ನು ಆತ ನೀಡಿದ. ಇತ್ತೀಚೆಗೆ ಆತನ ವಾದದೊಂದಿಗೆ ಹಾಯ್ಲ್ ಎನ್ನುವ ವಿಜ್ಞಾನಿ ಸಹಮತ ವ್ಯಕ್ತಪಡಿಸಿದ್ದಾನೆ. ಮೂಲತಃ ಅವರು ಜೀವಿಗಳ ಮೂಲವೂ ಈ ಮೀಟಿಯೋರೈಟ್‌ಗಳದ್ದೆಂದು ನಂಬುವ ಜಾಯಮಾನದವರು.

ಇವಲ್ಲದೆ ವಾಲ್ಕ್ಯಾನಿಕ್ ಮತ್ತು ಭೂಕಂಪನದಿಂದ ಹೊರಸೂಸುವ ವಾಯುವಿನಿಂದಲೂ ವಿಕಸನವಾಗುವ ಪೆಟ್ರೋಲಿನ ಮೂಲಗಳ ಕುರಿತೂ ಚರ್ಚೆಗಳಿವೆ. ಈ ವಾಲ್ಕ್ಯಾನಿಕ್ ಅಂದರೆ ಜ್ವಾಲಾಮುಖಿಯ ಮೂಲದ ಹೊರಸೂಸುವಿಕೆಯು ಭೂಮಿಯ ಒಳಪದರವಾದ "ಮ್ಯಾಂಟಲ್"ನಿಂದ ಜ್ವಾಲಾಮುಖಿಯಿಂದ ಬರುವುದೆಂದು ಈ ಸಿದ್ಧಾಂತವು ನಂಬುತ್ತದೆ.

ಈ ನವೀನ ಚಿಂತನೆಯ ವಾಸ್ತವಗಳೇನು? ಅವು ಹುಟ್ಟಿ ಹಾಕಿರುವ ಹೊಸ ಸವಾಲುಗಳೇನು? ಮುಖ್ಯವಾಗಿ ಈ ಹಿಂದಿನ ಎಲ್ಲಾ ಅಂದಾಜುಗಳೂ ನಿಜವಲ್ಲ ಎಂಬುದು ಮೊದಲ ತಕರಾರು. ಅದು ನಿಜ ಎನ್ನುವಂತೆ ಹೊಸ ಅನುಭವಗಳು ನಮಗಾಗುತ್ತಿವೆ. ಸುಲಭವಾಗಿ ಸಿಗುತ್ತಿರುವ ಗ್ಯಾಸ್ ಕನೆಕ್ಷನ್. ಅದಕ್ಕೂ ಮುಖ್ಯವಾಗಿ ಈ ಹೊಸ ಸಿದ್ಧಾಂತದ ಆಶಯ ಮತ್ತು ನಿಲುವು ಈ ಭಾರಿ ಸಂಪತ್ತು ನಿರಂತರವಾದದ್ದು ಹಾಗಾಗಿ ಅವು ನಿರಂತರವಾಗಿ ಆಳದಲ್ಲಿ ವಿಕಾಸಗೊಳ್ಳುತ್ತಿರುತ್ತವೆ. ಇದರಿಂದಾಗಿಯೇ ಇದು ಮುಖ್ಯವಾಗಿ ತುಂಬಾ ಭಿನ್ನವಾದ ಚರ್ಚೆಯನ್ನು ಹುಟ್ಟಿಸಿ[...]


ಅಜೈವಿಕ ಪ್ರಕ್ರಿಯೆಯಿಂದ ಪೆಟ್ರೋ[...]

ಪೆಟ್ರೋಲ್ ಒಂದು ಅಜೈವಿಕ ಉತ್ಪನ್ನ ಎಂಬ[...] ಊಹಿಸಿಕೊಳ್ಳುವುದೇ ಒಂದು ಹೊಸ ಪ್ರಶ್ನೆ. [...] ಈಗಾಗಲೆ ಅರಿತುಕೊಂಡಂತೆ ಅದೊಂದು ಜೈವಿಕ ಉ[...] ಆದರೀಗ ಇದ್ದಕಿದ್ದಂತೆ ಹೊಸತೊಂದು ಮಾರ್ಗದ ವಿ[...] ಏನೋ ಎನ್ನಿಸೀತು. ಆದಾಗ್ಯೂ ಈಗಿನ ವಾತಾವರ[...] ಭಿನ್ನ ವಿಚಾರಗಳ ಹಿನ್ನೆಲೆಯಲ್ಲಿ ಇದಕ್ಕೆ ಮತ್ತೆ ಮ[...] ಬಂದಿದೆ. ಹಿಂದೊಮ್ಮೆ ಇದನ್ನು ಕಡೆಗಣಿಸಿದವರೀಗ [...] ಅದರತ್ತ ಮುಖ ಮಾಡಿದ್ದಾರೆ. ಅದಕ್ಕಾಗಿ ಕಂಡುಕೊ[...] ಪ್ರಯತ್ನಗಳತ್ತ ಹೊಸ ಅಧ್ಯಯನಕ್ಕೆ ತೊಡಗಿದ್ದಾರೆ.

ಹೊಸ ಮಾರ್ಗದ ಅಧ್ಯಯನಗಳು ಇತ್ತೀ[...] ಅಂತರ್‌ಶಿಸ್ತೀಯ ಹಾದಿಯಿಂದ ಖಭೌತವಿಜ್ಞ[...] ಭೂಭೌತವಿಜ್ಞಾನ ಮುಂತಾದವುಗಳ ನೆಲೆಯಿಂದ [...] ಅಜೈವಿಕತೆಯ ಅರಿವಿನ ವಿಸ್ತಾರ ಹೊಸ ಬಗೆಯ[...] ತೆರೆದುಕೊಳ್ಳುತ್ತಿದೆ. ಇದರಿಂದ ಈ ಸಿದ್ಧಾಂತವು ನೆಲೆಯ[...] ಕಂಡುಕೊಂಡು ವಿಜ್ಞಾನದ ಅರಿವಿನ ಹಾದಿ ಸುಗಮವಾ[...] ಅಥವಾ ಅಜೈವಿಕತೆಯು ನಿಜದ ಹಾದಿ ಹಿಡಿ[...] 'ಪೆಟ್ರೋಲಿನ ಸ್ವರ್ಗ' ನಿಶ್ಚಯ!! ಹಾಗಾಗಿಯೇ ಈ ದಿಸೆ[...] ಹಲವಾರು ಪ್ರಯೋಗಗಳು ಗೋಲ್ಡ್ ಮುಖಂಡತ್ವದಲ್ಲಿ[...] ಆರಂಭಗೊಂಡವು. ಹಲವಾರು ಪ್ರಯತ್ನಗಳಿಂದ ಅ[...] ಗಣಿಗಳನ್ನು ಕೊರೆದು ಪೆಟ್ರೋಲಿನ ಹೊಸ ಅರಿ[...] ಪ್ರಯತ್ನಗಳು ನಡೆದವು. ಆದಾಗ್ಯೂ ಅದಕ್ಕೆ ಅಗತ್ಯ[...] ವೈಜ್ಞಾನಿಕ ನೆರವುಗಳು ಸಾಧ್ಯವಾಗಲಿಲ್ಲ.

"ಆಳದ ಬಿಸಿಜೈವಿಕಹರಹು" ("DEEP H[...] BIOSPHERE") ಎಂಬ ಆತನ ಪ್ರವ[...] ಪ್ರಕಟಣೆಯಿಂದ ಹೊರಬಂದ ವಿಚಾರವೆಂದರೆ ಆಳ[...] ನಾವು ಅಂದುಕೊಂಡಂತೆ ಮಾತ್ರವೇ ಅಲ್ಲದೆ ಅ[...] ಬಗೆಯ ಜೀವಿಗಳಿದ್ದೂ ಅವು ಬಿಸಿಯಲ್ಲೂ ಬದುಕಿ[...] ಭೂಮೇಲ್ಮೈಯ ಒಟ್ಟೂ ಜೀವರಾಶಿಗಿಂತಲೂ ಅಧಿಕ[...] ಜೀವರಾಶಿಗಳಾಗಿವೆ ಎಂಬುದು. ನಮಗೆಲ್ಲಾ ಅರಿವಿ[...] ಅಥವಾ ಈಗಿನ ಪ್ರಚಲಿತ ವೈಜ್ಞಾನಿಕತೆ ಆಧಾರ[...] ಜೈವಿಕತೆ ಎಂಬುದೇನಿದ್ದರೂ ಭೂಮಿಯ ಮೇಲ್ಮೈಗೆ[...] ಸೀಮಿತವಾದ ಸಂಗತಿ. ಆದರೆ ಥಾಮಸ್ ಗೋ[...] ಆಶಯವೇನಿದ್ದರೂ ಭೂಮಿಯ ಆಳದ[...] ಮೇಲ್ಮೈಗಿಂತಲೂ ಅಪಾರವಾದ ಜೀವರಾಶಿ ಇದ್ದು [...] ನಿರಂತರವಾದ ಮೀಥೇನ್ ಮತ್ತಿತರ ಹೈಡ್ರೋಕಾಬ[...] ಗಳನ್ನು ಬಿಡುಗಡೆ ಮಾಡುತ್ತಿವೆ. ಇವೆಲ್ಲಾ ಭೂಮಿ[...] ಆಳದ ಒತ್ತಡವನ್ನು ಬಳಸಿ ಇವುಗಳ ವಿಕಾಸವು ಕಾರ್ಯ[...] ವಾಗಿವೆ. ಡಾ. ಗೋಲ್ಡ್ ಪ್ರಕಾರ ಇಂದಿನ ಇಂಧನ[...] ಭೂಮಿಯ ವಿಕಸನದ ಹಿಂದಿನ ರಸಾಯನಿಕ ಕ್ರಿಯೆ[...] ಉಳಿಕೆಗಳ ಉತ್ಪನ್ನಗಳ ಸಂಗ್ರಹವಷ್ಟೆ. ಇದಕ್ಕೆ ಪೂರಕವೆಂ[...] ಮೆಂಡಲೀಫ್ 1877ರಷ್ಟು ಹಿಂದೆಯೇ ಪ್ರಕಟ[...] ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಟೆಕ್ಟಾನಿಕ್ ನಿಯಂ[...] ಕೂಡ ಸ್ವಲ್ಪಮಟ್ಟಿಗಿನ ಪರಿಹಾರವನ್ನು ಒದಗಿಸುತ್ತದೆ. [...] ಇಂದಿಗೂ ರಷಿಯಾ ಮತ್ತು ಉಕ್ರೇನಿನ ವೈಜ್ಞ[...] ವಲಯದಲ್ಲಿ ಬಲು ಜನಪ್ರಿಯವಾದ ಸಂಗತಿ. ಹಾಗೆ[...] ಥಾಮಸ್ ಗೋಲ್ಡ್ ಪ್ರಕಟಣೆಯನ್ನು ಉಕ್ರೇನಿನ ಜ[...] ಕಳ್ಳತನವೆಂಬಂತೆ ಬಣ್ಣಿಸಿದ ಉದಾಹರಣೆಗಳೂ ಇ[...]

ಇವೆಲ್ಲಾ ಏನಿದ್ದರೂ ಸಿದ್ಧಾಂತಗಳ ಜಟಾಪಟಿ. [...] ನೈಜ ಸಿದ್ಧಾಂತವೊಂದನ್ನು ವಿಜ್ಞಾನ ಕೈಗೆತ್ತಿಕೊಳ್ಳು[...] ಪ್ರಯೋಗಗಳ ಮೂಲಕವೇ. ಅಂತಹ ಪ್ರಯತ್ನ[...] ಥಾಮಸ್ ಗೋಲ್ಡ್ ಅವರೇ ಕೈಗೆತ್ತಿಕೊಂಡರು. ರಷಿ[...] ಸ್ವೀಡನ್ ದೇಶಗಳಲ್ಲಿ ಆಳದ ಬಾವಿಗಳ ಕೊರೆಯುವಿಕೆ ಹ[...] ಪೆಟ್ರೋಲಿನ ಅಧ್ಯಯನದ ಮೂಲಕ ಪ್ರಯೋಗ[...] ನಡೆಸಿದರೂ ಅವು ಸಾಕಷ್ಟು ಪ್ರಬುದ್ಧವಾಗಿ[...] ನಿರಂತರವಾಗಿಯೂ ವೈಜ್ಞಾನಿಕ ಮನ್ನಣೆ ಪಡೆಯ[...] ಅದಕ್ಕೆ ಇತ್ತೀಚಿಗಿನ ಹಲವು ವೈಜ್ಞಾನಿಕ ವ್ಯಾಖ್ಯಾನ[...] ವಿಶ್ಲೇಷಣೆಯೆಂದರೆ "ಪೆಟ್ರೋಲಿಯಂ ವಿ[...] ಎನ್ನುವುದೊಂದು ಇರುವುದಾದರೆ ಅದು ಈ ತ[...] ನಂಬಿಕೆ ಮತ್ತು ಸಿದ್ಧಾಂತಗಳಿಗೆ ಹೊರತಾದ ಪೆಟ್ರೋ[...] ಕಂಪನಿಗಳ ಹಿಡಿತದಲ್ಲಿದೆ. ಹಾಗಾಗಿ ಇದಕ್ಕೆ ಸಿಗಬೇ[...] ಮನ್ನಣೆ ದೊರೆಯಲಿಲ್ಲ." ಅದೇನೇ ಇರಲಿ, [...] ಪೆಟ್ರೋಲ್ ಸ್ವರ್ಗಕ್ಕೆ ಏಣಿ ಹುಡುಕುವ ಸಾಧ್ಯತೆ ಇಲ್ಲದಿ[...] ಈಗ ಇರುವ ವಿಚಾರಗಳಿಗಿಂತ ಭಿನ್ನವಾದ ಲೋ[...] ಹುಡುಕಾಟ ಇರಬಹುದೆಂಬ ಆಶಯವನ್ನು ಹೊ[...] ಅದಕ್ಕೆಂದೆ ಇಂತಹ ನಗೋಡು ಮಾಡಿದ ಸಿದ್ಧಾಂತಗಳ[...] ಮರು ದೃಷ್ಟಿ ಸೃಷ್ಟಿಯಾಗುತ್ತಿದೆ. ಅಂತಹ [...] ಇರುವುದಾದರೆ ಅದು ಬೇಡ ಎನ್ನುವವರು ಯ[...] ಇರುವುದಿಲ್ಲ, ಅಲ್ಲವೇ? ಅಂತಹ ಸ್ವರ್ಗದ ಕನಸಿಗೆ [...] ಹಾಕಿಕೊಟ್ಟ ಥಾಮಸ್ ಗೋಲ್ಡ್ ಎಂಬ ವ್ಯಕ್ತಿ ನವ[...] ನಡುವೆ ಬದುಕಿದ್ದ ಎಂಬುದು ನೆನಪು ಮಾತ್ರವೇ [...] ಪೆಟ್ರೋಲ್ ಕುರಿತ ಹೊಸ ಆಲೋಚನೆಗಳನ್ನು ಕೊಟ್ಟ[...]



ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಉಪನಿಷತ್ತು ವರ್ಸಸ್ ವೇದಗಳು

ಶಾಸ್ತ್ರ ಪುರಾಣಗಳು ಮತ್ತು ಭತ್ತ ಗೋಧಿಗಳು ...ಗೆ ಒಂದೇ ಅಲ್ಲವೋ, ಹಾಗೆಯೇ ಶಾಸ್ತ್ರ ಪುರಾಣಗಳನ್ನು ...ಳುವವರೂ ಮತ್ತು ಭತ್ತ ಗೋಧಿ ರಾಗಿಗಳನ್ನು ...ಯುವವರೂ ಒಂದೇ ಅಲ್ಲ ಎಂದು ತಿಳಿಯಲು ...ವರಿಗೆ ಎಷ್ಟೋ ಶತಮಾನಗಳು ಬೇಕಾಯಿತು. ಕೆಲವರಿಗೆ ...ನ್ನೂ ತಿಳಿದಿಲ್ಲ.

ಹಾಗಾಗಿಯೇ ನಮ್ಮ ಜನಪದರ ಕಲಾಪ್ರಕಾರಗಳಲ್ಲಿ ...ತ್ತು ಅವರ ನಿತ್ಯಜೀವನದ ಬದುಕಲ್ಲಿ ಪುರಾಣದ ಪಾತ್ರಗಳು ...ತ್ತು ವೈದಿಕ ಸಂಪ್ರದಾಯಗಳು ಹಲವಾರು ರೀತಿಗಳಲ್ಲಿ ...ರ್ಪಡೆಯಾಗಿ ಹೋದವು. ಇಂದು ನಾವು ...ನುತ್ತಿರುವುದು ಹಲವು ಶತಮಾನಗಳ ನಿರಂತರ ...ಕ್ರಿಯೆಯ ಫಲ. ಆದರೆ ಇದರ ಕೇಡಿನ ಸುಳುಹನ್ನು ...ಮುಹಿಡಿಯದೇ ಇದ್ದವರಿಲ್ಲ. ಶರಣರು, ಸಂತರು, ದಾಸರು, ...ಷಿಗಳು ಇಡೀ ಸಮಾಜವು ಎಡವಿರುವುದರ ಮತ್ತು ...ಪ್ರದಾಯವಾದಿಗಳ ಭ್ರಷ್ಟ ಹಿಡಿತದಲ್ಲಿ ಸಿಕ್ಕಿ ...ದ್ದಿರುವುದನ್ನು ಕಂಡುಕೊಂಡರೂ ಅವರಿಗೆ ತೀರಾ ...ಷ್ಠುರವಾಗಿ ಖಂಡಿಸಿ, ಹೊಸದನ್ನು ಸ್ಥಾಪಿಸಿಬಿಡುವಂತಹ ...ಂತಿ ಮಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ತಮ್ಮ ...ಖ್ಯಾಬಲದ ಸಮಸ್ಯೆಯೊಂದಾದರೆ, ಎಲ್ಲರನ್ನೂ ...ಲಭೂತ ಗೌರವದಿಂದ ಮಾನ್ಯ ಮಾಡುವ ...ವುಳ್ಳವರಾಗಿದ್ದು, ಪರಿವರ್ತನೆಯನ್ನು ನಂಬಿದರು. ಆದರೆ ...ವರ್ತನೆಯಂತಹ ಸೂಕ್ಷ್ಮ, ಮೃದು ಮತ್ತು ...ರ್ಶಪೂರ್ಣವಾದ ನಡೆಯೇ ಸಮಾಜದಲ್ಲಿ ಆಘಾತಕಾರಿ ...ಂತಿ ಎಂದೆನಿಸಿ ಶರಣರಾಗಲಿ, ಸಂತರಾಗಲಿ ...ಂದರೆಗೀಡಾದರು ಮತ್ತು ತಮ್ಮ ಜೀವಗಳನ್ನೇ ...ಬೇಕಾಗಿತ್ತು. ಈ ಪರಿಣಾಮಕ್ಕೆ ಕಾರಣ ಪರಿವರ್ತನೆಗೆ ...ದ್ದ ಸಾಮಾನ್ಯ ಜನರಲ್ಲ.

ಲಿಂಗಾಯತರಿಗೆ ಜಾತಿಯಿಲ್ಲ

ಇದರ ಜ್ವಲಂತ ಉದಾಹರಣೆಯಾಗಿ ಹನ್ನೆರಡನೆಯ ...ಮಾನದ ಶರಣರ ವೈಚಾರಿಕ ಮತ್ತು ಸಾಮಾಜಿಕ ...ಂತಿಯನ್ನು ಗಮನಿಸಿದರೆ ಕಾರಣ ಮತ್ತು ...ಣಾಮಗಳೆರಡೂ ಸನಾತನವಾದಿಗಳೇ ಆಗಿರುವುದು



...ರ್ಪವಾಗುತ್ತದೆ. ಬ್ರಾಹ್ಮಣರೇ ಮೊದಲಾದ ಸನಾತನವಾದಿ ...ಳು ಸೃಷ್ಟಿಸಿರುವಂತಹ ವ್ಯವಸ್ಥೆ ಮತ್ತು ಮೌಢ್ಯಗಳನ್ನು ...ರಿತು, ಅವನ್ನು ಧಿಕ್ಕರಿಸಿ ಸಾಮಾಜಿಕವಾಗಿ ಸಮಾನತೆಯ ...ತ್ತು ವ್ಯಕ್ತಿಗತವಾಗಿ ಅರಿವಿನ ಸಮಾಜವನ್ನು ಸೃಷ್ಟಿಸಲು ...ಲ್ಲಮ ಮತ್ತು ಬಸವಣ್ಣರಂತಹ ವ್ಯಕ್ತಿತ್ವಗಳ ನಾಯಕತ್ವದಲ್ಲಿ ...ದೋಲನ ಪ್ರಾರಂಭವಾಯಿತು. ಈ ಆಂದೋಲನದ ...ಟ್ಟು ತಗಲುವುದು ಅದೇ ಸನಾತನವಾದಿಗಳಿಗಾದ್ದರಿಂದ, ...ವರ ಗುಪ್ತವಾದಂತಹ ಷಡ್ಯಂತ್ರಗಳು ಬಯಲಾಗು...ದರಿಂದ, ಅವರ ಶ್ರೇಷ್ಠತೆಯ ಗೀಳಿಗೆ ಮರ್ಮಾಘಾತ ...ಗುವುದರಿಂದ; ಅವರೇ ಇಂತಹ ಚಳವಳಿಯನ್ನು ಬಗ್ಗು...ಬಡಿಯಲು ಕಾರ್ಯತಂತ್ರಗಳನ್ನು ರೂಪಿಸಿದರು ಮತ್ತು ...ಯಶಸ್ವಿಯೂ ಆದರು. ಇಂಥಾ ಸಮಾನತೆಯ ಸಮಾಜವನ್ನು ...ಅಥವಾ ಕಲ್ಯಾಣ ಸಮಾಜವನ್ನು ಕಟ್ಟುವ ಸಾಧ್ಯತೆಯಿದೆ ...ಎಂದು ಘೋಷಿಸಿ, ತಮ್ಮದೇ ಉದಾಹರಣೆಗಳಿಂದ ...ಸನಾದಿ ಪ್ರಮುಖರು ತೋರಿಸಿದರಾದರೂ ಅವರ ಧ್ಯೇಯ ...ಮತ್ತು ಉದ್ದೇಶ ಎಂದಿಗೂ ಈಡೇರದೇ ಇಂದು ಒಂದು ...ವಿಫಲ ಕ್ರಾಂತಿಯ ವೈಫಲ್ಯದ ಗುರುತಾಗಿ ...ಲಿಂಗಾಯತವೆಂಬ ಜಾತಿ ಅಥವಾ ಧರ್ಮವೊಂದಿದೆ. ...ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಡೋಹರ ...ಕಕ್ಕಯ್ಯ, ಮಾದರ ಚೆನ್ನಯ್ಯನೆಲ್ಲರೂ ಅವರು ಮಾಡುತ್ತಿದ್ದ ...ಕಾಯಕದ ಘನತೆಯ ಗುರುತುಗಳಾದರೆ, ಇಂದು ...ಲಿಂಗಾಯತರಾದವರೂ ತಮ್ಮ ಹಳೆಯ ಜಾತಿಯ ...ಯನ್ನು ಬದಲ ಉಪಜಾತಿಗಳಾಗಿಯೇ ಉಳಿದಿರುವುದು ...ನಗೀಡಿನ ವಿಷಯ ಮಾತ್ರವಲ್ಲ, ತಮ್ಮ ಮೂಲವಾದ ವಚನ ಚಳವಳಿ ಮತ್ತು ಶರಣ ಕ್ರಾಂತಿಗೆ ಮಾಡುವ ದ್ರೋಹವೂ ಹೌದು.

ಬ್ರಾಹ್ಮಣರಿಗೆ ನೀತಿಯಿಲ್ಲ

ಮನುಸ್ಮೃತಿಯಲ್ಲಿ ಹೇಳುವಂತೆ **(8.374)** ಉನ್ನತ ವರ್ಣದ ರಕ್ಷಿತ ಅಥವಾ ಅರಕ್ಷಿತ ಸ್ತ್ರೀಯೊಡನೆ ಸಂಭೋಗ ಮಾಡಿದ ಶೂದ್ರನಿಗೆ ಆತನ ಜನನಾಂಗವನ್ನು ಛೇದಿಸಬೇಕು ಅಥವಾ ಮರಣದಂಡನೆ ವಿಧಿಸಬೇಕು. ಆದರೆ ಬ್ರಾಹ್ಮಣರು ತಮ್ಮನ್ನು ಭೂದೇವರೆಂದು, ಪೃಥ್ವಿಪತಿಗಳೆಂದು ಇದೇ ಮನುವಿನಿಂದ ಕರೆಸಿಕೊಂಡವರು ತಮಗೆ ಇತರ ವರ್ಗದ ಹೆಂಗಸರೊಡನೆ ಕೂಡುವ ಲೈಂಗಿಕ ಹಕ್ಕು ಇದೆಯೆಂದು ವಾದಿಸುತ್ತಿದ್ದರು. ಇದಕ್ಕೆ ರಾಣಿಯೂ ಹೊರತಾಗಿರಲಿಲ್ಲ. ಕ್ರಿ.ಶ. **1502** ರಲ್ಲಿ ಭಾರತಕ್ಕೆ ಪ್ರವಾಸಿಯಾಗಿ ಬಂದ ಲುಡೊವಿಕೋ ಡಿ ವರ್ತೆಮಾ ಕಲ್ಲಿಕೋಟೆ ಬ್ರಾಹ್ಮಣರ ಬಗ್ಗೆ ಈ ಸಂಗತಿಯನ್ನು ದಾಖಲು ಮಾಡಿದ್ದಾನೆ. ಬ್ರಾಹ್ಮಣರು, ಅರ್ಚಕರು ಹಾಗೆಯೇ ಧರ್ಮದ ಪ್ರಮುಖ ವ್ಯಕ್ತಿಗಳ ಪೈಕಿ ಅತ್ಯಮೂಲ್ಯ ಹಾಗೂ ಅತ್ಯಂತ ಗೌರವಾನ್ವಿತರನ್ನು ಆರಿಸಿ ಆಕೆಯ ಕನ್ಯತ್ವ ಕಳೆಯಲೆಂದು ಆಕೆಯೊಡನೆ ಮೊದಲರಾತ್ರಿ ಮಲಗುವಂತೆ ಮಾಡುತ್ತಿದ್ದರು.

ಹ್ಯಾಮಿಲ್ಟನ್ ದಾಖಲು ಮಾಡಿರುವ ವಿಚಾರವನ್ನು ಗಮನಿಸಿ. ಸಾಮೋರಿನ್ ಮದುವೆಯಾದಾಗ ನಂಬೂರಿ (ನಂಬೂದರಿ ಬ್ರಾಹ್ಮಣ) ಅಥವಾ ಮುಖ್ಯ ಅರ್ಚಕರು ಭೋಗಿಸುವವರೆಗೆ ವರನು ತನ್ನ ವಧುವನ್ನು ಸೇರುವಂತಿರಲಿಲ್ಲ. ಏಕೆಂದರೆ ಆಕೆಯ ಮೊದಲ ಫಲಗಳು ಅವಳು ಪೂಜಿಸುವ ದೇವರಿಗೆ ಸಲ್ಲಬೇಕಿತ್ತು.

1869ರಲ್ಲಿ ಮುಂಬಯಿ ಉಚ್ಚ ನ್ಯಾಯಾಲಯದಲ್ಲಿ ಕರೊಸನದಾಸ್ ಮೂಲ್ಜಿ ಎಂಬುವವರ ವಿರುದ್ಧ ಅರ್ಚಕರು ಮಾನಹಾನಿ ಮೊಕದ್ದಮೆ ಹೂಡಿದ್ದರು. ಏಕೆಂದರೆ ಮುಂಬೈ ಪ್ರಾಂತ್ಯದಲ್ಲಿ ವೈಷ್ಣವ ಕುಲದ ಅರ್ಚಕರ ಕುಲದ ಎಲ್ಲ ಹೆಂಗಸರ ಕನ್ಯತ್ವ ಕಳೆಯುವ ಹಕ್ಕು ಕೇಳಲಾಗಿತ್ತು. ಹೆಚ್ಚೂಕಡಿಮೆ **1869**ರವರೆಗೂ ಮೊದಲರಾತ್ರಿಯ ಹಕ್ಕು ನಿರಂತರವಾಗಿ ರೂಢಿಯಲ್ಲಿತ್ತು. ಅದಾದನಂತರ ಬ್ರಾಹ್ಮಣರು ಯಾವುದೇ ಜಾತಿಯ ಹೆಣ್ಣನ್ನು ಲೈಂಗಿಕ ಕ್ರಿಯೆಗಾಗಿ ಬಳಸಿಕೊಳ್ಳುವ ಹಕ್ಕು ಕ್ಷೀಣಿಸುತ್ತಾ ಬಂದಿತು.


ದಾನ ದಕ್ಷಿಣೆಗಳನ್ನು ತಮ್ಮ ಅಧಿಕಾರದಂತೆ ನಿಗದಿತವಾಗಿ ಪಡೆಯುತ್ತಿದ್ದ ಬ್ರಾಹ್ಮಣರು ಶೂದ್ರರಿಗೆ ಆಸ್ತಿಯ ಹಕ್ಕನ್ನು ನಿರಾಕರಿಸಿದ್ದರು. ಆದರೆ ಅವರ ಪ್ರಕಾರ ವೈಶ್ಯರು ಕೇವಲ ತಮ್ಮ ದೈವೀದತ್ತವಾದ ಕರ್ತವ್ಯವನ್ನು ಮಾಡುತ್ತಿದ್ದಾರೆ. ಕ್ರಿಸ್ತಪೂರ್ವ **350**ರ ಅರ್ಥಶಾಸ್ತ್ರದಲ್ಲಿಯೇ ಹೇಳಿದೆ, ಹೆಚ್ಚಿನ ಬಡ್ಡಿಗೆ ಸಾಲ ಕೊಡುವುದು ವೈಶ್ಯರ ಹಕ್ಕೆಂದು. ಕ್ರಿಸ್ತಶಕ **150**ಯ ಮನುಸ್ಮೃತಿಯು ಇನ್ನೂ ಮುಂದುವರಿದು ಹೇಳುತ್ತದೆ, ಬ್ರಾಹ್ಮಣರಿಗೆ ತಿಂಗಳಿಗೆ **2%**, ಕ್ಷತ್ರಿಯರಿಗೆ **3%**, ವೈಶ್ಯರಿಗೆ **4%** ಮತ್ತು ಶೂದ್ರರಿಗೆ **5%** ಬಡ್ಡಿಯನ್ನು ವಿಧಿಸಬೇಕು ಎಂದು. ವಾರ್ಷಿಕವಾಗಿ ಲೆಕ್ಕಿಸಿದರೆ, ಬ್ರಾಹ್ಮಣರಿಗೆ ಶೇಕಡಾ **24** ಆದರೆ, ಶೂದ್ರ ಅಥವಾ ದಲಿತರಿಗೆ ಶೇಕಡಾ **60** ಬಡ್ಡಿಯಾಗುತ್ತದೆ.

ಮನುಸ್ಮೃತಿ **(8.20)** ಹುಟ್ಟು ಮಾತ್ರದಿಂದ ಬ್ರಾಹ್ಮಣನಾದವನೂ (ಅಂದರೆ ವಿದ್ಯೆ ಇಲ್ಲದಿರಲಿ, ಯಾವುದೇ ವೇದೋಕ್ತ ಕ್ರಿಯೆ ಮಾಡಿರದವನು) ರಾಜನಿಗೆ ಧರ್ಮ ಪ್ರವಚನ ಹೇಳಬಹುದು. **(8.272)** ಶೂದ್ರನು ದರ್ಪದಿಂದ ಬ್ರಾಹ್ಮಣನಿಗೆ ಧರ್ಮೋಪದೇಶ ಮಾಡಲು ಹೊರಟರೆ ರಾಜನು ಅವನ ಮುಖ, ಕಿವಿಗಳಿಗೆ ಕಾದ ಎಣ್ಣೆ ಸುರಿಯಬೇಕು. **(3.156)** ವೇದವನ್ನು ಕದ್ದು ಕೇಳಿದ ಅಥವಾ ಉಚ್ಚರಿಸಿದ ಶೂದ್ರನ ನಾಲಿಗೆಯನ್ನು ಸೀಳಬೇಕು, ಕಿವಿಗೆ ಕಾದ ಸೀಸೆ ಸುರಿಯಬೇಕು ಎಂದು ರಾಜನಿಗೆ ಕಾತ್ಯಾಯನನು ವಿಧಿಸುತ್ತಾನೆ. ಇಂಥಾ ವ್ಯವಸ್ಥೆಯನ್ನು ಬ್ರಾಹ್ಮಣರು ಕಟ್ಟಿಕೊಳ್ಳುವಂತಹ ಶಾಸ್ತ್ರವನ್ನು ರಚಿಸುವ ಪ್ರಮೇಯಕ್ಕೂ ಕಾರಣಗಳು ಇಲ್ಲದಿಲ್ಲ.

ಉಪನಿಷತ್ತುಗಳ ಕ್ರಾಂತಿ

ತನ್ನ ಕೆಲಸದಿಂದ ವರ್ಣ ಅಥವಾ ಜಾತಿಯನ್ನು ಗುರುತಿಸುವ ರೂಢಿಯಿದ್ದ ಆಗಿನ ಸಮಾಜದಲ್ಲಿ, ಅದರಲ್ಲೂ ವೇದಗಳನ್ನು ಧಿಕ್ಕರಿಸಿ ಅಥವಾ ಪರ್ಯಾಯವಾಗಿ ಚಿಂತನೆಗಳನ್ನು ಮಾಡಿದ್ದ ಋಷಿಗಳಿಂದ ಉಪನಿಷತ್ತುಗಳು ರಚಿತವಾದವು. ಉಪನಿಷತ್ತುಗಳ ಕಾಲದಲ್ಲಿ ವರ್ಣವ್ಯವಸ್ಥೆಯ ವಿರುದ್ಧವಾದಂತಹ ಕ್ರಾಂತಿಕಾರಕ ನಡೆಗಳು ಉಂಟಾದವು.

ಛಾಂದೋಗ್ಯೋಪನಿಷತ್ತಿನ ಸತ್ಯಕಾಮ ಜಾಬಾಲಿಯ ಪ್ರಕರಣವನ್ನು ಗಮನಿಸಿದರೆ, ಸತ್ಯಕಾಮನೆಂಬ ಎದೆಯ ಮೇಲೆ ಯಜ್ಞೋಪವೀತವಿಲ್ಲದ ಬಾಲಕನು, ವಿದ್ಯಾಭ್ಯಾಸದ ಅಧಿಕಾರವನ್ನು ಹೊಂದಿರುವ ಬ್ರಾಹ್ಮಣ ಗುರುಕುಲದ ಮುಖ್ಯಸ್ಥನಾದ ಗೌತಮನ ಬಳಿಗೆ ಬರುತ್ತಾನೆ. ತನ್ನ ವಿದ್ಯಾಕಾಂಕ್ಷೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಗೌತಮನು ಆತನ ಗೋತ್ರವನ್ನೂ, ತಂದೆಯ ಹೆಸರನ್ನೂ ಕೇಳುತ್ತಾನೆ. ಇದರ ಅರಿವಿರದಿದ್ದ ಸತ್ಯಕಾಮ ತನ್ನ ತಾಯಿ ಜಬಲಾಳ ಬಳಿಗೆ ಬಂದು ಇದರ ಕುರಿತು ವಿಚಾರಿಸಿದಾಗ, "ಮಗನೇ ನಾನು ದಾಸಿಯಾಗಿ ಹಲವು ಯಜಮಾನರಿಗೆ ಸೇವೆ ಮಾಡುತ್ತಿದ್ದೆ, ಹೀಗೆ ಯಾರಿಗೋ ಹುಟ್ಟಿದ ಮಗ ನೀನು. ನನಗೂ ಕೂಡ ನಿರ್ದಿಷ್ಟವಾಗಿ ನಿನ್ನ ತಂದೆ ಯಾರೆಂದು ತಿಳಿಯದು" ಎಂದು ಹೇಳಿ "ನಾನು ನಿನ್ನ ತಾಯಿ. ಅದು ಸತ್ಯ. ನೀನು ಸತ್ಯಕಾಮ ಜಬಾಲ" ಎಂದು ಹೇಳಿ ಕಳುಹಿಸುತ್ತಾಳೆ. ಮಗನು ತಾಯಿಯ ಮಾತಿನಂತೆಯೇ ಬಂದು ಗುರು ಗೌತಮನ ಮುಂದೆ ಹೇಳಿದಾಗ ಗೌತಮನಿಗೆ ಅತ್ಯಾನಂದವಾಗುತ್ತದೆ. ಅವನು ಹೇಳುವಂತೆ "ಯಾರು ಸತ್ಯವನ್ನು ಹೇಳುತ್ತಾರೋ ಅವರೇ ಬ್ರಾಹ್ಮಣ" ಎಂದು ಬಾಲಕ ಮತ್ತು ಅವನ ತಾಯಿಯ ಸತ್ಯವಂತಿಕೆಯ ಆಧಾರದ ಮೇಲೆ ಬ್ರಾಹ್ಮಣನೆಂದು ಗುರುತಿಸುತ್ತಾನೆ. ಮಹಾಭಾರತದ ವನಪರ್ವದಲ್ಲಿಯೂ ಸ್ಪಷ್ಟವಾಗಿ ಬ್ರಾಹ್ಮಣಿಕೆಯ ಆಧಾರವನ್ನು ಗುರುತಿಸುತ್ತಾರೆ. ಯಾರೊಬ್ಬನೂ ತನ್ನ ಜನ್ಮದಿಂದಾಗಲಿ, ವೇದಾಧ್ಯಯನದಿಂದಾಗಲಿ, ಉಪನಯನಾದಿ ಸಂಸ್ಕಾರದಿಂದಾಗಲಿ ಬ್ರಾಹ್ಮಣನಲ್ಲ, ಅವನ ಸದಾಚಾರದಿಂದ ಮಾತ್ರವೇ ಬ್ರಾಹ್ಮಣನಾಗುತ್ತಾನೆ ಎಂದು. ಹೀಗೆ ತಮ್ಮ ಕಾಯಕ ಮತ್ತು ಆಚಾರ ವಿಚಾರಗಳಿಂದ ಎಲ್ಲರೂ ಬ್ರಾಹ್ಮಣರಾಗುತ್ತಾ ಹೋದರೆ ಹೇಗೆ? ಈ ಭಯ



ಬ್ರಾಹ್ಮಣವಾದಿಗಳಿಗಿತ್ತು.

ವೈದಿಕಾಚರಣೆಗಳಿಗೆ ವಿರುದ್ಧವಾಗಿಯೇ ಉಪನಿಷತ್ತುಗಳು ನಿಲುವನ್ನು ತಳೆದಿದ್ದವು. ವೇದವನ್ನು ಅನುಸರಿಸುವವರಿಗೆ ಮಾತ್ರವೇ ಯಜ್ಞ ಯಾಗಾದಿಗಳು ಇದ್ದಿದ್ದು. ಉಪನಿಷತ್ತಿನ ಋಷಿಗಳಿಗಲ್ಲ. ಈಶವಾಸ್ಯೋಪನಿಷತ್ತಿನ ದೃಷ್ಟಾರನಾದ ವಾಮದೇವನೆಂಬ ಋಷಿ ತನ್ನ ಜೀವಿತದಲ್ಲಿ ಯಾವ ಯಜ್ಞ ಯಾಗಾದಿಗಳಿಂದ ಸಮಯ ವ್ಯಯಿಸದೇ ಮರಗಳನ್ನು ನೆಡುತ್ತಲೇ ಬಂದಿದ್ದವನು. ಬೃಹದಾರಣ್ಯಕೋಪನಿಷತ್ತಿನಲ್ಲಿ ಶ್ವೇತಕೇತು ದನಗಳನ್ನು ಮೇಯಿಸುತ್ತಿದ್ದ. ಬ್ರಾಹ್ಮಣರಲ್ಲಿ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದ್ದ ಮತ್ತು ಮಹಿಳೆಯರನ್ನು ಕಟ್ಟುಪಾಡುಗಳಿಂದ ಬಂಧಿಸಿರುವಾಗ ಗಾರ್ಗಿ ಮತ್ತು ಮೈತ್ರೇಯಿಗಳೆಂಬ ಹೆಂಗಸರು ಬ್ರಹ್ಮ ಜಿಜ್ಞಾಸುಗಳಾಗಿ ವಿಶ್ಲೇಷಣೆಗಳನ್ನು ಮಾಡುತ್ತಿದ್ದರು.

ಕಠೋಪನಿಷತ್ತಿನಲ್ಲಿ ವಾಜಶ್ರವನೆಂಬ ಮುನಿ ವಿಶ್ವಜಿತ್ ಯಜ್ಞವನ್ನು ಮಾಡಿ ಅತ್ಯುನ್ನತವಾದ ಪದವಿಯನ್ನು ಪಡೆಯಲು ಸಿದ್ಧತೆಗಳನ್ನು ಮಾಡಿಕೊಳ್ಳುವಾಗ ಅವನ ಮಗನಾದ ನಚಿಕೇತ ಅದನ್ನು ಗಮನಿಸುತ್ತಾನೆ. ಎಲ್ಲವನ್ನೂ ಯಜ್ಞಕಾರಣಕ್ಕಾಗಿ ದಾನ ಮಾಡಬೇಕೆಂದಿರುವಾಗ ಕೇವಲ ನಾಮಕಾವಸ್ಥೆಗಾಗಿ ಗೊಡ್ಡುದನಗಳನ್ನು, ಕೆಲಸಕ್ಕೆ ಬಾರದ ಪಶುಗಳನ್ನು ದಾನ ಮಾಡಲು ತತ್ಪರನಾಗಿದ್ದ ತನ್ನ ತಂದೆಗೆ "ಅಪ್ಪಾ ನನ್ನನ್ನು ಯಾರಿಗೆ ದಾನ ಕೊಡುತ್ತೀ?" ಎಂಬ ಕ್ರಾಂತಿಕಾರಕ ಪ್ರಶ್ನೆಯನ್ನು ಕೇಳುತ್ತಾನೆ. ಯಾಜ್ಞಿಕನಾಗಿದ್ದ ವಾಜಶ್ರವನ ಶ್ರದ್ಧೆಯನ್ನು ಸಂಶಯಿಸುವ ಮತ್ತು ನಿರಾಕರಿಸುವ ಈ ಪ್ರಶ್ನೆಯು ಪುನರಾವರ್ತನವಾದಾಗ "ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ" ಎಂದು ಆಗ್ರಹದಿಂದ ಹೇಳುವನು. ಇದರಿಂದ ನಚಿಕೇತನಾದರೂ ಬಹುಜನರಲ್ಲಿ ಪ್ರಥಮನಾಗಿಯೂ, ಬಹುಜನರಲ್ಲಿ ಮಧ್ಯಮನಾಗಿಯೂ ಇರುವಂತಹ ನನ್ನಿಂದ ಯಾವ ಕೆಲಸ ಯಮನಿಗೆ ಆಗಬಹುದು ಎಂಬ ಆತ್ಮಗೌರವದಿಂದ ಮೃತ್ಯುವಿನ ಬಳಿಗೆ ನಡೆಯುತ್ತಾನೆ. ಮುಂದೆ ಮೃತ್ಯು ಮತ್ತು ಮರಣಾನಂತರ ಜೀವನದ ಬಗ್ಗೆ ಜಿಜ್ಞಾಸೆಗಳನ್ನು ಮಾಡುತ್ತಾನೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದನು ಸನತ್ಕುಮಾರನ ಬಳಿಗೆ ಬಂದು ಬೋಧನೆಗಾಗಿ ಕೋರಿಕೊಳ್ಳುತ್ತಾನೆ. ಸನತ್ಕುಮಾರ "ನಿನಗೆ ಏನು ಗೊತ್ತೋ ಅದನ್ನು ತಿಳಿಸು. ಅದನ್ನು ನೋಡಿಕೊಂಡು ನಾನು ಬೋಧಿಸುತ್ತೇನೆ" ಎಂದು ಹೇಳಿದಾಗ, ನಾರದನು ತನಗೆ ನಾಲ್ಕೂ ವೇದಗಳು, ಇತಿಹಾಸ, ಪುರಾಣ, ಪಿತೃಕರ್ಮಗಳು, ದೇವಶಾಸ್ತ್ರ, ನೀತಿಶಾಸ್ತ್ರ ಇತ್ಯಾದಿಗಳೆಲ್ಲಾ ಗೊತ್ತೆಂದು ಹೇಳಿದಾಗ, ಸನತ್ಕುಮಾರ, "ಈಗ ನೀನು ಏನು ತಿಳಿದುಕೊಂಡಿರುವೆಯೋ ಅವೆಲ್ಲವೂ ಕೇವಲ ಹೆಸರುಗಳಷ್ಟೇ. ಋಗ್ವೇದ ಎಂಬುದು ಒಂದು ಹೆಸರು. ಅಂತೆಯೇ ಇತರ ವೇದಗಳು ಕೇವಲ ಹೆಸರುಗಳು" ಎಂದು ಹೇಳುತ್ತಾ ಅವುಗಳ ಔಚಿತ್ಯ ಮತ್ತು ಔನ್ನತ್ಯವನ್ನು ಕಡೆಗಣಿಸುತ್ತಾನೆ. ಹೀಗೆ ಉಪನಿಷತ್ತುಗಳು ವೇದಗಳಿಗೆ, ಯಜ್ಞಗಳಿಗೆ ಸೆಡ್ಡು ಹೊಡೆದು ಸತ್ಯಾನ್ವೇಷಕರಾಗಿದ್ದವು.

ಈ ಬಗೆಯಲ್ಲಿ ಉಪನಿಷತ್ತು ಋಷಿಗಳು ಮತ್ತು ಗುರುಕುಲದ ಗುರುಗಳು ಗುಣಗ್ರಾಹಿಗಳಾಗಿದ್ದು ಯಾವುದೇ ಜನ್ಮದಿಂದ ಬಂದವನಾಗಿದ್ದರೂ ಅವನಿಗೆ ಅಕ್ಷರವನ್ನೂ, ವಿದ್ಯೆಯನ್ನೂ ಕೇವಲ ಆತನ ಆಸಕ್ತಿ ಮತ್ತು ಅರ್ಹತೆಗಳಿಗೆ ಅನುಸಾರವಾಗಿ ನೀಡುವಂತವರಾಗಿದ್ದರು.


ಗುರುಕುಲಗಳಲ್ಲಿ ವರ್ಣ ನಿರ್ಧಾರ

ಪುರಾಣಗಳಲ್ಲಿ ವ್ಯಕ್ತವಾಗುವ ಸನಾತನ ಸಂಪ್ರದಾಯದಂತೆ ಮನು (ಮನುಸ್ಮೃತಿಯ ಮನುವಲ್ಲ) ಮತ್ತು ಸಪ್ತರ್ಷಿಗಳೆಂಬ ಸ್ವತಂತ್ರ ಅಧಿಕಾರದ ವರ್ಗದಿಂದ ವರ್ಣ ನಿಗದಿಯಾಗುತ್ತಿತ್ತು, ಆ ವರ್ಣವು ನಿರ್ದಿಷ್ಟ ಅವಧಿಗಾಗಿ ಇದ್ದು, ನಂತರ ಅದನ್ನು ಬದಲಾಯಿಸಲಾಗುತ್ತಿತ್ತು. ಒಬ್ಬ ವ್ಯಕ್ತಿಯ ವರ್ಣವನ್ನು ನಾಲ್ಕು ವರ್ಷ ಅಂದರೆ ಒಂದು ಯುಗ ಕಾಲಕ್ಕಾಗಿ ನಿಗದಿ ಮಾಡುತ್ತಿದ್ದರು. ಆ ನಾಲ್ಕು ವರ್ಷಗಳ ಕೊನೆಯಲ್ಲಿ ಮನ್ವಂತರ ಉಂಟಾಗುತ್ತಿತ್ತು. ಆ ಮೂಲಕ ಪ್ರತಿ ನಾಲ್ಕನೆಯ ವರ್ಷ ಪಟ್ಟಿ ಬದಲಾಯಿಸುತ್ತಿತ್ತು. ಈ ಸುಧಾರಣೆಯಲ್ಲಿ ಕೆಲವರು ಹಳೆಯ ವರ್ಣವನ್ನು ಬದಲಿಸಿಕೊಳ್ಳುತ್ತಿದ್ದರು. ಕೆಲವರು ಉಳಿಸಿಕೊಳ್ಳುತ್ತಿದ್ದರು: ಕೆಲವರು ಕಳೆದುಕೊಳ್ಳುತ್ತಿದ್ದರು ಮತ್ತೂ ಕೆಲವರು ಗಳಿಸಿಕೊಳ್ಳುತ್ತಿದ್ದರು.

ಗುರುಕುಲದಲ್ಲಿ ಶಿಕ್ಷಣದ ಅವಧಿ ಹನ್ನೆರಡು ವರ್ಷ. ಶಿಕ್ಷಣದ ಅವಧಿ ಮುಗಿದ ಮೇಲೆ ಗುರುಕುಲದಲ್ಲೇ ಆಚಾರ್ಯರಿಂದ ಉಪನಯನ ಸಮಾರಂಭವಿರುತ್ತಿತ್ತು. ಈ ಉಪನಯನ - ಅತ್ಯಂತ ಮುಖ್ಯ ಸಮಾರಂಭವಾಗಿದ್ದು ಇದರಲ್ಲಿ ಆಚಾರ್ಯರು ವಿದ್ಯಾರ್ಥಿಯ ವರ್ಣವನ್ನು ನಿರ್ಧರಿಸಿ, ಆ ವರ್ಣದ ಕರ್ತವ್ಯಗಳನ್ನು ನಿರ್ವಹಿಸಲು ಹೊರ ಜಗತ್ತಿಗೆ ಕಳುಹಿಸುವಂತಹ ಸಮಾರಂಭವಾಗಿತ್ತು. ವರ್ಣವೆಂಬುದು ಎಂದಿಗೂ ಆನುವಂಶೀಯವಾಗಿರಲಿಲ್ಲ.

ಈ ವ್ಯವಸ್ಥೆಯಿಂದ ಬ್ರಾಹ್ಮಣ ಧರ್ಮವು ತೃಪ್ತವಾಗಲಿಲ್ಲ. ಏಕೆಂದರೆ ಆಗ ಪ್ರಚಲಿತವಿದ್ದ ವ್ಯವಸ್ಥೆಯಲ್ಲಿ ಬ್ರಾಹ್ಮಣನೊಬ್ಬನ ಮಗನು ಶೂದ್ರನಾಗಲು ಮಾತ್ರ ಯೋಗ್ಯವೆಂದು ನಿರ್ಧರಿಸಿ ಗುರುಗಳು ಕಳುಹಿಸುವ ಸಾಧ್ಯತೆಗಳಿದ್ದವು. ತನ್ನ ಮಗನು ಅರ್ಹನಾಗಲಿ, ಅರ್ಹನಾಗಿರದಿರಲಿ ಬ್ರಾಹ್ಮಣನಾಗಿಯೇ ಉಳಿಯಬೇಕೆಂಬ ಪಕ್ಷಪಾತ, ವಾಂಛೆ ಮತ್ತು ಅಪರಿಮಿತ ದುರಾಸೆಯಿಂದ ಮುಂದೆ ಅತ್ಯಂತ ನಿರ್ಲಜ್ಜರೀತಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡರು.

ಬ್ರಾಹ್ಮಣಾಧಿಕ್ಯದ ಗೀಳಿನ ಮನುವು ಮುಂದೆ ಗುರುಕುಲದಲ್ಲಿ ಶಿಷ್ಯವೃತ್ತಿಯನ್ನು ಮಾಡಿದ ನಂತರ ಉಪನಯನದಂತಹ ಸಂಸ್ಕಾರದಲ್ಲಿ ಗುರುವನ್ನು ಒಳಮಾಡಿಕೊಳ್ಳುವುದಿಲ್ಲ. ಮಗುವಿಗೆ ಉಪನಯನ ಮಾಡುವ ಅಧಿಕಾರವನ್ನು ತಂದೆಗೆ ವರ್ಗಾಯಿಸಲಾಯಿತು. ಇದರ ಪರಿಣಾಮವಾಗಿ ತನ್ನ ಮಗುವಿನ ಉಪನಯನ ಮಾಡುವ ತಂದೆಯು, ತನ್ನ ವರ್ಣವನ್ನೇ ತನ್ನ ಮಗನಿಗೆ ನೀಡುವ ಮೂಲಕ ಕಸುಬುಗಳು ಅಥವಾ ವರ್ಣಗಳು ಅನುವಂಶೀಯವಾಗುವಂತೆ ಮಾಡಿದರು. ಜನ್ಮದಿಂದ ಜಾತಿ ಎಂಬ ಪದ್ಧತಿಗೆ ನಾಂದಿ ಹಾಡಿದರು. ಎಂದು ಹೇಳುತ್ತಾ ವರ್ಣ ನಿರ್ಧಾರದ ಜವಾಬ್ದಾರಿಯನ್ನು ಗುರುವಿನಿಂದ ಕಿತ್ತು ತಂದೆಗೆ ವಹಿಸಿದ ಈ ವಿಷಯವನ್ನು ಅಂಬೇಡ್ಕರ್ ಬಹಳ ಗಂಭೀರವಾಗಿ ವಿವೇಚಿಸುತ್ತಾರೆ. ●



ಅಸಹ್ಯ ಹುಟ್ಟಿಸಿದ ರಾಘವೇಶ್ವರರ ನಡ

ಶ್ರೀ ರಾಘವೇಶ್ವರ ಸ್ವಾಮೀಜಿಯವರು ತಮ್ಮ ಮೇಲೆ ಬಂದಿರುವ ಆಪಾದನೆಯನ್ನು ನ್ಯಾಯಾಲಯದಲ್ಲಿ ಎದುರಿಸುತ್ತಿರುವ ರೀತಿ ನೋಡಿದರೆ, ಅವರ ಶಿಷ್ಯ ಬಳಗದ ಜಾತಿಗೆ ಸೇರಿದ ನನಗೆ ಜಿಗುಪ್ಸೆ ಬರುತ್ತಿದೆ.

ಬಲು ದೊಡ್ಡ ವಕೀಲರನ್ನು ಇಟ್ಟುಕೊಳ್ಳುವುದೇ ಹುಳ್ಳ ಮನಸ್ಸಿನ ಸೂಚನೆ ಎಂದು ನಮ್ಮಲ್ಲಿ ಹೇಳುವುದಿದೆ. ಬಡವನಿಗಂತೂ ಇದು ಸಾಧ್ಯವೇ ಇಲ್ಲ, ಈ ವಕೀಲರಿಗೆ ಲಕ್ಷಾಂತರ ರೂಪಾಯಿ ಕೊಡಬೇಕು. ಈ ಬಗ್ಗೆ ಎಷ್ಟು ಲಕ್ಷ ನೀಡಲಾಯಿತು ಎಂದು ನಮಗೆ ತಿಳಿಸುವ ಜವಾಬ್ದಾರಿ ಶ್ರೀಗಳಿಗಿದೆ. ಅದು ಒತ್ತಟ್ಟಿಗಿರಲಿ.

ಈಗ ನ್ಯಾಯಾಲಯ ಸ್ವಾಮಿಯ ಆಕ್ಷೇಪಗಳನ್ನು ಬದಿಗೊತ್ತಿ ವೈದ್ಯಕೀಯ ಪರೀಕ್ಷೆಗೆ ಅನುಮತಿ ನೀಡಿದೆ. ಈ ಸ್ವಾಮಿ ನಿಜಕ್ಕೂ ನಿರಪರಾಧಿಯಾಗಿದ್ದರೆ, ಎಂಥಾ ಪರೀಕ್ಷೆಗೂ ಸಿದ್ಧ; "ನಾಳೆಗೆ ಬಪ್ಪದು ಇಂದೇ ಬರಲಿ" ಎಂದು ಸ್ವಾಮೀಜಿ ಹೇಳುತ್ತಿದ್ದರು. ನ್ಯಾಯಾಲಯದ ಮುಂದೆ ಇದನ್ನು ಹೇಳಲು; ದಾವೆ ಎದುರಿಸಲು ಘಟಾನುಘಟಿ ವಕೀಲರ ಅಗತ್ಯವೂ ಇರಲಿಲ್ಲ.

ಆದರೆ ತನಿಖೆಯನ್ನು, ಪರೀಕ್ಷೆಯನ್ನು ತಡೆಯಲು ಸ್ವಾಮಿ ಬಳಸಿದ ದಾರಿ ಮಾತ್ರ ಅಪಾಯಕಾರಿಯಾದದ್ದು. ಅತ್ಯಾಚಾರ ಪ್ರಕರಣಗಳಲ್ಲಿ ಆಧುನಿಕ ವೈದ್ಯಕೀಯ ಪರೀಕ್ಷೆಗೆ ಅನುವು ಮಾಡಿಕೊಡುವ 53 ಸಿ ಪರಿಚ್ಛೇದವನ್ನೇ ಅಸಂವಿಧಾನಿಕ ಎಂದು ಘೋಷಿಸಬೇಕೆಂದು ಸ್ವಾಮಿ ವಾದಿಸಿದ್ದು ಅಸಹ್ಯ ತರುತ್ತಿದೆ. ಅಂದರೆ ಈ ಗುರು ವಾದಿಸುತ್ತಿರುವುದು 'ರೇಪಿಸ್ಟ್' ಒಬ್ಬನಿಗೆ ಯಾವ ಪರೀಕ್ಷೆಯೂ ಬೇಡ ಅಂತ.


ನಾಗರಿಕ ಸಮಾಜದಲ್ಲಿ ಸಾರ್ವಜನಿಕ ಸ್ಥಾನವೊಂದರಲ್ಲಿ ಕೂರುವ ನೈತಿಕ ಹಕ್ಕನ್ನು ರಾಘವೇಶ್ವರ ಸ್ವಾಮಿ ಈ ಮೂಲಕ ಕಳೆದುಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆ ನಡೆಯಲಿ ಎಂದು ಹೈಕೋರ್ಟ್ ಹೇಳಿದ ಮೇಲೆ ಸ್ವಾಮಿ ಇಷ್ಟು ದಿನ ಗುದ್ದಾಡಿದ್ದು ಏನನ್ನೋ ಮುಚ್ಚಿಡಲು ಎಂಬ ಶಂಕೆ ಸಮಾಜದಲ್ಲೂ ಶಿಷ್ಯಗಣದಲ್ಲೂ ದಟ್ಟವಾಗುತ್ತಿದೆ.

ತಕ್ಷಕಾಯ ಸ್ವಾಹಾ, ಇಂದ್ರಾಯ ಸ್ವಾಹಾ ಎಂಬಂತೆ ಈ ಸ್ವಾಮಿ ತನ್ನ ವೈಯಕ್ತಿಕ ವರ್ಚಸ್ಸನ್ನು ತಾನೇ ಹಾಳುಗೆಡವಿಕೊಂಡದ್ದಲ್ಲದೇ, ಪೀಠಕ್ಕಿದ್ದ ಅಷ್ಟಿಷ್ಟು ಗೌರವವನ್ನೂ ಬೀದಿಪಾಲು ಮಾಡಿದ್ದಾರೆ.

ಆಪಾದನೆ ಬಂದಾಗ ಜನನಾಯಕರು ಸ್ಥಾನ ತ್ಯಜಿಸುವುದಿದೆ. ಅಷ್ಟೇಕೆ ಇತ್ತೀಚೆಗೆ ವಿಶ್ವವಿದ್ಯಾಲಯಗಳ ಗುರು ಪೀಠದ ಪ್ರೊಫೆಸರುಗಳನ್ನೂ ಸ್ಥಾನಚ್ಯುತಿ ಮಾಡಲಾಗುತ್ತಿದೆ. ಅಂತಿರುವಾಗ ಈ ಸ್ವಾಮಿ ನೈತಿಕ ಹೊಣೆಗಾರಿಕೆ ಹೊತ್ತು ಪೀಠ ತ್ಯಜಿಸುವುದು ಒಳ್ಳೆಯದು. ಈ ಪ್ರಕರಣದ ಬಗ್ಗೆ ನಮಗಿರುವ ಜಿಗುಪ್ಸೆಯನ್ನು ಹೇಳುತ್ತಾ ಓಡಾಡುವುದೇ ಅಸಹ್ಯ.

ಈ ಧಾರ್ಮಿಕ ಪೀಠಗಳು ಹೇಗಿವೆಯೆಂದರೆ ಕಾನೂನು ಮೂಲಕವಾಗಲೀ ಸಾಂವಿಧಾನಿಕ ವಿಧಿವಿಧಾನಗಳ ಮೂಲಕವಾಗಲೀ ಇವರನ್ನು ಪದಚ್ಯುತಿ ಮಾಡುವುದೂ ಕಷ್ಟ. ಕಚಡಾ ರಾಜಕಾರಣಿಗಳ ತರ ನಮ್ಮ ಅಸಹಾಯಕತೆಯನ್ನು ಗೇಲಿ ಮಾಡುತ್ತಾ ಸ್ಥಾನಕ್ಕೆ ಅಂಟಿಕೂರುವ ಮರ್ಜಿ ಇವರಿಗೂ ಇದ್ದರೆ ಸಮಾಜವನ್ನು ದೇವರೇ ಕಾಪಾಡಬೇಕು.

-ಕೆ.ಪಿ. ಸುರೇಶ್, ಬೆಂಗಳೂರು



ರಾಮ ಮಾಡಿದ್ದನ್ನೇ ರಾಘವೇಶ್ವರನೂ ಮಾಡಿದ್ದರಲ್ಲಿ ತಪ್ಪೇನು?

ಕರುಣಾಳು ಗೋಸ್ವಾಮಿ ರಾಘವೇಶ್ವರನಲ್ಲಿ ತಪ್ಪು ಹುಡುಕುವುದು ಸರಿಯಲ್ಲ, ಅವರು ನಮ್ಮ ಹಿಂದೂ ಪುರಾಣಗಳಿಂದಲೇ ಸ್ಫೂರ್ತಿ ಪಡೆದು ಗಾಯಕಿಯನ್ನು ಉದ್ಧಾರ ಮಾಡಿದ್ದು ಅಷ್ಟೇ. "ಮಾನವನ ಆಲೋಚನೆಯ ಕೇಂದ್ರ ಬಿಂದುವೇ ಸೆಕ್ಸ್" ಎಂದು ಕಳೆದ ಶತಮಾನದ ಬಹುದೊಡ್ಡ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಘಂಟಾಘೋಷವಾಗಿ ಸಾರಿದ್ದನು! ಅದರಂತೆ ನಮ್ಮ ವೈದಿಕ ಪುರಾಣಗಳ ಕೇಂದ್ರ ಬಿಂದು ಸಹ ಸೆಕ್ಸ್! ಎಲ್ಲರೂ ನಮ್ಮ ಪುರಾಣಗಳನ್ನು ಸ್ತ್ರೀಯರ ಲೈಂಗಿಕ ಶೋಷಣೆಯ ದೃಷ್ಟಿಯಿಂದ ಪುನಃ ಓದಲೇಬೇಕು.

ಇಡೀ ಮಹಾಭಾರತ ಕಾವ್ಯವೇ ಸರಣಿ ಅತ್ಯಾಚಾರಗಳ ಬೃಹತ್ ಕಥೆ. ಎಂಬತ್ತು ವರ್ಷದ ಹಣ್ಣು ಹಣ್ಣು ಮುದುಕ ಪರಾಶರ ಮುನಿಯು ತನ್ನ ಆತಿಥೇಯ ಮೀನುಗಾರ ದಶರಾಜನ ಮಗಳಾದ ಹದಿನಾರು ವರ್ಷದ ಸತ್ಯವತಿಯನ್ನು ರೇಪ್ ಮಾಡಿ ಅತಿಥಿ ಧರ್ಮ ನಿಭಾಯಿಸಲಿಲ್ಲವೇ. ನಂತರ ಪಾಪ ಸುರಸುಂದರಿ ಸತ್ಯವತಿಯು ಕುರೂಪಿ ಪರಾಶರನ ಪಾಪವನ್ನು ತನ್ನ ಗರ್ಭದಲ್ಲಿ ಒಂಬತ್ತು ತಿಂಗಳು ಹೊತ್ತು ಕೊನೆಗೆ ಜನ್ಮ ಕೊಟ್ಟಿದ್ದು ಪರಾಶರನ ತದ್ರೂಪಿ ಮಗನಿಗೆ. ಈ ಕುರೂಪಿ ಮಗ ಬೆಳೆದು ದೊಡ್ಡವನಾದ ಮೇಲೆ ಮಾಡಿದ್ದೂ ಅದೇ ತಪ್ಪು. ಕೃಷ್ಣ ದ್ವೈಪಾಯನ ಅರ್ಥಾತ್ ವೇದವ್ಯಾಸ ಎಂಬ ಹೆಸರಿನಲ್ಲಿ ಪ್ರಸಿದ್ಧನಾದ ಈತನೂ ತನ್ನ ಮಲತಮ್ಮ ವಿಚಿತ್ರವೀರ್ಯನ ಎರಡು ಸುಂದರ ವಿಧವೆಯರಾದ ಅಂಬಿಕೆ ಅಂಬಾಲಿಕೆಯರನ್ನು ರೇಪ್ ಮಾಡಿ ಹುಟ್ಟಿಸಿದ್ದಾದರೂ ಎಂತಹ ಮಕ್ಕಳನ್ನು? ಒಬ್ಬ ಕುರುಡ



ಧೃತರಾಷ್ಟ್ರ ಇನ್ನೊಬ್ಬ ರೋಗಿಷ್ಠ ನಪುಂಸಕ ಪಾಂಡುರಾಜ. ಆ ಪಾಂಡುರಾಜ ನಪುಂಸಕನಾದರೂ ಎರಡೆರಡು ಮದುವೆಯಾಗುತ್ತಾನೆ. ಆದರ ದುರ್ಲಾಭ ಅವನ ನೆರೆಮನೆಯವರಾದ ಯಮ, ವಾಯು, ಇಂದ್ರ ಮತ್ತು ಅಶ್ವಿನಿಕುಮಾರರು ಪಡೆಯುತ್ತಾರೆ. ಅವರೆಲ್ಲ ಕುಂತಿ ಮತ್ತು ಮಾದ್ರಿಗೆ ಮಕ್ಕಳನ್ನು ದಯಪಾಲಿಸಿ ನೆರೆಹೊರೆಯ ಧರ್ಮ ನಿಭಾಯಿಸುತ್ತಾರೆ. ಈ ನೆರೆಮನೆಯವರು ಮಾಡಿದ್ದೆಲ್ಲಾ ಲೋಕದ ಉದ್ಧಾರಕ್ಕೆ ತಾನೇ.

ಸುಡುಸುಡು ಸೂರ್ಯದೇವನೂ ಕಡಿಮೆಯಿಲ್ಲ ಬಿಡಿ. ಅವನು ಕುಂತಿಯು ಮದುವೆಯ ಮೊದಲೇ ಅವಳು ಗರ್ಭ ಧರಿಸುವುದಕ್ಕೆ ಸಹಾಯ ಮಾಡಿ ಧರ್ಮದ ಉದ್ಧಾರ ಮಾಡಿದ್ದವನು. ದ್ರೌಪದಿಯನ್ನು ಐದೈದು ಸಹೋದರರು ಭೋಗಿಸಿ ಐದೇ ವರ್ಷದಲ್ಲಿ ಐದು ಮಕ್ಕಳನ್ನು ಹುಟ್ಟಿಸಿ ದ್ರೌಪದಿಯನ್ನೇ ಉದ್ಧಾರ ಮಾಡಿದ್ದರು. ತುಳಸಿಯ ಶೀಲವನ್ನೂ ದೇವರೊಬ್ಬ ಕೆಡಿಸಿದ್ದು ಧರ್ಮದ ಉದ್ಧಾರಕ್ಕಾಗಿಯೇ!

ರಾಮಾಯಣದ ಶೂದ್ರ ತಪಸ್ವಿ ಶಂಭೂಕ ಮದುವೆಯಾಗಿರಲಿಲ್ಲ, ಇಲ್ಲದಿದ್ದರೆ ಬ್ರಾಹ್ಮಣನ ಮಗನನ್ನು ಬದುಕಿಸಲೋಸುಗ ಯಾವುದಾದರೂ ದೇವರು ಶಂಭೂಕನ ಪತಿವ್ರತೆ ಪತ್ನಿಯ ಶೀಲ ಕೆಡಿಸಿ ನಂತರ ಶಂಭೂಕನನ್ನು ಕೊಲ್ಲಬೇಕಾಗುತ್ತಿತ್ತು ಮತ್ತು ತುಳಸಿಗಾದ ಗತಿಯೇ ಶಂಭೂಕನ ಪತ್ನಿಗೂ ಆಗುತ್ತಿತ್ತು.

ಭಸ್ಮಾಸುರನು ಸುಟ್ಟು ಸತ್ತು ಹೋದ ಮೇಲೆ ವಿಷ್ಣುವು ತನ್ನ ನಿಜರೂಪಕ್ಕೆ ತಕ್ಷಣ ಹಿಂತಿರುಗುವುದು ಬಿಟ್ಟು ವಿನಾಕಾರಣ ಹೆಣ್ಣು ರೂಪದಲ್ಲಿಯೇ ಮುಂದುವರಿದು ಇನ್ನೊಬ್ಬ ಗಂಡು ದೇವರಿಗೆ ಲೈಂಗಿಕ ಆಕರ್ಷಣೆ ಉಂಟು ಮಾಡಿದ್ದು ಸಹಾ ಧರ್ಮದ ಉದ್ಧಾರಕ್ಕೆ, ಬ್ರಹ್ಮನು ತನ್ನ ಮಗಳಾದ ಭವ್ಯ ಸುಂದರಿ ಅಹಲ್ಯೆಯನ್ನು ಅವಳು ಪ್ರೀತಿಸುತ್ತಿದ್ದ ಇಂದ್ರನಿಗೆ ಮದುವೆ ಮಾಡಿ ಕೊಡದೇ ಕೈಲಾಗದ ಹಣ್ಣು ಹಣ್ಣು ಮುದುಕ ಗೌತಮ ಋಷಿಗೆ ಮದುವೆ ಮಾಡಿ ಕೊಟ್ಟಿದ್ದು ಸಹಾ ಧರ್ಮದ ಉದ್ಧಾರಕ್ಕೆ.

ಶ್ರೀಕೃಷ್ಣನು ತನಗಿಂತ ವಯಸ್ಸಿನಲ್ಲಿ ಹಿರಿಯ ಮತ್ತು ವಿವಾಹಿತೆ ರಾಧಾಳೊಂದಿಗೆ ರಾಸಲೀಲೆ ಆಡಿ ರಾಧಾಳ ಗಂಡನಿಗೆ ದ್ರೋಹ ಬಗೆದದ್ದು ಸಹಾ ಧರ್ಮದ ಉದ್ಧಾರಕ್ಕೆ, ಕಟ್ಟಾ ಬ್ರಹ್ಮಚಾರಿ ಹನುಮಂತನನ್ನೂ ಪುರಾಣಕರ್ತರು ಬಿಡಲಿಲ್ಲ. ಹನುಮಂತ ಸಮುದ್ರೋಲಂಘನೆ ಮಾಡುವಾಗ ಅವನ ಬೆವರು (ವೀರ್ಯ) ಸಮುದ್ರದಲ್ಲಿ ಬಿದ್ದಿತಂತೆ ಹಾಗೂ ಅದನ್ನು ಮತ್ಸ್ಯಕನ್ಯೆಯೊಬ್ಬಳು ಕುಡಿದು ಹನುಮಂತನಂಥದ್ದೇ ವೀರನನ್ನು ಹಡೆದಳಂತೆ.

ರಾಮ-ಸೀತೆಯರು ವನವಾಸದಲ್ಲೂ ದಾಂಪತ್ಯ ಸುಖ ಅನುಭವಿಸುತ್ತಿರುವುದನ್ನು ಕಂಡು ಲಕ್ಷ್ಮಣನು ಊರ್ಮಿಳೆಯ ವಿರಹದಿಂದ ಉದ್ರಿಕ್ತನಾಗಿ ಸುಂದರ ಅಟವಿಕ ತರುಣಿ ಶೂರ್ಪಣಖಿಗೆ ಲೈಂಗಿಕ ಕಿರುಕುಳ ಕೊಟ್ಟಾಗ ಅವಳು ವಿರೋಧಿಸಿದಳು ಎಂದು ಅವಳ ಮೂಗನ್ನೇ ಲಕ್ಷ್ಮಣ ಕತ್ತರಿಸಿದರೂ ಅದು ಧರ್ಮದ ಉದ್ಧಾರಕ್ಕೆ ಮಾಡಿದ್ದು ಎನ್ನಲಾಯಿತು.

ಪುರಾಣ ಕಾಲದಲ್ಲಿ ಗಂಡಸರು ಹೆಣ್ಣನ್ನು ಎಷ್ಟೇ ಶೋಷಿಸಿದರೂ ಅದು ಧರ್ಮದ ಉದ್ಧಾರ ಮತ್ತು ಲೋಕದ ಉದ್ಧಾರಕ್ಕೆ ಎಂದು ಪರಿಗಣಿಸಲಾಗುತ್ತಿತ್ತು. ಖಜೂರಾಹೊ ದೇವಸ್ಥಾನದ ಗೋಡೆಯಲ್ಲಿ ಸಂಭೋಗ ಶಿಲ್ಪಗಳನ್ನು ಕೆತ್ತಿದ್ದೂ ಜನರಲ್ಲಿ ಭಕ್ತಿ ಮತ್ತು ಏಕಾಗ್ರತೆ ಹೆಚ್ಚಿಸಿ ಧರ್ಮದ ಉದ್ಧಾರ ಮಾಡಲಂತೆ.

ಡಾ. ಅಂಬೇಡ್ಕರ್ ಅವರು ಬರೆದಂತೆ ಶ್ರೀರಾಮಚಂದ್ರ ದೇವರು ಸಹಾ ಗರ್ಭಿಣಿ ಪತ್ನಿ ಸೀತೆಯನ್ನು ಕಾಡಿಗಟ್ಟಿ ರಾಜ್ಯಭಾರವನ್ನು ಭರತನಿಗೆ ವಹಿಸಿಕೊಟ್ಟು ತಾನು ಹಲವು ಉಪಪತ್ನಿಯರೊಂದಿಗೆ ಮಜವಾಗಿ ಇದ್ದನಂತೆ! ಹಾಗಿರುವಾಗ ಆ ರಾಮನ ಹೆಸರಲ್ಲಿಯೇ ಮಠ ಸ್ಥಾಪಿಸಿ ರಾಮನು ಮಾಡಿದ್ದನ್ನೇ ಈ ಗೋಸ್ವಾಮಿಯೂ ಮಾಡದಿದ್ದರೆ ಶ್ರೀರಾಮಪೀಠದ ಸ್ವಾಮಿಯಾಗಿರುವುದಕ್ಕೆ ಈತ ಅಯೋಗ್ಯ ಎಂದಾಗುತ್ತಿರಲಿಲ್ಲವೇ?

ಹಾಗಾಗಿ ಈಗಲೂ ಪುರಾಣಕಾಲದ ನಿಯಮಗಳನ್ನೇ ಅನ್ವಯಿಸಿ ಗೋಸ್ವಾಮಿಯವರನ್ನು ಕಾನೂನಿನ ಸಂಕೋಲೆಯಿಂದ ಬಿಡುಗಡೆ ಮಾಡಬೇಕು. ಕಾರಣ ಇನ್ನೂ ಹತ್ತಾರು ಗೋಪಿನಂತಹ ತರುಣಿಯರು ಸ್ವಾಮಿಯಿಂದ ಉದ್ಧಾರವಾಗುವುದು ಬಾಕಿಯಿದೆ!

-ರವಿ ಬಿ ಶೇಣಾವ, ಮಂಗಳೂರು

ಕೊಂಕಣಿ ಬಾಂಧವರು ಇಂಥವರನ್ನು ದೂರವಿರಿಸಲಿ

ಕಳೆದ ಸಂಚಿಕೆಯಲ್ಲಿ ಗಂಗೊಳ್ಳಿ ಗಲಭೆಯ ಕುರಿತು ಬರೆಯುತ್ತಾ ನಹುಷರವರು ಗಂಗೊಳ್ಳಿಯಲ್ಲಿ ಎಲ್ಲೇ ಮತೀಯ ದೊಂಬಿಗಳಾದರೂ ಅಲ್ಲಿ ಕೊಂಕಣಿಯೊಬ್ಬನ ಕೈವಾಡ ಇದ್ದೇ ಇರುತ್ತದೆ ಎಂದು ಬರೆದಿದ್ದರು. ಆದರೆ ಇದು ಕೇವಲ ಗಂಗೊಳ್ಳಿಗಷ್ಟೇ ಸೀಮಿತವಲ್ಲ ಪೂರ್ತಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೇ ಅನ್ವಯಿಸುವ ಮಾತು. ಅಷ್ಟೇ ಯಾಕೆ ಮೊನ್ನೆ ಪತ್ರಿಕೆಯೇ ವರದಿ ಮಾಡಿದಂತೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ನಂದಿತಾ ಸಾವಿನ ಹೆಸರಲ್ಲಿ ಹಚ್ಚಲಾದ ಬೆಂಕಿಯ ಮುಖ್ಯ ರೂವಾರಿಗಳೂ ಇವರೇ ಎನ್ನುವುದು ಎಲ್ಲರಿಗೂ ಗೊತ್ತಿದ್ದದ್ದೇ.

ಟಿ.ಎಂ.ಎ.ಪೈ, ಯು.ಬಿ ಮಲ್ಯರಂತಹ ಧೀಮಂತ[...] ನಾಡಿಗೆ ಕೊಟ್ಟ ಈ ಸಮುದಾಯದಲ್ಲಿ ಕೋಮು[...] ಹರಡುವ ರಾಘವೇಂದ್ರ ಪೈನಂತಹ ಮನೆಹಾಳರೂ ಅ[...] ಸಂಖ್ಯೆಯಲ್ಲಿರುವರೆಂಬುದು ನಿಜಕ್ಕೂ ಬೇಸರದ ವಿ[...] ಅವಿಭಜಿತ ಜಿಲ್ಲೆಯಲ್ಲಿ ಇಡೀ ಸಂಘಪರಿವಾರದ ನೆಟ್‌ವ[...] ಇರುವುದೇ ಇವರ ಕೈಯಲ್ಲಿ, ಕಳೆದ ಚುನಾವಣೆ[...] ಬಹುಮುಖ್ಯ ಪಾತ್ರವಹಿಸಿದ್ದ 'ನಮೋ ಬ್ರಿಗೇಡ್'ನ ಮ[...] ಮೈಂಡ್ ಸಹ ಇವರುಗಳೇ. ಹಳ್ಳಿಹಳ್ಳಿಯಿಂದ ಹಿ[...] ಪಟ್ಟಣಗಳಲ್ಲಿ ಶಾಲಾ ಮಠಾರಗಳಲ್ಲಿ ಆರೆಸ್ಸೆಸ್‌ನ [...] ಬೀಸುತ್ತಾ ಇನ್ನಿತರ ಹುಡುಗರಿಗೆ ತರಬೇತು ಕೊಡುವ[...] ಇವರುಗಳೇ. ಬಿಸಿರಕ್ತದ ಅನ್ಯ ಹುಡುಗರಲ್ಲಿ ಕೋ[...] ವಿಷ ತುಂಬುತ್ತಾ ತೆರೆಮರೆಯಲ್ಲಿಯೇ ನಿಂತು ಹಬ್ಬಿಸು[...] ಕೋಮು ಗಲಭೆಯಲ್ಲಿ ತಾವೆಲ್ಲೂ ಕಾಣಿಸಿ ಕೊಳ್ಳದೆ[...] ಬಿಸಿಯಲ್ಲಿ ಮೈಕಾಯಿಸಿಕೊಳ್ಳುವ ಛಾತಿ ಇವರಿಗಿದೆ. ಇ[...] ಕಂಡೇ ಜಿಲ್ಲೆಯ ಹಿರಿಯ ರಾಜಕಾರಣಿ ಜನಾ[...] ಪೂಜಾರಿಯವರು ಒಮ್ಮೆ ಬಹಿರಂಗವಾಗಿಯೇ ಇಂಥವ[...] ಝಾಡಿಸಿದ್ದರು. "ಬಿಲ್ಲವ, ದಲಿತರಂತವರಲ್ಲಿ ಕೋ[...] ವಿಷ ತುಂಬಿ ಅವರನ್ನು ಅಡ್ಡ ಹಾದಿಗೆಳೆದು ಜ[...] ಪಾಲಾಗಿಸುವ ಇವರು ತಮ್ಮ ಮಕ್ಕಳನ್ನು ಮಾತ್ರ [...] ಸುತರಾಂ ದೂಡದೇ ಅಮೆರಿಕಾ ಆಸ್ಟ್ರೇಲಿಯಾದಲ್ಲಿ [...] ಶಿಕ್ಷಣಕ್ಕೆ ಕಳುಹಿಸುತ್ತಾರೆ" ಎಂದು ನೋವಿನಿಂ[...] ಹೇಳಿದ್ದರು.

ಸಿಐಡಿ ಐಜಿಪಿ ಬಿಪಿನ್ ಗೋಪಾಲಕೃಷ್ಣರ[...] ಸುದ್ದಿಗೋಷ್ಠಿಯಲ್ಲಿ "ನಂದಿತಾಳನ್ನು ಯಾರೂ ಅಪಹರಿ[...] ಅತ್ಯಾಚಾರವೂ ಆಗಿಲ್ಲ, ಡೆತ್ ನೋಟ್ ಸಹಾ ಅವಳ[...] ಎಂಬ ಕಹಿಸತ್ಯಗಳನ್ನು ಹೇಳಿಯಾಗಿದೆ. ಆದರೆ ಇ[...] ಗೊತ್ತಿದ್ದು ತಮ್ಮ ಸ್ವಾರ್ಥಕ್ಕಾಗಿ ಗಲಭೆ ಹಬ್ಬಿಸಿ ಕೋಟ್ಯಾ[...] ಆಸ್ತಿಪಾಸ್ತಿ ಹಾನಿಗೆ ಕಾರಣರಾದರಲ್ಲ ಅವರಿಗೆಲ್ಲ [...] ಇಲ್ಲವೇ? ಜಿಲ್ಲೆಯಲ್ಲಿ ಸಾಬರನ್ನು ಮತ್ತು ಕ್ರಿಶ್ಚಿಯನ್ನ[...] ಟಾರ್ಗೆಟ್ ಮಾಡಿ ಕೆಳಜಾತಿಯವರನ್ನು ಅವರ ವ[...] ಛೂಬಿಟ್ಟು ಆನಂದಿಸುವ ಈ ಮಂದಿ ಗೋವಾ[...] ಕನ್ನಡ ಕರಾವಳಿಗೆ ಕಾಲಿಡುವ ಮುನ್ನವೇ ಆ ಸಾ[...] ಹಾಗು ಕ್ರಿಶ್ಚಿಯನ್ನರು ಇದೇ ಜಿಲ್ಲೆಯ ಮಣ್ಣಿನಲ್ಲಿ ಒಂ[...] ಬೆರೆತಿದ್ದರೆಂಬ ವಾಸ್ತವ ತಿಳಿದಿರಲಿ.

ತಮ್ಮ ಮೂಲಸ್ಥಾನ ಗೋವಾದಲ್ಲಿ ಪ್ರತಿ ವರ್ಷ [...] ಕರ್ನಾಟಕದ ಪಾಪದ ಕನ್ನಡಿಗರ ಮನೆಯನ್ನು [...] ಸೌಂದರ್ಯದ ಹೆಸರಲ್ಲಿ ಅವಮಾನುಷವಾಗಿ [...] ಒಕ್ಕಲೆಬ್ಬಿಸುವುದರಲ್ಲೇ ಅಲ್ಲಿನವರು ಖುಷಿಪಟ್ಟರೆ, [...] ತೆರೆಮರೆಯಲ್ಲಿ ನಿಂತು ಕೆಳವರ್ಗದ ಜನರಲ್ಲಿ ಕೋ[...] ವಿಷ ಹಬ್ಬಿಸುತ್ತಾ, ಅದಕ್ಕೆ ಫೈನಾನ್ಸ್ ಮಾಡುತ್ತಾ, [...] ಸೌಹಾರ್ದದ ವಾತಾವರಣಕ್ಕೆ ಕಲ್ಲು ಹಾಕುವುದ[...] ಖುಷಿಪಡುವ ರಾಘವೇಂದ್ರ ಪೈಯಂತಹ ಉಂಡ ಮ[...]ಗಳ ಎಣಿಸುವವರ ಪಡೆಯ ಕಾಟ. ಇಂಥವರಿಂದ [...] ಮುಕ್ತಿಯೆಂದು?

-ಅವಿನಾಶ್, ನೆಲ್ಲಿ[...]

ಕಳೆದ ವಾರ 'ರಾಮಾಯಣದಲ್ಲಿ ರಾಮನಿಗೆ ಹಲ[...] ಹೆಂಡತಿಯರಿದ್ದರು, ಅವನೊಬ್ಬ ಕುಡುಕನಾಗಿದ್ದ' ಎ[...] ಪತ್ರಿಕೆಯಲ್ಲಿ ಪ್ರಕಟಿಸಿದ್ದೀರಿ. ಆದರ ಬಗ್ಗೆ ನಿ[...] ಆಧಾರವಿದೆಯೇ? ಇಂಥ ಲೇಖನಗಳಿಂದ ಒಂದು ಧ[...] ಧಾರ್ಮಿಕ ಭಾವನೆಗಳಿಗೆ ನೋವು ಉಂಟಾಗುವುದಿ[...] ಅದೇ ರೀತಿ ಬೇರೆ ಧರ್ಮದ ಬಗ್ಗೆ ನಿಮಗೆ ಬರೆ[...] ಸಾಧ್ಯವಿದೆಯೇ? ಈ ನನ್ನ ಅಭಿಪ್ರಾಯವನ್ನು ಪತ್ರಿಕೆಯಲ್ಲಿ ಪ್ರಕಟಿಸುವಿರಾ????


-ಅನುರಾಗ್ ಎಮ್

(ಅನುರಾಗ್ ಅವರಿಗೊಂದು ಸಲಹೆ: ಇಂಟರ್‌ನೆಟ್‌ನಲ್ಲಿ ಈ ಲಿಂಕ್ ಅನ್ನು ಓದಿ <ht[...] fateh.sikhnet.com//sikhn[...] discussion.nsf/ca32680024ff68[...] 7256a08007e86d8/daf9fa 36ea[...] 5ea87256afc0072869c!O[...] Document>. `riddles of rama [...] Krishna by B.R.Ambedkar' ಎ[...] ಹುಡುಕಿದರೂ ಇದು ತಮಗೆ ಸಿಗುತ್ತದೆ.)

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗ[...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು[...] ಪ್ರತಿಕ್ರಿಯೆಗಳನ್ನು 9980331427 ನಂಬರ[...] ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬ[...]

ಕಲರ್ ಬಂದು ಸಿನಿಮಾಗಳನ್ನು ಸರ್ವನಾಶ ಮಾಡಿದೆ: ಶಾ

ಭಾರತ ಕಂಡ ಅಪರೂಪದ ನಟರಲ್ಲಿ ಒಬ್ಬರಾದ ನಾಸೀರುದ್ದೀನ್ ಶಾ ತಮ್ಮ ಚಿತ್ರರಂಗದ ಬದುಕು, ಅನುಭವ ಇತ್ಯಾದಿಗಳ ಕುರಿತಾಗಿ ಇತ್ತೀಚೆಗಷ್ಟೇ ಹಂಚಿಕೊಂಡಿದ್ದ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ...



ಪ್ರಶ್ನೆ: ಸಮಕಾಲೀನ ಭಾರತೀಯ ರಂಗಭೂಮಿಯ ಬಗ್ಗೆ ಬರೆಯುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಾಸೀರುದ್ದೀನ್ ಶಾ: ರಂಗಭೂಮಿ ಮಾತ್ರವಲ್ಲ, ಒಟ್ಟು ನಟನೆಯ ಬಗ್ಗೆಯೇ ನನಗೆ ಒಂದಿಷ್ಟು ಬರೆಯಬೇಕೆನ್ನಿಸುತ್ತಿದೆ. ಯಾಕೆಂದರೆ, ನಮ್ಮ ದೇಶದಲ್ಲಿ ಅಭಿನಯವನ್ನು ಹೇಳಿಕೊಡುವ ಇನ್‌ಸ್ಟಿಟ್ಯೂಟ್‌ಗಳು ಇವತ್ತು ತೀರಾ ಅಸ್ತವ್ಯಸ್ತ ಸ್ಥಿತಿ ತಲುಪಿವೆ. ಅಭಿನಯ ಕುರಿತು ಪಾಠ ಮಾಡುವಲ್ಲಿ ಎಡವಟ್ಟು ಆಗುತ್ತಿದೆ. ಇದು ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆ. ಇಷ್ಟಕ್ಕೂ ಒಬ್ಬ ನಟನ ಪಾಲಿಗೆ ಈ ಜಗತ್ತಿನಲ್ಲಿ ಸೋತು ಬದುಕುವುದಕ್ಕಿಂತ ಮಿಗಿಲಾದ ಶೋಚನೀಯತೆ ಬೇರೊಂದಿಲ್ಲ.

ಪ್ರಶ್ನೆ: 'ಸೋಲು' - ಇದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಶಾ: ನನ್ನ ಪ್ರಕಾರ ಸೋಲು ಎಂದರೆ ಖಾಲಿ ಕೂರುವುದು. ಯಾವೊಬ್ಬ ವ್ಯಕ್ತಿ ಏನೂ ಮಾಡದೆ ಖಾಲಿ ಕೂತಿರುತ್ತಾನೋ ಆತನಿಗೆ ತಾನು ಮಾಡಬೇಕಿದ್ದ ಕೆಲಸದಲ್ಲಿ ಸಾಕಷ್ಟು ಅನುಭವದ ಕೊರತೆ ಇರುತ್ತದೆ ಅಂತ ಅರ್ಥ. ಯಾರು ತನ್ನ ಕೆಲಸದಲ್ಲಿ ಪಕ್ಕಾ ನಿಪುಣನಾಗಿರುತ್ತಾನೋ ಆತ ಯಾವಾಗಲೂ ಬ್ಯುಸಿಯಾಗಿರುತ್ತಾನೆ. ಇವತ್ತು ಎಷ್ಟೋ ನಟರಿಗೆ ನೆಟ್ಟಗೆ ನಟನೆಯೇ ಗೊತ್ತಿರುವುದಿಲ್ಲ. ನಟನೆ ಎಂಬುದು ಅನಿರೀಕ್ಷಿತವಾಗಿ ಸಿದ್ಧಿಸಿದ ಕಲೆಯೋ, ದೇವರು ಕೊಟ್ಟ ವರವೋ ಅಂತ ತಿಳಿದಿರುತ್ತಾರೆ. ನಟನೆ ಅನ್ನೋದು ಒಂದು ಮರಗೆಲಸದಂತೆ ಅಥವಾ ಒಂದು ಶಿಲ್ಪಕಲೆಯಂತೆ ಅಥವಾ ಚಿತ್ರಕಲೆಯಂತೆ ಅನ್ನೋದು ಅವರಿಗೆ ಗೊತ್ತಿರುವುದಿಲ್ಲ. ಹಾಗೆಯೇ ಆ ಕಲೆಯನ್ನು ರೂಢಿಸಿಕೊಳ್ಳಲು ಸಾಕಷ್ಟು ಶ್ರದ್ಧೆ, ಪರಿಶ್ರಮ, ಕಲಿಕೆಯ ಅಗತ್ಯವಿರುವುದರ ಬಗ್ಗೆಯೂ ಅವರು ತಿಳಿದಿರುವುದಿಲ್ಲ. ಒಬ್ಬ ನಟನಾದವನು ಕೇವಲ ಅಳುವುದರಿಂದಲೋ ಅಥವಾ ನಗುವುದರಿಂದಲೋ ತಾನೊಬ್ಬ ಶ್ರೇಷ್ಠ ನಟ ಅಂತ ಪ್ರೂವ್ ಮಾಡಲು ಹೊರಡಬಾರದು. ಈ ದೇಶದಲ್ಲಿ ಅಳುವುದೇ ಅದ್ಭುತ ನಟನೆ ಎಂಬ ನಂಬಿಕೆ ಇದೆ.

ಪ್ರಶ್ನೆ: ನೀವು ಸತ್ಯದೇವ್ ದುಬೆ ತರಹದವರೊಂದಿಗೆ ಕೆಲಸ ಮಾಡಿದ್ದೀರಿ. ಹಾಗೆಯೇ ಜೆರ್ಝಿ ಗ್ರೊತೊವ್‌ಸ್ಕಿಯವರನ್ನು ಭೇಟಿ ಮಾಡಲು ಪೋಲೆಂಡ್‌ಗೂ ಹೋಗಿ ಬಂದಿದ್ದೀರಿ. ಜೊತೆಗೆ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಸಾಕಷ್ಟು ಕಲಿತಿದ್ದೀರಿ –ಈ ಬಗ್ಗೆ ಏನು ಹೇಳುತ್ತೀರಿ?

ಶಾ: ನಟನೆ ಅನ್ನೋದು ನಟನಿಂದ ನಟನಿಗೆ ಭಿನ್ನವಾದದ್ದು. ಅದು ಆಯಾಯ ನಟನ ಗ್ರಹಿಕೆ, ಕಲಿಕೆಗಳ ಮೇಲೆ ನಿಂತಿರುತ್ತದೆ. ಒಬ್ಬ ನಟ ಹಿಂದಿ ಸಿನಿಮಾದತ್ತ ತನ್ನ ಮನಸನ್ನು ಕೇಂದ್ರೀಕರಿಸಿದಾಗ ಆತನ ನಟನೆ ಒಂದು ಬಗೆಯಲ್ಲಿರುತ್ತದೆ. ಅದೇ ಒಬ್ಬ ನಟ ತನ್ನ ಗಮನವನ್ನು ರಂಗಭೂಮಿಯತ್ತ ಹರಿಸಿದ್ದಾಗ ಆತನ ನಟನೆ ಬೇರೆಯದೇ ಬಗೆಯಲ್ಲಿ ಇರುತ್ತದೆ. ಅದೇ ರೀತಿ ಇನ್ನೂ ಬೇರೆ ಬೇರೆ ಬಗೆಯಲ್ಲಿ ಅಂದರೆ ಫೋಕ್ ಥಿಯೇಟರ್ ಮುಂತಾದ ಕಡೆಗೆ ಗಮನ ಕೊಟ್ಟಾಗ ಯಾವೊಬ್ಬ ಪರ್ಟಿಕ್ಯುಲರ್ ನಟ ಇನ್ನೂ ಬೇರೆಯದೇ ರೀತಿಯ ನಟನಾಗುತ್ತಾನೆ. ಎಲ್ಲವೂ ಅವರವರ ಗ್ರಹಿಕೆ, ಕಲಿಕೆಯ ಮೇಲೆ ನಿಂತಿರುತ್ತದೆ ಅಂತ ನಾನು ಹೇಳಿದ್ದು ಇದಕ್ಕೇ. ನಾನು ಅಭಿನಯಿಸುವುದನ್ನು ನಾನೇ ಕಲಿತುಕೊಂಡೆ ಅಂತೇನೂ ಹೇಳುವುದಿಲ್ಲ. ಹಾಗೆ ನೋಡಿದರೆ ಪ್ರಸಿದ್ಧ ರಂಗಕರ್ಮಿ ಇಬ್ರಾಹಿಂ ಅಲ್ಕಾಜಿಯವರ ಪ್ರಭಾವ ನನ್ನ ಮೇಲೆ ಗಾಢವಾಗಿ ಉಳಿಸಿದೆ. ಅಲ್ಕಾಜಿಗೂ ಮೊದಲು ನೈನಿತಾಲಿನಲ್ಲಿನ ನನ್ನ ಸ್ಕೂಲ್ ಮಾಸ್ಟರ್ ಮತ್ತು ಆಲಿಘರ್ ಮುಸ್ಲಿಂ ಯೂನಿವರ್ಸಿಟಿಯಲ್ಲಿ ನನಗೆ ಪಾಠ ಮಾಡುತ್ತಿದ್ದ ಪ್ರೊಫೆಸರ್... ಮುಂತಾದವರು ನನಗೆ ಗೈಡ್ ಮಾಡಿದ್ದಾರೆ. ಅಲ್ಕಾಜಿಯವರಿಂದ ನನ್ನ ನಟನೆಯ ಮೇಲೆ ಅಷ್ಟೇನೂ ಪ್ರಭಾವ ಇಲ್ಲದೆ ಇರಬಹುದು. ಆದರೆ ಒಬ್ಬ ನಟನಿಗೆ ಇರಬೇಕಾದ ಶಿಸ್ತಿನ ಮಹತ್ವ ಮತ್ತು ಒಬ್ಬ ನಟನಾದವನು ನಿರ್ದೇಶಕ ಹೇಳಿದ್ದನ್ನಷ್ಟೇ ದೂಸರಾ ಮಾತಾಡದೆ ಮಾಡಬೇಕು ಅನ್ನೋದನ್ನು ಹೇಳಿಕೊಟ್ಟಿದ್ದಾರೆ. ಯಾಕೆ? ಎಂತಕ್ಕೆ? ಅಂತೆಲ್ಲ ಕೇಳಬಾರದು ಅನ್ನೋದನ್ನು ಅವರಿಂದ ತಿಳಿದುಕೊಂಡೆ. ಇದಿಷ್ಟು ಅಲ್ಕಾಜಿ ಸಾಬ್ ನನಗೆ ಹೇಳಿಕೊಟ್ಟಿದ್ದು. ಕಲಿಯುವುದರಲ್ಲಿ ನನಗೆ ಎಲ್ಲಿಲ್ಲದ ಆಸಕ್ತಿ, ಯಾರು ಏನೇ ಕಲಿಸಿದರೂ ನನಗೆ ಕಲಿಯುವ ಹಂಬಲ. ಅಂತವರಿಗೆ ನನ್ನ ಕಡೆಯಿಂದ ಕ್ರೆಡಿಟ್ ಇದ್ದೇ ಇರುತ್ತದೆ.

ಪ್ರಶ್ನೆ: ಪ್ರತಿಯೊಬ್ಬ ನಟ ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕಾದ ಯಾವುದಾದರೂ ಒಂದು ಮುಖ್ಯ ತಂತ್ರವೇನಾದರೂ ಇದೆಯೇ?

ಶಾ: ರಂಗಭೂಮಿ, ಕಿರುತೆರೆ, ಹಿರಿತೆರೆ ನಡುವೆ ಅಂತಹ ವ್ಯತ್ಯಾಸಗಳೇನೂ ಇಲ್ಲ. ರಂಗದ ಮೇಲೆ ನಟಿಸುವಾಗ ನಿಮ್ಮ ನಟನೆ ತೀರಾ ವಿಸ್ತೃತವಾಗಿರಬೇಕು ಅನ್ನೋದು ತಪ್ಪು. ರಂಗಭೂಮಿಯಾದರೂ, ಸಿನಿಮಾ ಆದರೂ ಒಳ್ಳೆಯ ಅಭಿನಯ ಒಳ್ಳೆಯದೇ ಆಗಿರುತ್ತದೆ. ಒಬ್ಬ ನಟ ನಿಜಕ್ಕೂ ಚೆನ್ನಾಗಿ ನಟಿಸುತ್ತಿರುವಾಗ ಖಂಡಿತವಾಗಿ ಅವನ ಮೇಲೆ ಪ್ರೇಕ್ಷಕನ ಕಣ್ಣು ನೆಟ್ಟಿರುತ್ತದೆ. ಅದಕ್ಕೆ ಕ್ಲೋಸ್ ಅಪ್ ಶಾಟ್ಸ್ ಬೇಕೆಂದೇನೂ ಇಲ್ಲ, ಇಷ್ಟಕ್ಕೂ ಜಗತ್ತಿನ ಎಲ್ಲಾ ಅದ್ಭುತ ನಟರೂ ರಂಗಭೂಮಿಯಿಂದಲೇ ಬಂದವರು ಅನ್ನೋದನ್ನು ಮರೆಯಬಾರದು.

ಪ್ರಶ್ನೆ: ನೀವು ಯಾವುದಾದರೂ ನಾಟಕದಲ್ಲಿ ನಟಿಸುತ್ತಿರುವಾಗ ಪ್ರೇಕ್ಷಕರೊಬ್ಬರ ಮೊಬೈಲ್ ಫೋನ್ ರಿಂಗಾಗಲು ಶುರುವಾದರೆ ಏನು ಮಾಡುತ್ತೀರಿ? ಫೋನ್ ಸ್ವಿಚ್ ಆಫ್ ಮಾಡಲು ಹೇಳುತ್ತೀರಾ?

ಶಾ: ಹೌದು, ಹಾಗೇ ಹೇಳುತ್ತೇನೆ, ಆದರೆ ಕೋಪದಿಂದಲ್ಲ, ಪ್ರೇಕ್ಷಕರು ನಿಜಕ್ಕೂ ನಿಮ್ಮನ್ನು ಬಹಳ ಪ್ರೀತಿಸುತ್ತಿರುತ್ತಾರೆ. ನೀವು ಅವರನ್ನು ಸರಿಯಾಗಿ ನಿಭಾಯಿಸದೇ ಹೋದ ಪಕ್ಷದಲ್ಲಿ ಕಷ್ಟವಾಗುತ್ತದೆ. ಆದ್ದರಿಂದ ಅವರನ್ನು ತಾಳ್ಮೆಯಿಂದ ಸಂಭಾಳಿಸಬೇಕು. ಹಾಗೊಂದು ವೇಳೆ ಫೋನ್ ರಿಂಗ್ ಆದರೆ, ರಿಂಗ್ ಆಗುತ್ತಲೇ ಇದ್ದರೆ ನಾನು ತಕ್ಷಣ ಜಾಕೀರ್ ಹುಸೇನ್ ತಂತ್ರದ ಮೊರೆ ಹೋಗುತ್ತೇನೆ. ಆ ತಂತ್ರ ಏನೆಂದರೆ ಹೀಗೆ ಒಮ್ಮೆ ಜಾಕೀರ್ ಹುಸೇನ್ ತುಂಬಿದ ಥಿಯೇಟರಿನಲ್ಲಿ ಅಭಿನಯದಲ್ಲಿ ನಿರತರಾಗಿದ್ದಾಗ ಫೋನ್ ರಿಂಗ್ ಆಗಲು ಶುರು ಮಾಡಿತಂತೆ. ಆಗ ಜಾಕೀರ್ ಹುಸೇನ್ "ಆ ಫೋನ್ ಕಾಲ್ ನನ್ನದಾಗಿದ್ದರೆ ನಾನು ಬ್ಯುಸಿ ಇದ್ದೇನೆ ಅಂತ ಹೇಳಿಬಿಡಿ!" ಅಂದರಂತೆ. ಇದು ನಿಜಕ್ಕೂ ಜಾಣತನ. ನಾನು ನಟಿಸುವಾಗ ಹೀಗೆ ಯಾರದಾದರೂ ಫೋನ್ ರಿಂಗ್ ಆದರೆ ನಾನೂ ಇದೇ ಡೈಲಾಗ್ ಹೊಡೆದುಬಿಡುತ್ತೇನೆ. ಜನ ಹೋ ಅಂತ ನಕ್ಕು, ಚಪ್ಪಾಳೆ ಹೊಡೆಯುತ್ತಾರೆ. ಆದ್ದರಿಂದ ಒಂದು ವೇಳೆ "ಗೆಟ್ ಔಟ್!" ಅಂದುಬಿಟ್ಟರೆ ನಟನೂ ಒಳಗೊಂಡಂತೆ ಅಲ್ಲಿರುವ ಎಲ್ಲರ ಮನಸ್ಸಿನ ಮೇಲೂ ಪ್ರತಿಕೂಲ ಉಂಟುಮಾಡುತ್ತದೆ ಅನ್ನುವ ಪ್ರಜ್ಞೆ ಇರಬೇಕು.

ಪ್ರಶ್ನೆ: ಒಬ್ಬ ನಟನಿಗೆ ಇದೆಲ್ಲ ಅನಿವಾರ್ಯವೇ?

ಶಾ: ಖಂಡಿತ. ಇಂತಹ ವಿಷಯಗಳಲ್ಲಿ ಹೇಗೆ ನಿಭಾಯಿಸಬೇಕೆಂದು ಕಲಿತುಕೊಳ್ಳಬೇಕು. ಈಗಲಾದರೂ ಪರವಾಗಿಲ್ಲ, ಹಿಂದೆಲ್ಲಾ ರಂಗಭೂಮಿಯ ನಟರು ರಂಗದ ಮೇಲೆ ನಟಿಸುವಾಗ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಬೇಕಿತ್ತು, ಪ್ರೇಕ್ಷಕರು ಗುಸುಗುಸು ಅಂತ ಮಾತಾಡಿಕೊಳ್ಳುವುದು, ಚಿಪ್ಸ್ ಇತ್ಯಾದಿಗಳಿರುವ ಪ್ಲಾಸ್ಟಿಕ್ ಪಾಕೆಟ್‌ಗಳ ಸದ್ದು ಹೊರಡಿಸುವುದು... ಇತ್ಯಾದಿಗಳನ್ನು ಮಾಡುತ್ತಿದ್ದದ್ದೂ ಉಂಟು. ಹಾಗೆಯೇ ಪ್ರೇಕ್ಷಕರನ್ನು ನಟನೊಬ್ಬ ತನ್ನ ಖಾಸಗಿ ಬದುಕಿನೊಳಕ್ಕೆ ಬಿಟ್ಟುಕೊಳ್ಳದ ಹಾಗೆ ಜಾಗ್ರತೆ ವಹಿಸುವುದೂ ಅಗತ್ಯ. ಆ ಕಾರಣದಿಂದ ನಾಟಕ ಮುಗಿದಕೂಡಲೇ ನಾನು ಪ್ರೇಕ್ಷಕರೊಂದಿಗೆ ಹೆಚ್ಚು ಮಾತಾಡದೆ ತಕ್ಷಣ ಅಲ್ಲಿಂದ ಹೊರಟುಬಿಡುತ್ತೇನೆ. ಜನರೊಂದಿಗೆ ಬೆರೆಯುವುದರಲ್ಲಿ ನನಗೆ ಅಷ್ಟೇನೂ ಆಸಕ್ತಿ ಇಲ್ಲ. ನನಗೆ ಇನ್ನೂ ಅರ್ಥವಾಗದ ಒಂದೇ ಒಂದು ಸಂಗತಿಯೆಂದರೆ ನಾನು ಕೇವಲ ಪಾತ್ರವಾಗಿ ರಂಗದ ಮೇಲೆ ನಟಿಸುತ್ತೇನೆ, ಅದಕ್ಕಾಗಿ ಜನ ನನ್ನ ಆಟೋಗ್ರಾಫ್, ಫೋಟೋಗ್ರಾಫ್ ಕೇಳುವುದು. ಆ ಪಾತ್ರ ನಾನಂತೂ ಅಲ್ಲ, ನಾನು ನಟ ಮಾತ್ರ ಅನ್ನೋದು ಅವರಿಗೇಕೆ ಅರ್ಥವಾಗುವುದಿಲ್ಲ?

ಪ್ರಶ್ನೆ: ನೀವೊಬ್ಬ ಅಂತರ್ಮುಖಿ ಅಂತ ನಿಮಗೇ ಯಾವತ್ತಾದರೂ ಅನ್ನಿಸಿದ್ದುಂಟೇ? ಹಾಗೆಯೇ ನೀವು ಇಂಡಸ್ಟ್ರಿಯಲ್ಲಿ ಯಾರೊಂದಿಗೂ ಹೆಚ್ಚು ಬೆರೆಯುವುದಿಲ್ಲವಂತೆ, ಹೌದೇ?

ಶಾ: ನನ್ನ ಬಗ್ಗೆ ಯಾರೊಬ್ಬರ ಮುಂದೆಯೂ ನಾನು ವಿವರಿಸಬೇಕಾದ ಅಗತ್ಯವಿಲ್ಲ. ನಾನು ಹೆಚ್ಚಾಗಿ ಸಂದರ್ಶನಗಳನ್ನು ಕೊಡುವುದಿಲ್ಲ, ಯಾವತ್ತಿಗೂ ಸಿನಿಮಾ ಪಾರ್ಟಿಗಳಿಗೂ ಹೋಗುವುದಿಲ್ಲ.

ಪ್ರಶ್ನೆ: ಸ್ನೇಹಿತರ ಪಾರ್ಟಿ ಆಗಿದ್ದರೆ?

ಶಾ: ಚಿತ್ರರಂಗದಲ್ಲಿ ನನಗೆ ಯಾವೊಬ್ಬ ಸ್ನೇಹಿತನೂ ಇಲ್ಲ, ನನಗೆ ಸ್ನೇಹಿತರು ಅಂತೇನಾದರೂ ಇದ್ದರೆ ಅದು ಚಿತ್ರರಂಗದಾಚೆ ಮಾತ್ರ. ಆ ಪೈಕಿ ಕೆಲವು ವಕೀಲರು, ಶಿಕ್ಷಕರು ಮತ್ತು ವಾಸ್ತುಶಿಲ್ಪಿಗಳು ಪ್ರಮುಖರು.

ಪ್ರಶ್ನೆ: ನಿಮ್ಮೊಟ್ಟಿಗೆ ಕೆಲಸ ಮಾಡುವ ಚಿತ್ರರಂಗದ ಮಂದಿಯ ಜೊತೆಗಿನ ನಿಮ್ಮ ಸಂಬಂಧ ಎಂಥಾದು?

ಶಾ: ಕೆಲಸಕ್ಕಷ್ಟೇ ಸೀಮಿತವಾಗಿರುತ್ತದೆ. ನನ್ನ ಖಾಸಗಿ ಬದುಕು, ನನ್ನ ಸ್ವಂತದ ಆಲೋಚನೆಗೆ ಯಾರನ್ನೂ ಬಿಟ್ಟುಕೊಳ್ಳುವುದಿಲ್ಲ, ಚಿತ್ರರಂಗದ ಮೇಲೆ ನಾನೆಂದೂ ಅವಲಂಬಿತನಲ್ಲ, ನಾನು ಚಿತ್ರರಂಗಕ್ಕೆ ಬದ್ಧನಾಗಿ ಇರಬೇಕೆಂದೇನೂ ಇಲ್ಲ, ನಾನೇನೂ ಚಿತ್ರರಂಗದಲ್ಲಿ ನನ್ನ ವೃತ್ತಿ ಆರಂಭಿಸಿದವನಲ್ಲ, ಚಿತ್ರರಂಗದ ಮಂದಿಗೆ ತಮ್ಮ ಸರಕನ್ನು ಮಾರಾಟ ಮಾಡಲು ಒಬ್ಬ ನಟ ಬೇಕಿತ್ತು, ಅದಕ್ಕಾಗಿ ನನ್ನನ್ನು ಹುಡುಕಿಕೊಂಡು ಬಂದರಷ್ಟೇ.

ಪ್ರಶ್ನೆ: ಆದರೆ ನೀವು ಮಾಡಿದ ಪಾತ್ರಗಳನ್ನು ಬೇರಾರೂ ಮಾಡಲು ಸಾಧ್ಯವಿಲ್ಲ...

ಶಾ: ಹಾಗೇನೂ ಇಲ್ಲ, ಇತರ ಅನೇಕ ನಟರಿದ್ದಾರೆ. ಅವರು ನನಗಿಂತ ದುಬಾರಿ. ಹಾಗಾಗಿ ನಾನು ಪ್ರತಿ ವರ್ಷ ಒಂದು ದೊಡ್ಡ ಬಜೆಟ್ಟಿನ ಸಿನಿಮಾ ಮಾಡುತ್ತೇನೆ. ಯಾಕೆ ಗೊತ್ತಾ? ನನ್ನ ಬ್ಯಾಂಕ್ ಬ್ಯಾಲೆನ್ಸ್ ಮೇಂಟೇನ್ ಮಾಡುವ ಸಲುವಾಗಿ! ಆದರೆ ನಾನ್ಯಾವತ್ತೂ ಚಿತ್ರರಂಗದ ಜೊತೆ ಬೆರೆಯೋದಿಲ್ಲ, ಯಾವತ್ತಿಗೂ ಬೆರೆಯೋದಿಲ್ಲ, ನೈತಿಕ ರಾಜಕೀಯದ ಬಗ್ಗೆ ಮಾತನಾಡುವವರು ನನಗೆ ಬೋರ್ ಹೊಡೆಸುತ್ತಾರೆ. ಅವರಿಗಿಂತ ಅನೈತಿಕ ರಾಜಕೀಯದ ಬಗ್ಗೆ ಮಾತನಾಡುವವರು ನನಗಿಷ್ಟ.

ಪ್ರಶ್ನೆ: ಶ್ಯಾಮ್ ಬೆನಗಲ್ ಅವರ ಮನೆಗೆ ಹೋಗಿದ್ದರ ಬಗ್ಗೆ, ಎಪ್ಪತ್ತರ ದಶಕದಲ್ಲಿ ಅವರು ನಿಮ್ಮ ಕೈ ಹಿಡಿದಿದ್ದರ ಬಗ್ಗೆ, ಆ ಮೂಲಕ ನಿಮ್ಮ ಬದುಕಿಗೊಂದು ತಿರುವು ಸಿಕ್ಕಿದ್ದರ ಬಗ್ಗೆ ನಿಮಗೆ ಅಚ್ಚರಿ ಅನ್ನಿಸಿದೆಯೇ?

ಶಾ: ಶ್ಯಾಮ್ ಬೆನಗಲ್ ನನ್ನ ಕೈಹಿಡಿದರು ಅಂತ ನಾನು ನಂಬುವುದಿಲ್ಲ, ನಾನು ಪುಣೆಯ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿದ್ದಾಗ ಶ್ಯಾಮ್ ಬೆನಗಲ್ ನಿರ್ದೇಶನದ 'ಅಂಕುರ್' ಸಿನಿಮಾ ನೋಡಿದ್ದೆ, ಮುಂದೊಮ್ಮೆ ಅಂಥದೊಂದು ಸಿನಿಮಾದಲ್ಲಿ ನಾನೂ ಕೆಲಸ ಮಾಡಬೇಕು ಅಂತ ಆಸೆ ಪಟ್ಟಿದ್ದೆ, ಆ ಚಿತ್ರದಲ್ಲಿರುವ ಒಬ್ಬ ವ್ಯಕ್ತಿ ತುಸು ನನ್ನನ್ನೇ ಹೋಲುತ್ತಿದ್ದ, ಮುಂದೊಮ್ಮೆ ಶ್ಯಾಮ್ ಬೆನಗಲ್ ನನ್ನನ್ನು ತಮ್ಮ ಚಿತ್ರದ ಪಾತ್ರಕ್ಕೆ ಹಾಕಿಕೊಳ್ಳಬಹುದು ಅಂತ ನನಗೆ ನಾನೇ ಅಂದುಕೊಂಡಿದ್ದೆ, ಗಿರೀಶ್ ಕಾರ್ನಾಡ್ ನನ್ನನ್ನು ಶ್ಯಾಮ್ ಬೆನಗಲ್ ಅವರಿಗೆ ಪರಿಚಯಿಸಬಹುದೆಂದು ಭಾವಿಸಿದ್ದೆ. ಆದರೆ ಆತ ಪರಿಚಯಿಸಲಿಲ್ಲ, ನಾನೇ ಖುದ್ದಾಗಿ ಶ್ಯಾಮ್ ಬೆನಗಲ್ ಮನೆಗೆ ಹೋದೆ. ಅವರ 'ನಿಶಾಂತ್' ಚಿತ್ರದಲ್ಲಿ ನಟಿಸಿದೆ. ಶ್ಯಾಮ್ ಬೆನಗಲ್ ನನಗೆ ಅವಕಾಶ ಕೊಟ್ಟು ಕೈ ಹಿಡಿಯಲಿಲ್ಲ, ಬದಲಿಗೆ ಅವರ 'ನಿಶಾಂತ್' ಚಿತ್ರಕ್ಕಾಗಿ ನನ್ನ ತರಹದ ಒಬ್ಬ ನಟ ಬೇಕಿದ್ದ. ಅವರಿಂದ ನನ್ನ ವೃತ್ತಿಜೀವನ ಆರಂಭವಾಗಿರಬಹುದು. ಆದರೆ ಅವರೇ ನನ್ನ ವೃತ್ತಿ ಬದುಕಿಗೆ ತಿರುವು ಕೊಟ್ಟವರು ಅನ್ನೋ ಮಾತನ್ನು ನಾನು ಒಪ್ಪುವುದಿಲ್ಲ, ಹಾಗೆಯೇ ನಾನು ನಟಿಸಿದ್ದ ಆ ಪಾತ್ರಕ್ಕಾಗಿ ಶ್ಯಾಮ್ ಬೆನಗಲ್ ಅನೇಕ ನಟರನ್ನು ನೋಡಿದ್ದರು. ನಾನೂ ಮುಂದೊಮ್ಮೆ ಅವರಲ್ಲಿ ಅನೇಕರನ್ನು ಭೇಟಿಯಾದೆ. ಅವರೆಲ್ಲಾ ಆ ಪಾತ್ರಕ್ಕೆ ಆಯ್ಕೆಯಾಗದೇ ಉಳಿಯಲು ಕಾರಣ ಅವರೆಲ್ಲ ನೋಡಲು ತುಂಬಾ ಚೆನ್ನಾಗಿದ್ದದ್ದು! ಇಷ್ಟಕ್ಕೂ 'ನಿಶಾಂತ್' ನಂತರ ನನಗೆ ಅವಕಾಶಗಳು ಬರುತ್ತವೆ ಅಂತ ನಾನೇನೂ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ, ಯಾಕೆಂದರೆ ಆ ಚಿತ್ರದಲ್ಲಿ ನಾನು ಪಾತ್ರವಾಗಿ ಕಾಣುತ್ತಿರಲಿಲ್ಲ, ಹಾಗೆಯೇ ಆಯಿತು. 'ನಿಶಾಂತ್' ಬಿಡುಗಡೆಯಾದ ಮೇಲೆ ಒಂದು ವರ್ಷ ಕೆಲಸವಿಲ್ಲದೆ ಖಾಲಿ ಕೂತೆ. ಆಮೇಲೆ ದುಬೆಯವರ ಭಯಾನಕ ನಾಟಕವೊಂದರಲ್ಲಿ ನಟಿಸಿದೆ. ಅನಂತರ ಶ್ಯಾಮ್ ಬೆನಗಲ್ ಅವರ 'ಮಂಥನ್' ಚಿತ್ರದಲ್ಲಿ ಪಾತ್ರ ಮಾಡಿದೆ. ಆಗ ಜನ 'ನಿಶಾಂತ್'ನಲ್ಲಿ ನಟಿಸಿದ್ದ ಈಡಿಯಟ್ ಇವನೇ ಅಂತ ಮತ್ತೆ ನನ್ನನ್ನು ನೆನಪಿಸಿಕೊಳ್ಳತೊಡಗಿದರು. ನನ್ನ ಮೊದಲ ಎರಡು ಚಿತ್ರಗಳಿಗೆ ಶ್ಯಾಮ್ ಬೆನಗಲ್ ಅವರ ಉದಾರತೆ ಅಂಥಾದ್ದು!

ಪ್ರಶ್ನೆ: ಇವತ್ತಿನ ಯುವನಟರ ಬಗ್ಗೆ ಏನು ಹೇಳಬಯಸುತ್ತೀರಿ?

ಶಾ: ಇವತ್ತಿನ ಯುವನಟರಲ್ಲಿ ಅನೇಕರು ಚಿತ್ರರಂಗದ ಮಂದಿಯ ಮಕ್ಕಳೋ, ಸೋದರಳಿಯಂದಿರೋ, ಕಸಿನ್‌ಗಳೋ ಆಗಿದ್ದಾರೆ. ಈ ಹುಡುಗರು ಅಭಿನಯವನ್ನು ಸೀರಿಯಸ್ಸಾಗಿ ಕಲಿತಿರುವುದಿಲ್ಲ, ಅದು ಅವರಿಗೆ ಬೇಕಾಗಿಯೂ ಇಲ್ಲ, ಮಸಾಲಾ ಚಿತ್ರವೊಂದರಲ್ಲಿ ನಟಿಸಲು ಬೇಕಾದ ಬಾಡಿ, ಡ್ರೆಸ್ಸಿಂಗ್ ಸೆನ್ಸ್, ಡಾನ್ಸ್, ಫೈಟ್, ಅಳೋದು, ನಗೋದು ಇತ್ಯಾದಿಗಳನ್ನು ಒಂದು ಮಟ್ಟಕ್ಕೆ ಕಲಿತುಕೊಂಡಿದ್ದಾರೆ. ಅದಷ್ಟೇ ಸಾಕು ಅಂತ ನಂಬಿದ್ದಾರೆ ಕೂಡ. ಮನುಷ್ಯನ ಬದುಕು, ಮನುಷ್ಯನ ಮನೋವಿಜ್ಞಾನ, ಮಾನವೀಯ ಮೌಲ್ಯಗಳು ಮುಂತಾದವು ಅವರಿಗೆ ಬೇಕಿಲ್ಲ. ಯಾಕೆಂದರೆ ಹೀಗೆ ಬಂದು ಹಾಗೆ ಹೋಗುವ ವ್ಯಾಪಾರಿ ಮಸಾಲಾ ಚಿತ್ರಗಳಿಗೆ ಇವುಗಳ ಅವಶ್ಯಕತೆ ಇರುವುದಿಲ್ಲ, ಮೀಡಿಯ ಹ್ಯಾಂಡಲ್ ಮಾಡುವುದರಲ್ಲಿ, ಬಾಡಿ ಮೇಂಟೇನ್ ಮಾಡುವುದರಲ್ಲಿ ಇವರನ್ನು ಮೆಚ್ಚಬೇಕಾದ್ದೆ, ಆದರೂ ಅಲ್ಲೊಬ್ಬ ಇಲ್ಲೊಬ್ಬ ಭರವಸೆ ಹುಟ್ಟಿಸುವ ನಟರು ಸಹ ಇದ್ದಾರೆ.

ಪ್ರಶ್ನೆ: ನಿಮ್ಮ ಇಷ್ಟು ವರ್ಷಗಳ ಚಿತ್ರರಂಗದ ಅನುಭವದಲ್ಲಿ ಕಂಡುಬಂದ ಬದಲಾವಣೆಗಳೇನು?

ಶಾ: ಹವಾನಿಯಂತ್ರಿತ ವ್ಯಾನ್‌ಗಳು ಬಂದಿವೆ. ಹಣ ಚಿತ್ರರಂಗವನ್ನು ಆಳುತ್ತಿದೆ. ನಟನಟಿಯರು ಮೇಕಪ್ ರೂಂನಲ್ಲಿ ಕೂರುವ ಬದಲಾಗಿ ಹವಾನಿಯಂತ್ರಿತ ವ್ಯಾನ್‌ಗಳಲ್ಲಿ ಕೂರುತ್ತಾರೆ. ಛಾಯಾಗ್ರಹಣ, ಸಂಕಲನದ ವಿಷಯದಲ್ಲಿ ಮೊದಲಿಗಿಂತಲೂ ತುಸು ಸುಧಾರಿಸಿದ್ದರೂ ಆಗಿನ ಸಿನಿಮಾಗಳಿಗೆ ಹೋಲಿಸಿದರೆ ಈಗಿನ ಸಿನಿಮಾಗಳ ಗುಣಮಟ್ಟ ಕಳಪೆಯಾಗುತ್ತಿದೆ. ಚಿತ್ರರಂಗದ ಮಟ್ಟಿಗೆ ಐವತ್ತರ ದಶಕ ಸುವರ್ಣಕಾಲ. ಬಿಮಲ್ ರಾಯ್, ಗುರುದತ್, ವಿ.ಶಾಂತರಾಮ್ ಒಳಗೊಂಡಂತೆ ನಾವೆಲ್ಲಾ ಆ ಕಾಲದಲ್ಲೇ ದಿ ಬೆಸ್ಟ್ ಕಪ್ಪುಬಿಳುಪು ಸಿನಿಮಾಗಳನ್ನು ಕೊಟ್ಟಿದ್ದು. ಕಲರ್ ಬಂದು ಸಿನಿಮಾಗಳನ್ನು ಸರ್ವನಾಶ ಮಾಡಿದೆ. ಬೇಕಾದರೆ ಜಗತ್ತಿನ ಚಿತ್ರರಂಗದ ಇತಿಹಾಸವನ್ನೊಮ್ಮೆ ತಿರುಗಿ ನೋಡಿ, ಕಲರ್ ಬಂದ ಮೇಲೆ ಸಾಹಿತ್ಯ, ಸಂಗೀತ, ಚಿತ್ರಕತೆ, ಸಂಭಾಷಣೆಗಳ ಗುಣಮಟ್ಟ ಕುಸಿಯುವುದರ ಜೊತೆಗೆ ಚಿತ್ರರಂಗವೇ ಹಾದಿತಪ್ಪುತ್ತಿದೆ. ಕಲರ್ ಬಂದಮೇಲೆ ಹಿಂದಿ ಚಿತ್ರರಂಗದ ಮಟ್ಟಿಗೆ ಚಿತ್ರ ನಿರ್ಮಾಣ ಸುಲಭವಾಗಿಬಿಟ್ಟಿತು. ಹೀರೋಯಿನ್‌ಗೆ ಕಲರ್ ಬಟ್ಟೆ ಹಾಕಿ, ಹಾಲಿವುಡ್‌ನಿಂದ ಕದ್ದು ತಂದ ಟ್ಯೂನ್‌ಗೆ ಕುಣಿಸಿದರೆ ಸಿನಿಮಾ ಹಿಟ್ ಅನ್ನುವಂತಾಯಿತು. ಸುಮಾರು ಅರ್ಧ ಡಜನ್ನಿಗೂ ಹೆಚ್ಚು ಹಿಂದಿ ಸಿನಿಮಾಗಳ ಹಾಡುಗಳು 'ಕಂ ಸೆಪ್ಟೆಂಬರ್'ನಿಂದ ಕದ್ದ ಟ್ಯೂನುಗಳೇ!

ಪ್ರಶ್ನೆ: 'ಶೋಲೆ' ಚಿತ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಶಾ: ಅದೊಂದು ಪಾಪ್ ಸಂಸ್ಕೃತಿಯ ಐಕಾನ್. ಅದನ್ನು ಅನೇಕರು ನೋಡಿ ಮೆಚ್ಚಿದ್ದಾರೆ. ಆದರೆ ಅದೊಂದು ಮಹಾನ್ ಸಿನಿಮಾ ಅಂತ ನಾನು ಪರಿಗಣಿಸುವುದಿಲ್ಲ, 'ಶೋಲೆ' ಒಂದೊಳ್ಳೆಯ ಟೈಮ್ ಪಾಸ್ ಚಿತ್ರ. ಆ ಸಿನಿಮಾ ಬಿಡುಗಡೆಯಾದಾಗ ಮೊದಲ ವಾರ ಯಾವೊಬ್ಬ ನರಪಿಳ್ಳೆಯೂ ಥಿಯೇಟರ್ ಕಡೆ ತಲೆ ಹಾಕಿರಲಿಲ್ಲ, ಆಮೇಲೆ ಜನ ಸಿನಿಮಾ ನೋಡಿದ್ದು, ಗಬ್ಬರ್ ಸಿಂಗ್ ಪಾತ್ರ ಜನಮಾನಸದಲ್ಲಿ ಬೇರು ಬಿಟ್ಟಿದ್ದು. ಹಾಗೆಯೇ ನಾನು ಅದೆಷ್ಟೋ ದಾರಾಸಿಂಗ್ ಚಿತ್ರಗಳನ್ನು ನೋಡಿದ್ದೇನೆ. ಆದರೆ ಅವ್ಯಾವೂ ಗ್ರೇಟ್ ಸಿನಿಮಾಗಳು ಅನ್ನಿಸಲೇ ಇಲ್ಲ ನನಗೆ. ಇವೆಲ್ಲ ನನ್ನ ಪ್ರಾಮಾಣಿಕ ಅಭಿಪ್ರಾಯಗಳು ಮಾತ್ರ.

ಪ್ರಶ್ನೆ: ಇಷ್ಟು ಹೊತ್ತು ಚಿತ್ರರಂಗದ ಕುರಿತು ನಿಮ್ಮ ಮಾತುಗಳನ್ನು ಹಂಚಿಕೊಂಡಿದ್ದೀರಿ. ಕೊನೆಯದಾಗಿ ಹೇಳಿ, ನಿಮಗೆ ನೀವೇ ಸಂತಾಪ ಸೂಚಿಸಬೇಕಾಗಿ ಬಂದರೆ ಯಾವ ಸಾಲಿನಿಂದ ಬರೆಯಲು ಆರಂಭಿಸುತ್ತೀರಿ?

ಶಾ: **I'm not dead, not in any serious way at least!**

● ಹೃದಯಶಿವ

ಪಾರ್ವತಮ್ಮ ರಾಜ್‌ಕುಮಾರ್ 'ಎಪ್ಪತ್ತೈದು'



ಡಾ.ರಾಜ್‌ಕುಮಾರ್ ಅಷ್ಟು ಎತ್ತರಕ್ಕೆ ಬೆಳೆಯಲು ಅವರಲ್ಲಿದ್ದ ಅಪಾರವಾದ ಪ್ರತಿಭೆ, ಶ್ರದ್ಧೆ, ತಾಳ್ಮೆ, ವಿನಯ ಮತ್ತು ಸರಳತೆ ಎಷ್ಟು ಕಾರಣವೋ ಅಷ್ಟೇ ಮುಖ್ಯವಾದ ಕಾರಣ ರಾಜ್ ಸಾಧನೆಯ ಹಾದಿಯಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಅವರ ಪಾತ್ರ. ಪಾರ್ವತಮ್ಮ ಅವರು ದೊಡ್ಡ ಸಂಸಾರದ ಜವಾಬ್ದಾರಿಯನ್ನು ಹೊತ್ತಿರದಿದ್ದರೆ, ರಾಜ್‌ಕುಮಾರ್ ಬರೀ ನಟನೆಯತ್ತ ಮಾತ್ರ ತಮ್ಮ ಮನಸನ್ನು ಕೇಂದ್ರೀಕರಿಸುವಂತೆ ಮಾಡಿರದಿದ್ದರೆ ರಾಜ್ ನಮಗೆ ಇಷ್ಟು ಪ್ರಮಾಣದಲ್ಲಿ, ಇಷ್ಟು ಗಟ್ಟಿಯಾಗಿ, ಇಷ್ಟು ಫಲವತ್ತಾಗಿ ಸಿಗುತ್ತಿರಲಿಲ್ಲವೇನೋ. ಯಾವುದೇ ಜಂಜಾಟಗಳಿಲ್ಲದೆ ತಾವಾಯಿತು, ತಮ್ಮ ಪಾತ್ರವಾಯಿತು, ತಮ್ಮ ಅಭಿನಯವಾಯಿತು ಎಂದು ರಾಜ್ ಉಳಿದುಕೊಂಡಿದ್ದರಿಂದಲೇ ಅವರು ಇವತ್ತಿಗೂ ಕನ್ನಡಿಗರೊಳಗೆ ಉಳಿದುಕೊಳ್ಳಲು ಕಾರಣವಾಯಿತು ಅನ್ನಬಹುದು.

ರಾಜ್ ತಮ್ಮನ್ನು ತಾವು ಸಂಪೂರ್ಣವಾಗಿ ಕಲೆಗೆ ಸಮರ್ಪಿಸಿಕೊಳ್ಳುವಲ್ಲಿ ಪಾರ್ವತಮ್ಮ ಅವರ ಕೊಡುಗೆ ಅಪಾರವಾದದ್ದು. ರಾಜ್‌ರಂತಹ ಅನನ್ಯ ಕಲಾವಿದನೊಂದಿಗೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಬದುಕನ್ನು ಹಂಚಿಕೊಂಡ, ಅವರಿಗೆ ಬೆನ್ನೆಲುಬಾಗಿ ನಿಂತ, ಅವರ ಯಶಸ್ಸಿನಲ್ಲೇ ತಮ್ಮ ಬದುಕಿನ ಸಾರ್ಥಕತೆ ಕಂಡುಕೊಂಡ ಮಹಿಳೆ ಪಾರ್ವತಮ್ಮ.

ಇಂತಹ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಈಗ ಬರೋಬ್ಬರಿ ಎಪ್ಪತ್ತೈದು ವರ್ಷ ವಯಸ್ಸು. ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕಿಯೂ ಆಗಿರುವ ಅವರು ಕಳೆದ ವರ್ಷ ಕ್ಯಾನ್ಸರ್ ಕಾಯಿಲೆಯನ್ನೂ ಹಿಮ್ಮೆಟ್ಟಿ ಈಗ ಚೇತರಿಸಿಕೊಂಡಿದ್ದಾರೆ. ಇಂತಹ ಪಾರ್ವತಮ್ಮನವರಿಗೆ ಇತ್ತೀಚೆಗೆ ಅರಮನೆ ಆವರಣದಲ್ಲಿ ಒಂದು ಅದ್ದೂರಿ ಕಾರ್ಯಕ್ರಮ ಜರುಗಿತು. ರಾಜ್ ಕುಟುಂಬ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಅಲ್ಲಿ ನೆರೆದಿದ್ದರು. ಪಾರ್ವತಮ್ಮ ಅವರಿಗೆ ಶುಭ ಹಾರೈಸಿದರು. ದಿಟ್ಟೆದೆಯ ಮಹಿಳೆ, ಛಲಗಾರ್ತಿಯೂ ಆದ ಪಾರ್ವತಮ್ಮನವರು ಇನ್ನಷ್ಟು ಕಾಲ ಆರೋಗ್ಯ ಮತ್ತು ನೆಮ್ಮದಿಯಿಂದ ನಮ್ಮೆಲ್ಲರೊಂದಿಗಿರಲಿ ಎಂಬುದೇ ಎಲ್ಲರ ಆಶಯ.

ಜಯಶ್ರೀದೇವಿ ಮತ್ತೆ ಎಂಟ್ರಿ

'ಶ್ರೀ ಮಂಜುನಾಥ'ದಂತಹ ಬಿಗ್ ಬಜೆಟ್ ಸಿನಿಮಾ ನಿರ್ಮಿಸಿದ್ದ ಜಯಶ್ರೀದೇವಿ ಆನಂತರ ಅದೆಲ್ಲೋ ಕಾಣೆಯಾಗಿದ್ದರು. ಅವರೀಗ ಮತ್ತೆ ಚಿತ್ರರಂಗಕ್ಕೆ ಬರುತ್ತಿದ್ದಾರೆ.



ಅದೂ ಹೇಗೆ ಅಂತೀರಾ? ಒಂದು ತೆಲುಗು ಚಿತ್ರವನ್ನು ನಿರ್ಮಿಸುವ ಸಾಹಸಕ್ಕೆ ಕೈ ಹಾಕುವ ಮೂಲಕ. ಇಷ್ಟಕ್ಕೂ ಜಯಶ್ರೀದೇವಿಯವರು ನಿರ್ಮಿಸಲು ಹೊರಟಿರುವ ತೆಲುಗು ಚಿತ್ರ ಈ ಮೊದಲು ಕನ್ನಡದಲ್ಲಿ ಬಂದಿದ್ದ 'ಶ್ರಾವಣಿ ಸುಬ್ರಮಣ್ಯ' ಎಂಬ ಚಿತ್ರದ ರಿಮೇಕ್ ವರ್ಷನ್.

ಮಂಜು ಸ್ವರಾಜ್ ಎನ್ನುವವರು ನಿರ್ದೇಶಿಸಿದ್ದ ಈ ಚಿತ್ರದಲ್ಲಿ 'ಚೆಲುವಿನ ಚಿತ್ತಾರ'ದ ನಂತರ ಗಣೇಶ್-ಅಮೂಲ್ಯ ಜೋಡಿ ಮತ್ತೆ ಒಂದಾಗಿತ್ತು. ಚಿತ್ರವೂ ಒಂದು ರೇಂಜಿಗೆ ಕ್ಲಿಕ್ ಆಗಿತ್ತು. ಕನ್ನಡದಲ್ಲಿ ಈ ಚಿತ್ರ ಸ್ವಲ್ಪಮಟ್ಟಿಗೆ ಕಾಸು ಮಾಡಿದ್ದನ್ನು ಕಂಡ ಜಯಶ್ರೀದೇವಿ ಇದೀಗ ಈ ಚಿತ್ರವನ್ನು ತೆಲುಗಿನಲ್ಲಿ ನಿರ್ಮಿಸಲು ಮುಂದಾಗಿದ್ದಾರೆ. ಚಿತ್ರದ ಕಲಾವಿದರು, ತಂತ್ರಜ್ಞರು, ಮುಹೂರ್ತ, ಶೂಟಿಂಗ್ ಕುರಿತಂತೆ ಜಯಶ್ರೀದೇವಿಯವರು ಸದ್ಯದಲ್ಲೇ ಅಧಿಕೃತ ಪ್ರಕಟಣೆ ಕೊಡುತ್ತಾರಂತೆ.

ಹಾಗೊಂದು ವೇಳೆ 'ಶ್ರಾವಣಿ ಸುಬ್ರಮಣ್ಯ' ಚಿತ್ರವು ತೆಲುಗಿನಲ್ಲಿ ಕ್ಲಿಕ್ ಆದರೆ ಜಯಶ್ರೀದೇವಿ ಮತ್ತೆ ಕನ್ನಡದಲ್ಲೂ ಸಿನಿಮಾ ನಿರ್ಮಾಣಕ್ಕೆ ಕೈಹಾಕಬಹುದು. ಹಾಗಾದರೆ ಒಳ್ಳೇದೆ ಅಲ್ಲವೇ?


ಹೇಮಂತ್-ಸೇವಂತಿ ಈ ವಾರ



"ನಾನು ಮನೆಮನೆಗೆ ಹೋಗಿ ಹಾಲು ಹಾಕುತ್ತಿದ್ದಾಗ, ಪೇಪರ್ ಹಾಕುತ್ತಿದ್ದಾಗ ನನ್ನನ್ನು ಯಾರೂ ಗುರ್ತಿಸುತ್ತಿರಲಿಲ್ಲ, ಆದರೆ ಈಗ ಎಲ್ಲೇ ಹೋದರು ಜನ ಗುರ್ತಿಸುತ್ತಿದ್ದಾರೆ." ಈ ಮಾತನ್ನು ಹೇಳಿದ್ದು 'ನಾನು ಹೇಮಂತ್ ಅವಳು ಸೇವಂತಿ' ಚಿತ್ರದ ನಾಯಕ ರಜನೀಶ್. ಸುಧಾಕರ ಬನ್ನಂಜೆ ಎನ್ನುವ ಹಳೇ ಕಾಲದ ನಿರ್ದೇಶಕರು ನಿರ್ದೇಶಿಸಿರುವ ಹೊಸ ಚಿತ್ರವಿದು. ಇದಕ್ಕೂ ಮುಂಚೆ ಒಂದಿಷ್ಟು ಕನ್ನಡ ಚಿತ್ರಗಳನ್ನೂ, ಒಂದಿಷ್ಟು ತುಳು ಚಿತ್ರಗಳನ್ನೂ ನಿರ್ದೇಶಿಸಿರುವ ಬನ್ನಂಜೆ ಇದೀಗ ಈ ಚಿತ್ರ ಮಾಡಿದ್ದಾರೆ. ಮಣಿಪಾಲ್, ಕುರ್ಕ, ಕಾಪು ಮುಂತಾದ ಕಡೆಗಳಲ್ಲಿ ಚಿತ್ರೀಕರಣ ಮುಗಿಸಿಕೊಂಡು ಬಂದಿರುವ ಈ ಸಿನಿಮಾ ಇದೇ ವಾರ ಬಿಡುಗಡೆಯಾಗುತ್ತಿದೆ. ಯಾವ ಕೋನದಿಂದಲೂ ಅಷ್ಟೇನೂ ನಿರೀಕ್ಷೆ ಮೂಡಿಸಿರದ ಈ ಚಿತ್ರವನ್ನು ಪ್ರೇಕ್ಷಕ ಮೆಚ್ಚಿಕೊಂಡರೆ ನಮಗೂ ಸಂತೋಷ..



'ಮಯೂರ' ಮತ್ತೆ ತೆರೆಗೆ




ಬಣ್ಣ ತುಂಬಿಕೊಂಡು ಬಂದ 'ಕಸ್ತೂರಿ ನಿವಾಸ' ಯಾವಾಗ ಪ್ರೇಕ್ಷಕರ ಮನಸನ್ನು ಸೆಳೆಯಿತೋ, ಯಾವಾಗ ಕೋಟಿ ಕೋಟಿ ಬಾಚಿಕೊಂಡಿತೋ ಆಗ ಗಾಂಧಿನಗರದಲ್ಲಿ ಒಂದು ಬಗೆಯ ಹೊಸ ಟ್ರೆಂಡ್ ಶುರುವಾಯಿತು. ಅದೇನೆಂದರೆ ಎಪ್ಪತ್ತು, ಎಂಬತ್ತರ ದಶಕದಲ್ಲಿ ಡಾ.ರಾಜ್‌ಕುಮಾರ್ ನಟಿಸಿದ್ದ ಚಿತ್ರಗಳು ಮತ್ತೆ ಹೊಸ ರೂಪದಲ್ಲಿ ಪರದೆಯ ಮೇಲೆ ಬರಲು ಸಜ್ಜಾಗುತ್ತಿರುವುದು. ಆ ಪೈಕಿ ಎಪ್ಪತ್ತರ ದಶಕದಲ್ಲಿ ಸೂಪರ್ ಹಿಟ್ ಆಗಿದ್ದ 'ಮಯೂರ' ಕೂಡ ಒಂದು. 'ಮಯೂರ' ಈಗ ಸಿನಿಮಾಸ್ಕೋಪ್ ಮತ್ತು ಡಿಟಿಎಸ್ ಅಳವಡಿಸಿಕೊಂಡು ಮತ್ತೊಮ್ಮೆ ತೆರೆಗೆ ಬರುತ್ತಿದೆ. ಪ್ರಮುಖವಾಗಿ ಬೆಂಗಳೂರಿನ ಕೆಂಪೇಗೌಡ ರಸ್ತೆಯ 'ಸಂತೋಷ್' ಚಿತ್ರಮ... ಬಿಡುಗಡೆಯಾಗುತ್ತಿರುವ ಈ ಚಿತ್ರ ರಾಜ್ಯಾದ್ಯಂತ ಸುಮಾರು ಮ... ಹೆಚ್ಚು ಥಿಯೇಟರ್‌ಗಳಲ್ಲಿ ಪ್ರೇಕ್ಷಕರೆದುರು ಬರುತ್ತಿದೆ. ಐತಿಹಾಸಿಕ ಚಿತ್ರ... 'ಮಯೂರ' ನಿರ್ಮಾಣವಾಗುತ್ತಿದ್ದ ಸಂದರ್ಭದಲ್ಲಿ ಸಾಕಷ್ಟು ಸಮ... ಎದುರಿಸಿತ್ತಂತೆ. ಆ ಪೈಕಿ ಹಣಕಾಸಿನ ಸಮಸ್ಯೆಯೂ ಒಂದಾಗಿ... ಕಾಲದಲ್ಲೇ ಹೇಗೋ ಕಷ್ಟಪಟ್ಟು ಈ ಚಿತ್ರವನ್ನು ಟಿ.ಪಿ.ವೇಣುಗೋ... ಎಂಬ ನಿರ್ಮಾಪಕರು ಪಾಲುದಾರರೊಡಗೂಡಿ ನಿರ್ಮಿಸಿದ್ದರಂ... ವೇಣುಗೋಪಾಲ್ ತೀರಿಕೊಂಡಿದ್ದಾರೆ. ಆದ್ದರಿಂದ 'ಮಯ... ಮರುಬಿಡುಗಡೆಯ ಹೊಣೆಯನ್ನು ಈ ಚಿತ್ರದ ನಿರ್ಮಾಪಕರಲ್ಲಿ... ಆರ್.ಟಿ.ಓ. ಶಿವಣ್ಣ ಹೊತ್ತಿದ್ದಾರೆ. 'ಕಸ್ತೂರಿ ನಿವಾಸ'ದ ಹಾಗೆ ಈ... ಹಿಟ್ ಆದರೆ ಮುಂದೆ ಇನ್ನಷ್ಟು ರಾಜ್‌ಕುಮಾರ್ ಚಿತ್ರಗಳು ... ರೂಪದಲ್ಲಿ ತೆರೆಗೆ ಬಂದರೆ ಆಚ್ಚರಿ ಪಡುವಂಥಾದ್ದೇನೂ ಇಲ್ಲ.

ಶಿವಣ್ಣ ಈಗ ಶಿವಲಿಂ...

ಕುರುಚಲು ಗಡ್ಡ, ಕೆದರಿದ ಕೂದಲು, ಕೆಂಪನೆ ಕಣ್ಣು, ಮಾಸಲು ಬಟ್ಟೆ, ... ಲಾಂಗು... ಇಷ್ಟಿದ್ದರೆ ಆತ ಒಬ್ಬ ರೌಡಿ ಅನ್ನೋ ಕಲ್ಪನೆ ಕನ್ನಡಿಗರಿಗೆ ಬರಬಹು... ಬಗೆಯ ಕಲ್ಪನೆಗೆ ಕಾರಣ ಕನ್ನಡ ಸಿನಿಮಾ ನಿರ್ದೇಶಕರು 'ರೌಡಿಗಳು ಹೀಗಿರುತ್ತಾರೆ' ಅಂತ ತಮ್ಮ ಚಿತ್ರಗಳ ಮೂಲಕ ಕನ್ನಡಿಗರಿಗೆ ತೋರಿಸಿರುವುದು. ಈ ಮಾತಿಗೆ ಸೂಕ್ತ ನಿದರ್ಶನವೆನ್ನುವ ಹಾಗೆ ಉಪೇಂದ್ರ 'ಓಂ' ಸಿನಿಮಾ ಮಾಡಿದರು. ಆ ಸಿನಿಮಾ ಎಷ್ಟರ ಮಟ್ಟಿಗೆ ಕನ್ನಡ ಸಿನಿಮಾ ಪ್ರೇಕ್ಷಕರ ಮನಸಿನಲ್ಲಿ ಉಳಿದುಬಿಟ್ಟಿದೆ ಅನ್ನೋದು ನಿಮಗೆ ಗೊತ್ತು. ಅಂಥದೊಂದು ಚಿತ್ರವನ್ನು ಸ್ವತಃ ಉಪೇಂದ್ರ ಕೂಡ ಮುಂದೊಮ್ಮೆ ಮಾಡಲು ಸಾಧ್ಯವಿಲ್ಲವೇನೋ.



ಅಲ್ಲಿಯತನಕ ಕಾಮಿಡಿ ಸಿನಿಮಾಗಳನ್ನು ಮಾಡಿಕೊಂಡಿದ್ದ ಶಿವಣ್ಣನಿಗೆ ಹೊಸ ಇಮೇಜ್ ತಂದುಕೊಟ್ಟ ಸಿನಿಮಾ ಅದು. ಯಾವಾಗ 'ಓಂ' ಸೂಪರ್ ಹಿಟ್ ಆಯಿತ... ಶಿವಣ್ಣ ಕೂಡ ಆ ಬಗೆಯ ಒಂದಿಷ್ಟು ಚಿತ್ರಗಳನ್ನು ಮತ್ತೆ ಮತ್ತೆ ಮಾ... ಜನರಿಗೆ ಬೇಜಾರು ಮಾಡಿಬಿಟ್ಟರು. ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು... ಶಿವಣ್ಣ ಮತ್ತೊಮ್ಮೆ ರೌಡಿಯಿಸಂ ಕಥಾವಸ್ತುವುಳ್ಳ ಸಿನಿಮಾವೊಂದರಲ್ಲಿ ನಟಿ... ಆದರೆ ಈ ಬಾರಿ 'ಓಂ' ಚಿತ್ರದಲ್ಲಿ ಇದ್ದಂತೆ ಕುರುಚಲು ಗಡ್ಡ, ಕೆದರಿದ ಕೂದಲು, ಕೆಂಪನೆ ಕಣ್ಣು, ಮಾಸಲು ಬಟ್ಟೆ, ಕೈಯಲ್ಲಿ ಲಾಂಗು ಮುಂತಾದವುಗಳು ಇರುವುದಿಲ್ಲವಂತೆ. ಬದಲಾಗಿ ಕ್ಲೀನ್ ಶೇವ್, ಸೂಟ್, ಕೈಯಲ್ಲಿ ಗನ್ ಇರುತ್ತವಂತೆ. ಅಂದಹಾಗೆ, ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ಬರುತ್ತಿದ್ದಾರೆ ಪಿ.ವಾಸು. 'ಆಪ್ತಮಿತ್ರ', 'ಆಪ್ತರಕ್ಷಕ', 'ದೃಶ್ಯ' ಚಿತ್ರಗಳ ಮೂಲಕ ಇತ್ತೀಚಿನ ವರ್ಷಗಳಲ್ಲಿ ಕನ್ನಡಿಗರಲ್ಲಿ ಭಾರೀ ಭರವಸೆ ಹುಟ್ಟಿಸಿರುವ ಪಿ.ವಾಸು ಇದೇ ಮೊದಲ ಬಾರಿಗೆ ಶಿವಣ್ಣನ ಜೊತೆ ಕೆಲಸ ಮಾಡುತ್ತಿದ್ದಾರೆ. ಅಂದಹಾಗೆ ಈ ಚಿತ್ರದ ಚಿತ್ರದ ಹೆಸರು 'ಶಿವಲಿಂಗ'.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com